ಅಹಿಂದ: ಮುಂದುವರಿದ ಚರ್ಚೆ

ನವಂಬರ್ – ೨೦೦೫
ರೂ.೨೦



ಬಾಬಾಬುಡನ್‌ಗಿರಿ

ಕೋಮು ಅತಿಕ್ರಮಣ

ದೇವರಾಯ ಜೀವನಗಾಥೆ

ಸಂವಾದ

ಮಾಸ ಪತ್ರಿಕೆ

ಸಂಪುಟ ೪ ಸಂಚಿಕೆ ೧

ನವೆಂಬರ್ ೨೦೦೫

ಸಂಪಾದಕ:
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ:
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮಾ
ಡಾ|| ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾ ನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು - ೫೬೦ ೦೯೧
✆ ೨೩೨೮೭೯೪೩ / ೯೪೪೮೦ ೪೮೩೦೬
ಇ-ಮೇಲ್ ವಿಳಾಸ : samvaada@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ...

- ಪತ್ರಗಳು ೩
- ಅಂತರಂಗ ೫
- ಕೂಸು ಬಡವಾಯ್ತು ೬
  - ಪದ್ಮಾಲಯಾ ನಾಗರಾಜ
- ಶಿಕ್ಷಣ ಮಾಧ್ಯಮ: ಬೇಕಿದೆ ಎರಡು ಕಾಲಿನ ಆಸರೆ ೮
  - ಪ್ರೊ|| ಕಾಂಚ ಐಲಯ್ಯ

- ಲಿಂಗಸಮಾನತೆಯ ಸಮಾಜದ ಸೃಷ್ಟಿಯಲ್ಲಿ ಒಂದು ದಿಟ್ಟ ಹೆಜ್ಜೆ ೧೦
  - ಬೀನಾ ಆಗರ್‌ವಾಲ್
- ಗಿರಿಯ ಮೇಲಿನ ಬಾಬ-ಮನದೊಳಗಿನ ದತ್ತ ಹಾಗೂ ಕೋಮು ಆಕ್ರಮಣ ೧೪
  - ಶಿವಸುಂದರ್
- ದಲಿತತ್ವ ಮತ್ತು ಬುದ್ಧತ್ವದ ಸಾಂಸ್ಕೃತಿಕ ರಾಜಕಾರಣ ೧೮
  - ಡಾ|| ಮೊಗಳ್ಳಿ ಗಣೇಶ್
- ಅಹಿಂದ ಚರ್ಚೆ ೨೨
  - ಪ್ರೊ|| ರಹಮತ್ ತರೀಕೆರೆ
  - ಶ್ರೀಧರ ಕಲಿವೀರ
  - ದಾಸನೂರು ಕೂಸಣ್ಣ
- ದೇವರಾಯ ೨೮
  - ಡಾ|| ಸರಜೂ ಕಾಟ್ಕರ್
- ಜಾನಪದ, ಮಹಿಳೆ ಮತ್ತು ನೋವಿನ ನೆಲೆಗಳು ೩೨
  - ಡಾ|| ಶೈಲಜಾ ಹಿರೇಮಠ
- ದಲಿತ್ ಡೈರಿ ೩೬
  - ಚಂದ್ರಭಾನ್ ಪ್ರಸಾದ್
- ಹೊಸ ಪುಸ್ತಕ ೪೦
- ಬುದ್ಧಾಯಣ ೪೨
  - ಸಿ.ಎಚ್. ರಾಜಶೇಖರ್

ಕವನಗಳು :
- ಮಾಯದರ್ಪಣದ ಮುಖ ೧೭
- ಮಳೆ ಮಂಟಪದ ಹಕ್ಕಿಗಳು ೧೭
- ಬಸವಾದಿ ಶರಣ ೩೧

ಮುಖಪುಟ ಕಲೆ: ಬಿಹಾರದ ಕಸೂತಿ - ವಿನ್ಯಾಸ: ರಾಥೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಅಹಿಂದ; ಸಿದ್ಧಾಂತ-ಕಾರ್ಯಕ್ರಮ ಬೇಕು.

ಗೌರವಾನ್ವಿತ ಸಂಪಾದಕರೇ,

'ಸಂವಾದ' ಪ್ರಾರಂಭವಾದಾಗಿನಿಂದಲೂ ನಮ್ಮಗಳ ಸಂಗಾತಿಯಾಗಿದೆ. ನಾಡಿನ ಎಲ್ಲ ಚಳುವಳಿ ಹೋರಾಟಗಳನ್ನು ಮುಕ್ತವಾಗಿ ವಿಮರ್ಶಿಸುವ ನಿಮ್ಮ ನಿಲುವು ನಮಗೆಲ್ಲ ಅತ್ಯಂತ ಪ್ರಿಯವಾದುದು. 'ಅಹಿಂದ' ಪರವಾದ ನಿಲುವು ನಿಮ್ಮದಾದರೂ ಮುಕ್ತ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ವೃತ್ತಿ ರಾಜಕಾರಣಿಗಳಿಗೆ ನಿರುದ್ಯೋಗ ಪ್ರಾಪ್ತವಾದಾಗ, ಅವರೆಲ್ಲ ಹೋರಾಟಕ್ಕೆ ನಿಲ್ಲುವುದು ನಮ್ಮೆಲ್ಲರ ಗಮನಕ್ಕೂ ಬಂದಿದೆ.

ಈಗ ಸಿದ್ಧಾರಾಮಯ್ಯ ಮತ್ತವರ ಗೆಳೆಯರು ಹೋರಾಟಕ್ಕೆ ನಿಂತಿರುವುದು ಇದೇ ಕಾರಣಕ್ಕೆಂಬ ವಿಷಯ ಸಾರ್ವಜನಿಕರೆಲ್ಲರಿಗೂ ಅರಿವಾಗಿದೆ. ಇಷ್ಟು ವರ್ಷ ಅಧಿಕಾರದಲ್ಲಿದ್ದ ಸಿದ್ಧಾರಾಮಯ್ಯ ಅವರು 'ಅಹಿಂದ' ವರ್ಗಕ್ಕೆ ಏನೇನು ಮಾಡಿದ್ದಾರೆಂಬುದುನ್ನು ತಿಳಿಸಿದರೆ ಅವರ ಹೋರಾಟಕ್ಕೆ ನಾವೆಲ್ಲ ಬೆಂಬಲ ನೀಡಬಹುದು. ದೇವೆಗೌಡ ಜಾತಿವಾದಿ, ಪುತ್ರಾಭಿವೃದ್ಧಿವಾದಿ ಜನವಿರೋಧಿ-ಇತ್ಯಾದಿಗಳನ್ನೆಲ್ಲ ಇಷ್ಟು ದಿನ ಸಹಿಸಿಕೊಂಡಿದ್ದು ಯಾಕೆ ಅನ್ನುವುದನ್ನು ಅವರು ವಿವರಿಸಬೇಕು.

'ಸಂವಾದ' ಆರಂಭಿಸಿರುವ 'ಅಹಿಂದ' ಚರ್ಚೆಯಲ್ಲಿ ನಟರಾಜ ಹುಳಿಯಾರ್ ಅವರು ಸಮಸ್ಯೆಯನ್ನು ಅತ್ಯಂತ ಪ್ರಾಮಾಣಿಕವಾಗಿ ವಿಶ್ಲೇಷಿಸಿದ್ದಾರೆ. 'ಅಹಿಂದ' ಯಾವ ಕಾರಣಕ್ಕೂ ಕೇವಲ ವೃತ್ತಿ ರಾಜಕಾರಣಿಗಳ ಅಧಿಕಾರಕ್ಕೆ ಮೆಟ್ಟಿಲಾಗಬಾರದು. ಹಾಗೆ ನೋಡಿದರೆ, ಕೋಲಾರದಲ್ಲಿ ಆರಂಭವಾದ 'ಅಹಿಂದ', 'ಅಹಿಂದ ವರ್ಗ'ಗಳನ್ನೊಳಗೊಂಡ ಚಳವಳಿಯಾಗಿ ಮುನ್ನಡೆಯಲೇ ಇಲ್ಲ. ಈಗಿನ 'ಅಹಿಂದ' ಕೂಡ ಅಧಿಕಾರ ವಂಚಿತ ವೃತ್ತಿ ರಾಜಕಾರಣಿಗಳ ಹೊಸ ರಂಗಪ್ರಯೋಗದಂತಿದೆ. ಹುಬ್ಬಳ್ಳಿ-ತುಮಕೂರು-ಹಾಸನ ಇಲ್ಲೆಲ್ಲಾ ನಡೆದ ಸಭೆಗಳಲ್ಲಿ ರಾರಾಜಿಸಿದ್ದು ಇದೇ ವೃತ್ತಿ ರಾಜಕಾರಣಿಗಳು. 'ಅಹಿಂದ ಜನವರ್ಗ'ಗಳನ್ನು ಸಂಘಟಿಸುತ್ತಿರುವ ಯಾವ ಸಂಘಟನೆಗಳ ಮುಂಖಡರುಗಳಿಗೂ ಅಲ್ಲಿ ಪ್ರಮುಖ ಸ್ಥಾನವಿರಲಿಲ್ಲ.

ದಲಿತ ಸಂಘರ್ಷ ಸಮಿತಿ ಮುಖಂಡರುಗಳಾಗಲಿ, ಹಿಂದುಳಿದ ಜಾತಿ ಸಂಘಟನೆಗಳ ಮುಖಂಡರುಗಳಾಗಲಿ, ಅಲ್ಪಸಂಖ್ಯಾತ ಸಂಘಟನೆಗಳ ಮುಂಖಡರುಗಳಾಗಲಿ 'ಅಹಿಂದ' ಮುಂಚೂಣಿಯಲ್ಲಿ ಕಾಣಿಸದಿದ್ದರೆ, ಅದರ ಪ್ರಸ್ತುತತೆಯನ್ನೇ ಪ್ರಶ್ನಿಸಬೇಕಾಗುತ್ತದೆ. ಈ ಎಲ್ಲಕ್ಕಿಂತ ಮಿಗಿಲಾಗಿ 'ಅಹಿಂದ'ದ ಕೆಲಸವನ್ನು ಈಗಾಗಲೇ ಮಾಡುತ್ತಿರುವ ರಾಜಕೀಯವಾಗಿ ಸಾಕಷ್ಟು ತಳ ಊರಿರುವ ಬಿಎಸ್‌ಪಿ ಮುಂಖಡರುಗಳೂ ಕೂಡ ಈ ಸಮಾವೇಶಗಳಲ್ಲಿ ಕಾಣಿಸಿಕೊಳ್ಳದಿರುವುದು 'ಅಹಿಂದ' ಚಳವಳಿಯ ನೈತಿಕತೆಯನ್ನು ನೇರವಾಗಿ ಬಯಲುಗೊಳಿಸುತ್ತದೆ.

ತುಮಕೂರು ಸಭೆಯಲ್ಲಿ ಮಾತನಾಡುತ್ತ ಸರ್ವೋದಯ ಕರ್ನಾಟಕದ ಅಧ್ಯಕ್ಷ ದೇವನೂರು ಮಹಾದೇವ ಅವರು ಆಡಿದ ಮಾತನ್ನು 'ಅಹಿಂದ'ದ ಸ್ವಘೋಷಿತ ಮುಖಂಡರು ಮನನ ಮಾಡಬೇಕು. ತನಗಾದದ್ದು ಮಾತ್ರ ಶೋಷಣೆ ತನ್ನಿಂದಾದದ್ದು ಶೋಷಣೆಯಲ್ಲ ಅಂದುಕೊಂಡರೆ, ಅಪರಾಧವಾಗುತ್ತದೆ. ಯಾವುದೇ ಸ್ಪಷ್ಟ ಕಾರ್ಯಕ್ರಮ, ಸಿದ್ಧಾಂತಗಳಿಲ್ಲದೆ 'ಅಹಿಂದ' ಹಿಂದಕ್ಕೆ ಉಳಿಯಬೇಕಾಗುತ್ತದೆ. ಹಾಗಾಗ ಬಾರದೆಂಬುದು ನಮ್ಮಂಥ ಹಲವರ ಹಾರೈಕೆ

ಶರಣಕುಮಾರ ನಾಯಕ್,

ಭಾಸ್ಕರ್ ರೆಡ್ಡಿ, ರಾಯಚೂರು,

ತಳಸಮುದಾಯದ ಸಾಧಕರು

ಪ್ರೀತಿಯ ಸಂಪಾದಕರೇ,

'ನಮ್ಮವರು' ಅಂಕಣದಲ್ಲಿ ಶ್ರೀ ನಾರಾಯಾಣ ಗುರುಗಳ ಜೀವನ ದರ್ಶನ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವದಗಳು. ತಳಸಮುದಾಯಗಳ ಸಾಂಸ್ಕೃತಿಕ ಅರಿವು ಮತ್ತು ಹೆಮ್ಮೆಯನ್ನು ಜಾಗೃತಗೊಳಿಸುವ ಇಂಥ ಲೇಖನಗಳು 'ಸಂವಾದ'ದಲ್ಲಿ ಪದೇ ಪದೇ ಮೂಡಿ ಬರಲಿ ಎಂದು ಆಶಿಸುತ್ತೇನೆ. ಹಾಗೇಯೇ ಪ್ರತಿ ಸಂಚಿಕೆಯಲ್ಲಿ ಕೆಳವರ್ಗಗಳಲ್ಲಿ ಹುಟ್ಟಿ ಬೆಳೆದು ಅಪಾರ ಸಾಧನೆ ಮಾಡಿದ ನೂರಾರು ಜನರಿದ್ದಾರೆ. ಅವರನ್ನು ಗುರುತಿಸಿ ಪರಿಚಯಿಸಿದರೆ ಹೊಸ ಜನಾಂಗದಲ್ಲಿ ಸ್ವಾಭಿಮಾನದ ಅರಿವು ಹೆಚ್ಚಾಗುವುದರಲ್ಲಿ ಅನುಮಾನವಿಲ್ಲ. 'ಸಂವಾದ'ದಿಂದ ಅಂಥ ಮಹತ್ಕಾರ್ಯವನ್ನು ನಾನು ಪರೀಕ್ಷಿಸುತ್ತೇನೆ.

ಕೆಬ್ಬಾಳ ಸುರೇಶ್, ಕೃಷ್ಣರಾಜಪುರ

ಪತ್ರಾಗಾರ

ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ

ಪತ್ರಕರ್ತ ಶ್ರೀ ಆರ್. ಸ್ವಾಮಿ ಆನಂದ್ ಅವರು ಬರೆಯುತ್ತಿದ್ದ 'ಸುಭಾಷ್ ಪಾಳೇಕರ್ ಅವರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ' ಕುರಿತ ಪುಸ್ತಕ ಈಗಾಗಲೇ ಪ್ರಕಟವಾಗಿರುವುದರಿಂದ ಆ ಲೇಖನ ಮಾಲೆಯನ್ನು ನಿಲ್ಲಿಸಲಾಗಿದೆ. ಆಸಕ್ತರು ಪುಸ್ತಕವನ್ನು ತರಿಸಿಕೊಳ್ಳಬೇಕಾಗಿ ವಿನಂತಿ.

ಪುಸ್ತಕ ಸಿಗುವ ಸ್ಥಳ: ಅಗ್ನಿ ಪ್ರಕಾಶನ, ನಂ. 3 'ಎ', 9ನೇ 'ಬಿ' ಮುಖ್ಯರಸ್ತೆ ಪ್ರಶಾಂತಿ ನಗರ, ಇಸ್ರೋ ಬಡಾವಣೆ ಬೆಂಗಳೂರು-560078.

ದೂರವಾಣಿ: 080-26665233

ಜಂಗಮವಾಣಿ: 9341243819

ಬೆಲೆ ರೂ. 60/- (ಅಂಚೆ ವೆಚ್ಚ ಪ್ರತ್ಯೇಕ)

ದಯವಿಟ್ಟು ಇಂಗ್ಲೀಷ್ ಕಲಿಸಿ

ಸಹೋದರ ಹೊನ್ನಾಪುರ ಅವರಿಗೆ ವಂದನೆಗಳು.

ಇಂಗ್ಲೀಷ್ ಕನ್ನಡ ಕಲಿಕೆಗೆ ಸಂಬಂಧಿಸಿದಂತೆ ತಾವು ವಿವಿಧ ಲೇಖನಗಳನ್ನು ಪ್ರಕಟಿಸುತ್ತಿದ್ದೀರಿ. ಅವರವರು ತಮ್ಮ ವಾದಗಳನ್ನು ಮಂಡಿಸುತ್ತಾ, ಓದುಗರಾದ ನಮ್ಮಂಥವರಿಗೆ ಗೊಂದಲ ಸೃಷ್ಟಿಸುತ್ತಿದ್ದಾರೆ. ದಯವಿಟ್ಟು ಹಾಗೆ ಮಾಡಬೇಡಿ. ಈ ದೇಶದಲ್ಲಿ ಹಿಂದುಳಿದವರು ದಲಿತರು ತಲೆ ಎತ್ತಿ ನಡೆಯಬೇಕಾದರೆ, ಇತರರೊಂದಿಗೆ ಸ್ಪರ್ಧಿಸಿ ಉಳಿಯಬೇಕಾದರೆ ನಮ್ಮ ಮಕ್ಕಳಿಗೆ ಇಂಗ್ಲೀಷ್ ಬೇಕೇ ಬೇಕು. ಆದುದರಿಂದ ಪೂರ್ವ ಪ್ರಾಥಮಿಕ ಶಿಕ್ಷಣದಿಂದಲೇ ಎಲ್ಲ ಶಾಲೆಗಳಲ್ಲಿ ಕಡ್ಡಾಯವಾಗಿ ಇಂಗ್ಲೀಷ್ ಶಿಕ್ಷಣ ನಿಡಲೇ ಬೇಕು. ಇಲ್ಲದಿದ್ದರೆ ಭವಿಷ್ಯದ ಜನಾಂಗ ನಮ್ಮನ್ನು ದೂಷಿಸುತ್ತದೆ. ರಾಬರ್ಟ್ ಮೆಕಾಲೆ ಎನ್ನುವವನೊಬ್ಬ ಬರದಿದ್ದರೆ ನೀವೂ ಸೇರಿದಂತೆ ದುರ್ಬಲ ವರ್ಗದವರಾರು ಅಕ್ಷರ ಕಲಿಯಲು ಆಗುತ್ತಿರಲಿಲ್ಲ. ಆದುದರಿಂದ ಎರಡು ದೋಣಿಯ ಪ್ರಯಾಣ ನಿಲ್ಲಿಸಿ. ದಯವಿಟ್ಟು ಇಂಗ್ಲೀಷ್ ಕಲಿಸಲು ಸಹಕರಿಸಿ.

ಅನಂತ ಧನ್ಯವಾದಗಳೊಡನೆ,

ತಮ್ಮ ಸಹೋದರ

ನೀಲಕಂಠ ಬಡಿಗೇರ, ಮಾನ್ವಿ

ಪಾಳೇಕರರ ಜೀವಾಮೃತ

ಮಾನ್ಯರೇ,

ಶ್ರೀ ಸುಭಾಷ್ ಪಾಳೇಕರ್ ರೈತರ ಪಾಲಿನ ಸಂಜೀವಿನಿಯಾಗಿ ಮೂಡಿಬಂದಿದ್ದಾರೆ. ಬೆಂಗಳೂರಿನಲ್ಲಿ ನಡೆದ ನಾಲ್ಕು ದಿನಗಳ ಕಾರ್ಯಾಗಾರದಲ್ಲಿ ಅವರ ವಿಚಾರಗಳನ್ನು ಕೇಳಿ ನನಗೆ ಹೊಸ ಜನ್ಮವೇ ಬಂದಂತಾಗಿದೆ. ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಬಳಸಿ ಬಸವಳಿದು ಹೋಗಿದ್ದ ರೈತರು ಇನ್ನು ಮುಂದೆ ನೆಮ್ಮದಿಯ ಬದುಕು ಸಾಗಿಸಬಹುದು. ಆದರೆ ಶ್ರೀ ಪಾಳೇಕರರ ಈ ಪದ್ಧತಿಗೆ ಸರಿಯಾದ ಪ್ರಚಾರ ನೀಡಬೇಕು. ಸಾವಯವ ಕೃಷಿಗೆ ಸರ್ಕಾರ ಬೆಂಬಲ ನೀಡುತ್ತಿರುವಂತೆ ನೈಸರ್ಗಿಕ ಕೃಷಿಗೂ ನೀಡಬೇಕು. ಸಾವಯವ ಕೃಷಿಯನ್ನೂ ಮಾಡಿರುವ ನನಗೆ ಪಾಳೇಕರ ನೈಸರ್ಗಿಕ ಕೃಷಿಯ ಮುಂದೆ ಸಾವಯವ ಕೂಡ ರೈತನ ಸುಲಿಗೆಯೇ ಅನಿಸುತ್ತಿದೆ.

ನಾಗಾರ್ಜುನ ರೆಡ್ಡಿ,

ಮುಳಬಾಗಿಲು

ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ

ರೂ. ೧೦೦/- ರೂ. ೩೦೦/- ರೂ. ೫೦೦/-

ನೌಕರರು ಮತ್ತು ವೃತ್ತಿಪರರಿಗೆ

ರೂ. ೨೦೦/- ರೂ. ೫೦೦/- ರೂ. ೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ

ರೂ. ೨೫೦/- ರೂ. ೬೦೦/- ರೂ. ೧೦೦೦/-

ವಿಶೇಷ ಹಿತೈಷಿ ಚಂದಾದಾರರಿಗೆ

ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ. ೫,೦೦೦/-

ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ. /ಡಿ.ಡಿ. ಮಾತ್ರ ಕಳುಹಿಸಬೇಕು.

ಪ್ರತಿಕ್ರಿಯೆ

ಅಹಿಂದ: ಭಿನ್ನಾಭಿಪ್ರಾಯ ತಾತ್ವಿಕವೆ?

ಪ್ರಿಯ ಸಂಪಾದಕರೆ,

ದೇವೇಗೌಡ – ಸಿದ್ರಾಮಯ್ಯ ನಡುವಣ ಮುನಿಸು ಏನನ್ನು ಸೂಚಿಸುತ್ತದೆ? ತಾತ್ವಿಕ ಭಿನ್ನಾಭಿಪ್ರಾಯವೆ? ವೈಚಾರಿಕ ಭಿನ್ನಾಭಿಪ್ರಾಯವೇ ಅಥವಾ ಮೇಲ್ಜಾತಿ ಕೀಳ್ಜಾತಿಗಳ ನಡುವಣ ಸಂಘರ್ಷವೆನ್ನುವಿರಾ? ಇದಾವುದೂ ಅಲ್ಲ. ಕೊಳ್ಳೆ ಹೊಡೆದುದನ್ನು ಹಂಚಿಕೊಳ್ಳುವ ಬಗ್ಗೆ ಎದ್ದ ವಿವಾದವದು.

ರಾತ್ರಿ ಬೆಳಗಾಗುವುದರೊಳಗೆ ಸಿದ್ರಾಮಯ್ಯ ಅಲ್ಪಸಂಖ್ಯಾತರಾದರು; ಹಿಂದುಳಿದವರಾದರು? ದಲಿತರೂ ಆಗಿಬಿಟ್ಟರು! ದೇವೇಗೌಡ ಬಡವರ ಕೀಳ್ಜಾತಿಯವರ ವಿರೋಧಿಯಾಗಿಬಿಟ್ಟರು! ಒಬ್ಬರದು ಪಕ್ಷದ ಕಾರ್ಯಕರ್ತರುಗಳ ಸಮಾವೇಶ. ಇನ್ನೊಬ್ಬರದು ಅ.ಹಿಂ.ದ ಸಮಾವೇಶ. ಬಲಪ್ರದರ್ಶನ, ಜನ ಸೇರಿಸಲು ಪೈಪೋಟಿ. ಸಾವಿರಾರು ನಿರುದ್ಯೋಗಿಗಳಿಗೆ ದಿನಗೂಲಿ. ಕರೆದಲ್ಲಿಗೆ ಹೋದರು. ವಾಹನವೇರ್ಪಡಿಸಿ ಕೈಗಷ್ಟು ಕಾಸಿಟ್ಟರೆ ಯಾರು ಬಿಡುತ್ತಾರೆ. ಇಂದು ಇಲ್ಲಿ. ನಾಳೆ ಅಲ್ಲಿ ಹಣ ನೀರಿನಂತೆ ಹರಿಯಿತು. ಯಾರಪ್ಪನ ಗಂಟು ಇದು? ಕೇಳಿದರೆ ಅಧಿಕಪ್ರಸಂಗವಾದೀತು. ನದಿಮೂಲ, ಋಷಿ ಮೂಲವನ್ನು ಕೆದಕಬಾರದಲ್ಲ. ಹಾಗೆ ಇದು ಸಹ.

ಅಲ್ಪ ಸಂಖ್ಯಾತರ ವಿಚಾರ ಬದಿಗಿರಲಿ. ದಲಿತರು ಮತ್ತು ಹಿಂದುಳಿದವರು ಕರಿಬೇವಿನ ಸೊಪ್ಪು ಇದ್ದಹಾಗೆ. ಒಗ್ಗರಣೆಗೆ ಬೇಕು, ಊಟಕ್ಕೆ ಬೇಡ ಅಂದು, ಇಂದು, ಮುಂದೆಸಹ(?) ತಮ್ಮ ತಮ್ಮ ಜನಾಂಗದ ಹೆಸರನ್ನು ಹೇಳಿಕೊಂಡು ಅವರನ್ನು ಮುಂದಿಟ್ಟುಕೊಂಡು ಏನೆಲ್ಲಾ ಮಾಡಿದರು? ಹೇಗಿದ್ದವರು ಹೇಗಾದರು? ಅಂಗೈ ಹುಣ್ಣಿಗೆ ಕನ್ನಡಿ ಬೇಕೆ? ನೊಂದವರ' ಪಾಲಿಗೆ ನಾಲಿಗೆಯಾಗ ಬೇಕಿದ್ದ ಸಂಘಟನೆಗಳು ರಾಜಕೀಯ ಮುಖಂಡರ ಮನೆಮುಂದೆ "ದೇಹಿ" ಎಂದು ನಿಂತಿರುವ ದೃಶ್ಯ ಹೇಸಿಗೆ ಉಂಟುಮಾಡುತ್ತಿದೆ. ಸಂಘಟನೆಗಳ ನಾಯಕರೆನಿಸಿಕೊಂಡವರು ತಮ್ಮ ತಮ್ಮ ಬೇಳೆ ಬೇಯಿಸಿಕೊಳ್ಳಲು ಯಾವ ಮಟ್ಟಕ್ಕೆ ಇಳಿಯಬಲ್ಲರು ಎಂಬುದನ್ನು ನೋಡಿ ಆಗಿದೆ. ಮತ್ತೆ ಮತ್ತೆ ಈ ಆಟ ನಡೆಯುವುದಿಲ್ಲ. ಡೊಂಬರಾಟ ಸಾಕು.

ಸಿದ್ರಾಮಯ್ಯನವರನ್ನು ಮುಖ್ಯ ಮಂತ್ರಿ ಮಾಡಲು ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ಜನಾಂಗದವರು ಒಂದಾಗಬೇಕೆ? ನಾಳೆ ಕರ್ನಾಟಕ ವಿಧಾನಸಭೆ ವಿಸರ್ಜನೆಗೊಂಡರೆ ಯಾರ್ಯಾರು ಎಲ್ಲೆಲ್ಲಿರುತ್ತಾರೆ? ಎಷ್ಟು ದಿನ ಈ ಮೊಸಳೆ ಕಣ್ಣೀರು?

ರಾಜಕೀಯ ಅಧಿಕಾರಕ್ಕಾಗಿ ಈ ಕಪಟ ನಾಟಕವೆ? ಜಾತ್ಯಾತೀತ ಸಮಾಜ ನಿರ್ಮಾಣ ಮಾಡಲು ಜಾತಿಗಳ ಸಮಾವೇಶ (ಹಿಂದುಳಿದ ಎಂಬ ಹಣೆ ಪಟ್ಟಿ) ದಲಿತರ ವಿರುದ್ಧ ಹಿಂದುಳಿದವರನ್ನು, ಹಿಂದುಳಿದವರ ವಿರುದ್ಧ ಅಲ್ಪಸಂಖ್ಯಾತರನ್ನು ಎತ್ತಿಕಟ್ಟಿ ಅವರು ಕಚ್ಚಾಡುವುದನ್ನು ನೋಡಿ ತೆರೆಮರೆಯಲ್ಲಿ ನಿಂತು ನಗಲಿಲ್ಲವೆ ಈ ಮಂದಿ? "ಊರಿಗೆ ದ್ರೋಹವ ಮಾಡಿ ಬದುಕಲೆಣಿಸಬೇಡ" ಎನ್ನುತ್ತಿದ್ದುದನ್ನು "ಜಾತಿ ಜನತೆಗೆ ದ್ರೋಹ ಮಾಡಿ ಬದಕಲೆಣಿಸಬೇಡ" ಎಂದು ಬದಲಾಯಿಸಬೇಕಾಗಿದೆ.

"ಸಂವಾದ" ಅಕ್ಟೋಬರ್ ಸಂಚಿಕೆಯಲ್ಲಿ ನಾಲ್ವರು ಪ್ರಬುದ್ಧ ಬರೆಹಗಾರರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ ದುರಂತ. ದೇಶಕ್ಕೆ ಸ್ವಾತಂತ್ರ್ಯ ಬಂದು ಅರ್ಧ ಶತಮಾನ ಕಳೆದರೂ ಗ್ರಾಮೀಣ ಪ್ರದೇಶಗಳಲ್ಲಿನ ಕೆಳಜಾತಿ ಜನರ ಅರಿವಿನ ಪರಿಧಿ ವಿಸ್ತಾರಗೊಳ್ಳಲೇ ಇಲ್ಲ. ಇನ್ನೂ ಕತ್ತಲೆಯಲ್ಲೇ ಇದ್ದಾರೆ. ಅಲ್ಪಸ್ವಲ್ಪ ವಿದ್ಯೆ ಕಲಿತ ಮಕ್ಕಳು ಯಾವುದೋ ಭ್ರಮಾ ಲೋಕದಲ್ಲಿ ವಿಹರಿಸುತ್ತಿದ್ದಾರೆ. ಕರೆದಲ್ಲಿಗೆ ಹೋಗುವುದು "ಧಿಕ್ಕಾರ" "ಗೆಲ್ಲೋವರೆಗೆ ಹೋರಾಟ" ಇತ್ಯಾದಿ ಹಳಸಲು ಘೋಷಣೆಗಳನ್ನು ಕೂಗುವುದು ದಿನಚರಿಯಾಗಿದೆ. ಸೂಕ್ತ ಮಾರ್ಗದರ್ಶನವಿಲ್ಲದ ಈ ಯುವ ಶಕ್ತಿಯ ದುರ್ಬಳಕೆ ನಿರಂತರವಾಗಿ ನಡೆಯುತ್ತಿದೆ.

ದಲಿತರು ಅಥವಾ ಎಸ್ಸಿಗಳು ಎಂದೊಡನೆ ಅದು ಹರಿಜನ, ಹೆಚ್ಚೆಂದರೆ ಗಿರಿಜನರ ಒಕ್ಕೂಟ ಎಂಬ ಭಾವನೆ ಇದೆ. ಡಿ.ಎಸ್.ಎಸ್.ನಂತ ಸಂಘಟನೆಗಳು ಕೂಡ ಇತರ ಬಡವರನ್ನು ಹತ್ತಿರ ಸೇರಿಸಲೇ ಇಲ್ಲ. 'ಅಹಿಂದ' ಒಂದು ರಾಜಕೀಯೇತರ ಪ್ರಬಲ ಸಂಘಟನೆಯಾಗಿ ರೂಪುಗೊಂಡರೆ ಈ ರಾಜ್ಯದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲೇ ಒಂದು ರೀತಿಯ ಮಾನಸಿಕ ಸಾಮಾಜಿಕ ಬದಲಾವಣೆ ಖಂಡಿತ ಸಾಧ್ಯ, ಆದರೆ ಬಲಿತ ದಲಿತರಿಗೆ ಇದು ಬೇಕಿಲ್ಲ.

ಕಾನ್ಶಿರಾಂ, ಮುಲಾಯಂಸಿಂಗ್, ಮಾಯಾವತಿ, ಲಾಲೂಪ್ರಸಾದ್ ದೇವರಾಜ ಅರಸ್ ಮೊದಲಾದವರು ರಾಜಕೀಯವಾಗಿ ಮೇಲೆ ಬಂದುದನ್ನು ಸ್ಮರಿಸೋಣ. ಇವರ್ಯಾರಿಗೂ ಮೇಲ್ವರ್ಗದ ಜನತೆಯ ಬೆಂಬಲ ವಿರಲಿಲ್ಲವೆಂಬ ವಾದ ಸರಿಯಲ್ಲ. ಒಂದು ವರ್ಗವನ್ನು ದೂರವಿಟ್ಟು ಸಾಮಾಜಿಕ ಪರಿವರ್ತನೆಗೆ ಹೊರಡಬಾರದು. ಬಸವಲಿಂಗಪ್ಪನವರ ದೃಷ್ಟಿಕೋನ ನೆನಪಿಸಿಕೊಳ್ಳಬೇಕು. ಅವರಿಗಿದ್ದ ಕಳಕಳಿ ಸ್ಮರಣೀಯ. ಒಂದು ಕಡೆ ದಲಿತರು, ಇನ್ನೊಂದು ಕಡೆ ಬಲಿತವರು ನಿಲ್ಲುವಂತಾಗಬಾರದು ಪೆರಿಯಾರ್ ರಂತಹ ನಿಸ್ವಾರ್ಥಿಗಳನ್ನು ಇಂದಿನ ದಿನಗಳಲ್ಲಿ ಎಲ್ಲಿಂದ ತರುತ್ತೀರಿ? ವೇದಿಕೆಗಳಲ್ಲಿ ಕಾಣಿಸಿಕೊಂಡ ಜನ ಮಾತ್ರ ಪ್ರಗತಿಪರರು, ಇತರರು ಅಲ್ಲ ಎಂಬ ಭಾವನೆ ಸರಿಯಲ್ಲ.

ಒಂದು ಸಮಾಧಾನದ ಸಂಗತಿಯೆಂದರೆ ಪ್ರಗತಿಪರ ಲೇಖಕ ಲೇಖಕಿಯರನ್ನು, ಚಿಂತಕರನ್ನು "ಸಂವಾದ" ಗುರುತಿಸುತ್ತಿದೆ. ಅವರ ಮನದಾಳದ ಇಂಗಿತವನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸುತ್ತಿದೆ. ನಗರವಾಸಿಗಳು, ಯೂನಿವರ್ಸಿಟಿಗಳಲ್ಲಿ ಕೆಲಸ ಮಾಡುತ್ತಿರುವವರು ಮಾತ್ರ ಕ್ರಾಂತಿಕಾರಿ ಮನೋಭಾವನೆವುಳ್ಳವರೆಂಬ ಅಭಿಪ್ರಾಯ ಬೇಡ. ನಾಡಿನುದ್ದಕ್ಕೂ ಯುವ ಜನಾಂಗ ಚಡಪಡಿಸುತ್ತಿದೆ. ಅವರಿಗೆ ಸೂಕ್ತ ವೇದಿಕೆ, ಅವಕಾಶಗಳ ಕೊರತೆಯಿದೆ. ಹುತ್ತವನ್ನು ಬಡಿಯುವದಕ್ಕಿಂತ ಹಾವನ್ನು ಬಡಿಯಲು ಈ ವರ್ಗ ತುದಿಗಾಲಿನಲ್ಲಿ ನಿಂತಿದೆ. ಯುವ ಶಕ್ತಿಯ ಸದುಪಯೋಗವಾಗ ಬೇಕಾಗಿದೆಯಷ್ಟೆ.

'ಅಹಿಂದ' ಯಾವುದೇ ರಾಜಕೀಯ ಪಕ್ಷದ ಓಟ್ ಬ್ಯಾಂಕ್ ಆಗದಂತೆ ನೋಡಿಕೋಳ್ಳಬೇಕು. ಬಾಡಿನೂಟದ ಆಸೆಗೆ ಬಲಿಯಾಗದಂತೆ, ನೂರು ರೂಪಾಯಿ ಆಸೆಗೆ ಲಾರಿ ಹತ್ತದಂತೆ ಎಚ್ಚರ ವಹಿಸಬೇಕು. ದುಡಿಯುವ ಶಕ್ತಿಯುಳ್ಳ ಕೈಗಳಿಗೆ ಕೆಲಸ ಸಿಕ್ಕಾಗ ಮಾತ್ರ "ಸ್ವಾಭಿಮಾನ"ದ ನೆನಪುಂಟಾಗುತ್ತದೆ. ಹಸಿದವವರಿಗೆ ಅನ್ನದ ಚಿಂತೆ ಮಾತ್ರ ಇರುತ್ತದೆ. □

'ಅಹಿಂದ' ಯಾವುದೇ ರಾಜಕೀಯ ಪಕ್ಷದ ಓಟ್ ಬ್ಯಾಂಕ್ ಆಗದಂತೆ ನೋಡಿಕೋಳ್ಳಬೇಕು. ಬಾಡಿನೂಟದ ಆಸೆಗೆ ಬಲಿಯಾಗದಂತೆ, ನೂರು ರೂಪಾಯಿ ಆಸೆಗೆ ಲಾರಿ ಹತ್ತದಂತೆ ಎಚ್ಚರ ವಹಿಸಬೇಕು.

ದಲಿತರು ಮತ್ತು ಹಿಂದುಳಿದವರು ಕರಿಬೇವಿನ ಸೊಪ್ಪು ಇದ್ದಹಾಗೆ. ಒಗ್ಗರಣೆಗೆ ಬೇಕು, ಊಟಕ್ಕೆ ಬೇಡ ಅಂದು, ಇಂದು, ಮುಂದೆಸಹ(?) ತಮ್ಮ ತಮ್ಮ ಜನಾಂಗದ ಹೆಸರನ್ನು ಹೇಳಿಕೊಂಡು ಅವರನ್ನು ಮುಂದಿಟ್ಟುಕೊಂಡು ಏನೆಲ್ಲಾ ಮಾಡಿದರು? ಹೇಗಿದ್ದವರು ಹೇಗಾದರು? ಅಂಗೈ ಹುಣ್ಣಿಗೆ ಕನ್ನಡಿ ಬೇಕೆ? ನೊಂದವರ ಪಾಲಿಗೆ ನಾಲಿಗೆಯಾಗ ಬೇಕಿದ್ದ ಸಂಘಟನೆಗಳು ರಾಜಕೀಯ ಮುಖಂಡರ ಮನೆಮುಂದೆ "ದೇಹಿ" ಎಂದು ನಿಂತಿರುವ ದೃಶ್ಯ ಹೇಸಿಗೆ ಉಂಟು ಮಾಡುತ್ತಿದೆ. ಸಂಘಟನೆಗಳ ನಾಯಕರೆನಿಸಿಕೊಂಡವರು ತಮ್ಮ ತಮ್ಮ ಬೇಳೆ ಬೇಯಿಸಿಕೊಳ್ಳಲು ಯಾವ ಮಟ್ಟಕ್ಕೆ ಇಳಿಯಬಲ್ಲರು ಎಂಬುದನ್ನು ನೋಡಿ ಆಗಿದೆ. ಮತ್ತೆ ಮತ್ತೆ ಈ ಆಟ ನಡೆಯುವುದಿಲ್ಲ. ಡೊಂಬರಾಟ ಸಾಕು.

○ಡಿ.ಎಂ. ಚಿಣ್ಣಪ್ಪ,
ಸೋಮವಾರಪೇಟೆ

ಸಂಪಾದಕೀಯ

ಹಂಬಲ

ಮಾಹಿತಿ ಹಕ್ಕಿನ ಮಾಯಾ ದರ್ಪಣ

ಭಾರತ ಸರ್ಕಾರ ಈ ವರ್ಷ ಎರಡು ಅಪರೂಪದ ಮಸೂದೆಗಳನ್ನು ಮಂಡಿಸಿ ಜಾರಿಗೆ ತರುವ ಮೂಲಕ ಹೊಸ ಕ್ರಾಂತಿಕಾರಿ ಹೆಜ್ಜೆಯನ್ನು ಇಟ್ಟಿದೆ. 1956 ರಷ್ಟು ಹಳೆಯದಾದ ಹಿಂದೂ ಉತ್ತರಾಧಿಕಾರ ಮಸೂದೆಗೆ ತಿದ್ದುಪಡಿ ಮಾಡುವ ಮೂಲಕ ಮಹಿಳೆಯರಿಗೆ ಆಸ್ತಿಯಲ್ಲಿ ಸಮಾನ ಪಾಲು ನೀಡುವ ಐತಿಹಾಸಿಕ ಕ್ರಮಕ್ಕೆ ಸರ್ಕಾರ ಮುಂದಾಗಿದೆ. ಆ ಮೂಲಕ ಮಹಿಳೆಯರಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಹಕ್ಕು ಕಡೆಗಾದರೂ ಸಿಗುವಂತಾಗಿದೆ. ಹಾಗೆಯೇ 'ಮಾಹಿತಿ ಹಕ್ಕು ಕಾಯಿದೆ 2005' ಅನ್ನು ಜಾರಿಗೆ ತರುವ ಮೂಲಕ ಸಾರ್ವಜನಿಕ ಬದುಕಿನಲ್ಲಿ ಹೊಸ ಬದಲಾಣೆಗೆ ಕಾರಣವಾಗಿದೆ.

ದೇಶಾದ್ಯಂತ ಭಾರೀ ಕುತೂಹಲ, ನಿರೀಕ್ಷೆ ಹಾಗೂ ಚರ್ಚೆಗೆ ಗ್ರಾಸವಾಗಿದ್ದ 'ಮಾಹಿತಿ ಹಕ್ಕು ಕಾಯಿದೆ' ಈಗ ರಾಷ್ಟ್ರಾದ್ಯಂತ ಜಾರಿಗೆ ಬಂದಿದೆ. ಜಮ್ಮು ಕಾಶ್ಮೀರವನ್ನು ಹೊರತು ಪಡಿಸಿ ದೇಶದ ಎಲ್ಲ 27 ರಾಜ್ಯಗಳಲ್ಲೂ ಏಕ ಕಾಲದಲ್ಲಿ, ಏಕ ರೂಪದಲ್ಲಿ ಈ ಕಾನೂನು ಅಕ್ಟೋಬರ್ 12 ರಿಂದ ಅನುಷ್ಠಾನಗೊಂಡಿದೆ. ಕರ್ನಾಟಕ ಸರ್ಕಾರ ಈ ಹಿಂದೆಯೇ (200-01ರಲ್ಲಿ) ಇದೇ ರೀತಿಯ ಕಾಯಿದೆಯನ್ನು ಜಾರಿಗೆ ತಂದಿತ್ತು. ಆದರೆ ಈಗಿನ ರಾಷ್ಟ್ರೀಯ ಕಾನೂನಿಗೆ ಇರುವಷ್ಟು ಶಕ್ತಿ ಅದಕ್ಕೆ ಇರಲಿಲ್ಲ. ಅಲ್ಲದೆ ಅದರ ಜಾರಿಗೆ ಕೂಡ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿರಲಿಲ್ಲ. ಅಂಥ ಕಾನೂನೊಂದು ಜಾರಿಯಲ್ಲಿರುವ ಬಗ್ಗೆ ಕೂಡ ಸಾರ್ವಜನಿಕರಿಗೆ ತಿಳವಳಿಕೆ ಇರಲಿಲ್ಲ.

ಹೊಸ ಕಾಯಿದೆ ಕೂಡ ಪರಿಪೂರ್ಣವಲ್ಲ ಹಾಗೂ ಅದರಲ್ಲಿ ಅನೇಕ ನ್ಯೂನ್ಯತೆಗಳು ಇವೆ ಎಂಬ ವ್ಯಾಪಕ ಟೀಕೆಗಳಿದ್ದರೂ, ಅದು ಈಗಿರುವ ರೀತಿಯಲ್ಲೇ ಸಮರ್ಪಕವಾಗಿ ಹಾಗೂ ಪ್ರಾಮಾಣಿಕವಾಗಿ ಜಾರಿಗೆ ಬಂದರೆ ದೇಶದ ಮಾಹಿತಿ ಇತಿಹಾಸದಲ್ಲಿ ದೊಡ್ಡ ಮೈಲಿಗಲ್ಲಾಗಲಿದೆ. ನಮ್ಮಲ್ಲಿ ಎಲ್ಲವೂ ಕದ್ದು-ಮುಚ್ಚಿ ನಡೆಸುವ ವ್ಯವಹಾರವೇ ಆಗಿರುವುದರಿಂದ ಈ ಕಾಯಿದೆಯ ಸಮರ್ಥ ಜಾರಿಯಿಂದಾಗಿ ಸರ್ಕಾರ ಹಾಗೂ ಸಾರ್ವಜನಿಕರ ನಡುವಿನ ಪಾಲ್ಗೊಳ್ಳುವಿಕೆ ಹೆಚ್ಚಾಗಿಲಿದೆ. ಎಲ್ಲ ಸರ್ಕಾರಿ-ಅರೆ ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಯೋಜನೆಗಳು ಈ ಮಾಹಿತಿ ಕಾಯಿದೆಯ ವ್ಯಾಪ್ತಿಯಲ್ಲಿ ಬರುವುದರಿಂದ ತೆರೆ ಮರೆಯ ವ್ಯಾವಹಾರಗಳಿಗೆ ಹೆಚ್ಚಿನ ಅವಕಾಶ ಇರುವುದಿಲ್ಲ.

ಮಾಹಿತಿ ಹಕ್ಕು ಕಾಯಿದೆ ಪ್ರಕಾರ ಕೇಂದ್ರ, ರಾಜ್ಯ ಹಾಗೂ ಇನ್ನಿತರ ಯಾವುದೇ ಸ್ಥಳೀಯ ಸಂಸ್ಥೆಗಳು, ಸರ್ಕಾರದ ಅನುದಾನ ಪಡೆಯುತ್ತಿರುವ ಯಾವುದೇ ಸರ್ಕಾರೇತರ ಸಂಸ್ಥೆಗಳು ಇನ್ನು ಮುಂದೆ ಮಾಹಿತಿಗಳನ್ನು ಗೌಪ್ಯವಾಗಿ ಇಡುವಂತಿಲ್ಲ. ಯಾರೇ ಸಾರ್ವಜನಿಕರು ಆ ಮಾಹಿತಿಗಳನ್ನು ಕೇಳಿ ಪಡೆಯಬಹುದು. ಸರ್ಕಾರವಾಗಲಿ, ಸಂಘ ಸಂಸ್ಥೆಗಳಾಗಲಿ ಸಾರ್ವಜನಿಕರು ಕೇಳುವ ಯಾವುದೇ ದಾಖಲೆ, ಕಾಗದ, ಲೆಕ್ಕಪತ್ರ, ಫೈಲು, ಪ್ರಸ್ತಾವನೆ, ಅಭಿಪ್ರಾಯ, ಇ-ಮೇಲ್, ಕರಡು, ಪತ್ರಿಕಾ ಹೇಳಿಕೆಗಳು, ಸಲಹೆಗಳು, ಆದೇಶಗಳು, ಲಾಗ್ ಪುಸ್ತಕಗಳು, ಗುತ್ತಿಗೆ ಕರಾರುಗಳು ಇವೇ ಮೊದಲಾದ ಯಾವುದೇ ಮಾಹಿತಿಗಳನ್ನು ಕಾನೂನಿನಂತೆ ನೀಡಬೇಕು. ಹಾಗೆ ನೀಡದಿದ್ದರೆ ಅಂಥವರ ಮೇಲೆ ಕಾನೂನು ಕ್ರಮ ಜರುಗಿಸುವ ಅಧಿಕಾರ ಸಾರ್ವಜನಿಕರಿಗೆ ಮಾಹಿತಿ ಹಕ್ಕು ಕಾಯಿದೆ ಪ್ರಕಾರ ಲಭ್ಯವಾಗಿದೆ.

ಈ ಮಾಹಿತಿಗಳನ್ನು ಸಾರ್ವಜನಿಕರಿಗೆ ಒದಗಿಸಲು ಸರ್ಕಾರವೇ ಸೂಕ್ತ ವ್ಯವಸ್ಥೆಯನ್ನು ಜಾರಿಗೆ ತರುತ್ತಿದೆ. ಸರ್ಕಾರದ ಎಲ್ಲ ವಿಭಾಗಗಳಲ್ಲೂ, ಇದಕ್ಕಾಗಿಯೇ ಪ್ರತ್ಯೇಕ ಮಾಹಿತಿ ಶಾಖೆಗಳನ್ನು ತೆರೆಯಲಾಗುತ್ತಿದೆ. ಅಲ್ಲಿಗೆ ಸೂಕ್ತ ಅಧಿಕಾರಿಗಳ ನೇಮಕ ಕೂಡ ಮಾಡಲಾಗುತ್ತಿದೆ. ಯಾವುದೇ ಮಾಹಿತಿಯನ್ನು ಕೋರಿ ಈ ಅಧಿಕಾರಿಗಳಿಗೆ ಸಾರ್ವಜನಿಕರು ಅರ್ಜಿಸಲ್ಲಿಸಬಹುದು. ಅರ್ಜಿಸಲ್ಲಿಸಿದ 30 ದಿನಗಳ ಒಳಗಾಗಿ ಪೂರ್ಣಮಾಹಿತಿ ಒದಗಿಸುವುದು ಅಧಿಕಾರಿಗಳ ಕರ್ತವ್ಯ. ಹಾಗೆ ಮಾಡದಿದ್ದ ಅಧಿಕಾರಿಯ ಮೇಲೆ ದೂರು ನೀಡಲು ಈ ಕಾಯಿದೆಯಲ್ಲಿ ಅವಕಾಶ ಕಲ್ಪಸಲಾಗಿದೆ.

ವಿಚಿತ್ರವೆಂದರೆ ಈ ಕಾಯಿದೆಯಷ್ಟೇ ಸಮರ್ಥವಾದ ಹಲವು ಕಾಯಿದೆ-ಕಾನೂನುಗಳು ನಮ್ಮಲ್ಲಿವೆ. ಸರ್ಕಾರಿ ಕಚೇರಿಗಳಿಗೆ ಯಾವುದೇ ಅರ್ಜಿಸಲ್ಲಿಸಿದರೂ, 45 ದಿನಗಳ ಒಳಗಾಗಿ ಆ ಅರ್ಜಿ ಇತ್ಯರ್ಥವಾಗಬೇಕೆಂಬ ನಿಯಮ ಬಹಳ ವರ್ಷಗಳಿಂದಲೂ ಇದೆ. ಆದರೆ ಯಾವ ಸರ್ಕಾರಿ ಕಚೇರಿಗಳಲ್ಲೂ ಇದು ಜಾರಿಯಗಿಲ್ಲ. ಹಾಗೆ ಜಾರಿಮಾಡದ ಯಾವ ಅಧಿಕಾರಿ ಮೇಲೂ ಕಾನೂನು ಕ್ರಮ ಜರುಗಿಸಲಗಿಲ್ಲ. ಹಾಗಿರುವಾಗ ಮಾಹಿತಿ ಹಕ್ಕು ಕಾಯಿದೆಗೆ ಕೂಡ ಇದೇ ಗತಿ ಬರುವುದಿಲ್ಲ ಎಂಬುದಕ್ಕೆ ಗ್ಯಾರಂಟಿ ಏನು? ಎಂಬ ಪ್ರಶ್ನೆ ಏಳುತ್ತದೆ. ಆದರೆ ಮಾಹಿತಿ ಹಕ್ಕು ಕಾಯಿದೆಯಲ್ಲಿನ ಒಂದು ಪ್ರಾಮಾಣಿಕತೆ ಎಂದರೆ, ಮಾಹಿತಿ ನಿರಾಕರಿಸುವ ಅಧಿಕಾರಿಗೆ ಶಿಕ್ಷೆ ವಿಧಿಸುವ ಅವಕಾಶ ಈ ಕಾಯಿದೆಯುಲ್ಲಿರುವುದು. ಮಾಹಿತಿ ನೀಡಬೇಕಾದ ಅಧಿಕಾರಿ ಉದ್ದೇಶಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸುವ ಮನವಿಗಳನ್ನು ಸ್ವೀಕರಿಸದಿದ್ದರೆ, ಮನವಿಗಳನ್ನು ಸ್ವೀಕರಿಸಿ ತಪ್ಪು ಮಾಹಿತಿ ನೀಡಿದರೆ, ಅಪೂರ್ಣ ಮಾಹಿತಿ ನೀಡಿದರೆ, ಬೇಕೆಂದೇ ಕೆಲವು ಮಾಹಿತಿಗಳನ್ನು ಮರೆಮಾಡಿದರೆ ಅಂಥ ಅಧಿಕಾರಿಗೆ ದಂಡ ವಿಧಿಸಲು ಕಾಯಿದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ ಈ ಎಲ್ಲಾ ಪ್ರಕ್ರಿಯೆಗೆ ಕಾಲ ನಿಗಧಿ ಮಾಡಲಾಗಿದೆ. ನಿಗಧಿತ ಸಮಯದಲ್ಲಿ ಅರ್ಜಿದಾರನಿಗೆ ಮಾಹಿತಿ ನೀಡಲಾಗಿದ್ದರೆ ಅದಕ್ಕೂ ಸಂಬಂಧಿಸಿದ ಅಧಿಕಾರಿ ದಂಡನೆಗೆ ಗುರಿಯಾಗಬೇಕಾಗುತ್ತದೆ. ಹೀಗೆ ತಪ್ಪು ಮಾಡಿದ ಅಧಿಕಾರಿಗಳಿಗೆ ಗರಿಷ್ಠ 25 ಸಾವಿರದವರೆಗೆ ದಂಡ ವಿಧಿಸಬಹುದಾಗಿದೆ. ಹಾಗಾಗಿಯೇ ಈ ಕಾಯಿದೆ, ಹಿಂದಿನ ಎಲ್ಲ ಕಾಯಿದೆಗಳಿಗಿಂತಲೂ ಹೆಚ್ಚು ಸಮರ್ಥವಾಗಿ ಜಾರಿಯಾಗಬಹುದೆಂಬ ಭರವಸೆ ಮೂಡಿಸಿದೆ.

ಆದರೆ ಈ ಕಾಯಿದೆ ಸಮರ್ಥವಾಗಿ ಜಾರಿಗೆ ಬರಬೇಕಾದರೆ, ಬದ್ಧತೆ ಹಾಗೂ ಉತ್ತರದಾಯಿತ್ವ ಇರುವ ಒಂದು ದೊಡ್ಡ ಪಡೆಯೇ ಬೇಕಾಗುತ್ತದೆ. ಕಾಯಿದೆಯ ಪ್ರಕಾರ ಅದನ್ನು ಜಾರಿಗೊಳಿಸಲು ಈಗಿರುವ ಸರ್ಕಾರಿ ಸಿಬ್ಬಂದಿಯನ್ನೇ ನೇಮಿಸಲಾಗುತ್ತಿದೆ. ಈಗಾಗಲೇ ಜಡ್ಡುಗಟ್ಟಿ ಹೋಗಿರುವ ಸಿಬ್ಬಂದಿ ಎಷ್ಟರ ಮಟ್ಟಿಗೆ ಇದನ್ನು ಜಾರಿಗೆ ತರಬಹುದು ಎಂಬ ಬಗೆಗೆ ಅನುಮಾನಗಳಿವೆ. ಎಲ್ಲ ಕಾನೂನುಗಳನ್ನು ತಮಗೆ ಬೇಕಾಂತೆ ತಿರುಚುವ ಹಾಗೂ ಸಾರ್ವಜನಿಕರನ್ನು ಸತಾಯಿಸಲೆಂದೇ ತಾವು ಹುಟ್ಟಿದ್ದೇವೆಂದು ಭ್ರಮಿಸುವ ನೌಕರ ಶಾಹಿ, ಈ ಕೆಲಸವನ್ನು ಸಮರ್ಥವಾಗಿ ನಿಭಾಯಿಸಲು ಸಾಧ್ಯವೆ? ಎಂಬ ಅಳಕು ಪ್ರಜ್ಞಾವಂತರನ್ನು ಕಾಡುತ್ತಿದೆ.

ಈ ಕಾಯಿದೆ ಸಮರ್ಥವಾಗಿ ಜಾರಿಯಾಗಬೇಕಾದರೆ, ಸಂಬಂಧಿಸಿದ ಅಧಿಕಾರಿಗಳನ್ನು ನಿಯಂತ್ರಿಸುವ ಹಾಗೂ ತಪ್ಪು ಮಾಡಿದವರಿಗೆ ಶಿಕ್ಷ ವಿಧಿಸಲು ಅಧಿಕಾರ ಇರುವ ಉನ್ನತಾಧಿಕಾರ ಹೊಂದಿದ ಒಂದು ಸ್ವತಂತ್ರ ಆಯೋಗವನ್ನು ನೇಮಕ ಮಾಡಬೇಕು. ಈ ಆಯೋಗದ ಅಡಿಯಲ್ಲಿ ಮಾಹಿತಿ ಹಕ್ಕು ಕಾಯಿದೆಯನ್ನು ಜಾರಿಗೆ ತರಬೇಕು. ಅದಕ್ಕೆ ಬೇಕಾದ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಅಧಿಕಾರ ಕೂಡ ಈ ಆಯೋಗಕ್ಕೆ ಇರಬೇಕು. ಹಾಗಾದಾಗ ಮಾತ್ರ ಸಮರ್ಥವಾಗಿ ಈ ಕಾಯಿದೆಯನ್ನು ಜಾರಿಗೆ ತರಬಹುದಾಗಿದೆ. ಇಲ್ಲದಿದ್ದರೆ ಇದು ಕಣ್ಣೊರೆಸುವ ಮತ್ತೊಂದು ತಂತ್ರವಾಗಿ ಮಾತ್ರ ಉಳಿಯುತ್ತದೆ. ನಮ್ಮ ಲೋಕಾಯುಕ್ತ ಇದ್ದ ಹಾಗೆ!

○ ಇಂದೂಧರ ಹೊನ್ನಾಪುರ

ಕೂಸು ಬಡವಾಯ್ತು!

ಸಂಪಾದಕರೊಡನೆ ಸಂವಾದ

ಪರಿವರ್ತನಾಶೀಲವಾದ ಸಾಮಾಜಿಕ ವ್ಯವಸ್ಥೆಗೆ ಸರಿಹೊಂದುವ ಚಲನಶೀಲವಾದ ಶಿಕ್ಷಣವನ್ನು ನೀಡಲು ವಿಫಲ ವಾದ 'ಶೈಕ್ಷಣಿಕನೀತಿಗಳು' ಮತ್ತು ಸರ್ಕಾರಗಳ ದುರ್ಬಲ ನಿಯಮಗಳನ್ನು... ಒಂದನೇ ತರಗತಿಯಿಂದ ಇಂಗ್ಲಿಷ್ ಬೇಕೆ ಬೇಡವೇ ಎಂಬ ಪರವಿರೋಧಿ ಎಂಬೆರಡೂ ನೀತಿಗಳು ಸಾಕಷ್ಟು ಸುಸ್ಪಷ್ಟವಾಗಿ ಪಟ್ಟಿ ಮಾಡುತ್ತವೆ. ಹಾಗೆಯೇ... ಇಂಗ್ಲಿಷ್ ಬೇಕೆ ಬೇಡವೇ ಎಂಬೆರಡೂ ಪರ ವಿರೋಧಿ ನೀತಿಗಳೂ ಮಗುವಿನ ತರಗತಿಯ ವಾಸ್ತವಿಕ ಸನ್ನಿವೇಶಗಳನ್ನು ಆಧರಿಸಿದೆಯೇ? ಎಂಬುದು ಕೂಡ ಲಕ್ಷ್ಯಾರ್ಹವಾದ ವಿಷಯವಾಗಿದೆ.... ಸ್ವಾತಂತ್ರ್ಯದ ನಂತರ ನಮ್ಮಲ್ಲಿ ಚಾಲನೆಯಲ್ಲಿದ್ದ ಶಿಕ್ಷಣನೀತಿಗಳ ಪರಿಣಾಮ ಅಷ್ಟೊಂದು ತೃಪ್ತಿಕರ ವಾಗಿಲ್ಲ ವೆಂಬುದನ್ನು ಈ ಕೆಳಗಿನ ಅಂಶಗಳು ಸ್ಪಷ್ಟಪಡಿಸುತ್ತವೆ.

ಂಪದ್ಮಾಲಯಾ ನಾಗರಾಜ

ನಮ್ಮ ದಕ್ಷಿಣ ಕರ್ನಾಟಕದಲ್ಲಿನ ಖುಷ್ಕಿರಾಗಿ ಬೇಸಾಯು ಮಾಡುವ ರೈತರಾಲ್ಲಿರಗಿ ಬೇಸಾಯಕ್ಕೆ ಸಂಬಂಧಿಸಿದಂತೆ ಒಂದು ಮಾತು ಪ್ರಚಲಿತದಲ್ಲಿದೆ. ಮರದ ನೇಗಿಲಿನಲ್ಲಿ 4–5 ಸಾರಿ ಉಳುಮೆ ಮಾಡಿ ಒಳ್ಳೆಯ ಕೊಟ್ಟಗೆ ಗೊಬ್ಬರ ಹಾಕಿ, ಕಾಲಕಾಲಕ್ಕೂ ಸರಿಯಾಗಿ ಮಳೆಬಂದು ಬಿತ್ತನೆ ಮಾಡಿದರೂ, 'ಗುಂಟುವೆಹದ' ವ್ಯತ್ಯಾಸವಾಯಿತೆಂದರೆ ಆ ಬೆಳೆಯನ್ನು ದೇವರೂ ಕಾಪಾಡಲಾರ. ಗುಂಟುವೆಹದ ಎಂದರೆ ಪೈರು ತುಂಬಾ ಎಳೆ ವಯಸ್ಸಿನಲ್ಲಿರುವಾಗ ಮಾಡಲೇ ಬೇಕಾದ ಪರಿಪಕ್ವ ಪೈರಿನ ವಯಸ್ಸು ಮಿತಿ ಮೀರಿತೆಂದರೆ... ಬೆಳೆ ರೈತನ ಕೈತಪ್ಪಿ ಶ್ರಮವೆಲ್ಲಾ ವ್ಯರ್ಥವೇ ಸರಿ!

ಈ ಉದಾಹರಣೆಯು ಪ್ರಸ್ತುತ ನಾವು ಮಗುವಿಗೆ ನೀಡುವ ಪ್ರಾಥಮಿಕ ಶಿಕ್ಷಣಕ್ಕೆ ಬಹಳ ಚೆನ್ನಾಗಿ ಅನ್ವಯವಾಗುತ್ತದೆ. ಅತ್ಯಂತ ಮಹತ್ವ ಪೂರ್ಣವೆನಿಸುವ ಪ್ರಾಥಮಿಕ ಹಂತದಲ್ಲಿ ಮಗುವಿಗೆ ಕಾಲ ಕಾಲಕ್ಕೆ ಅತ್ಯಾವಶ್ಯಕವಾದದ್ದನ್ನು ನೀಡದಿದ್ದರೆ, ಮುಂದೆ ಮಗುವನ್ನು ನಾವೇ ಯಾರೂ ಕಾಪಾಡಲಾರದಷ್ಟು ದೂರ ತಲುಪಿಸಿದಂತಾಗಿ, ಇಂತಹದ್ದು ಮಗು ದುರ್ಬಲ ವಿದ್ಯಾರ್ಥಿಯಾಗಿ ಮುಂದುವರಿಯಲು ಕಾರಣೀಭೂತವಾಗುತ್ತದೆ. ಈ ವಿಚಾರದಲ್ಲಿ 'ಮಗುವಿನ ಸಮಗ್ರ ಜ್ಞಾನ ವಿಕಾಸವನ್ನು' ಬಿಂಬಿಸುವ 'ಪಠ್ಯ ವಿಧಾನವನ್ನು ರೂಪಿಸುವ ತಜ್ಞರ ಸಮಿತಿಗಳು' ಹಾಗೂ ಇಂತಹ ವಿಧಾನಗಳನ್ನು ಜಾರಿಗೆ ತರುವಲ್ಲಿ ಸಂಬಂಧಿಸಿದ 'ಆಡಳಿತಾತ್ಮಕ ವ್ಯವಸ್ಥೆಗಳು' ಮತ್ತು ತರಗತಿಯಲ್ಲಿ ಪಠ್ಯ ವಿಧಾನವನ್ನು ಅನುಸರಿಸುವ 'ಶಿಕ್ಷಕವರ್ಗಗಳು' ಪ್ರಮುಖ ಪಾತ್ರ ವಹಿಸುತ್ತವೆಯಾದರೂ ಇಂತಹ ಯಾವ ವ್ಯವಸ್ಥೆಗಳಿಗೂ 'ಗಂಭೀರ ವಿಷಯ'ವಾಗಿ ಪರಿಗಣಿಸಲ್ಪಡದ ಒಂದನೇ ತರಗತಿಗೆ ಇಂಗ್ಲಿಷ್ ಕಲಿಕೆ ಬೇಕೋ ಬೇಡವೋ! ಎಂಬ ವಿಷಯವು ಬುದ್ಧಿ ಜೀವಿಗಳಲ್ಲಿ ಚರ್ಚೆಗೆ ಗ್ರಾಸವಾಗಿರುವುದನ್ನು ಕಂಡಾಗ... ಸರ್ಕಾರಿ ಕೃಪಾಪೋಷಿತ ಪುಕ್ಕಟೆ ಶಿಕ್ಷಣದ ನೀತಿಗಳು... ವಿಧಿಯಿಲ್ಲದೇ ತಮ್ಮ ಮಕ್ಕಳನ್ನು ಇಂತಹವಕ್ಕೆ ನೇತುಹಾಕಿದ ಭಾರತೀಯ ಬಡವನ ಗತ್ಯಂತರವಿಲ್ಲದ ಬಾಳು ಎಳೆ ಎಳೆ ಯಾಗಿ ಬಿಚ್ಚಿಕೊಳ್ಳುತ್ತದೆ. ಮುಂದೆ ಭವಿಷ್ಯತ್ತಿ ನಲ್ಲಿ ಈ ಮಕ್ಕಳನ್ನು ಕಡೆಯ ಶ್ರೇಣಿಯ ಚಾಕರಿಗಳಿಗಾಗಿ ಉದ್ದೇಶ ಪೂರ್ವಕವಾಗಿ ಇಂದಿನಿಂದಲೇ ತಯಾರಿಸಲಾಗುತ್ತಿದೆಯೇನೋ ಎಂಬ ದಿಗಿಲುಂಟಾಗುವಂತೆ ಮಾಡಿದೆ.

ಸಂಪಾದಕರೊಡನೆ ಸಂವಾದ

ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಬೇಕೆ ಬೇಡವೇ ಎಂಬ ಪರವಿರೋಧಿ ಒತ್ತಡಗಳ ಮುಂದೆ ಘನ ಗಾಂಭೀರ್ಯತೆಯನ್ನು ಪ್ರದರ್ಶಿಸುತ್ತಿರುವ ಶಿಕ್ಷಣ ನೀತಿಗಳು ಮತ್ತು ಸರ್ಕಾರಗಳನ್ನು ಸ್ವಲ್ಪ ಅರ್ಥೈಸಿಕೊಳ್ಳುವುದಾದರೆ... ಈಗಾಗಲೇ ಅತ್ಯಂತ ವೇಗವಾಗಿ ಸಾಗುತ್ತಿರುವ ಇಂಗ್ಲಿಷ್ ಶಿಕ್ಷಣದ ಮುಂದೆ ಆಮೆ ನಡಿಗೆಯಂತೆ ಕುಂಟುತ್ತಿರುವ ಕನ್ನಡ ಶಿಕ್ಷಣ ಅವಸ್ಥೆ ನೆಪಕ್ಕಾಗಿಯೇನೋ ಎಂಬಂತೆ ವ್ಯಕ್ತವಾಗತೊಡಗುತ್ತದೆ.

ಪರಿವರ್ತನಾಶೀಲವಾದ ಸಾಮಾಜಿಕ ವ್ಯವಸ್ಥೆ ಸರಿಹೊಂದುವ ಚಲನಶೀಲವಾದ ಶಿಕ್ಷಣವನ್ನು ನೀಡಲು ವಿಫ ವಾದ 'ಶೈಕ್ಷಣಿಕನೀತಿಗಳು' ಮತ್ತು ಸರ್ಕಾರಗಳ ದುರ್ಬ ನಿಯಮಗಳನ್ನು... ಒಂದನೇ ತರಗತಿಯಿಂದ ಇಂಗ್ಲಿಷ್ ಬೇ ಬೇಡವೇ ಎಂಬ ಪರವಿರೋಧಿ ಎಂಬೆರಡೂ ನೀತಿಗಳು ಸಾಕಷ ಸುಸ್ಪಷ್ಟವಾಗಿ ಪಟ್ಟಿ ಮಾಡುತ್ತವೆ. ಹಾಗೆಯೇ... ಇಂಗ್ಲಿಷ್ ಬೇ ಬೇಡವೇ ಎಂಬೆರಡೂ ಪರವಿರೋಧಿ ನೀತಿಗಳೂ ಮಗುವಿನ ತರ ತಿಯ ವಾಸ್ತವಿಕ ಸನ್ನಿವೇಶಗಳನ್ನು ಆಧರಿಸಿದೆಯೇ? ಎಂಬುದ ಕೂಡ ಲಕ್ಷ್ಯಾರ್ಹವಾದ ವಿಷಯವಾಗಿದೆ.... ಈ ಎಲ್ಲಾ ಅಂಶಗಳ ಅತ್ಯಂತ ವೈಜ್ಞಾನಿಕವಾದ ಹಾಗೂ ಸಂಶೋಧನಾತ್ಮಕ ಶಿಕ್ಷಣವನ ಜಾರಿಗೆ ತರುವಲ್ಲಿ 'ಶೈಕ್ಷಣಿಕನೀತಿ'ಯು ಇನ್ನೂ ನಮ್ಮ ಶೈಶವಾಸ್ಥೆಯಲ್ಲಿ ಇದೆಯೆಂಬ ಲಕ್ಷಣಗಳೇ ಕಂಡುಬರುತ್ತಿವ ಸ್ವಾತಂತ್ರ್ಯದ ನಂತರ ನಮ್ಮಲ್ಲಿ ಚಾಲನೆಯಲ್ಲಿದ್ದ ಶಿಕ್ಷಣನೀತಿಗ ಪರಿಣಾಮ ಅಷ್ಟೊಂದು ತೃಪ್ತಿಕರವಾಗಿಲ್ಲವೆಂಬುದನ್ನು ಈ ಕೆಳಗಿನ ಅಂಶಗಳು ಸ್ಪಷ್ಟಪಡಿಸುತ್ತವೆ.

* ಕನ್ನಡದಲ್ಲಿ ಎಂ.ಎ. ಪದವಿ ಪಡೆದಿರುವ ವಿದ್ಯಾರ್ಥಿ ಗಳಲ್ಲಿ ಶೇಕಡಾ 90 ರಷ್ಟು ವಿದ್ಯಾರ್ಥಿಗಳಿಗೆ ಕನ್ನಡ ವರ್ಣಮಾಲ ಯಲ್ಲಿನ ಅನುನಾಸಿಕಗಳಾದ ಙ,ಞ,ಗಳಿಗಿರುವ ಉಚ್ಚರಣಾಬೇಧ ಗಳು ತಿಳಿದಿರುವುದಿಲ್ಲ. ಈ ಮಂದಿ ಬಹುಶಃ ಓದುವಾಗ ಮತ್ತು ಸಹಜವಾಗಿ ಮಾತನಾಡುವಾಗ ಮಹಾಪ್ರಾಣಗಳೆಲ್ಲಾ ಅಪಭ್ರಂಶ ವಾಗುತ್ತದೆ. 'ಋ' ಪ್ರತ್ಯಯಕ್ಕೂ 'ರು' ಕಾರಕ್ಕೂ ಹಾಗೆಯೇ ಅವರ್ಗೀಯಗಳಾದ 'ಶ' ಮತ್ತು 'ಷ' ಪ್ರತ್ಯಯಗಳ ನಡುವಿರುವ ಶಾಬ್ಧಿಕ ಸೌಂದರ್ಯದ ಕಲ್ಪನೆಯಿರುವುದಿಲ್ಲ. ಎಲ್ಲಾ ಶಬ್ಧ(Sound) ಸೌಂದರ್ಯವನ್ನು ನುಂಗಿ ನೀರು ಕುಡಿದು ಭಾಷಾ ಸೌಂದರ್ಯತೆಯನ್ನು ಕುರೂಪಗೊಳಿಸಲಾಗುತ್ತದೆ.

ಇನ್ನೂ ಪದ ಸಂಪತ್ತು ಮತ್ತದರ ಬಳಕೆ ಕುರಿತು ಹೇಳುವುದಾದರೆ... ಶಾಲೆ ಮುಖ ಸಹಾ ನೋಡದೇ ಇರುವ ಸ್ವಲ್ಪ ಹಿಂದಿನ ಪರಂಪರೆಯ ಜನಪದರು ಈಗಲೂ ಸ್ಪಷ್ಟ ಕನ್ನಡದಲ್ಲಿ ಮಾತನಾಡುವಾಗ ಅವರ ಭಾಷಾ ಬಳಕೆ ಅತ್ಯಾಶ್ಚರ್ಯವಾಗುತ್ತದೆ. ಅದೇ ಎಲ್ಲವನ್ನೂ ಓದಿ ಕೊಂಡಿರುವ ನಾವು ನಮ್ಮ ಶರೀರದ ಅಂಗಾಂಗಳನ್ನೆಲ್ಲಾ ಕನ್ನಡ ದಲ್ಲಿ ಹೇಳಲು ಪ್ರಯತ್ನಿಸಿದರೆ ಎಷ್ಟನ್ನು ಹೇಳ ಬಲ್ಲೆವು? ಅಥವಾ 'ಮೀನ ಗಂಡ' ನಮ್ಮಲ್ಲಿ ಯಾ ವುದು? ಎಂದು ಕೇಳಿದರೆ ಎಷ್ಟು ಬೇಗ ಹೇಳ ಬಲ್ಲೆವು?

* ಒಂದನೇ ತರಗತಿಯಿಂದ ಕನ್ನಡ

ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ಪದವಿಯವರಿವಿಗೂ ಇಂಗ್ಲಿಷ್‌ನ್ನು ದ್ವಿತೀಯ ಭಾಷೆಯಾಗಿ ತೆಗೆದುಕೊಂಡಿರುವ ವಿದ್ಯಾರ್ಥಿಯೊಬ್ಬನನ್ನು ಕರೆದು ಅವನಿಗೆ ಇಂಗ್ಲಿಷ್ ಪದಗಳ ಉಕ್ತಲೇಖನ ನೀಡಿ! ಅವನು ಖಂಡಿತವಾಗಿ ಬಹುಶಃ ತಪ್ಪಿಲ್ಲದೇ ಬರೆಯಬಲ್ಲ! ಅಥವಾ ಇಂಗ್ಲಿಷನ್ನು ಓದಲು ಕೊಡಿ ಅವನು ಇದನ್ನೂ ಸರಾಗವಾಗಿ ಮಾಡಬಲ್ಲ. ಅದೇ ಅವನ ಜೊತೆ ಇಂಗ್ಲಿಷನಲ್ಲಿ ಮಾತನಾಡಲು ಪ್ರಾರಂಭಿಸಿ ಅವನು ಇದ್ದಕ್ಕಿದ್ದಂತೆ ತಬ್ಬಿಬ್ಬಾಗುತ್ತಾ... ಕೆಸರಿನಲ್ಲಿ ಹೂತು ಹೋದವನು ಒದ್ದಾಡುವಂತೆ ಇಂಗ್ಲಿಷ್ ಪದಗಳ ದ್ವಂದ್ವದಲ್ಲಿ ಸಿಕ್ಕಿ ಒದ್ದಾಡತೊಡುಗುತ್ತಾನೆ.

ವಿಚಿತ್ರವೆಂದರೆ ಮೂರ್‍ನಾಲ್ಕು ಭಾಷೆಗಳನ್ನು ಮಾತನಾಡುವ ಜನರಿರುವ ಒಂದು ಹಳ್ಳಿಯಲ್ಲಿನ ಮಗುವಿಗೆ ಕಲಿಸದಿದ್ದರೂ... ಆ ಹಳ್ಳಿಯಲ್ಲಿ ಜನರು ಮಾತನಾಡುವ ಎಲ್ಲಾ ಭಾಷೆಗಳನ್ನು ಮಗು ಮಾತನಾಡಬಲ್ಲದು– ಹೀಗಿರುವಾಗ ಕನ್ನಡ ಶಾಲೆಯಲ್ಲಿ ದ್ವಿತೀಯ ಭಾಷೆಯಾಗಿ ಇಂಗ್ಲಿಷನ್ನು 10 ವರ್ಷ ಕಲಿತಿದ್ದರೂ ಮಗು ಇಂಗ್ಲಿಷಿನಲ್ಲಿ ಮಾತನಾಡಲು ಸರ್ವಶಕ್ತನಾಗುವುದಿಲ್ಲ. ಏಕೆ? ಯತಾರ್ಥದಲ್ಲಿ ಕನ್ನಡ ಬಲ್ಲವನಿಗೆ ಕನ್ನಡ ಕಲಿಸುವುದಕ್ಕಿಂತ ಇಂಗ್ಲಿಷ್ ಕಲಿಸುವುದು ಸುಲಭ. ಕನ್ನಡದಲ್ಲಿ 15 ಸ್ವರಗಳು, 34 ವ್ಯಂಜನಗಳು, ಮತ್ತೆ ಇದೇ ವ್ಯಂಜನಗಳಿಗೆ ಮತ್ತೆ 15 ಸ್ವರಗಳೂ ಬಳಕೆಯಾಗುತ್ತಾ 525 ಸಂಯುಕ್ತಾಕ್ಷರಗಳಾಗುತ್ತವೆ. ಜೊತೆಗೆ ಸ್ವಜಾತಿ–ವಿಜಾತಿಗಳು ಅಸಂಖ್ಯಾತ... ಈ ರಗಳೆಗಳು ಇಂಗ್ಲಿಷನಲ್ಲಿಲ್ಲ..

ಈ ಗೊಂದಲುಗಳು 'ಓದುವಿಕೆ' ಮತ್ತು "ಬರೆಯುವಿಕೆಯ' ಪ್ರಾಧಾನ್ಯತೆಯಲ್ಲಿ ಈ ಅಂಶಗಳಿಗೆ ಹೆಚ್ಚು ಜೋತುಬೀಳಬೇಕಾದ ಅನಿವಾರ್ಯ ಪ್ರಸಂಗದಿಂದಾಗಿ ಪದ ಸಂಪತ್ತನ್ನು ಸೃಷ್ಟಿಮಾಡಿ ಕೊಳ್ಳಲಾಗದೇ ನಿರ್ಭಂದಿಸಲ್ಪಟ್ಟು 'ವ್ಯವಹಾರಕ್ಕಾಗಿ ಭಾಷೆ' ಅಥವಾ "ತುಟಿಗಳಲ್ಲಾಡುವಿಕೆಯೇಭಾಷೆ' ಎಂಬಂತಹ ಸಹಜ ಸ್ಥಿತಿ ನಿರ್ಮಾಣವಾಗುತ್ತಾ ಪ್ರಾಥಮಿಕ ಶಾಲಾ ವಾತಾವರಣದಲ್ಲಿ ಲಭ್ಯವಿರುವ 'ದ್ವಿಭಾಷಾ' ಪದಗಳೇ ಏಕೀಕರಣಗೊಂಡು ಒಂದು ಕನ್ನಡ ಪದಕ್ಕೆ ಇನ್ನೊಂದು ಇಂಗ್ಲಿಷ್ ಪದವನ್ನೋ ಅಥವಾ ಒಂದು ಇಂಗ್ಲಿಷ್ ಪದಕ್ಕೆ ಇನ್ನೊಂದು ಕನ್ನಡ ಪದವನ್ನೋ ಸೇರಿಸುತ್ತಾ ಮತ್ತೊಂದು ಸಂಯುಕ್ತ ಭಾಷೆ ಆವಿರ್ಭವಿಸುವ ಸಂದರ್ಭಗಳನ್ನು ಹುಟ್ಟುಹಾಕಿದೆ. ಇದು ವಿಧಿಯಿಲ್ಲದೇ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮ ತೆಗೆದುಕೊಂಡು ದ್ವಿತೀಯ ಭಾಷೆಯಾಗಿ ಇಂಗ್ಲಿಷ್‌ನ್ನು ತೆಗೆದುಕೊಳ್ಳಲೇ ಬೇಕಾದ 'ಶೈಕ್ಷಣಿಕ ಸಂಪ್ರದಾಯಿಕ ಪದ್ಧತಿಗೆ' ಬಲಿಯಾದ ಸಮಾಜದ ಅಸಹಾಯಕ ಸ್ಥಿತಿ. ಈ ಸ್ಥಿತಿ ಸಂಸ್ಕೃತಿಯ ಮೇಲೆ ಗಾಢ ಪರಿಣಾಮವನ್ನು ಬೀರಿದೆ.

* ತಿರುಪತಿ ತಿರುಮಲ ದೇವಾಲಯದಿಂದ ವಿಮಾನದಲ್ಲಿ ಶ್ರೀನಿವಾಸನ ಉತ್ಸವ ಮೂರ್ತಿ ದೆಹಲಿಗೆ ಹೋಗಿ ಪ್ರದರ್ಶನವಾಗುತ್ತಿದ್ದರೆ, ರಾಷ್ಟ್ರಪತಿಗಳು ಆ ಉತ್ಸವ ಮೂರ್ತಿಯನ್ನು ಕಂಡು ಮೂಕವಿಸ್ಮಿತರಾದರಂತೆ!, ಹೀಗೆಯೇ... ಮಾತನಾಡುವವರನ್ನು ಕಂಡು ನಮ್ಮ ಜನ ಮೂಕ ವಿಸ್ಮಿತರಾಗುವುದನ್ನು ಲಾಭವಾಗಿಸಿಕೊಂಡು ಬಂಡವಾಳಿಗಳ ಸ್ವತ್ತಾಗಿರುವ 'ಖಾಸಗಿ ಶಿಕ್ಷಣ' ಪರವಾನಗಿಗಳು ಸಾಮಾಜಿಕ ಅಸಮತೋಲನವನ್ನು ಕಾಪಾಡಿಕೋಳ್ಳುವುದರಲ್ಲಿ ಮಹತ್ತರ ಪಾತ್ರವನ್ನು ವಹಿಸಿವೆ. ಇದು ಸಾಂವಿಧಾನಿಕವಾದ ಸಾಮಾಜಿಕ ಸಮಾನತೆಗೊದಗಿದ ಅಪಮಾನ ಕೂಡ.

ಇಂಗ್ಲಿಷ್ ಕಲಿತರೆ ಎಲ್ಲಿ ಬೇಕಾದರೂ ಉದ್ಯೋಗಗಿಟ್ಟಿಸಬಹುದು ಅಥವಾ ವ್ಯವಹಾರ ಮಾಡಬಹುದು. ಎಂಬ ಅಭಿಪ್ರಾಯಗಳ ವಿಜೃಂಭಣೆಯ ಆಂತರ್ಯದಲ್ಲಿ ಭಾರತದ ಸಹಜ ಮನೋಸ್ಥಿತಿಯು ಸೆಳೆತವೂ ಇದೆ. ಏಕೆಂದರೆ ಭಾರತೀಯ ಮನಸ್ಸುಗಳು ಮನುಷ್ಯ ಮನುಷ್ಯನ ಮಧ್ಯೆ ಅಂತರವನ್ನು ಕಾಯ್ದುಕೊಳ್ಳಲು ಹಪಹಪಿಸುತ್ತವೆ. ಇಂತಹದ್ದೇ ಮನಸ್ಥಿತಿಯು ನಮ್ಮಲ್ಲಿ 'ಜಾತಿ'ಯನ್ನು ಸಾಪಲ್ಯಗೊಳಿಸಿತು–ಮನುಷ್ಯನಲ್ಲಿರುವ ನಿರ್ದಿಷ್ಠವಾದ ಸಮೂಹ ಶ್ರೇಷ್ಠತೆಯ ವಿಷಮತೆಯಿಂದಾಗಿ ಮಾನವೀಯ ಸಂಬಂಧಗಳನ್ನೆಲ್ಲಾ ಕಡಿದು ಕೊಳ್ಳುವಂತೆ ಮಾಡಿತು. ಈಗ ನಮ್ಮ ಸಮಾಜ ಇದೇ ಲಕ್ಷಣವನ್ನಾಧರಿಸಿ 'ನಾಗರೀಕ ಶ್ರೇಷ್ಠತೆಯನ್ನು ತೋರ್ಪಡಿಸಿಕೊಂಡು ಅಸಮಾನತೆಯನ್ನು ಕಾಯ್ದುಕೊಳ್ಳಲು ಇಂಗ್ಲಿಷ್ ಶಿಕ್ಷಣಕ್ಕೆ ಮುಗಿಬಿದ್ದಿದೆ. ಹೀಗೆ... ವಿಷಮತೆಗಳು ವಿಘಟಿಸುತ್ತಾ...

ವಿಚಿತ್ರವೆಂದರೆ ಮೂರ್‍ನಾಲ್ಕು ಭಾಷೆಗಳನ್ನು ಮಾತನಾಡುವ ಜನರಿರುವ ಒಂದು ಹಳ್ಳಿಯಲ್ಲಿನ ಮಗುವಿಗೆ ಕಲಿಸದಿದ್ದರೂ... ಆ ಹಳ್ಳಿಯಲ್ಲಿ ಜನರು ಮಾತನಾಡುವ ಎಲ್ಲಾ ಭಾಷೆಗಳನ್ನು ಮಗು ಮಾತನಾಡಬಲ್ಲದು– ಹೀಗಿರುವಾಗ ಕನ್ನಡ ಶಾಲೆಯಲ್ಲಿ ದ್ವಿತೀಯ ಭಾಷೆಯಾಗಿ ಇಂಗ್ಲಿಷನ್ನು 10 ವರ್ಷ ಕಲಿತಿದ್ದರೂ ಮಗು ಇಂಗ್ಲಿಷಿನಲ್ಲಿ ಮಾತನಾಡಲು ಸರ್ವ ಶಕ್ತನಾಗುವುದಿಲ್ಲ. ಏಕೆ? ಯತಾರ್ಥದಲ್ಲಿ ಕನ್ನಡ ಬಲ್ಲವನಿಗೆ ಕನ್ನಡ ಕಲಿಸುವುದಕ್ಕಿಂತ ಇಂಗ್ಲಿಷ್ ಕಲಿಸುವುದು ಸುಲಭ

ರೂಪಾಂತರವಾಗುತ್ತಾ... ಸ್ಥಿತ್ಯಂತರವಾಗಿ ಜೀವಂತಿಕೆಯನ್ನು ಮತ್ತೆ ಮತ್ತೆ ಪಡೆಯುತ್ತಿರುವುದು ಈ ದೇಶದ ದುರಂತ.

ಇಂತಹ ವಿರೋಧಿನೆಲೆಯ ಎಲ್ಲಾ ಅಂಶಗಳೂ 'ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ' ಎಂಬ ಮನೋವೈಜ್ಞಾನಿಕ ವಾದ ಹಾಗೂ ಸಾಂವಿಧಾನಿಕವಾದ ಶಿಶು ಹಕ್ಕುಗಳಿಗೆ ವಿರುದ್ಧವಾದವುಗಳಾಗಿದ್ದು, ಇವುಗಳನ್ನು 'ವಿಫಲ ಶಿಕ್ಷಣ ನೀತಿಗಳ ವಿಚಿತ್ರ ಪರಿಣಾಮಗಳೆಂದರೂ ಅಡ್ಡಿ ಇಲ್ಲ. ಹೀಗೆ... ಸ್ವಾತಂತ್ರ್ಯದನಂತರ ವಿಫಲವಾದ ಶೈಕ್ಷಣಿಕ ದುರ್ಬಲತೆಗಳನ್ನು ಮನಗಂಡು ಪರ್ಯಾಯ ಮಾರ್ಗೋಪಾಯವಾಗಿ ಹಾಗೂ ಸಂವಿಧಾನಿಕವಾದ ಶೈಕ್ಷಣಿಕ ಶಿಶು ಹಕ್ಕುಗಳ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ 1986ರಲ್ಲೇ ಕೇಂದ್ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಲಾಯಿತು.

ನಮ್ಮ ರಾಜ್ಯದಲ್ಲಿ ಪ್ರಥಮ ಹೆಜ್ಜೆಯಾಗಿ ಆರ್.ರೋಹಿಡೇಕರ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಉನ್ನತಮಟ್ಟದ ತಜ್ಞರ ಸಮಿತಿಯು 'ಕೇಂದ್ರ ರಾಷ್ಟ್ರಿಯ ಶಿಕ್ಷಣ ನೀತಿಗೆ' ಅತ್ಯಂತ ಬದ್ಧವಾದ ಮತ್ತು ಪರಿಣಾಮಕಾರಿಯಾದ 'ಪಠ್ಯವಸ್ತು'ವನ್ನು ಶಿಫಾರಸು ಮಾಡಿದರು. ಈ ಪಠ್ಯ ವಸ್ತುವು ಮಗು ಪ್ರಾಥಮಿಕ ಹಂತದಲ್ಲಿ ಆಯಾತರಗತಿಗಳಿಗನುಗುಣವಾಗಿ ಗಳಿಸಬೇಕಾದ ಕಲಿಕಾಂಶಗಳು ಇದಕ್ಕಿಂತಲೂ ಮುಖ್ಯವಾಗಿ ಇಂತಹ ಕಲಿಕಾಂಶಗಳನ್ನು ಮಕ್ಕಳಲ್ಲಿ ಬೆಳೆಸಬೇಕಾದರೆ ಉಪಾಧ್ಯಾಯರಲ್ಲಿರಬೇಕಾದ ಬೋಧನಾ ಕೌಶಲ್ಯಗಳು ಮತ್ತು ಇವುಗಳ ಧ್ಯೇಯ ಹಾಗೂ ತಂತ್ರಗಳನ್ನೊಳಗೊಂಡಂತೆ ಅತ್ಯಂತ ವೈಜ್ಞಾನಿಕವಾಗಿ ಸಮಗ್ರವಾದ 'ಪಠ್ಯವಸ್ತು'ವನ್ನು ತಯಾರಿಸಿದರು. ಈ ಪಠ್ಯವಸ್ತುವಿನ ಮಹತ್ವಪೂರ್ಣ ಕಲಿಕಾಮೂಲಾಂಶಗಳನ್ನು ಪರಿಪೂರ್ಣವಾಗಿ ಬಿಂಬಿಸಲ್ಪಡುವ 'ಪಠ್ಯಪುಸ್ತಕ'ವನ್ನು ರೂಪಿಸಬೇಕಾದ ರಾಜ್ಯ ಪಠ್ಯ ಪುಸ್ತಕ ನಿರ್ದೇಶನಾಲಯವು [ಡಿ.ಎಸ್.ಇ.ಆರ್.ಟಿ] ಪಠ್ಯ ವಿಧಾನದಲ್ಲಿ ಅನೇಕ ವಿರೋಧಾಭಾಸವಾದ ಗೊಂದಲಗಳನ್ನು ಸೃಷ್ಟಿಮಾಡಿದೆ. ಈ ಗೊಂದಲಗಳು ಮಗುವಿನ ಕಲಿಕೆಯ ಮೇಲೆ ತೀವ್ರವಾದ ಪರಿಣಾಮವನ್ನು ಬೀರಿದೆ.

ಈ ಲೇಖನದ ಮುಖ್ಯಾಂಶಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ... 'ಕೇಂದ್ರ ಪಠ್ಯಪುಸ್ತಕ ನಿರ್ದೇಶನಾಲಯ' ರಾಜ್ಯಗಳಿಗೆ ಕೆಲವು ಕಡ್ಡಾಯ ಸೂಚನೆಗಳನ್ನು ನೀಡಿತ್ತು.

* ಭಾಷಾ ಬೋಧನೆಯಲ್ಲಿ ವ್ಯವಹಾರಿಕ ಭಾಷೆಗಳಿಗೆ ಒತ್ತು ಹಾಗೂ ಸಾಂವಿಧಾನಿಕವಾದ 1959ರ ಶಿಶು ಹಕ್ಕುಗಳು ಮತ್ತು 1947 ರ ರಾಷ್ಟ್ರೀಯ ಮಕ್ಕಳ ನೀತಿ ಅನುಸಾರ ಮಗುವಿನ ಮಾತೃಭಾಷೆಗೆ ಮತ್ತು ಮತೀಯ ಮೌಲ್ಯಗಳಿಗೆ, ಅಲ್ಪಸಂಖ್ಯಾತ ಭಾಷೆಗಳಿಗೆ ಆದ್ಯತೆ ನೀಡುವುದು.

–ಇದರಡಿಯಲ್ಲೇ ನಮ್ಮ ರಾಜ್ಯದಲ್ಲಿ ತೆಲುಗು, ತಮಿಳು, ಉರ್ದು, ಮರಾಠಿ ಶಾಲೆಗಳು ನಡೆಯುತ್ತಿವೆ. ಆದಗ್ಯೂ ಇವುಗಳಲ್ಲಿ ಚಾಲನೆಯಾಗುವ ನಿಯಮಗಳು ಎಷ್ಟು ಅಸಮರ್ಪಕ ಎಂದರೆ... ನಮ್ಮ ಕರ್ನಾಟಕ ರಾಜ್ಯದಲ್ಲಿ 25,000 ಕ್ಕಿಂತಲೂ ಅಧಿಕವಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಿದ್ದು, ಗಡಿಜಿಲ್ಲೆಗಳಲ್ಲಿ 8000 ಶಾಲೆಗಳಿವೆ. ಅಂದರೆ ಶೇಕಡಾ 30. ವಾಸ್ತವಿಕವಾಗಿ ಈ ಜಿಲ್ಲೆಗಳ ಬಹುತೇಕ ಹಳ್ಳಿಗಳಲ್ಲಿ ಕನ್ನಡವನ್ನು ಆಡು ಭಾಷೆಯಾಗಿ ಬಳಸುವುದಿಲ್ಲ. ಮತ್ತು ಪ್ರಾದೇಶಿಕ ಭಿನ್ನತೆಯನ್ನಾಧರಿಸಿದ 'ಬೇರೆ ಭಾಷೆಯ' ಮಾದ್ಯಮ ಶಾಲೆಗಳು ಪೋಷಕರ ತೀರ್ಮಾನವನ್ನಾಧರಿಸಿವೆ. ಗಡಿ ಜಿಲ್ಲೆಯಲ್ಲಿರುವ ಇಂತಹ ಪೋಷಕರು 'ನಮ್ಮದು ಕರ್ನಾಟಕ' ನಮ್ಮಲ್ಲಿ ಕನ್ನಡವೇ ಇರಲಿ ಎನ್ನುತ್ತಾರೆ. ಏಕೆಂದರೆ ಸರ್ಕಾರಿ ನೌಕರಿ ನಮ್ಮ ಮಗುವಿಗೆ ತಪ್ಪಿಹೋಗಬಹುದೆಂಬ ಭಯಕ್ಕಾಗಿ.. ಹೀಗಾಗಿ ಕನ್ನಡವೇ ಗೊತ್ತಿಲ್ಲದಾ ಪ್ರದೇಶಗಳಲ್ಲಿ ಕನ್ನಡ ಶಾಲೆಗಳು ಎಂಬಂತಾಗಿದೆ.

ಹಳ್ಳಿಯ ಪರಿಸರದಲ್ಲಿ ಒಂದು ಭಾಷೆ, ಶಾಲಾ ವಾತಾವರಣದಲ್ಲಿ ಪರಿಚಿತವಿಲ್ಲದಾಭಾಷೆ. ಹೀಗಾಗಿರುವುದರಿಂದ ಮಗುವಿನ ಕಲಿಕೆಯ ಮೇಲೆ ಒತ್ತಡವನ್ನುಂಟು ಮಾಡಿರುವುದರಿಂದ ತಳಪಾಯದ ಹಂತವಾಗಿರುವ ಪ್ರಾಥಮಿಕ ಶಾಲೆಯಲ್ಲಿ ಅತ್ಯಗತ್ಯವಾಗಿ ಕಲಿಯಬೇಕಾದ ಅಂಶಗಳು ಬಿಟ್ಟು ಹೋಗಿ ಇಂಗ್ಲಿಷ್, ಗಣಿತಗಳು ಕಷ್ಟವೆಂಬಂತಾಗಿ ದುರ್ಬಲ ವಿದ್ಯಾರ್ಥಿಯಾಗಿ ಮುಂದುವರಿಯುವಂತಾಗಿದೆ. ಇತ್ತ ಶಿಕ್ಷಕನಿಗೂ ಹೇಗೆ ಕಲಿಸಬೇಕೋ ತಿಳಿಯದೇ ಒತ್ತಡವುಂಟಾಗಿ ನಿರ್ದಿಷ್ಠ ಸಮಯಕ್ಕೆ ನಿರ್ದಿಷ್ಠ ಪ್ರಗತಿಗಳನ್ನು ಸಾಧಿಸಲಾರದೆ ವಿಫಲವಾಗಿದ್ದಾನೆ. ಈ ಅಂಶಗಳಿಂದಾಗಿದ "ಭಾಷಾ ಭಿನ್ನತೆಯನ್ನಾಧರಿಸಿದ ಸಂಶೋಧನಾತ್ಮಕ ಪಠ್ಯವಿಧಾನ"ವನ್ನು ನಮ್ಮ ರಾಜ್ಯ ಪಠ್ಯ ಪುಸ್ತಕ ನಿರ್ದೇಶನಾಲಯಗಳು ರೂಪಿಸಿಲ್ಲ!

ಶಾಲಾ ತರಗತಿಯ ಸಂದರ್ಭಗಳಲ್ಲಿ ಕಲಿಸುವ ಶಿಕ್ಷಕ ಮತ್ತು ಕಲಿಯುವ ಮಗುವಿನ ಮಧ್ಯೆ ಉದ್ಭ

(9 ನೇ ಪುಟಕ್ಕೆ)

ಶಿಕ್ಷಣ ಮಾಧ್ಯಮ: ಬೇಕಿದೆ ಎರಡು ಕಾಲಿನ ಆಸರ

ಪ್ರೊ. ಕಾಂಚ ಐಲಯ್ಯ
ಅನು: ಬೆಳಚಿಕ್ಕನಹಳ್ಳಿ ಶ್ರೀನಾಥ್

ಚಿಂತನೆ

ಸಧ್ಯ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಸ್ಥಳೀಯ ಭಾಷೆಗಳ ಮಾಧ್ಯಮದಲ್ಲೂ ಖಾಸಗಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮದಲ್ಲೂ, ಬೋಧನೆಯನ್ನು ಮಾಡಲಾಗುತ್ತಿದೆ. ಸ್ವತಃ ಸ್ಥಳೀಯ ಭಾಷೆಗಳ ಹೋರಾಟಗಾರರು, ಮುಖಂಡರು ತಮ್ಮ ಮಕ್ಕಳು ಮೊಮ್ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಕಾನ್ವೆಂಟ್‌ಗಳಿಗೆ ಸೇರಿಸುತ್ತಿದ್ದಾರೆ. ಆದರೆ ಅವರು ಗ್ರಾಮೀಣ ಜನತೆಯ ಮೇಲೆ ಕನ್ನಡ, ತೆಲುಗು, ತಮಿಳು, ಮಲೆಯಾಳಂ ಮುಂತಾದ ಸ್ಥಳೀಯ ಭಾಷೆಗಳ ಉಳಿವು ಮತ್ತು ಪಾವಿತ್ರ್ಯ ರಕ್ಷಣೆಯ ಜವಾಬ್ದಾರಿಯನ್ನು ಹೇರುತ್ತಿದ್ದಾರೆ. ಇದು ಈ ವರ್ಗದ ಮೇರೆ ಮೀರಿದ ಕಪಟತನದ ಕುರುಹಾಗಿದೆ. ಪ್ರಭುತ್ವ ಮತ್ತು ನಾಗರಿಕ ಸಮಾಜದ ಮೇಲೆ ಹಿಡಿತ ಸಾಧಿಸಲು ಬಯಸುವ ಬುದ್ಧಿಜೀವಿ ವರ್ಗವು ಭಾಷಾನೀತಿಯನ್ನು ರೂಪಿಸುವಾಗ ಮಾತೃಭಾಷೆ ಎಂಬ ಪರಿಕಲ್ಪನೆಯನ್ನು ಅತ್ಯಂತ ಜಾಣ್ಮೆಯಿಂದ ಬಳಸುತ್ತಿದೆ.

ಶಾಲಾ ಹಂತದಲ್ಲಿ ಶಿಕ್ಷಣದ ಬೋಧನೆಯ ಮಾಧ್ಯಮ ಯಾವುದಾಗಿರಬೇಕೆಂಬ ವಿಚಾರ ಈಗ ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಅಳವಡಿಸಬೇಕೆಂದು ಮತ್ತು ಒಂದನೆಯ ತರಗತಿಯಿಂದಲೇ ಇಂಗ್ಲಿಷನ್ನು ಕಲಿಸಬೇಕೆಂದು ಸಮಾಜದ ಬಹುತೇಕ ವರ್ಗಗಳು ಒತ್ತಾಯಿಸುತ್ತಿರುವುದು ಚರ್ಚೆಗೆ ಕಾರಣವಾಗಿದೆ.

ಈ ಸಧ್ಯ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಸ್ಥಳೀಯ ಭಾಷೆಗಳ ಮಾಧ್ಯಮದಲ್ಲೂ ಖಾಸಗಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮದಲ್ಲೂ, ಬೋಧನೆಯನ್ನು ಮಾಡಲಾಗುತ್ತಿದೆ. ಸ್ವತಃ ಸ್ಥಳೀಯ ಭಾಷೆಗಳ ಹೋರಾಟಗಾರರು, ಮುಖಂಡರು ತಮ್ಮ ಮಕ್ಕಳು ಮೊಮ್ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಕಾನ್ವೆಂಟ್‌ಗಳಿಗೆ ಸೇರಿಸುತ್ತಿದ್ದಾರೆ. ಆದರೆ ಅವರು ಗ್ರಾಮೀಣ ಜನತೆಯ ಮೇಲೆ ಕನ್ನಡ, ತೆಲುಗು, ತಮಿಳು, ಮಲೆಯಾಳಂ ಮುಂತಾದ ಸ್ಥಳೀಯ ಭಾಷೆಗಳ ಉಳಿವು ಮತ್ತು ಪಾವಿತ್ರ್ಯ ರಕ್ಷಣೆಯ ಜವಾಬ್ದಾರಿಯನ್ನು ಹೇರುತ್ತಿದ್ದಾರೆ. ಇದು ಈ ವರ್ಗದ ಮೇರೆ ಮೀರಿದ ಕಪಟತನದ ಕುರುಹಾಗಿದೆ.

ಪ್ರಭುತ್ವ ಮತ್ತು ನಾಗರಿಕ ಸಮಾಜದ ಮೇಲೆ ಹಿಡಿತ ಸಾಧಿಸಲು ಬಯಸುವ ಬುದ್ಧಿಜೀವಿ ವರ್ಗವು ಭಾಷಾನೀತಿಯನ್ನು ರೂಪಿಸುವಾಗ ಮಾತೃಭಾಷೆ ಎಂಬ ಪರಿಕಲ್ಪನೆಯನ್ನು ಅತ್ಯಂತ ಜಾಣ್ಮೆಯಿಂದ ಬಳಸುತ್ತಿದೆ. ಭಾರತದಲ್ಲಿ ಭಾಷಾವಾರು ರಾಜ್ಯಗಳ ಸ್ಥಾಪನೆಯ ನಂತರ ಹಲವು ಬುಡಕಟ್ಟುಗಳ ಮತ್ತು ಹಲವು ಜಾತಿ ಗುಂಪುಗಳ ಭಾಷೆಗಳನ್ನು ವಿಸರ್ಜಿಸಿ **ಒಂದು ರಾಜ್ಯಕ್ಕೆ ಒಂದು ಭಾಷೆ** ಎಂಬ ನೀತಿಯನ್ನು ಜಾರಿಗೆ ತರುವುದು ಪ್ರಾರಂಭವಾಯಿತು. ಆದರೆ ಒಂದು ರಾಜ್ಯಕ್ಕೆ ಒಂದು ರಾಜ್ಯಕ್ಕೆ ಒಂದು ಭಾಷೆ ಎಂಬ ನೀತಿಯು ಕ್ರಮೇಣ ಎರಡು ಭಾಷೆಗಳ ನೀತಿಯಾಗಿ ಮಾರ್ಪಾಡುಗೊಂಡಿತು: ಶ್ರೀಮಂತರಿಗೆ ಇಂಗ್ಲಿಷ್ ಮತ್ತು ಬಡವರಿಗೆ ಸ್ಥಳೀಯ ಭಾಷೆ. ಮಾತೃಭಾಷೆ ಎಂಬ ವ್ಯಾಖ್ಯಾನದೊಂದಿಗೆ ಪ್ರಬಲ ಸಂಸ್ಕೃತ-ಕೇಂದ್ರಿತ ಸ್ಥಳೀಯ ಭಾಷೆ ಮತ್ತು ಆಧುನಿಕತೆಯ ಭಾಷೆಯಾಗಿ ಇಂಗ್ಲಿಷ್- ಹೀಗೆ ಎಲ್ಲ ರಾಜ್ಯಗಳಲ್ಲೂ ಎರಡು ಭಾಷೆಗಳು ನೆಲೆಗೊಂಡವು.

ಉತ್ತರ ಭಾರತದ ರಾಜ್ಯಗಳಲ್ಲಿ ಹಿಂದಿ ಭಾಷೆಯಿದ್ದಂತೆ ದಕ್ಷಿಣ ಭಾರತದ ರಾಜ್ಯಗಳಲ್ಲಿ ಜನರನ್ನು ಬೆಸೆಯಬಲ್ಲ ಸಂಪರ್ಕ ಭಾಷೆಯೊಂದು ಇಲ್ಲವೇ ಇಲ್ಲ. ದಕ್ಷಿಣ ಭಾರತದಲ್ಲಿ ಅಂತಹ ಸಂಪರ್ಕ ಭಾಷೆಯಾಗುವ ಸಾಧ್ಯತೆಯಿರುವುದು ಹಿಂದಿಗಲ್ಲ, ಇಂಗ್ಲಿಷ್‌ಗೆ. ದಕ್ಷಿಣದವರು ಒಂದು ಭಾಷೆಯಾಗಿ ಹಿಂದಿ ಕಲಿಯುವುದನ್ನು ನಿಲ್ಲಿಸಬಹುದು. ಏಕೆಂದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ. ಹಾಗೆಯೇ ಸಂಸ್ಕೃತವನ್ನು ಒಂದು ಅಲಂಕಾರಿಕ ಭಾಷೆಯನ್ನಾಗಿ ಬಳಸುವುದನ್ನು ಇನ್ನು ಮುಂದೆ ನಾವು ಪ್ರಜ್ಞಾಪೂರ್ವಕವಾಗಿ ಕೈಬಿಡಬೇಕು.

ಬಹುತೇಕ ಮೇಲು ಜಾತಿಗಳೇ ತುಂಬಿಕೊಂಡಿರುವ ಆಳುವ ವರ್ಗ ಇಂಗ್ಲಿಷ್ ಮಾತನಾಡುವ ವರ್ಗವಾಗಿ ರೂಪುಗೊಂಡಿದೆ. ಹಳ್ಳಿಗಳಲ್ಲೂ ಕೂಡ ಈ ವರ್ಗದ ಜನ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಕಳಿಸುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಇಂಗ್ಲಿಷ್ ಬಳಕೆಯಿಂದಾಗಿ ಭಾಷಾವಾರು ರಾಜ್ಯಾಗಳಲ್ಲಿ ಮೂಲಸ್ವರೂಪದ ಬದಲಾವಣೆಗಳಾಗತೊಡಗಿವೆ.

'ಮಾತೃಭಾಷೆ' ಇಂಗ್ಲಿಷ್

ಭಾರತದಲ್ಲಿ ಮಾತ್ರ ಸಂಚರಿಸುವಂತಹ ವಿಮಾನಗಳಲ್ಲಿ ಪ್ರಯಾಣ ಮಾಡುವವರಿಗೆ ನವೋದಿತ ಮೇಲ್ವರ್ಗ ಮತ್ತು ಮಧ್ಯಮ

ವರ್ಗಗಳು ತಮ್ಮ ಮಕ್ಕಳೊಂದಿಗೆ ಕೇವಲ ಇಂಗ್ಲಿಷ್‌ನಲ್ಲಿಯೆ ಮಾತು-ಕತೆ ನಡೆಸುತ್ತಾರೆಂಬ ಸಂಗತಿ ಗೊತ್ತೇ ಇರುತ್ತದೆ. ಬಹುತೇಕ ಮೇಲ್ಜಾತಿ ಜನಗಳೇ ತುಂಬಿಹೋಗಿರುವ ಈ ವರ್ಗದ ಪಾಲಿಗೆ ಇಂಗ್ಲಿಷ್ ಅದಾಗಲೇ 'ಮಾತೃ ಭಾಷೆ'ಯಾಗಿಬಿಟ್ಟಿದೆ. ರಾಜಕೀಯ ಅಧಿಕಾರ, ಕೈಗಾರಿಕೆ ಮತ್ತು ವಾಣಿಜ್ಯ-ವ್ಯವಹಾರ ಕ್ಷೇತ್ರಗಳು ಕೂಡ ಈಗಾಗಲೇ ಈ ವರ್ಗದ ಹತೋಟಿಗೆ ಒಳಪಟ್ಟಿವೆ.

ನಾನು ದೇಶದ ಅನೇಕ ವಿಮಾನ ನಿಲ್ದಾಣಗಳಿಗೆ ನಗರಗಳಿಗೆ ಭೇಟಿಕೊಟ್ಟ ಅನುಭವವುಳ್ಳವನು. ಯಾವ ಸಂಸ್ಥೆಯ ಯಾವ ವಿಮಾನದಲ್ಲೂ ನಾನು ಸ್ಥಳೀಯ ಭಾಷಾ ಪತ್ರಿಕೆಗಳು ಪ್ರಯಾಣೀಕರಿಗೆ ವಿತರಣೆಯಾಗುವುದನ್ನು ಕಂಡಿಲ್ಲ. ಮೇಲ್ವರ್ಗ ಮತ್ತು ಮಧ್ಯಮ ವರ್ಗದ ಜನ ಇಂಗ್ಲಿಷ್ ಪತ್ರಿಕೆಗಳನ್ನು ಮಾತ್ರ ಓದುತ್ತಾರೆ. ಮತ್ತು ಅವು ಅತ್ಯಂತ ಉಪಯುಕ್ತ ಎಂದು ಭಾವಿಸುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ, ಇಂಗ್ಲಿಷ್ ಪತ್ರಿಕೆಗಳು ಅವರಿಗೆ ಜಗತ್ತಿನ ವಿರಾಟ್ ರೂಪವನ್ನು ಪರಿಚಯ ಮಾಡಿಕೊಡುತ್ತವೆ. ನನ್ನ ದೃಷ್ಟಿಯಲ್ಲಿ ಈ ಬದಲಾವಣೆ ಒಳ್ಳೆಯದೇ. ಈ ವರ್ಗದ ಪ್ರಜಾಪ್ರಭುತ್ವೀಕರಣವು ಕೊಂಚ ಮಟ್ಟಿಗೆ ಅವರ ಭಾಷಾ ಬದಲಾವಣೆಯನ್ನು ಅವಲಂಬಿಸಿದೆ.

ಇಷ್ಟಾದರೂ ಅವರ ಅಡುಗೆಯ ರೀತಿ-ನೀತಿಗಳು ಮಾತ್ರ ಸಂಪೂರ್ಣ ಸಂಪ್ರದಾಯನಿಷ್ಠವಾಗಿಯೇ ಇವೆ. ವಿಮಾನಗಳಲ್ಲಿ ಚಾಕರಿ ಮಾಡುವ ಎಲ್ಲೆಡೆಯ ಜನ ದೃಢಪಡಿಸುವಂತೆ ಮದ್ರಾಸ್ ಮತ್ತು ಗುಜರಾತ್ ಪ್ರದೇಶಗಳು ಇತರೆಲ್ಲ ಪ್ರದೇಶಗಳಿಗಿಂತ ಹೆಚ್ಚು ಸಸ್ಯಾಹಾರ ಪದ್ಧತಿಯುಳ್ಳವಾಗಿವೆ. ಭಾಷೆ ಬದಲಾದಂತೆ ಜನರ ಊಟ, ಹವ್ಯಾಸ, ಸಂಸ್ಕೃತಿ ಮುಂತಾದ ಕ್ಷೇತ್ರಗಳಲ್ಲೂ ಸುಲಭವಾಗಿ ಬದಲಾವಣೆ ಸಂಭವಿಸುವುದಿಲ್ಲ ಎಂಬ ಅಂಶವನ್ನು ಇದು ತೋರಿಸುತ್ತದೆ. ಇವೂ ಕೂಡ ಬದಲಾಗುವ ಕಾಲ ಬಹುದೂರವಿಲ್ಲ ಎಂದು ನಾನು ಆಶಿಸುತ್ತೇನೆ.

ಮಾತೃಭಾಷೆಯ ಚಾರಿತ್ರಿಕ ಮತ್ತು ಭಾವನಾತ್ಮಕ ವಾದವನ್ನು ನಾವು ಪರಿಗಣನೆಗೆ ತೆಗೆದುಕೊಳ್ಳುವುದೇ ಆದಲ್ಲಿ, ಸಣ್ಣ ಗುಂಪುಗಳ ಭಾಷೆಗಳನ್ನು ದೊಡ್ಡ ಗುಂಪುಗಳ ಭಾಷೆಗಳು ನುಂಗಿ ಹಾಕಿರುವುದನ್ನು ಗಮನಿಸಬೇಕಾಗುತ್ತದೆ. ಅದೇ ರೀತಿ ಅಭಿವೃದ್ಧಿ ಹೊಂದಿದ ಭಾಷೆಗಳು ಹಿಂದುಳಿದ ಭಾಷೆಗಳನ್ನು ಓಟದಲ್ಲಿ ಹಿಂದಿಕ್ಕಿವೆ. ಸಣ್ಣ ಗುಂಪುಗಳ ಭಾಷೆಯೊಂದು ದೊಡ್ಡ ಗುಂಪುಗಳ ಭಾಷೆಯಾಗಿ ಪರಿವರ್ತನೆ ಹೊಂದುವ ಪ್ರತಿ ಹಂತದಲ್ಲೂ ಜನರ ಜ್ಞಾನ ಮತ್ತು ಸಂವಹನದ ಗಡಿರೇಖೆಗಳು ವಿಸ್ತರಣೆಗೊಳ್ಳುತ್ತಾ ಬಂದಿವೆ.

ಕೆಲವು ಭಾಷೆಗಳು ವಿದೇಶೀ, ವಸಾಹತುಶಾಹಿ ಎನ್ನುವವರು ಅಜ್ಞಾನಿಗಳು; ಇಂಗ್ಲಿಷ್ ಈಗಾಗಲೇ ಭಾರತದ ರಾಷ್ಟ್ರೀಯ

ಭಾಷೆಯಾಗಿದೆ ಎಂಬುದು ವಾಸ್ತವ ಸಂಗತಿ. ಭಾಷೆಯೊಂದರ ಹುಟ್ಟು ಮತ್ತು ವಿಕಾಸದಲ್ಲಿ ಹಲವು ಜಾಗತಿಕ ಮಾದರಿಗಳಿವೆ. ಕೆಲವು ಭಾಷೆಗಳು ಜನರ ಸಾಮೂಹಿಕ ಉತ್ಪಾದನಾ ಸಂಸ್ಕೃತಿಯ ಪರಿಣಾಮವಾಗಿ ರೂಪುತಳೆದರೆ, ಮತ್ತೆ ಕೆಲವು ಜನರ ವಲಸೆಯ ಪರಿಣಾಮವಾಗಿಯೋ ಇಲ್ಲವೆ ಹೊಸ ವಲಸೆಗಾರರ ವಸಾಹುತುಶಾಹಿ ಹೇರಿಕೆಯಿಂದಾಗಿಯೋ ಜನಜೀವನ ಪ್ರವೇಶಿಸುತ್ತವೆ. ಉದಾಹರಣೆಗೆ, ಆರ್ಯರ ವಲಸೆಯೊಂದಿಗೆ ಸಂಸ್ಕೃತ ಭಾರತಕ್ಕೆ ಬಂತು ಪರ್ಷಿಯಾ ಮೂಲದ ಮುಸ್ಲಿಮರು ಭಾರತಕ್ಕೆ ವಲಸೆ ಬರುವುದರೊಂದಿಗೆ ಪರ್ಷಿಯನ್ ಭಾಷೆಯೂ ಬಂತು. ಅದೇ ರೀತಿ ಬ್ರಿಟಿಷರ ವಸಾಹತುಶಾಹಿ ಆಕ್ರಮಣ ದೊಂದಿಗೆ ಇಂಗ್ಲಿಷ್ ಭಾರತಕ್ಕೆ ಬಂದಿತೇ ಹೊರತು ಪುನಃ ಕೆಲವರು ವಾದಿಸುವಂತೆ ಮೆಕಾಲೆ ಎಂಬ ಒಬ್ಬ ವ್ಯಕ್ತಿಯಿಂದಾಗಿ ಅಲ್ಲ. ನಿರ್ದಿಷ್ಟ ಚಾರಿತ್ರಿಕ ಸಂದರ್ಭವೊಂದರಲ್ಲಿ ಒಳ ಪ್ರವೇಶಿಸುವ ಭಾಷೆಯೊಂದಕ್ಕೆ ಅಲ್ಲಿನ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಪೂರಕವಾಗಿದ್ದಾಗ ಮಾತ್ರ ಬೆಳೆದು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಭಾರತದಲ್ಲಿ ಇಂಗ್ಲಿಷ್ ಬೆಳೆದು ಬಂದದ್ದು ಹಾಗೆ. ಈಗ ಯಾರಿಂದಲೂ ಅದನ್ನು ಹೊರದೂಡಲು ಸಾಧ್ಯವಿಲ್ಲ.

ದ್ವಿ- ಭಾಷಾ ನೀತಿ

ಈಗ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳದಂತಹ ರಾಜ್ಯಗಳಿಗೆ ಉಳಿದಿರುವ ಏಕೈಕ ಆಯ್ಕೆಯೆಂದರೆ, ಎಲ್ಲ ಹಂತಗಳಲ್ಲೂ ದ್ವಿ-ಭಾಷಾ ನೀತಿಯ ಮೊರೆಹೋಗುವುದು: ಒಂದು-ಸ್ಥಳೀಯ ಭಾಷೆ. ಎರಡು-ಇಂಗ್ಲಿಷ್ ಭಾಷೆ. ಈ ಎರಡು ಭಾಷಾ ಮಾಧ್ಯಮಗಳು ನಮ್ಮ ಶಿಕ್ಷಣ ವ್ಯವಸ್ಥೆಯ ಎರಡು ಕಾಲುಗಳಾಗಬೇಕಿದೆ. ಈ ಸದ್ಯಕ್ಕೆ ಶಾಲಾ ಹಂತದಲ್ಲಿ ಸರ್ಕಾರಿ ಮತ್ತು ಖಾಸಗಿ-ಎರಡು ರೀತಿಯ ಶಾಲೆಗಳಲ್ಲೂ ಆರು ಪಠ್ಯವಿಷಯಗಳನ್ನು ಬೋಧಿಸಲಾಗುತ್ತಿದೆ-ಸರ್ಕಾರಿ ಮತ್ತು ಖಾಸಗಿ ಶಾಲೆಗಳೆರಡರಲ್ಲಿಯೂ ಒಂದರಿಂದ ಹತ್ತನೇ ತರಗತಿಯವರೆಗೆ ಮೂರು ಪಠ್ಯವಿಷಯಗಳನ್ನು ಸ್ಥಳೀಯ ಭಾಷಾ ಮಾಧ್ಯಮದಲ್ಲೂ ಉಳಿದ ಮೂರನ್ನು ಇಂಗ್ಲಿಷ್ ಭಾಷಾ ಮಾಧ್ಯಮದಲ್ಲೂ ಬೋಧಿಸಬೇಕು. ಇದೇ ನೀತಿಯು ಉರ್ದು ಮತ್ತಿತರ ಭಾಷಾ ಮಾಧ್ಯಮದ ಶಾಲೆಗಳಿಗೂ ಅನ್ವಯಿಸುತ್ತದೆ. ಆಗ ಮಾತ್ರ ಶಿಕ್ಷಣ ವ್ಯವಸ್ಥೆಯು ಇದರ ಎರಡು ಕಾಲುಗಳ ಮೇಲೆ ಸಮತೋಲನದಿಂದ ನಿಲ್ಲಲು ಸಾಧ್ಯ.

ಒಂದರಿಂದ ಹತ್ತರವರೆಗೆ ಎಲ್ಲ ಕೋರ್ಸುಗಳನ್ನೂ ಸ್ಥಳೀಯ ಭಾಷೆ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬೋಧಿಸಬಹುದು. ನಂತರ ಅವಳನು ಪ್ರಾಪ್ತ ವಯಸ್ಕರಾದ ಬಳಿಕ ಅವರ ಆಯ್ಕೆಯ ಮಾಧ್ಯಮದಲ್ಲಿ ಶಿಕ್ಷಣ ದೊರಕುವಂತಾಗಬೇಕು. ಉನ್ನತ ಶಿಕ್ಷಣದಲ್ಲಿ ಆಯ್ಕೆಯನ್ನು ವಿದ್ಯಾರ್ಥಿಗೇ ಬಿಡಬೇಕು.

ರಾಜ್ಯ ಸರ್ಕಾರಗಳು ಶಾಲಾ ಶಿಕ್ಷಣಕ್ಕಾಗಿ ಉದಾರವಾಗಿ ಹಣ ಮೀಸಲಿಡಬೇಕು. ಹೆಚ್ಚು ಹೆಚ್ಚು ಶಿಕ್ಷಕರನ್ನು ನೇಮಿಸಿಕೊಳ್ಳಬೇಕು. ಹಂತಹಂತವಾಗಿ ಸರ್ಕಾರಿ ಮತ್ತು ಖಾಸಗಿ ಶಾಲೆಗಳ ನಡುವಿನ ಕಂದರವನ್ನು ಮುಚ್ಚಬೇಕು.

ಸರ್ಕಾರಿ ಶಾಲೆಗಳ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಬೇಕು. ಏಕೆಂದರೆ, ಗ್ರಾಮೀಣ ಜನತೆಗೆ ಇರುವ ಬದುಕಿನ ಊರುಗೋಲು ಇದೊಂದೇ ಆಗಿದೆ. □

ಕೂಸು ಬಡವಾಯ್ತು!

(7 ನೇ ಪುಟದಿಂದ)

ವಿಸುವ ಸಮಸ್ಯಾತ್ಮಕ ಅಂಶಗಳು, ಅಂದರೆ ಕಲಿಯುವ ಮಗುವಿಗೆ ಎದುರಾಗುವ ಸಂಕಷ್ಟಗಳು ಮತ್ತು ಕಲಿಸುವಾಗ ಶಿಕ್ಷಕ ಎದಿರುಗೊಳ್ಳುವ ಸಮಸ್ಯೆಗಳು ಮತ್ತು ಇವುಗಳಿಂದಾಗುವ ಅಡ್ಡ ಪರಿಣಾಮಗಳಿಗೆ ಪರ್ಯಾಯ ಪರಿಹಾರಗಳನ್ನು ಒದಗಿಸುವ ಸಂಶೋಧನಾತ್ಮಕ ಮಾರ್ಗದರ್ಶಿಗಳು ನಮ್ಮ ಶಿಕ್ಷಣ ಕ್ಷೇತ್ರಗಳಲ್ಲಿ ಲಭ್ಯವಿಲ್ಲ. ಇದರಿಂದ ಶಿಕ್ಷಣ ತಜ್ಞರು ಶಾಲಾ ವಾಸ್ತವ ಸನ್ನಿವೇಶಗಳ ಪರಿಚಯ ಇಲ್ಲದವರೆಂದು ಅನಿಸಿಬಿಡುತ್ತದೆ. ಮಗುವಿನ ಕಲಿಕೆ 'ಆಲಿಸುವಿಕೆ' ಮತ್ತು ಗ್ರಹಿಸುವಿಕೆ' ಮತ್ತು ಮೌಲ್ಯಮಾಪನಗಳನ್ನಾಧರಿಸಿರುವುದರಿಂದ ಇವೆಲ್ಲವೂ ಮಗುವಿನ ಪ್ರಾಕೃತ ಭಾಷೆಗೆ ಅನುಗುಣವಾಗಿಲ್ಲದೇ ಹೋದಾಗ ಶಿಶುವಿನ ಸಾಂಸ್ಕೃತಿಕ ಹಕ್ಕನ್ನು ಮತ್ತು ಕಲುವಿನ ಹಕ್ಕನ್ನು ನೇರವಾಗಿ ನಿರಾಕರಿಸಿದಂತಾಗುತ್ತರೆ. ಅತ್ಯಂತ ಗಂಭೀರವಾದ ವಿಚಾರವೇನೆಂದರೆ ಇಂತಹ ಸಂಕಷ್ಟಗಳನ್ನೆದುರಿಸುತ್ತಿರುವ ಹಳ್ಳಿಗಳು ತೀರಾ ಬಡತನದಿಂದ ನರಳುತ್ತಿರುವ ಹಳ್ಳಿಗಳಾಗಿವೆ. ಇಲ್ಲಿ ಹೆಣ್ಣು ಮಕ್ಕಳ ಶಿಕ್ಷಣವು ತೀರಾ ಹಿಂದುಳಿದಿದೆ. ಶಾಲೆ ಬಿಟ್ಟ ಮಕ್ಕಳ ಸಂಖ್ಯೆ ಬೇರೆ ಪ್ರದೇಶಗಳಿಗೆ ಹೋಲಿಸಿ ಕೊಂಡಾಗ ಇಲ್ಲಿ ಹೆಚ್ಚು ಮತ್ತು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶಿಕ್ಷಣದಿಂದ ನಿವೃತ್ತಿಯಾಗುವ ಮಕ್ಕಳ ಸಂಖ್ಯೆ ಈ ಪ್ರದೇಶಗಳಲ್ಲಿ ಅತಿ ಹೆಚ್ಚು. ಈ ಎಲ್ಲಾ ಅಂಶಗಳಿಗೆ ಒತ್ತಡದ ಕಲಿಕೆಯು ಕಾರಣವಲ್ಲ ಎಂದು ಹೇಳಲಾದೀತೆ? ಈ ಕಾರಣಗಳಿಂದಾಗಿ 'ಶೈಕ್ಷಣಿಕವ್ಯಕ್ತಿತ್ವವು' ಇಂತಹ ಸಮಾಜದಲ್ಲಿ ವಿಕಾಸೋನ್ಮಖ ವಾಗಿರುವುದರ ಬದಲು ಸಂಕುಚಿತವಾಗಿ ವಿಚಿತ್ರ ಸಂಸ್ಕೃತಿಗಳಿಗೆ ನಾಂದಿಯಾಗಿ, ಅತ್ಯಂತ ಚುರುಕು ಬುದ್ಧಿಯವರಿಗೆ ಮಾತ್ರ ಶಿಕ್ಷಣ ಎಂಬಂತಾಗಿದೆ. ಹೀಗಾಗಿ ಮಗುವಿನ 'ಶೈಕ್ಷಣಿಕ ಸ್ವಾತಂತ್ರ್ಯ'ವನ್ನು ಶೋಷಣೆ ಮಾಡಿದಂತಾಗಿದೆ.

ಮಕ್ಸಿಕೋ ದೇಶ ಇಂತಹ ಕ್ಲಿಷ್ಟಕರ ಸಮಸ್ಯೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮತ್ತು ದೇಶದ ಪ್ರಗತಿಯು ಪ್ರಾಥಮಿಕ ಶಿಕ್ಷಣವನ್ನವಲಂಬಿಸಿರುವುದನ್ನು ಮನಗಂಡು ಪ್ರತಿ ಹತ್ತು ಮಕ್ಕಳಿಗೆ ಒಬ್ಬ ಶಿಕ್ಷಕನನ್ನು ನೇಮಿಸಿದೆ. ವಿದ್ಯಾರ್ಹತೆ ಮನೋವಿಜ್ಞಾನದಲ್ಲಿ ಪಿ.ಎಚ್.ಡಿ. ಪದವಿ. ಅದೇ ನಮ್ಮ ದೇಶದಲ್ಲಿ ಶಾಲಾ ಸಿಬ್ಬಂದಿಯಲ್ಲಿ ಯಾರು ಅತ್ಯಂತ ದುರ್ಬಲರೋ ಅಂತಹವರನ್ನು ಮುಖ್ಯೋಪಾಧ್ಯಾಯರು ಒಂದು ಮತ್ತು ಎರಡನೇ ತರಗತಿಗೆ ಬೋಧಿಸಲು ನೇಮಿಸುತ್ತಾರೆ.

ಅದೇ ಅಮೇರಿಕಾದಲ್ಲಿ ಪ್ರಾಥಮಿಕ ಹಂತದಲ್ಲಿ ಮಗುವಿಗೆ ಕಲಿಸಲೇ ಬೇಕಾದ್ದನ್ನು ಕಲಿಸದಿದ್ದರೆ ಅಲ್ಲಿನ ಸರ್ಕಾರ ಶಿಕ್ಷಕನಿಗೆ ಒಂದು ವರ್ಷ ಹೆಚ್ಚುವರಿ ಅವದಿಯನ್ನು ನೀಡುತ್ತಾರೆ. ಆಗಲೂ ಕಲಿಸದಿದ್ದರೆ 'ಅಭಿನಂದನಾ' ಪತ್ರವನ್ನು ನೀಡಿ ಅಭಿನಂದಿಸುತ್ತಾರೆ.

ನಮ್ಮ ರಾಜ್ಯದಲ್ಲಿ ಏಕರೂಪದ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಲಾರದ ಅಸಹಾಯಕವಾದ ಸರ್ಕಾರ ಉಳ್ಳವರು ಮತ್ತು ಇಲ್ಲದವರ ಮಧ್ಯೆ ಅಂತರವನ್ನು ಹೆಚ್ಚಿಸಲು ಪ್ರೇರಕಶಕ್ತಿಯಾಗಿ ನಿಂತಿದೆ, ಪ್ರಾದೇಶಿಕ ಭಾಷಾಭಿನ್ನತೆಯಲ್ಲಿ ಮಗುವಿನ ಪ್ರಾಕೃತ ಭಾಷೆಗೆ ಮತ್ತು ಮಕ್ಕಳ ಸಂಖ್ಯೆಗನುಗುಣವಾಗಿ ಪಠ್ಯ ವಿಧಾನವನ್ನು ರೂಪಿಸದೇ 'ಯಜಮಾನ್ಯ ಭಾಷೆ ಕನ್ನಡ' ಎಂಬಂಶವನ್ನು ಪ್ರತಿನಿಧಿಸುವ ವ್ಯವಸ್ಥೆಗೆ ಕಂಡೂಕಾಣದಂತೆ ವರ್ತಿಸುತ್ತಿರುವ ಸಂಬಂಧ ಪಟ್ಟ ಇಲಾಖೆಗಳು ಬೇಗ ಕಲಿಯುವ ಮಕ್ಕಳು ಮತ್ತು ನಿಧಾನಗತಿಯಲ್ಲಿ ಕಲಿಯುವ ಮಕ್ಕಳು ಹಾಗೂ ಕಲಿಯದೇ ಇರುವ ದಡ್ಡರು ಎಂಬ ಶ್ರೇಣಿಕೃತ ಅಸಮಾನತೆಗೆ ಪುಷ್ಠಿ ನೀಡಿವೆ. ಮಗುವಿನ ಕಲಿಯುವ ವಿಚಾರದಲ್ಲಿ ಶ್ರೇಣಿಕೃತ ಅಸಮಾನತೆ ಇಲ್ಲ ಎಂಬುದು ಮನೋವಿಜ್ಞಾನಿಗಳ ಅಭಿಪ್ರಾಯ. ಒಂದು ವೇಳೆ ಇಂತಹ ಪ್ರದೇಶಗಳಲ್ಲಿ ಕನ್ನಡ ಶಾಲೆಗಳೇ ಇರಲಿ! ಹೀಗಿದ್ದಾಗ... ಇಂತಹ ಸಂದರ್ಭಗಳನ್ನೆದುರಿಸುವ ಪರಿಣಾಮಕಾರಿಯಾದ 'ಪ್ರಾಥಮಿಕ ಪೂರ್ವ ಶಿಕ್ಷಣ'ವನ್ನು ಜಾರಿಗೊಳಿಸುವುದಾದರೆ ಮಗು ಒಂದನೇ ತರಗತಿಗೆ ಬರುವ ಹೊತ್ತಿಗೆ ಕನ್ನಡ ಮಾತನಾಡುವಂತಾಗಿ, ಪ್ರಾಥಮಿಕ ಶಿಕ್ಷಣಕ್ಕೆ ಸರ್ಕಾರವನ್ನೇ ನೆಚ್ಚಿ ಕೊಂಡಿರುವ ಅತ್ಯಂತ ದುರ್ಬಲರ ಬಾಳಿಗೆ ಇದು ಬೆಳಕಾಗಬಲ್ಲದು. ಕನ್ನಡ ಬಲ್ಲ ಪ್ರದೇಶಗಳಲ್ಲಿ 'ಪ್ರಾಥಮಿಕ ಪೂರ್ವ ಶಿಕ್ಷಣ'ದಲ್ಲಿ ಮಗು ಇಂಗ್ಲಿಷ್ ಮಾತನಾಡುವಂತೆ ಮಾಡಲು ಇದೇ ತತ್ವವನ್ನು ಪ್ರಯೋಗಿಸಬಹುದು.

ಇಂತಹ... ಇನ್ನೆಷ್ಟೋ ಒತ್ತಡಗಳನ್ನು ಮತ್ತು ವಿಫಲತೆಗಳನ್ನು ಅನುಭವಿಸುತ್ತಿರುವ ಮಗುವಿನ 'ಕಲಿಕಾ ವಾಸ್ತವ ಸನ್ನಿವೇಶವು' ಸ್ವಚ್ಛಂದವಾಗಿ ಹಾರಾಡುವ ಹಕ್ಕಿಯಂತಿಲ್ಲ. ಇದರ ಪರಿಣಾಮಗಳೂ ಗಂಭೀರವಾದದ್ದೇ... ಹಿಟ್ಲರ್ ಸಮಾಜದಲ್ಲಿ ಜನರಿಗೆ ತುಂಬಾ ಹಿಂಸೆ ನೀಡುತ್ತಿದ್ದ, ಹೀಗೆ ಮಾಡಿದರೆ ಅವನ ಮನಸ್ಸು ತುಂಬಾ ಖುಷಿ ಪಡುತಿತ್ತು. ಏಕೆ? ಎಂದು ಮನೋ ವಿಜ್ಞಾನಿಗಳು ಸಂಶೋಧನೆ ಮಾಡಿದರು. ಈ ಸಂಶೋಧನೆಗೆ ಉತ್ತರವೇನೆಂದರೆ ಅವನು ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಅವನನ್ನು ಶಿಕ್ಷಕರು ತುಂಬಾ ಹೊಡೆಯುತ್ತಿದ್ದರು.

ಒಂದನೇ ತರಗತಿಗೆ ಇಂಗ್ಲಿಷ್ ಬೇಕೆ? ಬೇಡವೇ? ಎಂಬುದು ಪ್ರಸ್ತುತ ಎದುರಾಗಿರುವ ಜಾಗತಿಕ ಸನ್ನಿವೇಶಕ್ಕೆ ಅತ್ಯಂತ ಅವಶ್ಯಕವಿರಬಹುದು. ಆದರೆ ಈ ವಿಚಾರವು ನೈಜ ಕಲಿಕಾಸನ್ನಿವೇಶಗಳನ್ನಾಧರಿಸಿ ಜಾರಿಯಾಗುವಂತಾಗಬೇಕು. ಒಂದು ವೇಳೆ ಹೀಗಾಗದೇ ಇದ್ದಲ್ಲಿ ನಿರುಪಯುಕ್ತವಸ್ತುವಾಗಿ ಪಠ್ಯವನ್ನು ಸೇರಿ ನಿಷಪ್ರಯೋಜಕವೇ ಆಗುತ್ತದೆ. ಈಗಾಗಲೇ ಸಬದುಕಿಗೆ ಕಿಂಚಿತ್ತೂ ಸಹಾಯಕವಲ್ಲದ ವಿಷಯಗಳು ಪಠ್ಯದಲ್ಲಿ ಸೇರಿವೆ. ಅತ್ಯಂತ ಪ್ರಯೋಜನ ಕಾರಿಯಾದದ್ದು ಕೂಡ ಆಲಕ್ಷಿಸಲ್ಪಟ್ಟಿರುವ ಎಷ್ಟೋ ಅಂಶಗಳಿವೆ. ಈ ರೀತಿ ಆಗದೇ ಹಳ್ಳಿಮಗು ಸರಾಗವಾಗಿ ಇಂಗ್ಲಿಷ್ ಮಾತನಾಡುವ ಕನಸಿನಲ್ಲಿ ಅದರ ವಾಸ್ತವ ಸ್ಥಿತಿಯನ್ನಾಧರಿಸಿ ಸಂಶೋಧನೆ ಮತ್ತು ಪಠ್ಯಗಳು ತಯಾರಾದರೆ ನಿಜವಾಗಲೂ ನಮ್ಮ ರಾಜ್ಯ ಸಾರ್ಥಕ ಮತ್ತು ಪುಣ್ಯಭೂಮಿ!!! □

ಲಿಂಗಸಮಾನತೆಯ ಸಮಾಜದ ಸೃಷ್ಟಿಯಲ್ಲಿ ಒಂದು ದಿಟ್ಟ ಹೆಜ್ಜೆ

೨೦೦೫ರ ಹಿಂದೂ ಉತ್ತರಾಧಿಕಾರ ಮಸೂದೆ ಭಾರತದ ಮಹಿಳೆಯರ ಬದುಕು ಹಾಗೂ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದಂತೆ ಸಮಗ್ರ ಬದಲಾವಣೆಗಳನ್ನು ತಂದು ಹೊಸ ಆಯಾಮವನ್ನು ನಿರ್ಮಿಸಲಿದೆ. ಈ ಮಸೂದೆಯ ತಿದ್ದುಪಡಿ, ಕೃಷಿ ಭೂಮಿಯ ಪಾಲುಗಾರಿಕೆ, ಪೂರ್ವಿಕರ ಮನೆಯ ಮೇಲಿನ ಹಕ್ಕು ಇವುಗಳಿಗೆ ಸಂಬಂಧಿಸಿದಂತೆ ಇದ್ದ ಮಹಿಳೆಯರ ವಿರುದ್ಧದ ತಾರತಮ್ಯವನ್ನು ಅಳಿಸಿ ಹಾಕಿದೆ. (ಬಾಕ್ಸ್ ನೋಡಿ). ೧೯೫೬ ರ ಹಿಂದೂ ಉತ್ತರಾಧಿಕಾರ ಮಸೂದೆಯಲ್ಲಿ ಒಳಗೊಂಡಿದ್ದ ಲಿಂಗ ಅಸಮಾನತೆಯನ್ನು ೨೦೦೫ ರ ಮಸೂದೆ ಸರಿಪಡಿಸುವಲ್ಲಿ ಯಶಸ್ವಿ ಹೆಜ್ಜೆಯನ್ನಿಟ್ಟಿದೆ.

ಈ ಹೊಸ ಮಸೂದೆಯಲ್ಲಿ ಕೆಲವು ಮಾನ್ಯತೆಗಳು ಕಂಡು ಬಂದರೂ ಅದರ ಸಾಧನೆಗಳನ್ನು ಮೊದಲು ಪರಿಗಣಿಸೋಣ.

ಸಾಧನೆಗಳು:

ಕೃಷಿ ಭೂಮಿ: ೧೯೫೬ ರ ಹಿಂದೂ ಉತ್ತರಾಧಿಕಾರ ಮಸೂದೆ ಸೆಕ್ಷನ್ ೪(೨) ರ ಪ್ರಕಾರ ಕೃಷಿಭೂಮಿಯ ಪಾಲುಗಾರಿಕೆಯಲ್ಲಿ ಪುರುಷರು ಹಾಗೂ ಅವರ ಸಂತತಿಯವರಿಗೆ ಪ್ರಧಾನ ಹಕ್ಕಿದ್ದು ಮಹಿಳೆಯರು ಉತ್ತರಾಧಿಕಾರದ ಪಟ್ಟಿಯಲ್ಲಿ ಕೆಳಸ್ತರದಲ್ಲಿ ಬಿಂಬಿತವಾಗುತ್ತಿದ್ದರು. ಅಲ್ಲದೆ ಮಹಿಳೆಯರಿಗೆ ಆಸ್ತಿಯಲ್ಲಿ ಅತ್ಯಲ್ಪ ಪಾಲು ದೊರಕುತ್ತಿದ್ದು ಮರು ವಿವಾಹದ ನಂತರ ಈ ಹಕ್ಕನ್ನು ಕಳೆದುಕೊಳ್ಳುತ್ತಿದ್ದರು. ಕೃಷಿ ಭೂಮಿ ಮೇಲಿನ ಹಕ್ಕು ಆಯಾ ರಾಜ್ಯಗಳ ಕಾನೂನಿನ ವ್ಯಾಪ್ತಿಯಲ್ಲಿ ಬರುವುದರಿಂದ ಯಾವ ರಾಜ್ಯಗಳ ಕಾನೂನಿನಲ್ಲಿ ಇದರ ಬಗ್ಗೆ ಪ್ರಸ್ತಾಪ ಇರಲಿಲ್ಲವೋ ಅಲ್ಲಿ ೧೯೫೬ ರ ಮಸೂದೆ ಅಲ್ಲಿ ಅಂಗೀಕೃತವಾಗುತ್ತಿತ್ತು. ದೆಹಲಿ, ಹರಿಯಾಣ, ಹಿಮಾಚಲಪ್ರದೇಶ, ಪಂಜಾಬ್, ಜಮ್ಮು ಮತ್ತು ಕಾಶ್ಮೀರ್, ಉತ್ತರ ಪ್ರದೇಶಗಳಲ್ಲಿ ಉತ್ತರಾಧಿಕಾರದ ಪ್ರತ್ಯೇಕ ಮಸೂದೆಗಳಿದ್ದರೂ ಅವು ಲಿಂಗ ತಾರತಮ್ಯವನ್ನು ಅತಿಯಾಗಿ ಬಿಂಬಿಸುತ್ತಿದ್ದವು. ಉತ್ತರ ಪ್ರದೇಶ ರಾಜ್ಯದಲ್ಲೇ ದೇಶದ ೧/೬ ರಷ್ಟು ಜನ ಸಂಖ್ಯೆ ಇದ್ದು ಸಹಸ್ರಾರು ಮಹಿಳಾ ಕೃಷಿಗಾರರಿಗೆ ನಕಾರಾತ್ಮಕವಾದ ಪರಿಣಾಮ ಬೀರುತ್ತಿದ್ದುದ್ದನ್ನು ಇಲ್ಲಿ ಗಮನಿಸಬೇಕು.

೨೦೦೫ ರ ಮಸೂದೆ, ಕೃಷಿ ಭೂಮಿಯನ್ನು ಇನ್ನಿತರ ಆಸ್ತಿಗಳಂತೆ ಪರಿಗಣಿಸಿ ಮಹಿಳೆಯರಿಗೆ ಕೃಷಿ ಭೂಮಿಯ ಮೇಲೆ ವಂಶಪಾರಂಪರಿಕವಾದ, ಪುರಷರಿಗೆ ಸಮಾನವಾದ ಸಹಪಾಲುಗಾರಿಕೆಯನ್ನು ದೊರಕಿಸಿ ಕೊಟ್ಟಿದೆ. ಜೀವನೋಪಾಯಕ್ಕಾಗಿ ಕೃಷಿ ಭೂಮಿಯ ಮೇಲೆ ಅವಲಂಬಿತವಾಗಿರುವ ಸಾವಿರಾರು ಮಹಿಳೆಯರಿಗೆ ಇದು ಪ್ರಾಯೋಜನಕಾರಿಯಾಗಲಿದೆ.

ಮಿತಾಕ್ಷರ ಆಸ್ತಿಯ ಸಹಪಾಲುದಾರರು:

೨೦೦೫ ರ ಹಿಂದೂ ಉತ್ತರಾಧಿಕಾರ ಮಸೂದೆಯ ಮುಖ್ಯವಾದ ಇನ್ನೊಂದು ಅಂಶವೆಂದರೆ ಅವಿಭಕ್ತ ಕುಟುಂಬದ ಆಸ್ತಿಯ ಸಹಪಾಲುಗಾರಿಕೆಯಲ್ಲಿ ಹೆಣ್ಣು ಮಕ್ಕಳಿಗೆ (ವಿವಾಹಿತ ಮತ್ತು ಅವಿವಾಹಿತ) ಗಂಡು ಮಕ್ಕಳಷ್ಟೆ ಪ್ರಾಧಾನ್ಯ ಕೊಟ್ಟಿರುವುದು. ೧೯೫೬ ರ ಹಿಂದೂ ಉತ್ತರಾಧಿಕಾರ ಮಸೂದೆಯು ಅವಿಭಕ್ತ ಕುಟುಂಬದ ಆಸ್ತಿಯನ್ನು ಹಾಗೂ ಸ್ವಯಾರ್ಜಿತ ಆಸ್ತಿಯನ್ನು ಬೇರೆಯಾಗಿ ಪರಿಗಣಿಸಿತ್ತು. ಅವಿಭಕ್ತ ಕುಟುಂಬಕ್ಕೆ ಹೊರತಾದ ಆಸ್ತಿ ಇದ್ದು, ಪುರುಷನು ಯಾವ ಉಯಿಲು ಬರಿಯದೆ ಮರಣ ಹೊಂದಿದಲ್ಲಿ, ಆ ಆಸ್ತಿ ವರ್ಗ ೧ ರ ಅಡಿಯಲ್ಲಿ ನಿಯೋಜಿತವಾಗಿರುವ ಮಗ, ಮಗಳು, ವಿಧವೆ ಹಾಗೂ ತಾಯಿಗೆ ಸಮನಾಗಿ ಹಂಚಿಕೆಯಾಗುತ್ತಿತ್ತು. ದಯಾಭಾಗ ಪದ್ಧತಿ ಜಾರಿಯಿರುವ ಕಡೆ ಅವಿಭಕ್ತ ಕುಟುಂಬದ ಆಸ್ತಿ ಹಂಚಿಕೆಗೂ ಇದು ಅನ್ವಯಿಸುತ್ತಿತ್ತು.

ಆದರೆ ಮೊದಲಿಗಿದ್ದ ಮಿತಾಕ್ಷರ (ಈ ಪದ್ಧತಿಯ ಆಸ್ತಿ ಭಾಗವಾಗುವಿಕೆ ಭಾರತದ ಬಹುಭಾಗವನ್ನು ಆವರಿಸಿದೆ) ಪದ್ಧತಿಯನ್ನು ಅನುಸರಿಸುವಂತಿದ್ದರೆ ಹಂಚಿಕೆ ಬೇರೆ ತರಹದಲ್ಲಿ ನಡೆಯುತ್ತದೆ. ಈ ಪದ್ಧತಿಯ ಅನ್ವಯ ಗಂಡಿನ 'ನೋಷನಲ್' ಭಾಗದ ಆಸ್ತಿಯ ಮೇಲೆ ವರ್ಗ ೧ ವಾರಸುದಾರರಿಗೆ ಸಮಾನ ಹಕ್ಕು ಇದ್ದಿತು. ಆದರೆ ಗಂಡು ಮಕ್ಕಳಿಗೆ ಅವರು ಅವಿಭಕ್ತ ಕುಟುಂಬದ ಸ್ವತ್ತಿನ ಸಹ ಒಡೆತನ ಹೊಂದಿರುವರೆಂಬ ಜನ್ಮಸಿದ್ಧ ಹಕ್ಕಿನಿಂದಾಗಿ ಬೇರೆಯಾಗಿಯೂ ಆಸ್ತಿಯನ್ನು ಪಡೆಯುತ್ತಿದ್ದರು. ಇದಕ್ಕೆ ವ್ಯತಿರಿಕ್ತವಾಗಿ ಮಹಿಳಾ ವರಸುದಾರರಿಗೆ ಈ ಹಕ್ಕಿರಲಿಲ್ಲ ಅಲ್ಲದೆ ಗಂಡು ಮಕ್ಕಳು ಆಸ್ತಿಯಲ್ಲಿ ಪಾಲುಬೇಕೆಂದು ಕೇಳುವ ಹಕ್ಕಿನ ಬೇಡಿಕೆಯನ್ನೊಡ್ಡಬಹುದಾಗಿತ್ತು. ಹೆಣ್ಣುಮಕ್ಕಳಿಗೆ ಈ ಹಕ್ಕಿರಲಿಲ್ಲ.

೨೦೦೫ ರ ಮಸೂದೆ ಗಂಡಿನ ಬೇರೆಯಾದ ಆಸ್ತಿಯ ಹಂಚಿಕೆಯ ಬಗ್ಗೆ ಬದಲಾವಣೆಗಳೇನೂ ತಂದಿಲ್ಲ. ಆದರೆ ಈ ಮಸೂದೆ ಮಿತಾಕ್ಷರ ಅವಿಭಕ್ತ ಕುಟುಂಬದ ಆಸ್ತಿಯ ಮೇಲೆ ಹೆಣ್ಣು ಮಕ್ಕಳಿಗೆ ಸಹ ಒಡೆತನದ ಅಧಿಕಾರವನ್ನು ಕೊಟ್ಟು ಗಂಡು ಮಕ್ಕಳಷ್ಟೇ ಹೆಣ್ಣು ಮಕ್ಕಳಿಗೆ ಸ್ವತ್ತಿನಲ್ಲಿ ಭಾಗವನ್ನು, ಅದನ್ನು ಕೇಳುವ ಜನ್ಮಗೆದ್ದ ಹಕ್ಕನ್ನು ದೊರಕಿಸಿಕೊಟ್ಟಿದೆ. ಹೆಣ್ಣು ಮಕ್ಕಳು ಈಗ ಆಸ್ತಿಯ "ಕರ್ತಾರ್" ಎಂದು ಕರೆಸಿಕೊಂಡು ಅದರ ಜೊತೆ ಇರುವ ಹೊರೆಗಳಿಗೂ ಜವಾಬ್ದಾರರಾಗುತ್ತಾರೆ.

ಮಸೂದೆ

೧೯೫೬ ರ ಹಿಂದೂ ಉತ್ತರಾಧಿಕಾರ ಮಸೂದೆ ಸೆಕ್ಷನ್ ೪(೨) ರ ಪ್ರಕಾರ ಕೃಷಿ ಭೂಮಿಯ ಪಾಲುಗಾರಿಕೆಯಲ್ಲಿ ಪುರುಷರು ಹಾಗೂ ಅವರ ಸಂತತಿಯವರಿಗೆ ಪ್ರಧಾನ ಹಕ್ಕಿದ್ದು ಮಹಿಳೆಯರು ಉತ್ತರಾಧಿಕಾರದ ಪಟ್ಟಿಯಲ್ಲಿ ಕೆಳಸ್ತರದಲ್ಲಿ ಬಿಂಬಿತವಾಗುತ್ತಿದ್ದರು. ಕೃಷಿ ಭೂಮಿ ಮೇಲಿನ ಹಕ್ಕು ಆಯಾ ರಾಜ್ಯಗಳ ಕಾನೂನಿನ ವ್ಯಾಪ್ತಿಯಲ್ಲಿ ಬರುವುದರಿಂದ ಯಾವ ರಾಜ್ಯಗಳ ಕಾನೂನಿನಲ್ಲಿ ಇದರ ಬಗ್ಗೆ ಪ್ರಸ್ತಾಪ ಇರಲಿಲ್ಲವೋ ಅಲ್ಲಿ ೧೯೫೬ ರ ಮಸೂದೆ ಅಂಗೀಕೃತವಾಗುತ್ತಿತ್ತು. ೨೦೦೫ ರ ಮಸೂದೆ, ಕೃಷಿ ಭೂಮಿಯನ್ನು ಇನ್ನಿತರ ಆಸ್ತಿಗಳಂತೆ ಪರಿಗಣಿಸಿ ಮಹಿಳೆಯರಿಗೆ ಕೃಷಿ ಭೂಮಿಯ ಮೇಲೆ ವಂಶ ಪಾರಂಪರಿಕವಾದ, ಪುರಷರಿಗೆ ಸಮಾನವಾದ ಸಹಪಾಲುಗಾರಿಕೆಯನ್ನು ದೊರಕಿಸಿ ಕೊಟ್ಟಿದೆ.

○ಬೀನಾ ಅಗರ್‌ವಾಲ್

ಅನು: ಕೆ.ಲಲಿತಾ

ಇದಲ್ಲದೆ ಮರಣಹೊಂದಿರುವ ಮಕ್ಕಳು (ಗಂಡು ಮತ್ತು ಹೆಣ್ಣು ಮಕ್ಕಳ) ವಾರಸುದಾರರನ್ನು ಸಮನಾಗಿ ಪರಿಗಣಿಸುವ ದೃಷ್ಟಿಯಿಂದ ವರ್ಗ ೧ ರಲ್ಲಿ ಮರಣ ಹೊಂದಿರುವ ಹೆಣ್ಣು ಹಾಗೂ ಗಂಡು ಮಕ್ಕಳ ಎರಡನೆಯ ಪೀಳಿಗೆವರೆಗಿನ ಸಂತತಿಯನ್ನು ಸೇರಿಸಲಾಗಿದೆ. ಈ ಅನುಕೂಲವು ಮೊದಲು ಬರಿಯ ಗಂಡು ಮಕ್ಕಳ ಸಂತತಿಗೆ ಮಾತ್ರ ಮೀಸಲಾಗಿತ್ತು.

ವಾಸಿಸುವ ಮನೆ ವಿಧವೆಯರ ಬೇಡಿಕೆ:

೧೯೫೬ರ ಹಿಂದೂ ಉತ್ತರಾಧಿಕಾರ ಮಸೂದೆಯ ಷೆಕ್ಷನ್ (೨೩)ರನ್ನು ರದ್ದುಗೊಳಿಸುವ ಮೂಲಕ ೨೦೦೫ ರ ಮಸೂದೆಯ ಎಲ್ಲಾ ಹೆಣ್ಣು ಮಕ್ಕಳಿಗೆ (ವಿವಾಹಿತ, ಅವಿವಾಹಿತ) ಗಂಡು ಮಕ್ಕಳಷ್ಟೇ ತಾವು ಹುಟ್ಟಿದ ಮನೆಯಲ್ಲಿ ವಾಸಿಸುವ ಹಕ್ಕನ್ನು ಹಾಗೂ ಆ ಮನೆಯಲ್ಲಿ ಸಮಪಾಲು ಕೇಳುವ ಹಕ್ಕನ್ನು ದೊರಕಿಸಿಕೊಟ್ಟಿದೆ. ಇದುವರೆವಿಗೆ ಇದ್ದ ಷೆಕ್ಷನ್(೨೩)ರ ಅನ್ವಯ ವಿವಾಹಿತ ಹೆಣ್ಣಿಗೆ (ಗಂಡನಿಂದ ಬೇರೆಯಾಗಿರುವ, ಗಂಡ ಬಿಟ್ಟಿರುವ, ವಿಧವೆಯರನ್ನು ಹೊರತುಪಡಿಸಿ)ತವರು ಮನೆಯಲ್ಲಿ ವಾಸಿಸುವ ಹಕ್ಕಿರಲಿಲ್ಲ. ಅವಿವಾಹಿತ ಹೆಣ್ಣಿಗೆ ತಂದೆ ತಾಯಿತರ ಮನೆಯಲ್ಲಿ ವಾಸಿಸುವ ಹಕ್ಕಿತ್ತೇ ವಿನಃ ಅದರಲ್ಲಿ ಪಾಲುಕೇಳುವ ಹಕ್ಕಿರಲಿಲ್ಲ. ೧೯೫೬ ರ ಹಿಂದೂ ಉತ್ತರಾಧಿಕಾರ ಮಸೂದೆಯಲ್ಲಿನ ಷೆಕ್ಷನ್(೨೪) ರನ್ನು ರದ್ದುಗೊಳಿಸುವ ಮೂಲಕ ವಿಧವೆ ಮರುವಿವಾಹವಾದರೂ ತನ್ನ ಪತಿಯ ಆಸ್ತಿಯ ಮೇಲಿನ ಹಕ್ಕನ್ನು ಕಳೆದುಕೊಳ್ಳುವುದಿಲ್ಲ.

> **೨೦೦೫ ರ ಮಸೂದೆ ಗಂಡಿನ ಬೇರೆಯಾದ ಆಸ್ತಿಯ ಹಂಚಿಕೆಯ ಬಗ್ಗೆ ಬದಲಾವಣೆಗಳೇನೂ ತಂದಿಲ್ಲ. ಆದರೆ ಈ ಮಸೂದೆ ಮಿತಾಕ್ಷರ ಅವಿಭಕ್ತ ಕುಟುಂಬದ ಆಸ್ತಿಯ ಮೇಲೆ ಹೆಣ್ಣುಮಕ್ಕಳಿಗೆ ಸಹ ಒಡೆತನದ ಅಧಿಕಾರವನ್ನು ಕೊಟ್ಟು ಗಂಡು ಮಕ್ಕಳಷ್ಟೇ ಹೆಣ್ಣು ಮಕ್ಕಳಿಗೆ ಸ್ವತ್ತಿನಲ್ಲಿ ಭಾಗವನ್ನು, ಅದನ್ನು ಕೇಳುವ ಜನ್ಮಸಿದ್ಧ ಹಕ್ಕನ್ನು ದೊರಕಿಸಿ ಕೊಟ್ಟಿದೆ.**

1956 ರ ಹಿಂದೂ ಉತ್ತರಾಧಿಕಾರ ಮಸೂದೆ ಹಾಗೂ 2005 ರ ಹಿಂದೂ ಉತ್ತರಾಧಿಕಾರ ಮಸೂದೆ (ತಿದ್ದುಪಡಿ) ಒಂದು ಹೋಲಿಕೆ

1956 ರ ಹಿಂದೂ ಉತ್ತರಾಧಿಕಾರ ಮಸೂದೆ	2005 ರ ಹಿಂದೂ ಉತ್ತರಾಧಿಕಾರ ಮಸೂದೆ (ತಿದ್ದುಪಡಿ)
ಮರಣ ಹೊಂದಿದ ಪುರುಷನ ಬೇರೆ ಆಸ್ತಿ ಅಳಿದ ಗಂಡಸಿನ ಬೇರೆ ಆಸ್ತಿ ವರ್ಗ 1 (ಮಗ, ಮಗಳು, ಹೆಂಡತಿ, ತಾಯಿ ಮತ್ತು ಮೊದಲೇ ಗೊತ್ತುಪಡಿಸಿರುವ ಅಳಿದ ಮಗನ ಮತ್ತು ಹೆಣ್ಣು ಮಕ್ಕಳ ವಾರಸುದಾರರು) ಹಕ್ಕುದಾರರಿಗೆ ಸಮಾನವಾದ ಭಾಗ. ಹಕ್ಕುದಾರರು ಹೆಣ್ಣಾಗಿರಲಿ, ಗಂಡಾಗಿರಲಿ ಪಾರಂಪರಿಕವಾಗಿ ಬಂದಿರುವ ಆಸ್ತಿಯನ್ನು ಎಲಿಯನೇಟ್ ಮಾಡುವ ಪೂರ್ಣ ಹಕ್ಕಿದೆ.	ವರ್ಗ 1 ಕ್ಕೆ ಸೇರಿರುವ ಹೊಸ ವಾರಸುದಾರರನ್ನು ಬಿಟ್ಟರೆ ಬೇರೆ ಬದಲಾವಣೆ ಇಲ್ಲ. ಬದಲಾವಣೆ ಇಲ್ಲ.
ಮಿತಾಕ್ಷರ ಅವಿಭಾಜ್ಯ ಕುಟುಂಬದ ಆಸ್ತಿ (ಷೆಕ್ಷನ್ 6) ವರ್ಗ 1 ವಾರಸುದಾರರಿಗೆ (ಗಂಡು ಮತ್ತು ಹೆಣ್ಣು) ಮೇಲೆ ತಿಳಿಸಿರುವಂತೆ ಪುರುಷನ ಅವಿಭಕ್ತ ಕುಟುಂಬದ ನೋಷನಲ್ ಆಸ್ತಿಯ ಭಾಗದ ಮೇಲೆ ಸಮಾನ ಹಕ್ಕು ಇರುತ್ತದೆ. ನೋಷನಲ್ ಭಾಗವನ್ನು ಉಯಿಲು ಮಾಡಬಹುದು. ಗಂಡು ಮಕ್ಕಳಿಗೆ ಅವಿಭಕ್ತ ಕುಟುಂಬದ ಆಸ್ತಿಗೆ ಸಹಪಾಲುದಾರರು ಹೆಣ್ಣು ಮಕ್ಕಳು ಸಹಪಾಲುದಾರರಲ್ಲ.	ಏನು ಬದಲಾವಣೆ ಇಲ್ಲ, ವರ್ಗ 1 ರಲ್ಲಿ ಹೊಸದಾಗಿ ಸೇರಿಸಿರುವ ವಾರಸುದಾರರನ್ನು ಬಿಟ್ಟು ಗಂಡು ಹಾಗೂ ಹೆಣ್ಣು ಮಕ್ಕಳಿಗೆ ಅವಿಭಕ್ತ ಕುಟುಂಬದ ಆಸ್ತಿಗೆ ಹಾಗೂ ಹೊರಗೆ ಸಹಪಾಲುದಾರರಾಗುವ ಜನ್ಮ ಸಿದ್ಧ ಹಕ್ಕಿದೆ. (ಈ ಭಾಗವನ್ನು ಉಯಿಲು ಮಾಡಲು ತಂದೆಗೆ ಅಧಿಕಾರವಿಲ್ಲ)
ಕೃಷಿ ಭೂಮಿ (ಸೆಕ್ಷನ್ 4(2)) ಕೃಷಿ ಭೂಮಿಗೆ ಜನ್ಮ ಸಿದ್ಧ ವಾರಸುದಾರರಾಗುವಿಕೆ ರಾಜ್ಯ ಮಟ್ಟದ ನ್ಯಾಯಪದ್ಧತಿಗೆ ಒಳಪಟ್ಟಿದೆ. ಹಿಂದೂ ಉತ್ತರಾಧಿಕಾರದ ಮಸೂದೆಗಲ್ಲ. ಬಹಳಷ್ಟು ರಾಜ್ಯಗಳ ನ್ಯಾಯ ಪದ್ಧತಿ ಲಿಂಗ ಅಸಮಾನತೆಯನ್ನು ಬಿಂಬಿಸುತ್ತದೆ.	ಎಲ್ಲಾ ರಾಜ್ಯಗಳು ಕೃಷಿ ಭೂಮಿಗೆ ಜನ್ಮ ಸಿದ್ಧ ವಾರಸುದಾರರಾಗುವಿಕೆ ಹಿಂದೂ ಉತ್ತರಾಧಿಕಾರ ಮಸೂದೆಯ ನ್ಯಾಯ ಪದ್ಧತಿಯನ್ನು ಅನುಸರಿಸುತ್ತದೆ. ರಾಜ್ಯ ಮಟ್ಟದ ನ್ಯಾಯ ಪದ್ಧತಿ ಅಲ್ಲ.
ಕುಟುಂಬ ವಾಸಿಸುವ ಮನೆ (ಸೆಕ್ಷನ್ 23) ವಾಸಿಸುವ ಮನೆಯಲ್ಲಿ ಮರಣ ಹೊಂದಿದವನ ಕುಟುಂಬದವರಿದ್ದರೆ, ಪುರುಷ ವಾರಸುದಾರರು ಪಾಲುಗಾರಿಕೆ ಮಾಡುವ ತನಕ ಯಾವ ಹೆಣ್ಣಿಗೂ ಭಾಗ ಕೇಳುವ ಹಕ್ಕಿಲ್ಲ. ಹೆಣ್ಣು ಮಕ್ಕಳಿಗೆ ಅದರಲ್ಲೂ ಅವಿವಾಹಿತ, ಗಂಡ ಬಿಟ್ಟಿರುವ, ಗಂಡನಿಂದ ದೂರವಿರುವ ಹಾಗೂ ವಿಧವೆಯವರಿಗೆ ಮಾತ್ರ ಆ ಮನೆಯಲ್ಲಿ ಬರೇ ವಾಸಿಸುವ ಹಕ್ಕಿದೆ.	ಸೆಕ್ಷನ್ 23 ರನ್ನು ರದ್ದುಪಡಿಸಲಾಗಿದೆ. ವಿವಾಹಿತ ಹಾಗೂ ಅವಿವಾಹಿತ ಹೆಣ್ಣುಮಕ್ಕಳಿಗೆ ಗಂಡುಮಕ್ಕಳಷ್ಟೆ ವಾಸಿಸುವ ಮನೆಯ ಮೇಲೆ ಹಕ್ಕಿದೆ (ವಾಸಿಸಲು ಹಾಗೂ ಭಾಗ ಕೇಳಲು)
ವಿಧವೆಯರು ಸೆಕ್ಷನ್ 24 ಮರಣ ಹೊಂದಿದ ಮಗನ ವಿಧವೆ, ಹಾಗೂ ಮೊಮ್ಮಗನ ವಿಧವೆ, ಒಡಹುಟ್ಟಿದವನ ವಿಧವೆ, ಮರುಮದುವೆಯಾದಲ್ಲಿ ಆಸ್ತಿಯ ಮೇಲಿನ ಹಕ್ಕನ್ನು ಕಳೆದುಕೊಳ್ಳುವರು.	ಸೆಕ್ಷನ್ 24 ರನ್ನು ರದ್ದು ಮಾಡಲಾಗಿದೆ. ಈ ವಿಧವೆಯರು ಮರು ಮದುವೆಯಾದರೂ ಆಸ್ತಿಯ ವಾರಸುದಾರರಾಗಿರುತ್ತಾರೆ.
ವರ್ಗ 1 ವಾರಸುದಾರರು ಮರಣ ಹೊಂದಿದ ಗಂಡು ಮಕ್ಕಳ ಎರಡನೆಯ ಪೀಳಿಗೆಯವರೆಗಿನ ಸಂತತಿ ಮತ್ತು ಮರಣ ಹೊಂದಿದ ಹೆಣ್ಣು ಮಕ್ಕಳ ಒಂದನೆ ಪೀಳಿಗೆಯವರೆಗಿನ ಸಂತತಿ ಮಾತ್ರ.	ವರ್ಗ 1 ರ ವಾರಸುದಾರರು ಮರಣ ಹೊಂದಿದ ಹೆಣ್ಣು ಅಥವಾ ಗಂಡು ಮಕ್ಕಳ ಎರಡನೆಯ ಪೀಳಿಗೆಯ ಸಂತತಿಯವರೆಗೆ.
ಉಯಿಲಿನ ಹಕ್ಕು ಸೆಕ್ಷನ್ 30 ಮಹಿಳೆಯರಿಗೆ ಹಾಗೂ ಪುರುಷರಿಗೆ ಅವಿಭಕ್ತ ಕುಟುಂಬದ ಆಸ್ತಿಯಲ್ಲಿನ ತಮ್ಮ ಭಾಗವನ್ನು ಪೂರ್ಣವಾಗಿ ಉಯಿಲು ಮಾಡುವ ಹಕ್ಕಿದೆ.	ಏನು ಬದಲಾವಣೆ ಇಲ್ಲ.

ಮಸೂದೆಯ ಪರಿಣಾಮಗಳು:

ಈ ತಿದ್ದುಪಡಿಗಳು ಮಹಿಳೆಯರಿಗೆ ಅನೇಕ ರೀತಿಯಲ್ಲಿ ಪರಿಣಾಮಕಾರಿ ಯಾಗಲಿದೆ. ನನ್ನ (ಬೀನಾ ಅಗರ್‌ವಾಲ್) "A Field of One's Own"ನಲ್ಲಿ ವಿಸ್ತಾರವಾಗಿ ತಿಳಿಸಿರುವಂತೆ ಕೃಷಿ ಭೂಮಿಯ ಮೇಲಿನ ಒಡೆತನದಿಂದ ಉಂಟಾಗುವ ಲಿಂಗ ಸಮಾನತೆ ಮಹಿಳೆ ಹಾಗೂ ಅವಳ ಕುಟುಂಬದವರು ಬಡತನಕ್ಕೆ ಈಡಾಗುವ ಅಪಾಯಗಳನ್ನು ಬಹಳಷ್ಟು ಕಡಿಮೆಯಾಗಿಸುತ್ತದೆ. ಅವಳ ಜೀವನೋಪಾಯದ ಹಾದಿಯಲ್ಲಿ ಅನೇಕ ಆಯ್ಕೆಗಳನ್ನು ಹೆಚ್ಚಿಸಿ ಅವಳ ಮಕ್ಕಳ ಬೆಳವಣಿಗೆ, ಆರೋಗ್ಯ, ವಿದ್ಯೆಗಳ ಅನುಕೂಲತೆಗಳನ್ನು ಸುಧಾರಿಸಿ ಅವಳ ಮೇಲೆ ಆಗುವ ಕೌಟುಂಬಿಕ ದೌರ್ಜನ್ಯಗಳನ್ನು ಕಡಿಮೆಯಾಗಿಸಿ ಮಹಿಳೆಯರನ್ನು ಸಬಲರನ್ನಾಗಿಸುತ್ತದೆ.

ನಾನು ಇತ್ತೀಚೆಗೆ ಕೇರಳದಲ್ಲಿ ಮಾಡಿದ ಸಂಶೋಧನೆಯ ಪ್ರಕಾರ ಕೃಷಿ ಭೂಮಿ ಅಥವಾ ಮನೆಯ ಒಡೆತನ ಹೊಂದಿರುವ ಮಹಿಳೆಯರು ಪುರುಷರಿಂದ ಶೋಷಣೆಗೆ ಒಳಗಾಗು ವುದು ಬಹಳಷ್ಟು ಕಡಿಮೆ ಎಂದು ತಿಳಿದು ಬಂದಿದೆ. ಸಮೀಕ್ಷೆಯ ಪ್ರಕಾರ ಏನೂ ಆಸ್ತಿಯ ಒಡೆತನ ಇಲ್ಲದ ಶೇ.೪೯% ಮಹಿಳೆಯರ ಮೇಲೆ ದೌರ್ಜನ್ಯ ನಡೆದರೆ ಭೂಮಿಯ ಒಡೆತನ ಹೊಂದಿರುವ ಶೇ.೧೮% ಮಹಿಳೆ ಯರ ಮೇಲೆ ಹಾಗೂ ಭೂಮಿ ಮತ್ತು ಮನೆಯ ಒಡೆ ತನ ಹೊಂದಿರುವ ಶೇ.೭% ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತದೆ ಎಂದು ತಿಳಿದು ಬಂದಿದೆ. ಕೃಷಿ ಭೂಮಿ ಮಹಿಳೆಯರ ಅಸ್ತಿತ್ವ ಇದ್ದದ್ದೇ ಆದರೆ ಅದು ಹೆಚ್ಚಿನ ವ್ಯವಸಾಯದ ಉತ್ಪನ್ನಕ್ಕೆ ಮಾರ್ಗವಾಗುತ್ತದೆ ಎಂಬುದನ್ನು ಗಮನಿಸಬಹುದು (ಪುರುಷರು ವಲಸೆ ಹೋಗುವುದು ಮತ್ತು ಮಹಿಳೆಯರಿಗೆ ಬರುವ ಜವಾಬ್ದಾರಿಯಿಂದ).

ನಾನು ಇತ್ತೀಚೆಗೆ ಕೇರಳದಲ್ಲಿ ಮಾಡಿದ ಸಂಶೋಧನೆಯ ಪ್ರಕಾರ ಕೃಷಿ ಭೂಮಿ ಅಥವಾ ಮನೆಯ ಒಡೆತನ ಹೊಂದಿರುವ ಮಹಿಳೆಯರು ಪುರುಷರಿಂದ ಶೋಷಣೆಗೆ ಒಳಗಾಗುವುದು ಬಹಳಷ್ಟು ಕಡಿಮೆ ಎಂದು ತಿಳಿದು ಬಂದಿದೆ. ಸಮೀಕ್ಷೆಯ ಪ್ರಕಾರ ಏನೂ ಆಸ್ತಿಯ ಒಡೆತನ ಇಲ್ಲದ ಶೇ.೪೯% ಮಹಿಳೆಯರ ಮೇಲೆ ದೌರ್ಜನ್ಯ ನಡೆದರೆ, ಭೂಮಿಯ ಒಡೆತನ ಹೊಂದಿರುವ ಶೇ.೧೮% ಮಹಿಳೆಯರ ಮೇಲೆ ಹಾಗೂ ಭೂಮಿ ಮತ್ತು ಮನೆಯ ಒಡೆತನ ಹೊಂದಿರುವ ಶೇ.೭% ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತದೆ ಎಂದು ತಿಳಿದು ಬಂದಿದೆ. ಕೃಷಿ ಭೂಮಿ ಮಹಿಳೆಯರ ಅಸ್ತಿತ್ವ ಇದ್ದದ್ದೇ ಆದರೆ ಅದು ಹೆಚ್ಚಿನ ವ್ಯವಸಾಯದ ಉತ್ಪನ್ನಕ್ಕೆ ಮಾರ್ಗವಾಗುತ್ತದೆ ಎಂಬುದನ್ನು ಗಮನಿಸಬಹುದು.

ವಂಶಪಾರಂಪರಿಕವಾಗಿ ಬಂದ ಆಸ್ತಿಯಲ್ಲಿ ತಂದಿರುವ ಲಿಂಗ ಸಮಾನತೆಯು ಕೆಲವೇ ಮಹಿಳೆಯರಿಗೆ ಪ್ರಯೋಜನವಾಗಬಲ್ಲದು ಎಂಬ ಪ್ರಚಲಿತವಾದ ತಪ್ಪು ಕಲ್ಪನೆ ಇದೆ. ಇದಕ್ಕೆ ವ್ಯತಿರಿಕ್ತವಾಗಿ ಈ ಮಸೂದೆಯು ಸಹಸ್ರಾರು ಮಹಿಳೆಯರಿಗೆ ಅದರಲ್ಲೂ ವಿಶೇಷವಾಗಿ ವಿಧವೆಯರಿಗೆ ಹಾಗೂ ಹೆಣ್ಣು ಮಕ್ಕಳಿಗೆ ಸಾಂತ್ವನ ನೀಡಬಲ್ಲದೆಂಬುದು ವಾಸ್ತವ ಸಂಗತಿ. ಎನ್.ಎಸ್.ಎಸ್ ಮಾಡಿರುವ ಸಮೀಕ್ಷೆಯ ಪ್ರಕಾರ ಭಾರತಾದ್ಯಂತ ಇರುವ ಗ್ರಾಮೀಣ ಕುಟುಂಬಗಳಲ್ಲಿ ಶೇ.೮೯% ರಷ್ಟು ಕುಟುಂಬಗಳು ಸ್ವಲ್ಪವಾದರೂ ಭೂಮಿಯ ಒಡೆತನ ಹೊಂದಿದ್ದು ಈ ಮಸೂದೆಯು ಅವರುಗಳ ಜೀವನೋಪಾಯಕ್ಕೆ ಅನೇಕ ಸುಧಾರಣೆಗಳನ್ನು ಒದಗಿಸುತ್ತದೆ.

ಈ ಮಸೂದೆ ಮಹಿಳೆಯರಿಗೆ ಹೆಚ್ಚು ಪ್ರಯೋಜನಕಾರಿ ಆಗುವುದಿಲ್ಲ ಎಂಬ ಇನ್ನೊಂದು ವಾದ ಕೃಷಿ ಭೂಮಿಯು ಮತ್ತಷ್ಟು ಬಹು ಭಾಗವಾಗುವುದನ್ನು ಕುರಿತದ್ದಾಗಿದೆ. ಆದರೆ ಈ ವಾದವು ಮಹಿಳೆಯರಿಗೆ ವಂಶ ಪಾರಂಪರ್ಯವಾದ ಹಕ್ಕಿನಿಂದ ದೂರವಿರಸಬೇಕೆಂಬ ಪರಿಕಲ್ಪನೆಯನ್ನು ಎಳ್ಳಷ್ಟು ಪುಷ್ಟೀಕರಿಸುವುದಿಲ್ಲ. ಬರಿ ಗಂಡು ಸಂತಾನವಿರುವ ಕುಟುಂಬಗಳಲ್ಲೂ ಕೃಷಿಭೂಮಿ ಚೂರುಚೂರಾಗುತ್ತದೆ ಚಾಲ್ತಿಯಲ್ಲಿರುವ ಪದ್ಧತಿಯಂತೆ ಗ್ರಾಮೀಣ ಕುಟುಂಬಗಳಲ್ಲಿ ಬೇರೆ ಬೇರೆಯಾಗಿ ಚೂರು ಭೂಮಿಯ ಮೇಲೆ ಒಡೆತನವಿದ್ದರೂ ಭೂಮಿಯ ಸಾಗುವಳಿಯನ್ನು ಒಟ್ಟಾಗಿ ಮಾಡುತ್ತಾರೆ. ಇದೇ ಪದ್ಧತಿಯನ್ನು ಹೆಣ್ಣು ಮಕ್ಕಳು ಅನುಸರಿಸಬಹುದು. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಒಂದು ಕೃಷಿ ಭೂಮಿಯ ಮೇಲಿರುವ ಪಾಲುದಾರರು ೧೯೬೧ ರಲ್ಲಿ ೫.೭ ರಿಂದ ೧೯೯೯ ರಲ್ಲಿ ೨.೭ಕ್ಕೆ ಇಳಿದಿರುವುದು.

ಮಹಿಳೆಯು ಮದುವೆಯಾದ ಮೇಲೆ ಪರ ಊರನ್ನು ಸೇರುತ್ತಾಳೆಂಬುದು ಇನ್ನೊಂದು ಪ್ರತಿಕೂಲ ವಾದ. ಕೆಲಸದ ಮೇಲೆ ವಲಸೆ ಹೋಗುವ ಪುರುಷರು ತಮ್ಮ ಭೂಮಿಯ ಮೇಲಿನ ಒಡೆತನ ಉಳಿಸಿಕೊಂಡಿರುವುದಾದರೆ ಮಹಿಳೆಯರು ಏಕೆ ಉಳಿಸಿಕೊಳ್ಳಲಾರರು? ಇತರ ಮಹಿಳೆಯರ ಸಹಕಾರದೊಂದಿಗೋ, ಭೂಮಿಯನ್ನು ಭೋಗ್ಯಕ್ಕೆ ಕೊಟ್ಟೋ ಅಥವಾ ತನ್ನ ಪರಿವಾರದ ಸಹಯೋಗದೊಂದಿಗೆ ಅವಳು ಸಾಗುವಳಿ ಮಾಡಿ ತಮ್ಮ ಆರ್ಥಿಕ ಭದ್ರತೆಯನ್ನು ದೃಢ ಪಡಿಸಿಕೊಳ್ಳಬಲ್ಲರು. ಶ್ರೀಲಂಕಾದಲ್ಲಿ ಅನೇಕ ಕುಟುಂಬಗಳಲ್ಲಿ ನಾನು ಕಂಡಂತೆ ಮಹಿಳೆಯರು ತಮ್ಮ ಪಾಲಿಗೆ ಬಂದ ತೆಂಗಿನ ಕಾಯಿಯ ಮರದ ಫಲವನ್ನು ಪ್ರತಿಬಾರಿಯೂ ಸಂತೋಷದಿಂದ ಅನುಭವಿಸುತ್ತಿದ್ದಾರೆ.

ಎರಡನೇ ಅತಿ ಮುಖ್ಯವಾದ ತಿದ್ದುಪಡಿ ಎಲ್ಲಾ ಹೆಣ್ಣು ಮಕ್ಕಳಿಗೂ (ವಿವಾಹಿತ ಮತ್ತು ಅವಿವಾಹಿತ) ಅವಿಭಕ್ತ ಕುಟುಂಬದ ಆಸ್ತಿಗೆ ಸಹ ಪಾಲುದಾರರನ್ನಾಗಿ ಮಾಡಿರುವುದು. ಇದು ಮಹಿಳೆಯರ ಜೀವನದಲ್ಲಿ ಗುರುತರವಾಗಿ ಹಾಗೂ ಆರ್ಥಿಕವಾಗಿ ವಿಶೇಷ ಬದಲಾವಣೆಗೆ ಕಾರಣವಾಗುತ್ತದೆ. ಆರ್ಥಿಕವಾಗಿ ಇದು ಮಹಿಳೆಯ ಭದ್ರತೆಯನ್ನು ಕಾಪಾಡಿ ಪುರುಷರು ತಾವು ಉಯಿಲು ಮಾಡಬಹುದಾಗಿದ್ದ ಪಾರಂಪರಿಕ ಆಸ್ತಿಯ ಮೇಲೆ ಮಹಿಳೆಯರಿಗೆ ಜನ್ಮಸಿದ್ಧ ಹಕ್ಕನ್ನು ದೊರಕಿಸಿ ಕೊಡುತ್ತದೆ. ಪುರುಷ ಪ್ರಧಾನವಾದ ಈ ಸಮಾಜದಲ್ಲಿ ಉಯಿಲಿನಲ್ಲಿ ಮಹಿಳೆಯರ ಹೆಸರು ಬರದೆ ಆಸ್ತಿಯಿಂದ ವಂಚಿತರಾಗಿದ್ದವರಿಗೆ ಈ ಮಸೂದೆ ಲಾಭದಾಯಕವಾಗಿರುತ್ತದೆ.

ಅಂತೆಯೇ ಮಹಿಳೆಯರು ಆಸ್ತಿಯ "ಕರ್ತಾರ್" ಎಂದಾಗುತ್ತಾರೆ. ಮುಖ್ಯವಾಗಿ ಈ ಹೊಸ ತಿದ್ದುಪಡಿ ಗಂಡು ಹಾಗೂ ಹೆಣ್ಣು ಮಕ್ಕಳು ಒಂದು ಕುಟುಂಬದ ಸರಿಸಮಾನವಾದ ಸದಸ್ಯರೆಂದು ಘೋಷಿಸುತ್ತದೆ. ಮದುವೆಯಾದ ಮೇಲೆ 'ಹೆಣ್ಣು ಕುಲಕ್ಕೆ ಹೊರಗೆ' ಎನ್ನುವ ಅರ್ಥಹೀನ ಪರಿಕಲ್ಪನೆಯನ್ನು ಅಲ್ಲಗಳೆಯುತ್ತದೆ. ಮದುವೆಯಾಗಿ ಸಂಬಂಧಗಳು ಯಾವುದೇ ಕಾರಣಕ್ಕೆ ಮುರಿದುಬಿದ್ದರೆ ಹೆಣ್ಣು ತನ್ನ ತವರು ಮನೆಯಲ್ಲಿ ವಾಸಿಸುವ ಜನ್ಮಸಿದ್ಧ ಹಕ್ಕನ್ನು ದೊರಕಿಸಿ ಕೊಡುತ್ತದೆ. ಇದು ಹೆಣ್ಣಿನ ಮನೋಸ್ಥೈರ್ಯವನ್ನು ಹೆಚ್ಚಿಸುವುದಲ್ಲದೆ ಸಾಮಾಜಿಕ ಕ್ಷೇತ್ರದಲ್ಲಿ ಅವಳ ಸ್ಥಾನವನ್ನು ಹೆಚ್ಚಿಸಿ ತನಗೆ ಮತ್ತು ತನ್ನ ಮಕ್ಕಳಿಗಾಗಿ ತವರು ಹಾಗೂ ಮದುವೆ ಆದ ಮನೆಯಲ್ಲಿ ಹೆಚ್ಚಿನ ಬೇಡಿಕೆಯನ್ನು ಒಡ್ಡುವ ಅಧಿಕಾರವನ್ನು ದೊರಕಿಸಿ ಕೊಡುತ್ತದೆ.

೨೦೦೫ ರ ಮಸೂದೆಯ ಅನ್ವಯ ಸೆಕ್ಷನ್ ೨೩ ರನ್ನು ರದ್ದುಗೊಳಿಸಿರುವುದು ವಿವಾಹಿತ ಹೆಣ್ಣಿಗೆ ಬಹಳಷ್ಟು ಪ್ರಯೋಜನವಾಗುತ್ತದೆ. ವಿವಾಹಿತ ಹೆಣ್ಣು ಮಕ್ಕಳು ಈಗ ತವರು ಮನೆಯಲ್ಲಿ ವಾಸಿಸುವ ಹಾಗೂ ಅದರಲ್ಲಿ ಪಾಲುದಾರರಾಗುವ ಜನ್ಮಸಿದ್ಧ ಹಕ್ಕನ್ನು ಪಡೆಯುತ್ತಾರೆ. ಗಂಡನ ಕಿರುಕುಳದಿಂದ ನೊಂದ ಹೆಣ್ಣಿಗೆ ವಾಸಿಸಲು ಇದು ಆಸರೆ ಸಿಕ್ಕಿದಂತಾಗಿದೆ. ಈ ತಿದ್ದುಪಡಿಯಿಂದ ಬರುವ ಒಂದೇ ನಕಾರಾತ್ಮಕ ಆತಂಕವೆಂದರೆ

ೃದ್ಧಾಪ್ಯದಲ್ಲಿರುವ ತಂದೆ-ತಾಯಿಯರ ಮೇಲೆ ಮನೆಯ ಾಗೀಕರಣದ ಒತ್ತಡ. ಇದಕ್ಕೆ ಪರಿಹಾರ ತಂದೆ ತಾಯಿ ೀವಂತವಾಗಿರುವವರೆಗೂ (ವಾಸಿಸುವ ಒಂದೇ ುನೆಯಿದ್ದಲ್ಲಿ) ಪಾಲುಗಾರಿಕೆ ಆಗದಂತೆ ನಿಯಂತ್ರಣ ುವುದು.

ನ್ಯೂನ್ಯತೆಗಳು:

ಈ ಮಸೂದೆಯು ಜೀವನದ ಅಳವಡಿಕೆ ುಲ್ಲಿ ಅನೇಕ ತೊಡಕುಗಳನ್ನು ಎದುರಿಸಬೇಕಾಗ ಹುದು. ಮೊದಲನೆಯದಾಗಿ ಅವಿಭಕ್ತ ಕುಟುಂಬದಲ್ಲಿ

> **ಮಿತಾಕ್ಷರ ಪದ್ಧತಿಯನ್ನು ರದ್ದು ಮಾಡುವುದರಿಂದ ಮಹಿಳೆಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆ ದೊರಕಿಸಿದಂತಾಗುವುದು ಎಂಬ ಅಭಿಪ್ರಾಯ ಹೊಂದಿ ನಾವು ಕೆಲವರು ಇದರ ಹಕ್ಕಿನ ಬಗ್ಗೆ ಸಲಹೆಯನ್ನು ಕೊಟ್ಟಿದ್ದೆವು. ಈ ಪದ್ಧತಿಯ ಪ್ರತಿಷ್ಠಾಪನೆಗೆ ಉಯಿಲು ಬರೆಯುವ ಹಕ್ಕಿನಲ್ಲೂ (ಉದಾ ೧/೨ ಭಾಗದ ಆಸ್ತಿ) ಕೆಲವು ನಿರ್ಬಂಧಗಳನ್ನು ತರುವುದು ಅವಶ್ಯಕ. ಐರೋಪ್ಯ ರಾಷ್ಟ್ರಗಳಲ್ಲೂ ಇಂತಹ ನಿರ್ಬಂಧಗಳು ಸರ್ವೆ ಸಾಮಾನ್ಯ, ಉಯಿಲಿನಲ್ಲಿ ಮಹಿಳೆಯರನ್ನು ಹೆಸರಿಸಿದೆ ಆಸ್ತಿಯ ಪಾಲಿನಿಂದ ವಂಚಿತರನ್ನಾಗಿ ಮಾಡಬಹುದಾಗಿದೆ.**

ವ ಮಿತಾಕ್ಷರ ಪದ್ಧತಿಯನ್ನು ಉಳಿಸಿಕೊಂಡಿರುವುದು. ಣ್ಣು ಮಕ್ಕಳನ್ನು ಅವಿಭಕ್ತ ಕುಟುಂಬದ ಆಸ್ತಿಯಲ್ಲಿನ ಹಪಾಲುದಾರರ' ನ್ನಾಗಿಸಿದಾಗ ವರ್ಗ ೧ ಎಂದು ಯೋಜಿಸಿರುವ ಹೆಂಡತಿ ಹಾಗೂ ತಾಯಿಯ ಭಾಗಕ್ಕೆ ದಬೇಕಾದ ಆಸ್ತಿಯಲ್ಲಿ ಕಡಿತ ಉಂಟಾಗುತ್ತದೆ. ಮಹಾ ಷ್ಟ್ರ ರಾಜ್ಯದಲ್ಲಿ ಜಾರಿಯಿರುವ ಪದ್ಧತಿ ಅನ್ವಯ ಆಸ್ತಿ ುಲ್ಲಿ ಒಂದು ಭಾಗವನ್ನು ತನ್ನದಾಗಿಸಿಕೊಳ್ಳುತ್ತಿದ್ದ ವಿಧ ುಯ ಭಾಗ ಈಗ ತನ್ನ ಗಂಡು ಹಾಗೂ ಹೆಣ್ಣು ಮಕ್ಕಳ ಗದಷ್ಟೇ ಆಗುತ್ತದೆ.

ಪಾಲುಗಾರಿಕೆಯಲ್ಲಿ ಯಾವ ಭಾಗದ ಅಧಿ ರವಿಲ್ಲದಿದ್ದ ತಮಿಳುನಾಡು ಹಾಗೂ ಆಂಧ್ರಪ್ರದೇಶದ ವೆಯರಿಗೆ ದೊರಕುವ ಆಸ್ತಿ ಈ ಹೆಣ್ಣು ಮಕ್ಕಳಿಗಿಂತ ಮೆಯಾಗಿದೆ. ಮಿತಾಕ್ಷರ ಪದ್ಧತಿಯನ್ನು ರದ್ದು ಾಡುವುದರಿಂದ ಮಹಿಳೆಗೆ ಸಾಮಾಜಿಕ, ಆರ್ಥಿಕ, ಜಕೀಯ ಸಮಾನತೆ ದೊರಕಿಸಿದಂತಾ ಗುವುದು ಬ ಅಭಿಪ್ರಾಯ ಹೊಂದಿ ನಾವು ಕೆಲವರು ಇದರ ಕ್ಕಿನ ಬಗ್ಗೆ ಸಲಹೆಯನ್ನು ಕೊಟ್ಟಿದ್ದೆವು. ಈ ಪದ್ಧತಿಯ ತಿಷ್ಠಾಪನೆಗೆ ಉಯಿಲು ಬರೆಯುವ ಹಕ್ಕಿನಲ್ಲೂ ದಾ೧/೨ ಭಾಗದ ಆಸ್ತಿ) ಕೆಲವು ನಿರ್ಬಂಧಗಳನ್ನು ುವುದು ಅವಶ್ಯಕ. ಐರೋಪ್ಯ ರಾಷ್ಟ್ರಗಳಲ್ಲೂ ಇಂತಹ ರ್ಬಂಧಗಳು ಸರ್ವೆ ಸಾಮಾನ್ಯ, ಉಯಿಲಿನಲ್ಲಿ ಹಿಳೆಯರನ್ನು ಹೆಸರಿಸಿದೆ ಆಸ್ತಿಯ ಪಾಲಿನಿಂದ ವಂಚಿತರನ್ನಾಗಿ ಮಾಡಬಹುದಾಗಿದೆ. ೨೦೦೫ರ ಮಸೂದೆ ಈ ವೈರುದ್ಯ ಸಮಾಧಾನ ದೊರಕಿಸದಿದ್ದರೂ ಅವಿಭಕ್ತ ಕುಟುಂಬದ ಆಸ್ತಿಗೆ ಸಹಪಾಲುದಾರರನ್ನಾಗಿ ಮಾಡುವುದರ ಮೂಲಕ ಸಹಸ್ರಾರು ಮಹಿಳೆಯರಿಗೆ ನ್ಯಾಯ ದೊರಕಿಸಿಕೊಟ್ಟಂತಾಗಿದೆ.

೨೦೦೫ ರ ಮಸೂದೆ ನಡೆದು ಬಂದ ದಾರಿ:

೨೦೦೪ ರ ಡಿಸೆಂಬರ್‌ನಲ್ಲಿ ಮಂಡಿಸಲಾಗಿದ್ದ ಮಸೂದೆಯ ಕರಡು ಪ್ರತಿಯಲ್ಲಿ ಕೃಷಿಭೂಮಿ ಹಾಗೂ ವಿವಾಹಿತ ಹೆಣ್ಣು ಮಕ್ಕಳ ಬಗ್ಗೆ ಯಾವ ವಿಧವಾದ ತಿದ್ದುಪಡಿ ಇಲ್ಲದೆ ಅವರನ್ನು ನಿರ್ಲಕ್ಷಿಸಿತ್ತು. ಅದರೂ ೨೦೦೪ ಒಡಂಬಡಿಕೆ ಸರ್ಕಾರಕ್ಕೆ ಮಸೂದೆಯನ್ನು ಮತ್ತಷ್ಟು ಉತ್ತಮಗೊಳಿಸುವ ಇಚ್ಛೆ ಇದೆ ಎಂಬ ಆಸೆಯನ್ನು ವ್ಯಕ್ತಪಡಿಸಿತ್ತು. ಪೌರ ಸಮಾಜವೂ ಈ ವಚನ ಬದ್ಧತೆಯನ್ನು ಉಪಯೋಗಿಸಿ ಮುಂದಿನ ಎಂಟು ತಿಂಗಳು ಆಮೂಲಾಗ್ರ ತಿದ್ದುಪಡಿಗೆ ಸಮರವನ್ನೇ ಸಾರಿತು.

ಸಂಕುಚಿತವಾದ ೨೦೦೪ ಮಸೂದೆಯ ಕರಡು ಪ್ರತಿ ೨೦೦೫ ರ ತಿದ್ದುಪಡಿ ಆಗುವ ನಿಟ್ಟಿನಲ್ಲಿ ನೂರಾರು ವ್ಯಕ್ತಿಗಳ ಸಂಘ ಸಂಸ್ಥೆಗಳ ಹೋರಾಟವೇ ಅಡಗಿದೆ. ಮಹಿಳಾ ಕಾನೂನು ರಕ್ಷಣೆ ಮಾನವಹಕ್ಕು ಇವುಗಳ ಬಗ್ಗೆ ಕಾಳಜಿ ಇರುವ ಅನೇಕ ವ್ಯಕ್ತಿಗಳು, ಸಂಘ ಸಂಸ್ಥೆಗಳು ನೀಡಿದ ಮನವಿಗಳು ಸಾಕ್ಷ್ಯ-ಪುರಾವೆಗಳು ಹೇರಿದ ಒತ್ತಡಗಳು, ಅವುಗಳಿಗೆ ಸಿಕ್ಕ ಕಾನೂನು ಮತ್ತು ನ್ಯಾಯಾಂಗ ಸಮಿತಿಗಳ ಮುಕ್ತ ಸ್ಪಂದನ, ಹಾಗೂ ಅನೇಕ ವಕೀಲರ ಮತ್ತು ಲೋಕಸಭಾ ಸದಸ್ಯರ ನೆರವಿನಿಂದ ಸಮಾನತೆಯ ಸಬಲೀಕರಣದತ್ತ ಹೊಸ ಹೆಜ್ಜೆಯನ್ನು ಮೂಡಿಸುವ ಈ ೨೦೦೫ ಮಸೂದೆ ಹೊರ ಬಂದಿದೆ.

ಕೆಲವೇ ವ್ಯಕ್ತಿಗಳ ಹಾಗೂ ಗುಂಪುಗಳ ಬದ್ಧ ಬೇಡಿಕೆಯಿಂದ ಪ್ರಾರಂಭವಾದ ಈ ಹೋರಾಟ ಕೆಳಸ್ತರ ಮಟ್ಟದ ಸಂಸ್ಥೆಗಳಿಂದ ದೇಶಾದ್ಯಂತ ಸಾಮಾನ್ಯ ಜನರ ಬೆಂಬಲ ಪಡೆದು ದೃಢ ಮನಸ್ಸಿನ ಸರ್ಕಾರ ಹಾಗೂ ಸಂಸತ್ತಿನ ಅನುಮೋದನೆಯಿಂದ ಇತಿಹಾಸದಲ್ಲಿ ಮೈಲಿಗಲ್ಲನ್ನು ಸ್ಥಾಪಿಸಿದೆ.

ಈ ಮಸೂದೆಯ ಪ್ರಾಮಾಣಿಕ ಅನುಷ್ಠಾನದ ಬಗೆಗಿನ ಗಂಭೀರ ಪ್ರಶ್ನೆ ಈಗ ಮುಂದಿದೆ. ಮಸೂದೆಯ ಬಗ್ಗೆ ಅರಿವು ಮೂಡಿಸುವುದು; ಮಹಿಳೆಯರಿಗೆ ಆಸ್ತಿಯ ಮೇಲಿನ ಸಹಪಾಲುಗಾರಿಕೆಯನ್ನು ದೊರಕಿಸಿಕೊಡುವುದರಿಂದ ಕುಟುಂಬದಲ್ಲಿ ಆಗುವ ಅನುಕೂಲತೆಗಳ ಬಗ್ಗೆ ಸಾಮಾಜಿಕ ಅರಿವು ಮೂಡಿಸುವುದು; ಮಹಿಳೆಯರಿಗೆ ದೊರಕಿರುವ ಈ ಹಕ್ಕನ್ನು ಚಲಾಯಿಸುವ ನಿಟ್ಟಿನಲ್ಲಿ ಬೇಕಾಗಿರುವ ಸಾಮಾಜಿಕ ಹಾಗೂ ಕಾನೂನಿನ ನೆರವು; ಇವುಗಳನ್ನು ಮಾಡಿದ್ದೆ ಆದರೆ ಸುದೀರ್ಘವಾದ ಹಾದಿ ಹಿಡಿದು ಬಂದ ಈ ಮಸೂದೆ ಪೂರ್ಣಫಲಪ್ರದವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. (ಸೌಜನ್ಯ: ದಿ ಹಿಂದೂ)

ಬೀನಾ ಅಗರ್‌ವಾಲ್ ಅವರು ದೆಹಲಿಯ ಆರ್ಥಿಕ ಅಭಿವೃದ್ಧಿ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಸಮಗ್ರ ಹಿಂದೂ ಉತ್ತರಾಧಿಕಾರ ಮಸೂದೆಗಾಗಿ ಬೀನಾ ಅವರು ನಿರಂತರ ಹೋರಾಟ ರೂಪಿಸಿದ್ದರು. □

ಸಂವಾದ



ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಗಿರಿಯ ಮೇಲಿನ ಬಾಬ–ಮನದೊಳಗಿನ ದತ್ತ ಹಾಗೂ

ಕೋಮು ಆಕ್ರಮಣ

ಅಕ್ಟೋಬರ್ ತಿಂಗಳ ಚಳಿಗಾಲ ಕಾಲಿಡುತ್ತಿದ್ದಂತೆ, ಹಸಿರ ಸಿರಿಯ ದಟ್ಟ ಕಾನನದ ಬಾಬಾ ಬುಡನ್‌ಗಿರಿ ಪರಿಸರದಲ್ಲಿ ಸಂಘಪರಿವಾರದ ಕರ್ಕಷ ಧ್ವನಿಗಳು, ಹೃದಯಗಳನ್ನು ಒಡೆಯುವ ಕೋಮು ವಿಷಬೀಜ ಬಿತ್ತುವ ಹುನ್ನಾರಗಳು ಹೆಚ್ಚ ತೊಡಗುತ್ತವೆ. ಹಿಂದೂ ಜನತೆಯ ಜಾಗೃತಿಯ ಹೆಸರಲ್ಲಿ ಮನುಷ್ಯ ಸಹಜ ಮಾನವತೆಯ ಮೇಲೆ ದಾಳಿ ನಡೆಸುವ ಈ ರಕ್ತ ಪಿಪಾಸುಗಳು ಬಾಬ್ರಿ ಮಸೀದಿ ನಾಶದ ನಂತರ ದೇಶಾದ್ಯಂತ ನೂರಾರು ಅಯೋಧ್ಯೆಗಳನ್ನು ಸೃಷ್ಟಿಸುವ ಯೋಜನೆ ಹೆಣದಿದ್ದಾರೆ. ೧೯೯೨ ರಿಂದಲೂ ಈ ನಿಟ್ಟಿನಲ್ಲಿ ಸತತ ಯತ್ನ ನಡೆಸುತ್ತಿರುವ ಸಂಘ ಪರಿವಾರ ೧೯೯೭ರಿಂದ ತನ್ನ ಪ್ರಯತ್ನಗಳನ್ನು ತೀವ್ರ ಗತಿಯಲ್ಲಿ ಹೆಚ್ಚಿಸಿಕೊಂಡಿದೆ. ಆದರೆ ಕಳೆದ ವರ್ಷ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಹಾಗೂ ಇತರ ಪ್ರಗತಿಪರ ಶಕ್ತಿಗಳ ಸತತ ಹೋರಾಟದಿಂದಾಗಿ ಗಿರಿಯ ಮೇಲಿನ ಪರಿವಾರದ ಅಬ್ಬರ ಸ್ವಲ್ಪ ಹತೋಟಿಗೆ ಬಂದಿದೆ.

ಸಾಮಾನ್ಯವಾಗಿ ಹಿಂದೂ ಕೋಮುವಾದದ ಬಗ್ಗೆ ಮಾತನಾಡುವಾಗ ಅದರ ದಾಳಿಯ ಗುರಿ ಅಲ್ಪಸಂಖ್ಯಾತರು–ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರು–ಎಂದೇ ಭಾವಿಸುತ್ತೇವೆ. ಬಾಂಬೆ ಗುಜರಾತಿನಲ್ಲಿ ನಡೆದ ಮುಸ್ಲಿಮರ ಕಗ್ಗೊಲೆಗಳು ಹಾಗೂ ಕ್ರಿಶ್ಚಿಯನ್ನರ ಮೇಲೆ ಮಸೀದಿ–ಚರ್ಚುಗಳ ಮೇಲೆ ನಡೆಯುತ್ತಿರುವ ದಾಳಿಗಳು ಇದಕ್ಕೆ ಸಾಕ್ಷಿ. ಈ ಆಕ್ರಮಣದ ಬಗ್ಗೆ ಹಿಂದುತ್ವವಾದಿಗಳೇ ಹಬ್ಬಿಸುವ ಅಬ್ಬರದ ಪ್ರಚಾರಗಳು ಹಿಂದುತ್ವ ಶಕ್ತಿಗಳು ತಣ್ಣಗೆ ನಡೆಸುತ್ತಿರುವ ಮತ್ತೊಂದು ಆಕ್ರಮಣವನ್ನು ಮರೆ ಮಾಚುತ್ತದೆ. ಅದು ಹಿಂದುತ್ವವಾದಿ ಶಕ್ತಿಗಳು ಶೂದ್ರ–ದಲಿತ ಜನಾಂಗದ ಮೇಲೆ, ಹಾಗೂ ಆ ಸಮುದಾಯಗಳ ಸ್ಮೃತಿಗಳ ಮೇಲೆ ವ್ಯವಸ್ಥಿವಾಗಿ ನಡೆಸುತ್ತಿರುವ ದಾಳಿಗಳು. ಈ ಎರಡೂ ದಾಳಿಗಳು ಏಕಕಾಲಕ್ಕೆ ನಡೆಯುತ್ತಿದ್ದರೂ ಪ್ರತಿರೋಧ ಮಾತ್ರ ಕೇವಲ ಮುಸ್ಲಿಂ–ಕ್ರಿಶ್ಚಿಯನ್–ಹಾಗೂ ಜಾತ್ಯಾತೀತ ಮೂಲಗಳಿಂದ ಮಾತ್ರ ವ್ಯಕ್ತವಾಗುತ್ತಿರುವುದು ಅವರು ಎರಡನೇ ದಾಳಿಯಲ್ಲಿ ಸ್ವಲ್ಪ ಮಟ್ಟಿನ ಯಶ ಕಂಡಿರುವುದನ್ನು ಸೂಚಿಸುತ್ತದೆ. ಹಿಂದು ಕೋಮುವಾದಿಗಳ ಹಿಂದೂ ಯಾರೆಂಬ ನಿರ್ವಚನದಲ್ಲೇ ಬ್ರಾಹ್ಮಣ್ಯವಾದವಿದೆ ಹಾಗೂ ಬ್ರಾಹ್ಮಣ್ಯ ವಿರೋಧಿ ಶೂದ್ರ ಪರಂಪರೆಯ ನಿರಾಕರಣೆಯಿದೆ. ಈ ನಿರಾಕರಣೆ ದಾಳಿಯ ಸ್ವರೂಪದಲ್ಲಿರದೆ ಪಳಗಿರುವ ಸ್ವರೂಪದಲ್ಲಿರುವುದರಿಂದಲೇ ಅದರ ಗ್ರಹಿಕೆ ಕಷ್ಟವಾಗುತ್ತಿದೆ. ಈ ಪಳಗಿಸುವಿಕೆಗೆ ಬ್ರಾಹ್ಮಣ್ಯವು ಎರಡು ತಂತ್ರ ಅನುಸರಿಸುತ್ತದೆ. ಒಂದು ಬ್ರಾಹ್ಮಣ್ಯಕ್ಕೆ ಕಡುವಿರೋಧಿಯಾದ, ಸ್ಮೃತಿಗಳ–ಕುರುಹುಗಳ ನಾಶ. ಅದಕ್ಕೆ ಇತ್ತೀಚಿನ ಉದಾಹರಣೆ ಕನಕ ಗೋಪುರ ನಾಶ. ಮತ್ತೊಂದು ವಿಧಾನ ಶೂದ್ರ ಸಂಧಾನ! ಅಂದರೆ ಶೂದ್ರ ದೇವರುಗಳಿಗೆ ಜನಿವಾರ ತೊಡಿವುದು. ವೈದಿಕ ವಿರೋಧಿ ಬುದ್ಧನನ್ನು ದಶಾವತಾರಗಳಲ್ಲಿ ಒಂದೆಂದು ಪ್ರಚಾರ ಮಾಡುವುದು ಇದಕ್ಕೆ ಒಂದು ಹಳೆಯ ಉದಾಹರಣೆಯಾದರೆ, ವೈದಿಕ ಬ್ರಾಹ್ಮಣ್ಯದ ವಿರುದ್ದವಾಗಿ ಹುಟ್ಟಿಕೊಂಡ ದತ್ತಪಂಥದ ದತ್ತಾತ್ರೇಯನಿಗೆ ಜನಿವಾರ ತೊಡಿಸುವ ಸಂಘಪರಿವಾರದ ಪ್ರಯತ್ನ ಇತ್ತೀಚಿನ ಉದಾಹರಣೆ.

ವಾಸ್ತವಗಿ ಇಂದು ಬಾಬಾಬುಡನ್‌ಗಿರಿಯಲ್ಲಿ ಸಂಘ ಪರಿವಾರ ಎಬ್ಬಿಸಿರುವ ವಿವಾದದಲ್ಲಿ ಇವೆರಡೂ ದಾಳಿಗಳು ನಡೆಯುತ್ತಿದೆ. ಗಿರಿಯ ಮೇಲಿನ ಬಾಬಾ–ದತ್ತ ಬ್ರಾಹ್ಮಣ್ಯ ವಿರೋಧಿ ಸೂಫಿ–ಹಾಗೂ–ಅವೈದಿಕ ಪರಂಪರೆಗಳ ಸಂಕೇತಗಳು. ಆದ್ದ ರಿಂದಲೇ ಸಂಘಪರಿವಾರವು ಒಂದೆಡೆ ಬಾಬಾನನ್ನು ನಾಮಾವಶೇಷ ಮಾಡಲು ಹೊರಟಿದ್ದರೆ, ತಥಾಕಥಿಕ ದತ್ತನಿಗೆ ಜನಿವಾರ ತೊಡಿಸಿ ವೈದಿಕ ದತ್ತನನ್ನಾಗಿ ಮಾಡಲು ಹೊರಟಿದ್ದಾರೆ.

ಈ ಗುರಿಗಳನ್ನು ಈಡೇರಿಸಿಕೊಳ್ಳಲು ಅವರು ಅನುಸರಿಸುತ್ತಿರುವ ಮಾರ್ಗ ಬಹಳ ಪರಿಪರಿಚಿತವಾದದ್ದೇ ಆಗಿದೆ. ಮೊದಲಿಗೆ ಅಸ್ಥಿತ್ವದಲ್ಲಿರುವ ಇತಿಹಾಸವನ್ನು ಅಮಾನ್ಯಗೊಳಿಸಲು ಪೊಳ್ಳು ಇತಿಹಾಸ ಸೃಷ್ಟಿಸುವುದು. ಅದರ ಸುತ್ತ ಪೊಳ್ಳು ಧಾರ್ಮಿಕ ಸಂಪ್ರದಾಯ ಆಚರಣೆಗಳನ್ನು ಪರಿಚಯಿಸುವುದು ಹಾಗೂ ಅಂತಿಮವಾಗಿ ಅವುಗಳ ಮೇಲೆ ಭೌತಿಕ ದಾಳಿ ನಡೆಸಿ ವೈದಿಕ ಬ್ರಾಹ್ಮಣೀಯ ಸಂಕೇತಗಳನ್ನು ಪ್ರತಿಷ್ಟಾಪಿಸುವುದು. ಈ ನಡುವೆ ಅವುಗಳನ್ನು ವಿರೋಧಿಸುವ ಜಾತ್ಯಾತೀತ, ಹಾಗೂ ಇತರ ಧರ್ಮೀಯರ ಮೇಲೆ ಭೌತಿಕ ದಾಳಿನಡೆಸುವುದು. ಇದು ಒಂದು ಸಂಘಪರಿವಾರದ ಸುಸ್ಪಷ್ಟ ವ್ಯೂಹತಂತ್ರವೇ ಆಗಿಬಿಟ್ಟಿದೆ.

ಹೀಗಾಗಿ ಸಂಘಪರಿವಾರ ಸೃಷ್ಟಿಸುವ ಸುಳ್ಳು, ಪೊಳ್ಳುಗಳಿಗೆ ಜನ ಬಲಿಯಾಗದಂತೆ ನೈಜ ಇತಿಹಾಸವನ್ನು ಜನರ ಮುಂದಿಡುವ ಜವಾಬ್ದಾರಿಯೂ ಜಾತ್ಯಾತೀತ ಶಕ್ತಿಗಳ ಮೇಲಿದೆ.

ಪ್ರಸಕ್ತ ಬಾಬಾಬುಡನ್‌ಗಿರಿ ವಿಷಯದಲ್ಲಿ ಸಹ ಸಂಘ ಪರಿವಾರವು ಹಲವಾರು ಬಗೆಯ ಸುಳ್ಳು ಪುಳ್ಳುಗಳನ್ನು ಪ್ರಚಾರ ಮಾಡಿ ಅದನ್ನೇ ನಿಜವಾದ ಇತಿಹಾಸ ಹಾಗೂ ಪುರಾಣ ಎಂದು ಕಿರುಚುತ್ತಿದೆ. ಇವುಗಳ ಸತ್ಯಾಸತ್ಯತೆಯನ್ನು ಬಿಚ್ಚಿಟ್ಟು ಜನರು ಬಲಿ ಬೀಳದಂತೆ ಜಾಗೃತಿ ತರುವ ಜವಾಬ್ದಾರಿಯನ್ನು ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಕಳೆದ ಹಲವಾರು ವರ್ಷಗಳಿಂದ ಪೂರೈಸುತ್ತ ಬಂದಿದೆ. ಅದರ ಭಾಗವಾಗಿ ವೇದಿಕೆಯು ರಚಿಸಿದ್ದ ಅಧ್ಯಯನ ಸಮಿತಿ ಬಾಬಾ–ದತ್ತ ವಿಚಾರಕ್ಕೆ ಸಂಬಂಧಪಟ್ಟಂತೆ ಹಲವಾರು ಸತ್ಯ ಸಂಗತಿಗಳನ್ನು ಹೊರ ತಂದಿದೆ.

ಈವರೆಗೆ ಬಾಬಾಬುಡನ್‌ಗಿರಿ ವಿಚಾರದ ಬಗ್ಗೆ ಸಂಘ ಪರಿವಾರ ನಡೆಸುತ್ತಿದ್ದ ಪ್ರಚಾರಗಳಂದರೆ:

೧. ದತ್ತಜಯಂತಿಯನ್ನು ಬಾಬಾಬುಡನ್‌ಗಿರಿಯಲ್ಲಿ ಸುಮಾರು ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ.
೨. ಬಾಬಾಬುಡನ್ ಹೊರದೇಶದಿಂದ ಬಂದು ದತ್ತನಿದ್ದ ಜಾಗವನ್ನು ಆಕ್ರಮಿಸಿಕೊಂಡಿದ್ದಾನೆ.
೩. ದರ್ಗಾವಿರುವ ಜಾಗವೇ ಬೇರೆ. ಈಗಿರುವುದು ದತ್ತ ಪೀಠ ಮಾತ್ರ.

ಈ ಆಧಾರ ರಹಿತ ವಾದಗಳನ್ನು ಮುಂದಿಟ್ಟು

೧) ದತ್ತ ಪೀಠದಲ್ಲಿ ಹಿಂದೂ ಅರ್ಚಕರ ನೇಮಕಾತಿ
೨) ದತ್ತ ಮೂರ್ತಿ ಸ್ಥಾಪನೆ
೩) ಗೋರಿ–ಹಾಗೂ–ಸೂಫಿ ಕುಟುಂಬಗಳ ಉಚ್ಚಾಟನೆ
೪) ಹಾಗೂ ಅಂತಿಮಾವಾಗಿ ದತ್ತ ಪೀಠ ವಿಮೋಚನೆ

ಇವು ಸಂಘ ಪರಿವಾರ ಹೂಡಿರುವ ಕಾರ್ಯತಂತ್ರ.

ಆದರೆ ಲಿಖಿತ ಇತಿಹಾಸ, ಶಾಸನ ಪರಿಷ್ಕರಣೆ, ಹಾಗೂ ಜನಪದೀಯ ಆಚಾರ ವಿಚಾರ ಸಂಪ್ರದಾಯ, ಉಳಿದ ದತ್ತಪೀಠಗಳ

ವರ್ತಮಾನ

ಬಾಬಾಬುಡನ್ ಗಿರಿ ವಿಷಯದಲ್ಲಿ ಸಂಘ ಪರಿವಾರವು ಹಲವಾರು ಬಗೆಯ ಸುಳ್ಳುಗಳನ್ನು ಪ್ರಚಾರ ಮಾಡಿ ಅದನ್ನೇ ನಿಜವಾದ ಇತಿಹಾಸ ಹಾಗೂ ಪುರಾಣ ಎಂದು ಕಿರುಚುತ್ತಿದೆ. ಇವುಗಳ ಸತ್ಯಾಸತ್ಯತೆಯನ್ನು ಬಿಚ್ಚಿಟ್ಟು ಜನರು ಬಲಿಬೀಳದಂತೆ ಜಾಗೃತಿ ತರುವ ಜವಾಬ್ದಾರಿಯನ್ನು ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಕಳೆದ ಹಲವಾರು ವರ್ಷಗಳಿಂದ ಪೂರೈಸುತ್ತ ಬಂದಿದೆ. ಅದರ ಭಾಗವಾಗಿ ವೇದಿಕೆಯು ರಚಿಸಿದ್ದ ಅಧ್ಯಯನ ಸಮಿತಿ ಬಾಬಾ–ದತ್ತ ವಿಚಾರಕ್ಕೆ ಸಂಬಂಧಪಟ್ಟಂತೆ ಹಲವಾರು ಸತ್ಯ ಸಂಗತಿಗಳನ್ನು ಹೊರ ತಂದಿದೆ. ಸಂಘಪರಿವಾರ ಸೃಷ್ಟಿಸುವ ಸುಳ್ಳುಗಳಿಗೆ ಜನ ಬಲಿಯಾಗದಂತೆ ನೈಜ ಇತಿಹಾಸವನ್ನು ಜನರ ಮುಂದಿಡುವ ಜವಾಬ್ದಾರಿಯೂ ಜಾತ್ಯಾತೀತ ಶಕ್ತಿಗಳ ಮೇಲಿದೆ.

○ ಶಿವಸುಂದರ್

ಜನ ಆಚರಣೆಗಳ ತುಲನಾತ್ಮಕ ಅಧ್ಯಯನಗಳು ಸಂಘಪರಿವಾರದ ಈ ಯಾವುದೇ ವಾದಗಳಿಗೆ ಹುರುಳಿಲ್ಲವೆಂದು ಸಾಬೀತು ಪಡಿಸುತ್ತದೆ.

ಮೊದಲಿಗೆ ಕಳೆದ ಶತಮಾನದ ಪ್ರಾರಂಭದಿಂದಲೂ ಇರುವ ಲಿಖಿತ ದಾಖಲೆಗಳಲ್ಲಿ ಎಲ್ಲಿಯೂ ದತ್ತಜಯಂತಿಯ ಪ್ರಸ್ತಾಪವಿಲ್ಲ.

೧) ದಿನಾಂಕ ೨೪-೮-೧೯೦೬, ೨೧-೧೨-೧೯೦೭, ೧೫-೪-೧೯೧೬ ದಿನಾಂಕದಂದು ಮೈಸೂರು ಸಂಸ್ಥಾನದ ದಿವಾನರು ಹೊರಡಿಸಿದ ಆದೇಶ ಹಾಗೂ ಉಲ್ಲೇಖಗಳಲ್ಲಿ ಬಾಬಾಬುಡನ್‌ಗಿರಿಯಲ್ಲಿ ನಡೆಯುವ ಉರುಸಿನ ಪ್ರಸ್ತಾಪವಿದೆಯೇ ವಿನಃ ದತ್ತ ಜಯಂತಿಯ ಪ್ರಸ್ತಾಪವಿಲ್ಲ.

೨) ಈ ಹಿಂದಿನ ಬ್ರಿಟೀಷ್ ಉಲ್ಲೇಖಗಳಲ್ಲಿ, ಹಾಗೂ ಕರ್ನಾಟಕದ ಗೆಜೆಟಿಯರ್‌ಗಳಲ್ಲಿ ಗಿರಿಯಲ್ಲಿ ಸಾವಿರಾರು ಜನರು ಉರುಸಿಗೆ ನೆರೆಯುವ ದಾಖಲೆಗಳಿವೆಯಷ್ಟೆ.

೩) ೧೯೨೬, ೨೭ ರಲ್ಲಿ ಮೈಸೂರು ಆಡಳಿತ ವರದಿಯ ಪ್ರಕಟಣೆಯಲ್ಲಿ ಸಹ "ಎಪ್ರಿಲ್ ತಿಂಗಳಲ್ಲಿ ಸಾವಿರಾರು ಜನರು 'ಉರುಸಿಗೆ ಸೇರುತ್ತಾರೆ... ಹಿಂದೂ ಹಾಗೂ ಮುಸ್ಲಿಂ ಶ್ರದ್ಧೆಯ ಎರಡೂ ಧರ್ಮೀಯರು ಭೇಧ ಭಾವವಿಲ್ಲದಂತೆ ಉರುಸ್ ಆಚರಿಸುತ್ತಾರೆ...." ಎಂಬ ದಾಖಲೆಯಿದೆ. ಉರುಸ್ ಅಲ್ಲದೆ ಬೇರಾವ ಧಾರ್ಮಿಕ ಆಚರಣೆಯ ಪ್ರಸ್ತಾಪ ಆ ವರದಿಯಲಿಲ್ಲ.

೪) ೧೯೩೪ ಮೈಸೂರು ಸಂಸ್ಥಾನದ ಮುಜರಾಯಿ ಇಲಾಖೆಯ ಪಟ್ಟಿಯಲ್ಲಿ 'ದತ್ತಪೀಠ' ಎಂಬ ಹೆಸರಿದ್ದರೂ ಧಾರ್ಮಿಕ ಆಚರಣೆಯ ಪ್ರಸ್ತಾಪ ಬಂದಾಗ ಉಲ್ಲೇಖವಿರುವುದು ಉರುಸ್‌ದೇ ವಿನಃ ದತ್ತಜಯಂತಿಯದ್ದಲ್ಲ.

೫) ೧೯೪೭ರ ನಂತರ ೧೯೬೪ ರಲ್ಲಿ ವಕ್ಫ್ ಆಸ್ತಿಗಳ ಪಟ್ಟಿಯಲ್ಲಿ ಈ ದರ್ಗವನ್ನು ಸೇರಿಸುವಾಗಲೂ ಇಲ್ಲಿದ್ದ ಧಾರ್ಮಿಕ ಆಚರಣೆ ಉರುಸಿನದ್ದು ಮಾತ್ರ ಎಂಬ ದಾಖಲೆಯಿದೆ.

೬) ೧೯೭೫ ರಲ್ಲಿ ಈ ದರ್ಗ/ಪೀಠವನ್ನು ಮುಜರಾಯಿ ಇಲಾಖೆಗೆ ಸೇರಿಸಬೇಕೋ ಅಥವಾ ವಕ್ಫ್‌ಗೆ ಸೇರಿಸಬೇಕೋ ಎಂಬ ವಿವಾದ ತಲೆ ಎತ್ತಿದಾಗಲೂ ಇಲ್ಲಿ ನಡೆಯುತ್ತಿದ್ದ ಉರುಸಿಗೆ ಹಿಂದೂ-ಮುಸ್ಲಿಂ ಎರಡೂ ಧರ್ಮೀಯರು ಭಾಗವಹಿಸುತ್ತಾರೆಂಬ ಉಲ್ಲೇಖವಿದೆಯೇ ವಿನಃ ಪ್ರತ್ಯೇಕ ದತ್ತಜಯಂತಿಯ ಪ್ರಸ್ತಾಪವಿಲ್ಲ.

೭)ನಂತರ ೧೯೭೮ರಲ್ಲಿ ನಾಗರಜರಾವ್ ಎಂಬುವರು ಈ "ಪೀಠವನ್ನು" ವಕ್ಫ್‌ನಿಂದ ಮುಜರಾಯಿ ಇಲಾಖೆಗೆ ವರ್ಗಾಯಿಸಬೇಕೆಂಬ ದಾವೆಯನ್ನು ಹೂಡಿದಾಗಲೂ ಅವರ ವಾದ ಉರುಸಿನಲ್ಲಿ ಬಂದ ಆದಾಯವನ್ನು ಪೀಠದ ಪಾಲುಪತ್ತೆಗಾರ ಸಜ್ಜಾದೆ-ನಿಶಾನ್ ರಕ್ತಾದಿಗಳ ಸೌಕರ್ಯಕ್ಕೆ ಬಳಸುತ್ತಿಲ್ಲ ಎಂಬ ಆರೋಪ ಮಾಡಿದರೇ ವಿನಃ ದತ್ತಜಯಂತಿಗೆ ಅವಕಾಶ ನೀಡಬೇಕೆಂಬ ಪ್ರಸ್ತಾಪವೇ ಇರಲಿಲ್ಲ.

೮) ನಂತರ ೧೯೮೦ ರಲ್ಲಿ ಚಿಕ್ಕಮಗಳೂರಿನ ನ್ಯಾಯಲಯ ದರ್ಗಾ/ಪೀಠವನ್ನು ಮುಜರಾಯಿ ಇಲಾಖೆಗೆ ಮರಳಿ ವಶಕ್ಕೆ ಒಪ್ಪಿಸುವಾಗಲು ದತ್ತಜಯಂತಿಯ ಬಗ್ಗೆ ಯಾವುದೇ ಪ್ರಸ್ತಾಪವನ್ನು ಮಾಡಿರಲಿಲ್ಲ.

೯) ೧೯೮೪ ರಲ್ಲಿ ಮತ್ತೆ ಕೆಲವು ಹಿಂದೂ ರಕ್ತಾದಿಗಳು ಸಜ್ಜಾದೆ-ನಿಶಾನ್ ಬಗ್ಗೆ ಡಿಸಿಗೆ ದೂರು ಕೊಟ್ಟಾಗಲು ಅದರ ಸಾರಾಂಶ ಉರುಸ್‌ನಿಂದ ಬರುತ್ತಿದ್ದ ಆದಾಯದ ಕುರಿತಾಗಿಯೇ ಇತ್ತೇ ವಿನಃ ದತ್ತ ಜಯಂತಿಯ ಬಗ್ಗೆ ಅಲ್ಲ.

೧೦) ಎಲ್ಲಕ್ಕಿಂತ ಮುಖ್ಯವಾಗಿ ಉರುಸಿನ ಆದಾಯದ ವಿವಾದದ ಬಗ್ಗೆ ಹೈಕೋರ್ಟು ನೀಡಿದ ತೀರ್ಪಿನನ್ವಯ ೧೯೮೫ರ ಜೂನ್‌ಗೆ ಮೊದಲು ಇದ್ದ ಧಾರ್ಮಿಕ ರೀತಿ-ರಿವಾಜುಗಳ ಬಗ್ಗೆ ೨೫-೨-೧೯೮೯ ರಂದು ಧಾರ್ಮಿಕ ದತ್ತಿ ಆಯುಕ್ತರು ಸಾರ್ವಜನಿಕ ಹೇಳಿಕೆ-ವಿಚಾರಣೆ ನಡೆಸಿದ ನಂತರ ಹೊರಡಿಸಿದ ಆದೇಶದಲ್ಲೂ ದತ್ತಜಯಂತಿಯ ಪ್ರಸ್ತಾಪವಿರಲೇ ಇಲ್ಲ ಆ ಆದೇಶದ ಪ್ರಕಾರ ದರ್ಗಾ ಪೀಠದ ಗರ್ಭಗುಡಿಯಲ್ಲಿ ಸಜ್ಜಾದೆ ನಿಶಾನ್ ನೇಮಿಸಿದ ಮುಜಾವರ್ ನಡೆಸುವ ಪೂಜಾವಿಧಾನವನ್ನು ಹೊರತು ಪಡಿಸಿ ಇನ್ನಾವುದೇ ಬಗೆಯ ಆಗಮಿಕ-ವೈದಿಕ ಪೂಜಾವಿಧಾನಗಳ ಇತಿಹಾಸವೇ ಅಲ್ಲಿರಲಿಲ್ಲ ಹಾಗೂ ನ್ಯಾಯಾಲಯದ ಆದೇಶದಂತೆ ಅದನ್ನು ಹೊಸತಾಗಿ ಪರಿಚಯಿಸುವಂತೆಯೂ ಇಲ್ಲ. ಈ ಆದೇಶವನ್ನೇ ೧೯೯೧ರಲ್ಲಿ ಕರ್ನಾಟಕದ ಉಚ್ಚನ್ಯಾಯಾಲಯ ಹಾಗೂ ಅದೇ ವರ್ಷ ಸುಪ್ರೀಂ ಕೋರ್ಟು ಸಹ ಎತ್ತಿ ಹಿಡಿದಿದೆ.

ಹೀಗಾಗಿ ಗಿರಿಯಲ್ಲಿ ಈ ಆದೇಶಕ್ಕೆ ವಿರುದ್ಧವಾಗಿ ಹೋಮ, ಹವನ ನಡೆಸುವುದಾಗಲೀ, ಆಗಮಿಕ-ವೈದಿಕ ರೀತಿಯ ಪೂಜೆ ನಡೆಸುವುದಾಗಲೀ, ಗರ್ಭಗುಡಿಯಲ್ಲಿ ದತ್ತ ಮೂರ್ತಿ ಸ್ಥಾಪಿಸುವುದಾಗಲೀ, ಹಿಂದೂ ಅರ್ಚಕರ ನೇಮಕಾತಿಯಾಗಲೀ, ನ್ಯಾಯಾದೇಶಗಳ ಸ್ಪಷ್ಟ ಉಲ್ಲಂಘನೆಯಗುತ್ತದೆ.

ಆದರೂ, ದುರಂತವೆಂದರೆ ಈ ಹಿಂದಿನ ಕಾಂಗ್ರೆಸ್-ಜನತಾದಳ ಆಡಳಿತದಲ್ಲೂ, ಈಗಿನ ಸಂಮಿಶ್ರ ಸರ್ಕಾರದ ಆಳ್ವಿಕೆಯಲ್ಲೂ ಈ ಆದೇಶದ ಉಲ್ಲಂಘನೆ ಮಾಡುತ್ತಲೇ ಒಂದೊಂದೇ ಪೂಜಾ ವಿಧಾನಗಳ ಸೇರ್ಪಡೆಯಾಗುತ್ತಿದೆ.

೧೯೮೮ರ ಏಪ್ರಿಲ್ ತಿಂಗಳಲ್ಲಿ ದರ್ಗಾದ ಬಳಿಯ ಗಾಳಿಕೆರೆಯ ಬಳಿ ಒಂದು ದೇವಸ್ಥಾನ ಕಟ್ಟಲು ಸಂಘಪರಿವಾರದವರು ವಿಫಲ ಪ್ರಯತ್ನವೊಂದನ್ನು ನಡೆಸಿದ್ದು ಬಿಟ್ಟರೆ ೧೯೯೨ ವರೆಗೆ ಗಿರಿಯ ಮೇಲೆ ದತ್ತ ಜಯಂತಿಯ ನಡೆಸುವ ಪ್ರಸ್ತಾಪವನ್ನು ಸಂಘಪರಿವಾರದವರೇ ಮುಂದಿಟ್ಟರಲಿಲ್ಲ. ೧೯೯೨ ರಲ್ಲಿ ಪೀಠ ಸಂರಕ್ಷಣಾ ಸಮಿತಿಯ ಹೆಸರಲ್ಲಿ ದತ್ತ ಜಯಂತಿ ನಡೆಸುವ ಬೇಡಿಕೆ ಮುಂದಿಟ್ಟಾಗಲೂ ದತ್ತಿ ಆಯುಕ್ತರ ನಿರ್ದೇಶನದ ಆದೇಶಕ್ಕೆ ಒಳಪಟ್ಟು ನಡೆಸುವುದಾಗಿ ಲಿಖಿತ ಹೇಳಿಕೆ ನೀಡಿದ್ದರು

ಆದರೆ, ೧೯೯೨ರಲ್ಲಿ ಬಾಬ್ರಿ ಮಸೀದಿ ನಾಶದ ನಂತರ ದತ್ತಪೀಠವನ್ನು ಮತ್ತೊಂದು ಅಯೋಧ್ಯೆಯನ್ನಾಗಿ ಮಾಡುವ ಕಾರ್ಯತಂತ್ರದ ಭಾಗವಾಗಿ ೧೯೯೭ರ ನಂತರ ಪ್ರತಿವರ್ಷ ದತ್ತಜಯಂತಿಯನ್ನು ಎಲ್ಲಾ ಆದೇಶಗಳನ್ನು ಉಲ್ಲಂಘಿಸಿ ನಡೆಸುತ್ತಿದ್ದಾರೆ. ೧೯೯೯ರ ನಂತರ ದತ್ತಮಾಲೆ ಅಭಿಯಾನವು ಸೇರಿಕೊಂಡಿದೆ. ಕಳೆದೆರಡು ವರ್ಷಗಳಿಂದ ಪ್ರತಿ ಹುಣ್ಣಿಮೆ-ಭಾನುವಾರದ ಪೂಜೆಗಳು ನಡೆಯುತ್ತಿವೆ. ಮುಜಾವರರನ್ನು ಹೊರಗಟ್ಟಿ ವೈದಿಕ ರೀತಿಯ ಪೂಜೆಗಳನ್ನು ಗರ್ಭಗುಡಿಯಲ್ಲಿ ನಡೆಸಲಾಗುತ್ತಿದೆ. "ಇವುಗಳ ಸುಗಮ ನಿರ್ವಹಣೆಗೆ, ಹಾಗೂ ದತ್ತಮಾಲೆ -ದತ್ತಜಯಂತಿಗೆ ಪೂರಕವಾದ ಸೌಲಭ್ಯ ಕಲ್ಪಸಲೆಂದೇ" ೨೦೦೫ರ ಆಗಸ್ಟ್ ೨೬ ರಂದು "ಜಿಲ್ಲಾಧಿಕಾರಿ ಗಳ ಅಧ್ಯಕ್ಷತೆಯಲ್ಲಿ ಐದು ಜನರ ಸಮಿತಿಯೊಂದನ್ನು" ರಚಿಸಲಾಯಿತು! ಹೀಗೆ ಸರ್ಕಾರವೇ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿ ಸಂಘಪರಿವಾರದ ಕೇಸರೀ ಕರಣದ ಯೋಜನೆಗಳಿಗೆ ಮಾನ್ಯತೆ ಒದಗಿಸುತ್ತಿದೆ.

ಗಿರಿಯಲ್ಲಿನ ಪರಂಪರಾಗತ ಉರುಸ್

ಹೀಗೆ ಸಮಕಾಲೀನ ಹಾಗೂ ಐತಿಹಾಸಿಕ ಲಿಖಿತ ದಾಖಲೆಗಳಲ್ಲೂ ಬಾಬಾಬುಡನ್‌ಗಿರಿಯಲ್ಲಿ ದತ್ತ ಜಯಂತಿಯ ಪ್ರಸ್ತಾಪವೇ ಇಲ್ಲದಿರುವುದು ಸ್ಪಷ್ಟವಾಗಿ ಅರ್ಥವಾಗುತ್ತದೆ, **ದತ್ತಜಯಂತಿಯೆಂಬುದು ೧೯೯೨ ರಿಂದ ಆರಂಭವಾಗಿರುವ ಸಂಘಪರಿವಾರದ ಸೃಷ್ಟಿಯೇ ವಿನಃ ಅದಕ್ಕೆ ಐತಿಹಾಸಿಕತೆ ಇಲ್ಲ!**

ಇನ್ನು ಶಾಸನಗಳಲ್ಲಿ ಇದರಲ್ಲಿ ಉಲ್ಲೇಖವೇನಾದರೂ ಇದೆಯೆ ಎಂದು ಗಮನಿಸಿದರೂ, ಅದಕ್ಕೆ ಪುರಾವೆಗಳಿಲ್ಲ. ಗಿರಿಯಲ್ಲಿ ಈವರೆಗೆ ಮೂರು ಶಾಸನಗಳು

ದೊರೆತಿದ್ದು ಅವೆಲ್ಲವೂ ೧೯ನೇ ಶತಮಾನಕ್ಕೆ ಸಂಬಂಧಿಸಿದ್ದು. ಆ ಮೂರು ಶಾಸನಗಳಲ್ಲೂ ಬಾಬಾಬುಡನ್ ಹಾಗೂ ಆತನ ಗುರು ದಾದ ಹಯಾತ್ ಪೀರ್ ಖಲಂದರ್‌ಗಳ ಪ್ರಸ್ತಾಪವಿದೆ. ಹಾಗೂ ಅವರ ನಾಲ್ಕು ಶಿಷ್ಯರ ಪ್ರಸ್ತಾಪವಿದೆಯೇ ವಿನಃ ಯಾವುದೇ ದತ್ತಜಯಂತಿಯ ಉಲ್ಲೇಖವಿಲ್ಲ. ಹಾಗೆಯೇ ಹೈದರಾಲಿ, ಟಿಪ್ಪು, ಕೆಳದಿ ಚೆನ್ನಮ್ಮ, ಮೈಸೂರು ಒಡೆಯರು ನೀಡಿರುವ ದತ್ತಿ-ದಾನಗಳಿಗೆ ಸಂಬಂಧ ಪಟ್ಟ ಪತ್ರಗಳಲ್ಲೂ ಇಲ್ಲಿ ನಡೆಯುವ ಉರುಸಿನ ಪ್ರಸ್ತಾಪ ವಿದೆಯೇ ವಿನಃ ದತ್ತಜಯಂತಿಯ ಪ್ರಸ್ತಾಪ ಇಲ್ಲ. ಆದ್ದರಿಂದ ಸಂಘಪರಿವಾರದ ಹೊಸ ಚರಿತ್ರೆಗೆ ಶಾಸನದ ಬೆಂಬಲವೂ ಇಲ್ಲ.

ಇವೆಲ್ಲಕ್ಕಿಂತ ಅತಿಮುಖ್ಯವಾದದ್ದು, ಇತಿಹಾಸ ಜನಪದರ ಆಚರಣೆ, ನಂಬಿಕೆಗಳಲ್ಲಿ ವರ್ತಮಾನವಾಗಿ ಬದುಕುವ ರೀತಿ. ಇಡೀ ಚಿಕ್ಕಮಗಳೂರಿನ ಹಾಗೂ ಕರ್ನಾಟಕದ ಜನಪದೀಯ ಗ್ರಹಿಕೆಗಳಲ್ಲಿ ಬಾಬಾಬುಡನ್‌ಗಿರಿಯ ಬಾಬಾ ಪ್ರತಿಸ್ಥಾಪಿತವಾಗಿದ್ದಾರೆಯೇ ವಿನಃ ದತ್ತಾ ತ್ರೇಯನಲ್ಲ. ಅದರರ್ಥ ದತ್ತಾತ್ರೇಯವೆಂಬ ಶ್ರದ್ಧೆಯೇ ಇರಲಿಲ್ಲವೆಂಬುದು. ಉತ್ತರ ಕರ್ನಾಟಕ ಹಾಗೂ ಹೈದರ ಬಾದ್ ಕರ್ನಾಟಕಗಳಲ್ಲೆಲ್ಲ ದತ್ತಾತ್ರೇಯ ಶ್ರದ್ಧೆ ವ್ಯಾಪಕ ವಾಗಿದೆ. ಹಾಗೂ ಅದು ಸೂಫಿ ಸಂತರಿಗೆ ನಡೆದುಕೊಳ್ಳುವ ರೀತಿಯಲ್ಲೂ ಅಭಿವ್ಯಕ್ತಗೊಂಡಿದೆ. ಶಿರಡಿ ಸಾಯಿಬಾಬಾ ಅದಕ್ಕೆ ಒಂದು ಉದಾಹರಣೆ. ಶಿರಡಿ ಸಾಯಿಬಾಬಾ, ತಾನೇ ದತ್ತಾತ್ರೇಯನೆಂದೂ ಘೋಷಿಸಿದ ಬಗೆಗಿನ ಉಪ ಕಥೆಗಳು ಆ ಭಾಗದಲ್ಲಿ ವಿಫುಲವಾಗಿದೆ. ಗಾಣಿಗಾಪುರದ ಮಾಣಿಕಪ್ರಭು ನರಸಿಂಹ ದತ್ತ, ಹುಮನಾಬಾದಿನ ದತ್ತ, ಕುರುವಗಡ್ಡೆಯ ದತ್ತ ಶ್ರೀಪಾದ ವಲ್ಲಭ, ಅಕ್ಕಲಕೋಟೆಯ ದತ್ತ ಸಮರ್ಥ ಇತ್ಯಾದಿ ಕಡೆಗಳಲ್ಲಿ ಮಾರ್ಗಶಿರ ಹುಣ್ಣಿಮೆಯಂದು ದತ್ತ ಜಯಂತಿ ನಡೆಯುವುದೂ ನಿಜವೇ.

ಅಸಲು ಪ್ರಶ್ನೆ ಹುಟ್ಟುವುದೇ ಇಲ್ಲಿ. ರಾಜ್ಯದ ಇತರ ಕಡೆ ಇರುವ ದತ್ತಪೀಠಗಳಲ್ಲಿ ಐತಿಹಾಸಿಕವಾಗಿ ದತ್ತ ಜಯಂತಿ ನಡೆಯುತ್ತಲೇ ಬರುತ್ತಿವೆ. ಗಾಣಿಗಾಪುರದ ನರಸಿಂಹ ದತ್ತನಂತೂ ಮುಸ್ಲಿಂ ಬಹುಮನಿ ದೊರೆ ಇಬ್ರಾಹಿಂ ಷಾನ್ ಅಸ್ಥಾನ ದೈವವೂ ಆಗಿದ್ದು, ಹಿಂದೂ-ಮುಸ್ಲಿಮರಿಬ್ಬರೂ ನಡೆದುಕೊಳ್ಳುತ್ತಾರೆ. ಆದರೆ ಈ ಬಗೆಯ ಸಾಹಾರ್ದ ಆಚರಣೆ ಗಿರಿಯಲ್ಲಿ ಇಲ್ಲದಿರುವುದಕ್ಕೆ ಕಾರಣ ಅಲ್ಲಿ ಇದ್ದದ್ದು ಬಾಬಾನೇ ಹೊರತು ದತ್ತನಲ್ಲವೆಂಬುದೇ ಕಾರಣ. ಹಾಗಿದ್ದರೂ ಈ ದರ್ಗಾವನ್ನು ಬಾಬಾನನ್ನು ಜನರು ದತ್ತನೆಂದು ಏಕೆ ಭಾವಿಸತೊಡಗಿದರೆಂಬುದು ಸಹಜವಾಗಿ ಹುಟ್ಟುವ ಮತ್ತೊಂದು ಪ್ರಶ್ನೆ.

ಅದಕ್ಕೆ ಉತ್ತರ; ವೈದಿಕಶಾಹಿಯ ವಿರುದ್ಧವಾಗಿ ಅವೈದಿಕ ಬಂಡಾಯ ಪಂಥಗಳು ಹುಟ್ಟಿದವೆಂದು ಇತಿಹಾಸದಲ್ಲಿದೆ. ಬೌದ್ಧರ ವಜ್ರಾಯಾನ ಪಂಥ, ನಾಥ ಪಂಥ, ಮಹಾನುಭಾವ ಪಂಥ ಇತ್ಯಾದಿಗಳು ಈ ಬಗೆಯಲ್ಲಿ ವೈದಿಕ ಶಾಹಿಯ ಮಾನವ ವಿರೋಧಿ ಆಚರಣೆಗಳ ವಿರುದ್ಧ ಹುಟ್ಟಿಕೊಂಡ ಜನಪರ ಅನ್ವೇಷಣೆಗಳು. ದತ್ತ ಪಂಥವು ಇಂಥಹುದೇ ಸಂಕ್ರಮಣ ಕಾಲಗಟ್ಟದಲ್ಲಿ ಹುಟ್ಟಿ ಕೊಂಡಿದೆ. ಮೂಲಭೂತವಾಗಿ ದತ್ತಪಂಥದ ವೈದಿಕ ಶಾಹಿ ವಿರೋಧಿ ಸ್ವರೂಪ ನಾಲ್ಕು ವೇದಗಳನ್ನು ನಾಯಿಗಳನ್ನಾಗಿ ಮಾಡಿಕೊಂಡಿರುವುರಲ್ಲಿ ವ್ಯಕ್ತವಾಗುತ್ತದೆ.

ಫಳಾರ ಮಠದ ಭೈರವ

ವೈದಿಕಶಾಹಿಯ ವಿರುದ್ಧವಾಗಿ ಅವೈದಿಕ ಬಂಡಾಯ ಪಂಥಗಳು ಹುಟ್ಟಿದವೆಂದು ಇತಿಹಾಸದಲ್ಲಿದೆ. ಬೌದ್ಧರ ವಜ್ರಾಯಾನ ಪಂಥ, ನಾಥ ಪಂಥ, ಮಹಾನುಭಾವ ಪಂಥ ಇತ್ಯಾದಿಗಳು ಈ ಬಗೆಯಲ್ಲಿ ವೈದಿಕ ಶಾಹಿಯ ಮಾನವ ವಿರೋಧಿ ಆಚರಣೆಗಳ ವಿರುದ್ಧ ಹುಟ್ಟಿಕೊಂಡ ಜನಪರ ಅನ್ವೇಷಣೆಗಳು. ದತ್ತ ಪಂಥವು ಇಂಥಹುದೇ ಸಂಕ್ರಮಣ ಕಾಲಗಟ್ಟದಲ್ಲಿ ಹುಟ್ಟಿ ಕೊಂಡಿದೆ. ಮೂಲಭೂತವಾಗಿ ದತ್ತಪಂಥದ ವೈದಿಕಶಾಹಿ ವಿರೋಧಿ ಸ್ವರೂಪ ನಾಲ್ಕು ವೇದಗಳನ್ನು ನಾಯಿಗಳನ್ನಾಗಿ ಮಾಡಿಕೊಂಡಿರುವುರಲ್ಲಿ ವ್ಯಕ್ತವಾಗುತ್ತದೆ.



ಬಿಸಗ್ನಿ ಮಠ

ಅದೇ ಕಾಲಘಟ್ಟದಲ್ಲಿ, ಇಸ್ಲಾಮಿನ ಸ್ಥಾವರೀಕರಣದ ವಿರುದ್ಧ ಹುಟ್ಟಿಕೊಂಡ, ಮನುಷ್ಯ ಪ್ರೇಮದ ಸಂದೇಶ ಹೊತ್ತ ಸೂಫಿ ಪಂಥವು ಈ ಪ್ರದೇಶದಲ್ಲಿ ಪ್ರವೇಶವಾಗುತ್ತದೆ. ಮನುಷ್ಯ ಪ್ರೇಮ ಹಾಗೂ ವೈದಿಕ ಪುರೋಹಿತಶಾಹಿ ವಿರೋಧಿ ಆಶಯಗಳುಳ್ಳ ಈ ಎರಡೂ ಪಂಥಗಳ ಸಂಯೋಗ ಬಹಳ ಸಹಜವಾಗಿ ಸಂಭವಿಸಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಸೂಫಿ ಹಾಗೂ ಈ ಬಗೆಯ ವೈದಿಕ ಶಾಹಿ ವಿರೋಧಿ ಪಂಥಗಳ ನಡುವೆ ಗುರುಶಿಷ್ಯ ಸಂಬಂಧವೇ ಹುಟ್ಟಿಕೊಂಡಿರುವುದನ್ನು ದೇಶದ ಹಲವು ಭಾಗಗಳಲ್ಲೂ ಕರ್ನಾಟದಲ್ಲೂ ಕಾಣಬಹುದು. ಬಂದೇನವಾಜ್-ಸಿದ್ದಪ್ಪ, ನಾಸಿರುದ್ದೀನ್-ಹೆಗ್ರಾಸಸ್ವಾಮಿ, ಷೇಕ್‌ಇಬ್ರಾಹಿಂ-ಗುರುನಾನಾಕ್, ಕೂಡಲೂರು ಸಿದ್ದಪ್ಪ-ಸಾಹಿಬಣ್ಣ ತಾತ, ರುಕ್ಮಾಂಗದ ಪಂಡಿತ-ಇಬ್ರಾಹಿಂ ಆದಿಲ್ ಶಾಹಿ- ಈ ಬಗೆಯ ಗುರು-ಶಿಷ್ಯ ಪರಂಪರೆಗೆ ಕೆಲವು ಉದಾಹರಣೆಗಳು. ಒಬ್ಬನೇ ಗುರುವನ್ನು ಹಿಂದೂ-ಮುಸ್ಲಿಮರು ಎರಡಾಗಿ ರೂಪಾಂತರಿಸಿಕೊಂಡು ಪರಿಭಾವಿಸಿಕೊಂಡಿರುವ ಉದಾಹರಣೆಗಳು ಇತಿಹಾಸದಲ್ಲಿ ದಟ್ಟವಾಗಿವೆ. ಉದಾಹರಣೆಗೆ ನಾಸಿರುದ್ದೀನ್‌ರನ್ನು ನಾಗನಾಥನೆಂದೂ, ಬಂದೇನವಾಜರನ್ನು ಕೇಶವ ಚೈತನ್ಯನೆಂದೂ, ಆಲಿ-ಆದಿಲ್ ಶಾನನ್ನು-ಶಾ ಆಲಮಪ್ರಭುವೆಂದು ಜಾಂಗ್‌ಪೀರ್‌ನನ್ನು ಜಾಂಗ್‌ದೇವನೆಂದು, ಸಂಗಮೇಶ್ವರನನ್ನು ಆದಂಪೀರ್‌ನೆಂದು ಪರಿಭಾವಿಸಿಕೊಂಡು ಯಾವುದೇ ವೈ ಮನಸ್ಸಗಳಿಲ್ಲದೆ ಏಕಕಾಲದಲ್ಲಿ ಆರಾಧಿಸುತ್ತಲೇ ಬಂದಿರುವ ಪರಂಪರೆ ನಮ್ಮದು. ಹೀಗಾಗಿ ಬಾಬಾಬುಡನ್‌ರನ್ನೇ ಅವೈದಿಕ ಜನಸಮುದಾಯ ದತ್ತಾತ್ರೇಯನೆಂದು ಪರಿಭಾವಿಸಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಸಂದೇಹವೂ ಇಲ್ಲ.

ವಾಸ್ತವವಾಗಿ ಚಿಕ್ಕಮಗಳೂರಿನ ಒಕ್ಕಲಿಕ ಹಾಗೂ ಶೂದ್ರ ಸಮುದಾಯ ಮೂಲಭೂತವಾಗಿ ವೈದಿಕ ಶಾಹಿ ವಿರೋಧಿ ಭೈರವ ಪಂಥೀಯರೆಂದು ಇತ್ತೀಚಿನ ಸಂಶೋದನೆಗಳು ಹೇಳುತ್ತವೆ ಅದಕ್ಕೆ ತಕ್ಕ ಹಾಗೆ ಗಿರಿಯ ೨೦ ಕಿ.ಮಿ. ದೂರದಲ್ಲಿ ಆದಿಗದ್ದುಗೆ ದತ್ತಾತ್ರೇಯ ಫಳಾರ ಮಠದಲ್ಲಿ ಭೈರವ ಮೂರ್ತಿಯೂ, ಮೂರು ಕಿ.ಮಿ. ದೂರದಲ್ಲಿ ಆದಿ ಗದ್ದುಗೆ ದತ್ತತ್ರೇಯ ಬಿಸಗ್ನಿ ಮಠದಲ್ಲಿ ವೀರಭದ್ರನ ಮೂರ್ತಿಯೂ ಇದೆ. ಇವೆರಡೂ ಕಡೆ ಪ್ರಾಣಿ ಬಲಿ ಪೂಜಾವಿಧಾನಗಳೂ ಅಸ್ತಿತ್ವದಲ್ಲಿವೆ. ಇವೆರಡರ ಮಾರ್ಗ ಮಧ್ಯದಲ್ಲಿ ಗಿರಿಯ ದರ್ಗಾ ಬರುತ್ತದೆ. ಇನ್ನೂ ಕೆಲವು ಇತಿಹಾಸಕಾರರ ಪ್ರಕಾರ ಆಗ ಗುಹೆಯಲ್ಲಿ ನಡೆಯುತ್ತಿದ್ದ ನರಬಲಿಯನ್ನು ಹಾಗೂ ಇತರ ಪಾಳೇಗಾರರ ಉಪಟಳವನ್ನು ಬಾಬಾಬುಡನ್ ಯಶಸ್ವಿಯಾಗಿ ತಡೆದದ್ದರಿಂದ ಆತನನ್ನು ಅವಧೂತನಂತೆ ಶೂದ್ರ ಸಮುದಾಯ ಪರಿಭಾವಿಸಿ 'ದಾದಾಹಯಾತ್'ನನ್ನೇ ದತ್ತಾತ್ರೇಯನೆಂದು ಪರಿಭಾವಿಸಿದರೆಂದು ತಿಳಿಸುತ್ತದೆ.

ಹೇಗೆ ನೋಡಿದರೂ ವೈದಿಕಶಾಹಿ ವಿರೋಧಿ ದತ್ತನನ್ನು-ಅವಧೂತನನ್ನು ಶೋಷಿತ ಜನತೆ ಬಾಬಾಬುಡನ್‌ನಲ್ಲಿ ಕಂಡುಕೊಂಡಿದ್ದಾರೆ. ಹಾಗೂ ಸಂಘಪರಿವಾರದವರು ಇಂದು ಅವೆರಡೂ ಶೋಷಿತ ಜನತೆಯ ಸಂಕೇತಗಳ ಮೇಲೂ ದಾಳಿ ನಡೆಸಿದ್ದಾರೆ.

ಆದ್ದರಿಂದಲೇ ಸಂಘ ಪರಿವಾರದ ಬ್ರಾಹ್ಮಣೀಯ ದಾಳಿಯಿಂದ ಬಾಬಾ ಹಾಗೂ ದತ್ತ ಇಬ್ಬರನ್ನೂ ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. □

ಮಾಯಾ ದರ್ಪಣದ ಮುಖ



ಇಲ್ಲಿ
ಯಾರ ಮುಖದಲ್ಲಾದರೂ
ನಗು ಮೆತ್ತಿಕೊಂಡಿದ್ದರೆ
ಅದನ್ನು ಗಾಳಿ ಎನ್ನಿ;
ಮೋಡವೆನ್ನಿ
ಕೊನೆಗೆ ಬೆಳದಿಂಗಳೆನ್ನಿ



ಮಾಯಾ ದರ್ಪಣದಲ್ಲಿ
ಕಳೆದು ಹೋದ
ಮುಖ ಸಿಕ್ಕರೆ
ಅದನ್ನು ಮುಖವಾಡವೆನ್ನಿ

ಎಲ್ಲೋ ಸಿಕ್ಕವರು
ಮತ್ತೆಲ್ಲೋ ಕಳೆದು ಹೋದವರು
ಮಾಯಾ ದರ್ಪಣಕ್ಕೂ ದಕ್ಕದವರು
ನಮ್ಮೆಳಗೆ ಅಗಂತುಕರಾರಿ
ಅಡಗಿ ಕೂತಿರುಬಹುದು!

ಅಥವಾ ಬೆಂದ ಇರುಳಲ್ಲಿ
ದೊಂದಿ ಹಿಡಿದು
ಬೆಳಕು ಹುಡುಕುತ್ತಿರಬಹುದು!

ಎರಡು ಕವನಗಳು
ಉಗಮ ಶ್ರೀನಿವಾಸ್

ಮಳೆ ಮಂಟಪದ ಹಕ್ಕಿಗಳು



ಮಳೆ ಮಂಟಪದೊಳಗೆ
ಅಡಗಿ ಕೂತ ಹಕ್ಕಿಗಳಿಗೆ
ಗೂಡು ಸೇರುವ ತವಕ.

ನಿಜಕ್ಕೂ ಮಳೆ
ಪಾರದರ್ಶಕ
ಗಾಜಿನಂತೆ.ಬೆಳೆಯುತ್ತಿದ್ದ ಮಳೆ–
ಮಂಟಪದೊಳಗೆ
ಮತ್ತಷ್ಟು ಅವಡುಗಚ್ಚಿಕೊಳ್ಳುತ್ತವೆ
ಮತ್ತವೇ ಹಕ್ಕಿಗಳು!

ಮಳೆ ತನ್ನ ಪಾಡಿಗೆ
ಸುರಿಯುತ್ತಲೇ ಇದೆ
ಆದರೂ... ಹಕ್ಕಿಗಳಿಗೆ
ಗೂಡು ಸೇರುವ ತವಕ

ಗಾಳಿ ಬೀದಿಯ ಹಕ್ಕಿ
ಜಾಡನ್ನು ಮಳೆ ನುಂಗಿ ಹಾಕಿತ್ತೋ?
ಅಥವಾ ದಾರಿಯನ್ನು ಮಂಜಾಗಿಸಿತ್ತೋ!

ದಲಿತತ್ವ ಮತ್ತು ಬುದ್ಧತ್ವದ ಸಾಂಸ್ಕೃತಿಕ ರಾಜಕಾರಣ

ಜಿಜ್ಞಾಸೆ

ದಲಿತತ್ವ ಎಂದರೆ ಸಾಂಸ್ಕೃತಿಕವಾಗಿ, ಬಹು ಅನನ್ಯತೆಗಳ ಬೃಹತ್ ಒಕ್ಕೂಟ, ಈ ಬೃಹತ್ ಒಕ್ಕೂಟವು ತನಗೆ ಮಾತ್ರವೆ ವಿಶಿಷ್ಟ ಎನಿಸುವ ಚಹರೆಯನ್ನು ಅಳವಡಿಸಿ ಕೊಂಡಿರುತ್ತದೆ. ಒಂದೊಂದು ಸಮುದಾಯವು ತಮ್ಮ ಅಸ್ತಿತ್ವದ ಕಾರಣಕ್ಕಾಗಿ ಸಾಮಾಜಿಕವಾದ ಗಡಿಗಳನ್ನು ರೂಡಿಸಿಕೊಂಡಿರುತ್ತವೆ. ಒಂದು ಸಮುದಾಯ ಮತ್ತೊಂದು ಸಮುದಾಯದ ಜೊತೆ ನಿರ್ಧಿಷ್ಟವಾದ Space ಮತ್ತು Functionಗಳನ್ನು ನಿರ್ಧರಿಸಿ ಕೊಂಡಿರುತ್ತವೆ. ಹೀಗಾಗಿಯೆ ಒಂದು ಸಮುದಾಯ ಮತ್ತೊಂದು ಸಮುದಾಯದ ಒಳಹೊರ ಅಂತರಗಳನ್ನು ಸದಾ ಕಟ್ಟೆಚ್ಚರದಿಂದ ನಿಭಾಯಿಸಿ ಕೊಂಡು ಸಾಗುತ್ತಿರುತ್ತವೆ. ಸ್ವ ಅನನ್ಯತೆಯು ಈ ಸಮುದಾಯಗಳಿಗೆ ಸ್ವತಂತ್ರ್ಯವನ್ನು ಮತ್ತು ತನ್ನ ಮಿತಿಯನ್ನು ಏಕ ಕಾಲಕ್ಕೆ ತೀರ್ಮಾನಿಸುವಂತಿರುತ್ತದೆ.

○ಡಾ|| ಮೊಗಳ್ಳಿ ಗಣೇಶ್

ದಲಿತತ್ವ ಎಂಬ ಪರಿಕಲ್ಪನೆ ತೀರ ಇತ್ತೀಚಿನ ನುಡಿಗಟ್ಟಿನಂತೆ ಕಂಡು ಬಂದರೂ ಅದರ ತಾತ್ವಿಕ ಬೇರು ಪ್ರಾಚೀನ ಭಾರತದ ನೆಲೆಯಿಂದಲೂ ಆರಂಭಗೊಂಡಿದೆ. ವೈದಿಕ ಪೂರ್ವ ಭಾರತದ ಜನಪದಗಳು ಚದುರಿಹೋಗಿದ್ದವು. ಈ ಜನಪದಗಳು ನಿಸರ್ಗರಾಧನೆಯಲ್ಲಿ ತಮ್ಮ ಅಸ್ತಿತ್ವವನ್ನು ಕಂಡುಕೊಂಡಿದ್ದವು. ಮಂತ್ರ ವಿದ್ಯೆಯು ಪ್ರಾಚೀನ ಸಮುದಾಯಗಳ ಆಲೋಚನಾಕ್ರಮದಲ್ಲಿ ಪ್ರಧಾನವಾಗಿ ಬೆಸೆದುಕೊಂಡಿದ್ದವು. ಮಾತೃದೇವತಾರಾಧನೆಯು ಅನಂತರದ ಕಾಲದಲ್ಲಿ ಇಂತಹ ಚದುರಿದ ಗುಂಪುಗಳಲ್ಲಿ ಬಹುರೂಪಿಯಾಗಿ ವಿಸ್ತರಿಸಿಕೊಂಡಿದೆ. ದಲಿತ್ವದ ಪರಿಕಲ್ಪನೆಯನ್ನು ಈ ಬಗೆಯ ಸಾಂಸ್ಕೃತಿಕವಾದ ನೆಲೆಯಿಂದಲೂ ತಿಳಿಯಬಹುದು. ದಲಿತ ಸಮುದಾಯಗಳ ಆಳದ ಪ್ರಜ್ಞೆಯಲ್ಲಿ ಇಂದಿಗೂ ವೈದಿಕ ಪೂರ್ವ ಯುಗದ ಜೀವನ ಮೌಲ್ಯಗಳು ಉಳಿದುಕೊಂಡಿವೆ.

ದಲಿತತ್ವ ಎಂದರೆ ಸಾಂಸ್ಕೃತಿಕವಾಗಿ, ಬಹು ಅನನ್ಯತೆಗಳ ಬೃಹತ್ ಒಕ್ಕೂಟ, ಈ ಬೃಹತ್ ಒಕ್ಕೂಟವು ತನಗೆ ಮಾತ್ರವೆ ವಿಶಿಷ್ಟ ಎನಿಸುವ ಚಹರೆಯನ್ನು ಅಳವಡಿಸಿಕೊಂಡಿರುತ್ತದೆ. ಒಂದೊಂದು ಸಮುದಾಯವು ತಮ್ಮ ಅಸ್ತಿತ್ವದ ಕಾರಣಕ್ಕಾಗಿ ಸಾಮಾಜಿಕವಾದ ಗಡಿಗಳನ್ನು ರೂಡಿಸಿಕೊಂಡಿರುತ್ತವೆ. ಒಂದು ಸಮುದಾಯ ಮತ್ತೊಂದು ಸಮುದಾಯದ ಜೊತೆ ನಿರ್ಧಿಷ್ಟವಾದ Space ಮತ್ತು Functionಗಳನ್ನು ನಿರ್ಧರಿಸಿಕೊಂಡಿರುತ್ತವೆ. ಹೀಗಾಗಿಯೆ ಒಂದು ಸಮುದಾಯ ಮತ್ತೊಂದು ಸಮುದಾಯದ ಒಳಹೊರ ಅಂತರಗಳನ್ನು ಸದಾ ಕಟ್ಟೆಚ್ಚರದಿಂದ ನಿಭಾಯಿಸಿಕೊಂಡು ಸಾಗುತ್ತಿರುತ್ತವೆ. ಇದು ದಲಿತ ಸಮುದಾಯಗಳ ವಿಶೇಷ ಗುಣ. ಪರೋಕ್ಷವಾಗಿ ಸ್ವಯಂ ನಿಯಂತ್ರಣ ವ್ಯವಸ್ಥೆ. ಇದು ಜಾತಿ ರಚನೆಯ ಶ್ರೇಣೀಕರಣಕ್ಕಿಂತ ಭಿನ್ನ. ಸ್ವ ಅನನ್ಯತೆಯು ಈ ಸಮುದಾಯಗಳಿಗೆ ಸ್ವತಂತ್ರ್ಯವನ್ನು ಮತ್ತು ತನ್ನ ಮಿತಿಯನ್ನು ಏಕ ಕಾಲಕ್ಕೆ ತೀರ್ಮಾನಿಸುವಂತಿರುತ್ತದೆ. ಬಹು ಅನನ್ಯತೆಗಳು ಹೊರ ಕವಚದಲ್ಲಿ ತುಂಬ ಬಲಿಷ್ಟವಿದ್ದಂತೆ ತೋರುವುದು ದಿಟ. ಒಳರಚನೆಯಲ್ಲಿ ದಲಿತ ಸಮುದಾಯಗಳು ದೂರವಿದ್ದುಕೊಂಡೇ ತಮ್ಮ ತಮ್ಮ ರಕ್ಷಣೆಯ ಕ್ರಮಗಳನ್ನು ಜಾಗೃತವಾಗಿರಿಸಿ ಕೊಂಡಿರುತ್ತವೆ. ನಿಸರ್ಗವನ್ನು ಆರಾಧಿಸುವ ಮಾಂತ್ರಿಕ ಪದ್ಧತಿಯ ಸಾಂಸ್ಕೃತಿಕ ರೀತಿನೀತಿಗಳು ಬಹುಪಾಲು ಈ ಎಲ್ಲ ದಲಿತ ಸಮುದಾಯಗಳನ್ನು ತಾತ್ವಿಕವಾದ ತಳಹದಿಯಾಗಿರುತ್ತದೆ.



ಇದರಿಂದಾಗಿ ಸಾಂಸ್ಕೃತಿಕವಾದ ಲೋಕದಲ್ಲಿ ದಲಿತ ಸಮುದಾಯಗಳು ಒಂದೇ ತತ್ವಕ್ಕೆ ಬದ್ಧವಾದರೂ ಆರ್ಥಿಕ ಹಾಗೂ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಭಿನ್ನವಾದ ಮನೋಧರ್ಮಕ್ಕೆ ಒಳಪಟ್ಟಿರುತ್ತವೆ. ವಕ್ಕಲು ಕಸುಬುಗಳಲ್ಲಿ ಸಾಂಸ್ಕೃತಿಕವಾದ ಒಪ್ಪಂದಗಳು ಯಾವ ಅಡೆತಡೆಯೂ ಇಲ್ಲದಂತೆ ಏರ್ಪಟ್ಟರು; ಯಾವುದೆ ಬಗೆಯ ಆಸ್ತಿ ಹಾಗೂ ಅಧಿಕಾರದ ಸಂದರ್ಭದಲ್ಲಿ ವೈರುಧ್ಯ ಸಂಬಂಧಗಳೂ ತಂತಾನೆ ಎದುರಾಗಿ ರಾಜಕೀಯವಾಗಿ ಅಸಂಘಟಿತ ಬಿಡಿ ಗುಂಪುಗಳಾಗಿಯೆ ಉಳಿದುಬಿಡುತ್ತವೆ. ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರು ದಲಿತ ಸಮುದಾಯಗಳ ಇಂತಹ ವೈಚಿತ್ರ್ಯದ ಒಪ್ಪಂದಗಳನ್ನು ಬಲ್ಲವರಾಗಿದ್ದರಿಂದಲೆ ಇಡೀ ದಲಿತ ಸಮುದಾಯದ ಸಬಲೀಕರಣಕ್ಕೆ ಪೂರಕವಾದ ಸಂವಿಧಾನಬದ್ಧ ಪರ್ಯಾಯಗಳನ್ನು ರೂಪಿಸಿದರು. ದಲಿತ ಸಂಸ್ಕೃತಿಯ ತಿರುಳಿನಲ್ಲಿ ಅನ್ಯತೆಯ ಸಂವೇದನೆ ಕಡಿಮೆ ಇದ್ದರೂ ಕೂಡ ಆಧುನಿಕ ಭಾರತದ ರಾಜಕೀಯ ಪರಿಸರ ಹಾಗೂ ಅಧಿಕಾರದ ರಚನೆಯಲ್ಲಿ ಬಲಿಷ್ಟ ಸಮುದಾಯಗಳು ದಲಿತ ಸಮುದಾಯಗಳನ್ನು ನಿರ್ಣಾಯಕವಾಗಿ ಖರೀದಿಸುವ ಬಲವನ್ನು ಹೊಂದಿರುತ್ತವೆ. ಇದರಿಂದಾಗಿ ಸ್ವಾತಂತ್ರ್ಯವಿದ್ದೂ ದಲಿತ ಸಮುದಾಯಗಳು ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿರುತ್ತವೆ. ಅಂದರೆ ದಲಿತತ್ವದ ಆಳದ ಸಮಷ್ಠಿ ಪ್ರಜ್ಞೆಯು ಆಧುನಿಕ ರಾಜಕಾರಣ ಮತ್ತು ಆರ್ಥಿಕ ಸಂಬಂಧಗಳಲ್ಲಿ ಭಗ್ನಗೊಳ್ಳುತ್ತವೆ ಆ ಭಗ್ನತೆಯನ್ನೆ ತನ್ನ ರಾಜಕೀಯ ಮೀಸಲಾತಿಯಾಗಿ ಬಳಸಿಕೊಳ್ಳುವ ವಿಪರ್ಯಾಸವಿದೆ.

ಇಂತಹ ವೈರುಧ್ಯಗಳ ರಾಜಕೀಯಾರ್ಥಿಕ ಒಪ್ಪಂದಗಳ ನಡುವೆಯೆ ಇಂದು ದಲಿತ ಸಮುದಾಯಗಳು ಅಸ್ತಿತ್ವಕ್ಕಾಗಿ ಹೋರಾಡುತ್ತಿವೆ. ಇದು ನ್ಯಾಯ ಕೇಳುತ್ತವೆ ನ್ಯಾಯವನ್ನು ಕಳೆದುಕೊಳ್ಳುವ ಅಥವಾ ನ್ಯಾಯದ ವ್ಯಾಪ್ತಿಯನ್ನು ಕಿರಿದು ಗೊಳಿಸಿಕೊಳ್ಳುತ್ತಾ ಸಾಗಿ ಕೊನೆಗೆ ವ್ಯಕ್ತಿ ನಿಷ್ಠ ನ್ಯಾಯದ ತೃಪ್ತಿಯಲ್ಲಿ ಸಮುದಾಯದ ಸಮಷ್ಠಿ ಹಿತವನ್ನು ಕಳಿದು ಕೊಳ್ಳುವಂತೆ ಜಾಲದ ಜೊತೆ ಸ್ನೇಹ ಮಾಡಿಕೊಳ್ಳುವ ಅನಿವಾರ್ಯತೆಯನ್ನು ತೋರುತ್ತದೆ. ಸ್ವಾತಂತ್ರ್ಯನಂತರದ ದಲಿತ ಸಮುದಾಯಗಳ ಎಚ್ಚರವು ಇಂತಹ ವೈರುಧ್ಯಗಳಲ್ಲೆ ಸಾಗುತ್ತ ಬಂದಿದ್ದು ಕಾಲಕಾಲದ ಆಳ್ವಿಕೆಗಳು ದಲಿತತ್ವದ ಸಮಗ್ರ ಶಕ್ತಿಯನ್ನು ತಮಗೆ ಬೇಕಾದಂತಲ್ಲ ಬಳಸಿ ಬಳಸಿ ಆ ಶಕ್ತಿಯೆ ಅಪಮೌಲ್ಯಕ್ಕೆ ಒಳಗಾಗುವಂತೆ ಮಾಡಿವೆ.

ಬೃಹತ್ ಅನನ್ಯತೆಯನ್ನು ಸಾಧಿಸಬಹುದಾಗಿದ್ದ ದಲಿತ ಸಮುದಾಯಗಳು ಈ ದಾರಿಯಲ್ಲಿ ಪ್ರತಿ ದಶಕದಿಂದಲು ಕಿರುದುಗೊಳಿಸುವುದರಲ್ಲೆ ತಾವು ಪ್ರಧಾನ ಧಾರೆಯಲ್ಲಿ ಗುರುತಿಸಿಕೊಳ್ಳುತ್ತಿದ್ದೇವೆ ಎಂಬ ತೃಪ್ತಿಯನ್ನು ಪಡುತ್ತಿರುತ್ತವೆ. ಇದರಿಂದ ತೀರ ಅಂಚಿನ ಅಲಕ್ಷಕ ಗುಂಪುಗಳು ತಮ್ಮ ಅವಕಾಶವನ್ನು ರೂಪಿಸಿಕೊಳ್ಳಲು ಸಾಧ್ಯವಾಗಿದ್ದರೂ ಇದು ಮತ್ತೆ ಮತ್ತೆ ಸಮುದಾಯಗಳು

ಅನನ್ಯತೆಯ ಗೋಡೆಗಳನ್ನು ಕಟ್ಟಿಕೊಳ್ಳುವಂತೆ ಜಾಲ ರೂಪಿಸಿದೆ.

ಇಂತಹ ಸ್ಥಿತಿಯಲ್ಲಿ ಅಂಬೇಡ್ಕರ್‌ವಾದವು ಒಂದೊಂದು ಗುಂಪಿನ ಅಗತ್ಯಕ್ಕೆ ತಕ್ಕಂತೆ ಬಳಕೆಯಾಗಿ ಅದರ ಸಮಗ್ರದರ್ಶನವೇ ಕಾಣದಂತಾಗಿದೆ. ದಲಿತತ್ವದ ಪ್ರಾಚೀನ ರೂಪವು ಹೆಚ್ಚಾಗಿ ಸಂಸ್ಕೃತಿ ನಿಷ್ಠವಾಗಿದ್ದರೆ ಇವತ್ತಿನ ವರ್ತಮಾನದ ಸ್ಥಿತಿಯಲ್ಲಿ ಇದೇ ದಲಿತತ್ವದ ಅರ್ಥವು ರಾಜಕೀಯಾರ್ಥಿಕ ಪ್ರಶ್ನೆಗಳ ಮೂಲಕ ತನ್ನ ಅಸ್ತಿತ್ವವನ್ನು ಸಾಧಿಸಿಕೊಳ್ಳಲು ಯತ್ನಿಸುತ್ತದೆ. ಆಧುನಿಕ ಜಗತ್ತಿನ ಎಲ್ಲ ಬಗೆಯ ಜರೂರುಗಳ ಪ್ರವಾಹದಲ್ಲಿ ದಲಿತತ್ವದ ಸಾಂಸ್ಕೃತಿಕ ಮೌಲ್ಯಗಳು ಜಾರಿಹೋಗುತ್ತಿರುತ್ತವೆ. ಆದರೆ ಇಂತಹ ಸಮುದಾಯಗಳಿಗೆ ಆಧುನಿಕ ಜಗತ್ತಿನಲ್ಲಿ ಯಾವ ಬಗೆಯ ಚಹರೆ ಇರಬೇಕು ಎಂಬುದನ್ನು ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ತಮ್ಮ ಚೌಕಟ್ಟಿನಲ್ಲಿ ಆಳವಾಗಿ ಚಿಂತಿಸಿದ್ದಾರೆ. ಗಾಂಧೀಜಿ ಮತ್ತು ಅಂಬೇಡ್ಕರ್ ಇಬ್ಬರೂ ಸ್ವಾತಂತ್ರ್ಯ ಮತ್ತು ಸಮಾನತೆಯ ಬಗ್ಗೆ ಮಂಡಿಸಿದ ಚಿಂತನೆಗಳು ವೈರುಧ್ಯದಂತೆ ಕಂಡರೂ ಇವರಿಬ್ಬರ ಆಲೋಚನೆಗಳನ್ನು ಅರಗಿಸಿಕೊಳ್ಳಲಾರದ ಇವತ್ತಿನ ದಲಿತ ಸಮುದಾಯಗಳು ಕವಲುದಾರಿಯಲ್ಲಿ ಸಾಗುತ್ತಿರುವುದು ಇಡೀ ದಲಿತತ್ವದ ಸಮಗ್ರ ಕಲ್ಪನೆಯನ್ನೆ ಪ್ರಶ್ನಿಸುತ್ತಿವೆ.

ಸ್ವಾತಂತ್ರ್ಯ ಮತ್ತು ರಾಜಕೀಯ ಸಮಾನತೆಯನ್ನು ಆರ್ಥಿಕ ಪರಿಭಾಷೆಗಳಲ್ಲಿ ಕೇಳುತ್ತಿರುವ ಇವತ್ತಿನ ದಲಿತತ್ವದ ತಿರುಳಿನಲ್ಲಿ ಸಂಯುಕ್ತ ನ್ಯಾಯಕ್ಕಿಂತ ವಿಭಜಿತ ಸಮಾನತೆಯೆ ದಟ್ಟವಾಗಿದೆ. ವಿಭಜಿತ ಸಮಾನತೆಯು ಬಹುರೂಪಿ ಸಮಾಜದಲ್ಲಿ ಎಂದೆಂದಿಗೂ ಅಸಾಧ್ಯ ಹಾಗೂ ನ್ಯಾಯೋಚಿತವಲ್ಲದ್ದು. ಇದು ಮತ್ತೆ ಜಾತಿ ವರ್ಗ ವರ್ಣ ಲಿಂಗ ತಾರತಮ್ಯಗಳನ್ನು ಪ್ರಜಾಪ್ರಭುತ್ವದ ಸುಂದರ ಮೌಲ್ಯಗಳಲ್ಲೆ ಆಧುನೀಕರಿಸಿಬಿಡುತ್ತದೆ ಇಂತಲ್ಲ ಶೋಷಣೆಯ ಹೊಸ ಬಗೆಯ ರೂಪಗಳು ಬುದ್ಧಿ ಪೂರ್ವಕ ಕೌಶಲ್ಯದಿಂದ ಎಲ್ಲ ರಂಗಗಳಲ್ಲಿ ಮತ್ತೆ ಹೊಸದಾಗಿ ಬೇರು ಬಿಟ್ಟು ಬಲಗೊಳ್ಳುತ್ತವೆ. ವ್ಯವಸ್ಥೆಯು ಇಂತಹ ಹೊಸ ರೂಪಗಳಲ್ಲಿ ಹೊಡೆದು ಆಳುವ ನೀತಿಯನ್ನು ಯಶಸ್ವಿಯಾಗಿ ಮಾಡಲು ಅವಕಾಶ ಸುಲಭವಾಗುತ್ತದೆ. ದಲಿತ ಸಮುದಾಯಗಳನ್ನು ರಾಜಕೀಯವಾಗಿ ವಿಂಗಡಿಸುವಲ್ಲಿಯೂ ಇಂತಹ ಅಪಾಯವಿದೆ.

ಸಾಂಸ್ಕೃತಿಕವಾಗಿದಲ್ಲಿ ತತ್ವವನ್ನು ವ್ಯಾಖ್ಯಾನಿಸುವುದು ರಮ್ಯ ವೈಚಾರಿಕತೆಗೆ ಬಹಳ ಸುಲಭ ಅದರ ಗತಕಾಲದ ಸಾಂಸ್ಕೃತಿಕ ನಂಬಿಕೆಗಳ ಮೂಲಕ ದಲಿತ ಅಥವಾ ದಲಿತತ್ವ, ದಲಿತ ಸಂವೇದನೆಯಂತಹ ಪರಿಕಲ್ಪನೆಗಳು ಅನೇಕ ಬಾರಿ ವಿಜ್ರಂಭಿಸಲ್ಪಡುತ್ತವೆ. ಹೀಗೆ ಅವುಗಳನ್ನು ವಿಜ್ರಂಭಿಸುವುದರಿಂದ ವರ್ತಮಾನದ ಸಮಸ್ಯೆಗಳು ಪರಿಹಾರವಾದಂತಲ್ಲ. ಅಥವಾ ಆ ಬಗೆಯ ವ್ಯಾಖ್ಯೆಗಳು ಪರ್ಯಾಯ ಕೂಡ ಆಗಲಾರವು. ಬೌದ್ಧಿಕವಾಗಿ ಇಂತಹ ವಿಚಾರಗಳು ಗಟ್ಟಿಯಾಗಿದ್ದರೂ ಸಹ ಸಮಕಾಲೀನ ಸಮಾಜದ ನಿರ್ಣಾಯಕ ಅಧಿಕಾರವನ್ನು ಪಡೆದಿರಲಾರವು. ಹೀಗಾಗಿಯೆ ಅಧಿಕಾರ ಮತ್ತು ಬೌದ್ಧಿಕ ಕಥನಗಳು ಒಂದನ್ನೊಂದು ಪುನರ್ ಸೃಷ್ಟಿಸುವ ಬದಲು ಭಂಗ ಪಡಿಸುತ್ತಲೆ ದೂರ ನಿಂತು ಪ್ರತಿರೋಧವನ್ನು ತೋರಡಿಸಿ ಒಂದು ಹಂತ ತಲುಪಿದ ನಂತರ ಅದೇ ವ್ಯವಸ್ಥೆಯ ಜೊತೆಗೆ ಖಾಸಗೀ ನ್ಯಾಯವನ್ನು ಪಡೆದು ಮರೆಗೆ ಸರಿಯುತ್ತವೆ. ಖಾಸಗೀ ನ್ಯಾಯವು ಸಮುದಾಯದ ದೊಡ್ಡ ನ್ಯಾಯವನ್ನು ನುಂಗಿ ವ್ಯಕ್ತಿಗತವಾಗಿ ಕೆಲವೇ ಕೆಲವರಿಗೆ ಖಾಸಗೀ ನ್ಯಾಯವನ್ನು ನೀಡು ವುದು ಹೊಸ'ದೇನಲ್ಲ. ವ್ಯವಸ್ಥೆಯು ಯಾವತ್ತು ಕೂಡ ಅಖಂಡವಾದದ್ದನ್ನು ತುಂಡು ಮಾಡುವುದರಲ್ಲಿ ನಿರತವಾಗಿರುತ್ತದೆ.

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಾಂಸ್ಕೃತಿಕ ಅನನ್ಯತೆ ಹಾಗೂ ಅದರ ಸಬಲೀಕರಣದ ಪ್ರಶ್ನೆಗಳು ಸದಾ ಸಮಾನಾಂತರ ಬೆಳವಣಿಗೆಯಲ್ಲಿ ಸಾಗುವುದು ತೀರ ಅಪರೂಪ. ಸಂಸ್ಕೃತಿ ಎನ್ನುವ ವ್ಯವಸ್ಥೆಯನ್ನು ಸರ್ಕಾರಗಳು ತಮ್ಮ ವೈಭವೀಕರಣಕ್ಕೆ ಬಳಸಿಕೊಳ್ಳುತ್ತಿರುತ್ತವೆ. ಜನತೆ ಅದೇ ವೇಳೆಗೆ ತಮ್ಮ ಸಾಂಸ್ಕೃತಿಕ ರಮ್ಯತೆಯನ್ನು ವಿಜೃಂಭಿಸಿ ಅದರಲ್ಲಿ ಮೈಮರೆತು ನಿಜವಾದ ಸಾಮಾಜಿಕ ವಾಸ್ತವವನ್ನು ಮರೆಯುತ್ತಿರುತ್ತದೆ. ದಲಿತತ್ವದ ಸಮಸ್ಯೆ ಬಹುಪಾಲು ಇದೇ ಹಾದಿಯಲ್ಲಿದೆ. ಅಖಂಡ ಪ್ರಜ್ಞೆಯಲ್ಲಿ ದಲಿತತ್ವ ಎನ್ನುವುದು ರಮ್ಯ ವೈಚಾರಿಕ ರೂಪಕ. ಇದರ ಗುರಿ ಬಿಡುಗಡೆ. ಹಾಗೆಯೆ ಸಮಾನತೆಯ ಹಸಿವು. ಇವೆರಡೂ ವಾಸ್ತವ ಸಮಾಜದಲ್ಲಿ ಛಿದ್ರಗೊಂಡು ಆ ವಿಚ್ಛಿದ್ರತೆಯಲ್ಲೆ ಮತ್ತೆ ಮತ್ತೆ ನ್ಯಾಯವನ್ನು ಬಿಡಿಬಿಡಿಯಾಗಿ ಒತ್ತಾಯಿಸುತ್ತದೆ. ವರ್ತಮಾನದ ನಿರ್ಣಾಯಕ ಅಧಿಕಾರದ ಮುಂದೆ ಈ ಬಿಡಿಗುಂಪುಗಳು ಅಖಂಡ ಪ್ರಜ್ಞೆಯನ್ನು ಹೊರಲಾರದೆ ತಮ್ಮ ವ್ಯಾಪ್ತಿಗೆ ಮಾತ್ರ ಸೀಮಿತವಾಗುತ್ತವೆ. ಘನವಾದ ಅರ್ಥದಲ್ಲಿ ದಲಿತತ್ವ ಎನ್ನುವುದು ಅಖಂಡವಾಗಿದ್ದರೂ ವರ್ತಮಾನದ ವ್ಯವಸ್ಥೆಯ ಕೈಯಲ್ಲಿ ಅದು ಅಖಂಡವಲ್ಲ. ರಮ್ಯ ಬೌದ್ಧಿಕತೆಯ ಅರ್ಥ ವ್ಯಾಖ್ಯಾನದಲ್ಲಿ ಇಂತಹ ಪರಿಕಲ್ಪನೆಗಳು ನ್ಯಾಯೋಚಿತವಾಗಿ ಕಂಡರೂ ಸಮುದಾಯಗಳು ರೂಪಿಸಿಕೊಳ್ಳುವ ತಾತ್ವಿಕತೆಯಿಲ್ಲ ಇವು ಸೇರ್ಪಡೆಯಾಗುವುದು ತುಂಬ ವಿರಳ ಒಂದು ವೇಳೆ ಪ್ರವೇಶಗೊಂಡರೂ ಬೌದ್ಧಿಕವಾದ ಪರಿಕಲ್ಪನೆಗಳು ಸಮಾಜದ ಧ್ವನಿಯಾಗುವುದು ಮತ್ತು ಅಪರೂಪ. ಹೀಗಾಗಿ ದಲಿತ ಸಮುದಾಯಗಳ ಸಾಂಸ್ಕೃತಿಕ ಪರಿಕಲ್ಪನೆಗಳಿಗೂ ಅವುಗಳ ವರ್ತಮಾನದ ಬೌದ್ಧಿಕ ವ್ಯಾಖ್ಯಾನಗಳಿಗೂ ಸೂಕ್ತವಾದ ಸಂಪರ್ಕ ಇನ್ನು ಸಾಧಿತವಾಗಿಲ್ಲ.

ದಲಿತತ್ವದ ವರ್ತಮಾನದ ಸ್ಥಿತಿಯಲ್ಲಿ ಇದೇ ದಲಿತತ್ವದ ಅರ್ಥವು ರಾಜಕೀಯಾರ್ಥಿಕ ಪ್ರಶ್ನೆಗಳ ಮೂಲಕ ತನ್ನ ಅಸ್ತಿತ್ವವನ್ನು ಸಾಧಿಸಿಕೊಳ್ಳಲು ಯತ್ನಿಸುತ್ತದೆ. ಆಧುನಿಕ ಜಗತ್ತಿನ ಎಲ್ಲ ಬಗೆಯ ಜರೂರುಗಳ ಪ್ರವಾಹದಲ್ಲಿ ದಲಿತತ್ವದ ಸಾಂಸ್ಕೃತಿಕ ಮೌಲ್ಯಗಳು ಜಾರಿಹೋಗುತ್ತಿರುತ್ತವೆ. ಆದರೆ ಇಂತಹ ಸಮುದಾಯಗಳಿಗೆ ಆಧುನಿಕ ಜಗತ್ತಿನಲ್ಲಿ ಯಾವ ಬಗೆಯ ಚಹರೆ ಇರಬೇಕು ಎಂಬುದನ್ನು ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ತಮ್ಮ ಚೌಕಟ್ಟಿನಲ್ಲಿ ಆಳವಾಗಿ ಚಿಂತಿಸಿದ್ದಾರೆ. ಗಾಂಧೀಜಿ ಮತ್ತು ಅಂಬೇಡ್ಕರ್ ಇಬ್ಬರೂ ಸ್ವಾತಂತ್ರ್ಯ ಮತ್ತು ಸಮಾನತೆಯ ಬಗ್ಗೆ ಮಂಡಿಸಿದ ಚಿಂತನೆಗಳು ವೈರುಧ್ಯದಂತೆ ಕಂಡರೂ ಇವರಿಬ್ಬರ ಆಲೋಚನೆಗಳನ್ನು ಅರಗಿಸಿಕೊಳ್ಳಲಾರದ ಇವತ್ತಿನ ದಲಿತ ಸಮುದಾಯಗಳು ಕವಲುದಾರಿಯಲ್ಲಿ ಸಾಗುತ್ತಿರುವುದು ಇಡೀ ದಲಿತತ್ವದ ಸಮಗ್ರ ಕಲ್ಪನೆಯನ್ನೆ ಪ್ರಶ್ನಿಸುತ್ತಿವೆ.

ದಲಿತತ್ವದ ಸೈದ್ಧಾಂತಿಕ ಪ್ರತಿಮೆಯು ಅಂಬೇಡ್ಕರ್ ಅವರ 'ಶಿಕ್ಷಣ, ಸಂಘಟನೆ, ಹೋರಾಟ' ಎಂಬ ಈ ಮೂರು ಶಕ್ತಿಗಳಿಂದ ನಿರ್ಮಿತವಾಗಿದ್ದರೂ ಇದೇ ಪ್ರತಿಮೆಯು ಅಖಂಡವಾದ ಜಾಗೃತಿಯನ್ನು ನಿರ್ವಹಿಸಲಾರದ ಸ್ಥಿತಿಯಿದೆ. ಅಸಂಖ್ಯವಾದ ಜನವರ್ಗಗಳು ಜಾತಿಯ ನಿಂಗಡನೆಯಿಲ್ಲಿ ಸದಾ ಕಳೆದು ಹೋಗುತ್ತಲೆ ಇರುತ್ತವೆ. ಎಚ್ಚರವಾಗುತ್ತಲೆ ಎಚ್ಚರ ತಪ್ಪುವ ಶಾಪವೂ ಎಲ್ಲ ಕೆಳ ಜಾತಿಗಳಿಗೆ ಹಿಂದಿನಿಂದಲೂ ಅಂಟಿಕೊಂಡು ಬಂದಿದೆ. ವಿಶೇಷವಾಗಿ ಎಲ್ಲ ಕೆಳ ಸಮುದಾಯಗಳಿಗೂ ರಾಜಕಾರಣದ ಆಕರ್ಷಣೆ ಹಿಂದೆಂದಿಗಿಂತಲೂ ಈ ಕಾಲದಲ್ಲಿ ತೀವ್ರವಾಗಿ ಉಂಟಾಗುತ್ತಿದೆ. ಈ ಆಕರ್ಷಣೆಯು ಎಂತಹ ಮೋಹಕವಾದದ್ದೆಂದರೆ ತನ್ನ ಕೆಳಗಿನವನನ್ನು ತುಳಿದು ಅವನ ಮೇಲೆ ನಿಂತು ಮೇಲಿನ ಒಂದು ಪುಟ್ಟ ಅವಕಾಶವನ್ನು ಎಟುಕಿಸಿಕೊಳ್ಳುವ ಲೆಕ್ಕಾಚಾರದ್ದಾಗಿದೆ. ಹೀಗಾಗಿ ತಂತಾನೆ ಅಖಂಡ ಎಚ್ಚರವು ಸಾಧ್ಯವಾಗಿದೆ ಅಸಹಾಯಕವಾಗಿ ದುರ್ಬಲ ಕ್ಷಣಗಳ ಹೊಂದಾಣಿಕೆಯ ರಾಜಕಾರಣದಲ್ಲಿ ತಮ್ಮನ್ನು ತಾವು ಬಲಿಷ್ಠ ರಾಜಕಾರಣದ ವ್ಯಾಪಾರದಲ್ಲಿ ಮಾರಿಕೊಳ್ಳುವ ಕ್ರೂರ ಒಪ್ಪಂದವನ್ನು ಇಂದಿನ ಸಂದರ್ಭದಲ್ಲಿ ಕಾಣಬಹುದು. ಇಂತಲ್ಲಿ ಸ್ವತಃ ಬಾಬಾಸಾಹೇಬ ಅಂಬೇಡ್ಕರ್ ಅವರು ಅಂತಿಮವಾಗಿ ಕನಸಿದ್ದ ಸಾಮಾಜಿಕ ಸಮಾನತೆಯಾಗಲಿ ರಾಜಕೀಯ ಸಮಾನತೆಯಾಗಲಿ ಎರಡೂ ಅಸ್ತಿತ್ವ ಕಳೆದುಕೊಳ್ಳುತ್ತಲೆ ಇರುವುದು ವಿಪರ್ಯಾಸ.

ದಲಿತತ್ವ ಏಕಕಾಲಕ್ಕೆ ಸಾಮಾಜಿಕ ರಚನೆಯ ವ್ಯವಸ್ಥೆಯನ್ನು ಪ್ರಶ್ನೆಸುತ್ತಲೆ ಸಾಮಾಜಿಕ ರಚನೆಯಲ್ಲಿ ತನಗೆ ಇಂತಿಷ್ಟು ಅಧಿಕಾರ ಸ್ಥಾನಮಾನ ಗುರುತು ಬೇಕೆಂದು ಒತ್ತಾಯಿಸುತ್ತದೆ. ಹೀಗಾಗಿಯೆ ದಲಿತತ್ವ ಎನ್ನುವುದು ಹಕ್ಕೊತ್ತಾಯದ ಪ್ರಜ್ಞೆ. ಆಧುನಿಕ ಜಗತ್ತಿನಲ್ಲಿ ಅಸ್ತಿತ್ವ ಕಾಯ್ದುಕೊಳ್ಳಲು ಉಂಟಾದ ಎಚ್ಚರ. ಈ ಎಚ್ಚರವು ಅಖಂಡವಾಗಿರುವಂತೆ ತೋರಿಕೊಂಡರೂ ಒಳಗೆ ವಿವಿಧ ನೆಲೆಯ ಅಂತರಗಳನ್ನು ಕಾಯ್ದುಕೊಳ್ಳುವ ಸ್ವಭಾವದ್ದು. ಇಂತಹ ವರ್ತನೆಯ ದಲಿತತ್ವವು ಕಾಲದ ಅಗತ್ಯಕ್ಕೆ ಹೊಂದಾಣಿಕೆ ಮಾಡಿಕೊಳ್ಳುತ್ತಲೆ ಪಾಲು ಕೇಳುವ ಗುಣವನ್ನು ಅಳವಡಿಸಿಕೊಂಡಿದೆ. ಇದರ ಒತ್ತಾಯದ ಪರಿಣಾಮ ಎಷ್ಟರ ಮಟ್ಟಿಗೆ ಬೇರು ಬಿಡುತ್ತಿದೆ ಎಂದರೆ ಸರ್ಕಾರದ ವ್ಯವಸ್ಥೆಯು ಕೂಡಮಾಡುವ ಯಾವುದೆ ಸೌಲಭ್ಯ ಅಥವಾ ಯೋಜನೆಗಳಲ್ಲಿ ದಲಿತರಿಗೆ ಇಂತಿಷ್ಟು ಎಂದು ತೋರಿಕೆಗೆ ಒಂದಿಷ್ಟು ಅವಕಾಶ ಕಲ್ಪಿಸಿ ಉಳಿದ ಪಾಲನ್ನು ಇತರರಿಗೆ ಅದೇ ನ್ಯಾಯದಲ್ಲಿ ಹಂಚುವುದು ಈಗ ಮಾಮೂಲು ನಿಯಮ. ಇದು ಸ್ವತಃ ಸರ್ಕಾರಗಳೆ ಸಮುದಾಯಗಳ ಮೆಚ್ಚಿಸಲು ರೂಪಿಸಿಕೊಂಡಿರುವ ಮೌಖಿಕ ಇಲ್ಲವೆ ಮೌನ ಅನುಶಾಸನ.

ಈ ಬಗೆಯ ಮಗುಂ ಆದ ಮೌನ ಅನುಶಾಸನವು ನ್ಯಾಯದ ಹಾಗೂ ಸಮಾನತೆಯ ಪಾವಿತ್ರ್ಯವನ್ನೆ ನಾಶಪಡಿಸಬಲ್ಲದು. ಬಲವಿದ್ದವರು ನ್ಯಾಯ ಪಡೆದುಕೊಳ್ಳಬಹುದು ಎಂಬ ನಿಯಮವನ್ನು ಪಾಲಿಸುವಂತಹದ್ದು. ಇದು ಪ್ರಜಾಪ್ರಭುತ್ವದಲ್ಲಿ ಅದರಲ್ಲೂ ದಲಿತರ ಅಸ್ತಿತ್ವದ ಹಿನ್ನೆಲೆಯಲ್ಲಿ ಪರಮ ಅಪರಾಧದ ಸಂಗತಿಯೇ ಸರಿ. ಇಂತಲ್ಲಿ ದಲಿತತ್ವದ ಎಲ್ಲ ಬಗೆಯ ಹಕ್ಕೊತ್ತಾಯದ

ದನಿಯು ಪ್ರಭುತ್ವದ ಆಮಿಷಗಳಿಗೆ ಬಲಿಯಾಗಬೇಕಾದ ಅಪಾಯವಿರುತ್ತದೆ.

ಪ್ರತಿಯೊಂದು ಚುನಾವಣೆಯ ಸಂದರ್ಭದಲ್ಲಿ ದಲಿತತತ್ವವು ಎಷ್ಟೊಂದು ಸುಲಭವಾಗಿ ಕ್ರಯಕ್ಕೆ ಒಳಪಡಿಸಬಹುದು ಎಂಬುದನ್ನು ಯಾರೇ ಆದರು ಅರ್ಥಮಾಡಿಕೊಳ್ಳಬಲ್ಲರು. ಇಡೀ ದೇಶದ ಎಲ್ಲ ಸಮುದಾಯಗಳು ತಮ್ಮ ತಮ್ಮ ಅಸ್ತಿತ್ವದ ನೆಲೆಯಲ್ಲಿಯೆ ಜಾತಿಧರ್ಮಗಳ ಹತಾರಗಳಿಂದಲೆ ಚುನಾವಣೆಯನ್ನು ಮುಗಿಸಿ ಅಧಿಕಾರದ ಗದ್ದುಗೆ ಏರಿ ತಮ್ಮ ಪರಾಕ್ರಮವನ್ನು ಮೆರೆಯುವಾಗ ದಲಿತತ್ವದ ವೈಚಾರಿಕ ವ್ಯಾಖ್ಯಾನಳೆಲ್ಲವೂ ಗಾಳಿಗೆ ಹಾರಿ ಹೋಗಿರುತ್ತವೆ. ಇಂತಹ ವೈರುಧ್ಯದ ವರ್ತಮಾನದಲ್ಲಿ ಇಡೀ ದಲಿತತತ್ವದ ಪ್ರಜ್ಞೆಯೆ ಮತದಾನದ ಶಕ್ತಿಯಾಗಿ ಸಂಘಟಿತವಾಗುವುದಕ್ಕೆ ಈವರೆಗೂ ಸಾಧ್ಯವಾಗಿಲ್ಲ. ಸಮುದಾಯಗಳು ಹಕ್ಕೊತ್ತಾಯವನ್ನು ಚಲಾಯಿಸಬಲ್ಲವಾಗಿರುತ್ತವೆಯೇ ಹೊರತು ವ್ಯವಸ್ಥೆಯನ್ನು ತಮ್ಮ ನ್ಯಾಯಕ್ಕಾಗಿ ಗೆದ್ದುಕೊಳ್ಳುವ ಮತ ಶಕ್ತಿ ಇಲ್ಲದೇ ಇರುವುದರಿಂದ ದಲಿತತ್ವದ ಎಷ್ಟೆಲ್ಲ ಬಹುರೂಪಿಯಾದ ಬಿಡಿ ಬಿಡಿ ಸಂಸ್ಥೆಗಳು ಹೋರಾಟಗಳು ವಿಫಲವಾಗುತ್ತವೆ ಬರುತ್ತಿವೆ.

ಭಾರತೀಯ ಸಮಾಜವೆ ಸದಾ ಕಾಲದಲ್ಲಿ ವಿಭಜಿತ ಪ್ರಜ್ಞೆಯಲ್ಲೆ ಯೋಚಿಸುತ್ತಿರುತ್ತದೆ. ಅನ್ಯತ್ವ ಈ ಸಮಾಜಗಳಿಗೆ ಸ್ವಯಂ ಪರಿಪೂರ್ಣ ಎನ್ನುವ ಭಾವನೆಯನ್ನು ಬೆಳೆಸಿಬಿಟ್ಟಿದೆ. ಒಂದು ಜಾತಿಯ ಇನ್ನೊಂದು ಜಾತಿಗಿಂತ ಅನ್ಯ ಎಂದು ಕೊಳ್ಳುತ್ತಲೆ ಮೇಲಿರಿಮೆಯಲ್ಲಿ ಸದಾ ತನ್ನ ಹೊರಗಿನವರನ್ನು ನಿಯಂತ್ರಿಸುವ ನಿರ್ದೇಶಿಸುವ ಶೋಷಿಸುವ ಮೌಲ್ಯಗಳನ್ನೆ ಸರಿ ಎಂದು ತಿಳಿದುಕೊಂಡಿರುತ್ತವೆ. ಅನ್ಯತೆಯು ಕೂಡ ಅನನ್ಯತೆಯ ನಂಬಿಕೆಗಳಿಗೆ ದಾರಿ ಮಾಡಿದೆ. ಶೋಷಣೆ ಮಾಡುವುದು ಸರಿ–ತಪ್ಪು ಎಂಬ ಲೆಕ್ಕಕ್ಕಿಂತ ಅದು ನಡೆದು ಬಂದ ದಾರಿ ಎಂಬಂತೆ ಮೇಲು ಜಾತಿಗಳು ಪಾಲಿಸುವುದು ಇಂತಹ ತಿಳುವಳಿಕೆಯಿಂದಲೆ.

ಆದರೆ ಇಂತಹ ಮೂಢನಂಬಿಕೆಗಳನ್ನು ನಾಶಪಡಿಸಲೆಂದೆ ಸಂವಿಧಾನ ಬದ್ಧವಾದ ಹಕ್ಕುಗಳನ್ನು ದಲಿತರಿಗೆ ಕೂಡ ಮಾಡಿದ್ದರೂ ಅದೇ ಸಂವಿಧಾನವನ್ನು ಮೂಢನಂಬಿಕೆಗಳಿಗೆ ಅನುಸಾರವಾಗಿಯೆ ತಿದ್ದುಪಡಿ ಮಾಡುವ ಹಠಗಳೂ ನಡೆಯುತ್ತಿವೆ. ಒಂದು ದೇಶದ ಸರ್ವೊಚ್ಚ ನೈತಿಕತೆಯ ತಾರತಮ್ಯದಿಂದ ವರ್ತಿಸಿದರೆ ದಲಿತತ್ವದ ಯಾವ ಜಾಗೃತಿಯೂ ಫಲಗೊಳ್ಳುವುದಿಲ್ಲ. ಅಖಂಡವಾದ ನೈತಿಕ ಪ್ರಜ್ಞೆಯನ್ನು ಕಳೆದುಕೊಳ್ಳುವ ಯಾವ ಪ್ರಭುತ್ವವೂ ರಾಜಕಾರಣವೂ ತನ್ನ ನಾಡಿನ ಎಲ್ಲ ಸಮುದಾಯಗಳನ್ನು ಉನ್ನತ ನಾಗರೀಕತೆಯ ಕಡೆಗೆ ಕೊಂಡೊಯ್ಯಲಾರರು. ಪ್ರತಿಸಲದ ಚುನಾವಣೆಗಳನ್ನು ಗಮನಿಸಿದರೆ; ಬಹುಸಂಖ್ಯಾತರಾದ ದಲಿತ ಸಮುದಾಯಗಳ ಉನ್ನತ ನಾಗರೀಕ ಪ್ರಜ್ಞೆಯನ್ನು ಮತ್ತೆ ಮತ್ತೆ ಕಿರಿದುಗೊಳಿಸುವ ರಾಜಕಾರಣವೆ ವಿಜೃಂಭಿಸುತ್ತಿರುವುದು ಹೆಚ್ಚಾಗುತ್ತಿದ್ದು; ಭವಿಷ್ಯವು ಮತ್ತಷ್ಟ ಆತಂಕಕಾರಿಯಾದುದು ಎಂಬುದನ್ನು ಸೂಚಿಸುತ್ತಿದೆ. ದಲಿತರ ಬಿಡುಗಡೆಯ ಸ್ಥಿತಿಯು ಮುಂದೆ ಯಾವ ರೀತಿ ವಿರೂಪಗೊಳ್ಳಬಲ್ಲದು ಎಂಬುದು ಇದರಿಂದ ತಿಳಿಯುತ್ತಿದೆ.

ಈ ಮೇಲೆ ಪ್ರಸ್ತಾಪಿಸಿದ ವಿಭಿಜಿಕ ಪ್ರಜ್ಞೆಯಿಂದ ದಲಿತತ್ವದ ಇನ್ನೊಂದು ನೆಲೆಯನ್ನು ಆಲೋಚಿಸಬಹುದು. ದಲಿತ ಸಂಸ್ಕೃತಿ, ಸಾಹಿತ್ಯ, ಪರಂಪರೆ ಮುಂತಾದವುಗಳಿಂದ ನಾವು ಭಾವಿಸಿಕೊಂಡಷ್ಟು ಸಲೀಸಾಗಿ ಸಮಾಜದ ರಚನೆಯಲ್ಲಿ ದಲಿತ ಸಮುದಾಯಗಳು ಇಲ್ಲ ಬೃಹತ್ ವರ್ಣ ಸಮಾಜದ ಒಳಗಿನ ದಲಿತ ಸಮಾಜದ ರಚನೆಯ ಒಳಗೆಯೆ ಹತ್ತಾರು ನೂರಾರು ರೀತಿಯ ಬಿಡಿ ಸಮಾಜಗಳಿವೆ. ಛಿದ್ರಸಮಾಜದ ಒಳಗಿನ ಅಪನಂಬಿಕೆಗಳು ಬಿಡಿಸಲಾರದಷ್ಟು ಪ್ರಕ್ಷುಬ್ಧವಾಗಿದೆ. ಇಪ್ಪತ್ತನೇ ಶತಮಾನದ ಕೊನೆಯ ವೇಳೆಗೆ ಭಾರತದ ಜಾತಿ ರಾಜಕಾರಣವು ಪ್ರಬಲಗೊಂಡು, ಜಾತಿಗಳು ಮತ ಪೆಟ್ಟಿಗೆಯ ಲೆಕ್ಕಾಚಾರಗಳಿಗೆ ಒಳಪಟ್ಟ ಮೇಲೆ ಜಾತಿ ಪದ್ಧತಿಯ ಮೂಲ ಸ್ವರೂಪವೆ ಬದಲಾಗಿ ಹೋಗಿದೆ. ಕೆಲವು ಜಾತಿಗಳು ತಮ್ಮ ಸನಾತನ ಅಧಿಕಾರಗಳನ್ನು ಕೆಲವು ಹಂತಗಳಲ್ಲಿ ಕಳೆದುಕೊಂಡಿದ್ದರೆ ಶೂದ್ರ ಸಮುದಾಯಗಳು ಹೊಸ ಬಗೆಯ ರಾಜ್ಯಾಧಿಕಾರದಲ್ಲಿ ಒಂದಿಷ್ಟು ಅಧಿಕಾರವನ್ನು ನಿರ್ಣಾಯಕವಾಗಿ ಪಡೆದಿವೆ. ಬಲಿಷ್ಟವಾದ ಕೆಲವೇ ಜಾತಿಗಳು ಅಸ್ಪೃಶ್ಯತೆಯ ಹಳೆಯ ಮಾದರಿಯ ಶೋಷಣೆಯನ್ನು ಬಿಟ್ಟುಕೊಟ್ಟು ಒಂದಿಷ್ಟು ಸಮೀಪವಾಗಿ ದಲಿತ ಸಮುದಾಯಗಳ ಹತ್ತಿರಕ್ಕೆ ಬಂದಿದ್ದರೂ ಅಂತಿಮವಾದ ಗದ್ದುಗೆಯ ಹತ್ತಿರಕ್ಕೆ ಯಾವ ದಲಿತರನ್ನು ಒಳಕ್ಕೆ ಬಿಟ್ಟುಕೊಡದೆ ಹೊರಗೇ ಉಳಿಸಿವೆ.

ಇಂತಹ ಪರಿಸರದಲ್ಲಿ ವರ್ಣ ಸಮಾಜವು ಪರಿಸ್ಕಾರಗೊಂಡಿರುವುದು ಸಹಜ. ತನ್ನ ಅಧಿಕಾರ ಹಾಗೂ ಅಸ್ತಿತ್ವದ ಕಾರಣವಾಗಿ ಇಂತಹ ಹೊಂದಾಣಿಕೆಯನ್ನು ಮೇಲು ಸಮಾಜಗಳು ರೂಢಿಸಿಕೊಂಡಿವೆ. ಆದರೆ ಸ್ವತಃ ತಳ ಸಮುದಾಯಗಳ 'ದಲಿತ ಸಮಾಜ'ದ ಒಳಗಿನ ವೈರುದ್ಯ ಘರ್ಷಣೆಗಳು ಅತ್ಯಂತ ಅಪಾಯಕಾರಿಯಾಗಿ ಪರಿಣಮಿಸುತ್ತಿವೆ. ರಾಜ್ಯಾಧಿಕಾರದ ಜೊತೆ ತಾನು ಸೇರಿ ಪತನದ ಅಂಚಿನಿಂದ ತಪ್ಪಿಸಿಕೊಳ್ಳಬೇಕು ಎಂಬಂತೆ ಆಲೋಚಿಸುವ ಬಿಡಿ ಬಿಡಿ ಸಮುದಾಯಗಳ ಬಿಡುಗಡೆಯ ದಾಹವು ಒಂಟಿ ಪಯಣದಲ್ಲೆ ಸಮುದ್ರವನ್ನು ಹಾರಬಹುದು ಎಂಬ ದುರಂತ ಸಾಹಸತ್ಯೆ ತಮ್ಮನ್ನು ತಾವು ಕಿತ್ತುಕೊಳ್ಳುತ್ತಿವೆ. ಒಂದೇ ಜಾತಿಯ ಒಳ ಭೇದಗಳು, ಸಮೀಪದಲ್ಲೆ ಬದುಕುವ ಸಮಾನ ಜಾತಿಗಳು ತಮ್ಮ ಬಗ್ಗೆಯೆ ವಿಪರೀತ ಅಪನಂಬಿಕೆಗಳನ್ನು ಸ್ವಾತಂತ್ರ್ಯಾನಂತರದ ಭಾರತದಲ್ಲಿ ಹಿಮ್ಮಡಿಸಿಕೊಂಡಿರುವುದು ವಿಚಿತ್ರವಾಗಿದೆ. ಸಂವಿಧಾನಬದ್ಧ ಅವಕಾಶದಲ್ಲಿ ಕೆಳಜಾತಿಗಳು ಸಂಘಟಿತವಾಗುವುದಕ್ಕೆ ಅಷ್ಟೆಲ್ಲ ಶಕ್ತಿಯಿದ್ದರೂ ಅವು ಒಂದರಿಂದ ಇನ್ನೊಂದು ದೂರ ಸರಿಯುವುದಕ್ಕೇ ಬದ್ಧವಾಗುತ್ತಿವೆ.

ಇದು ಸ್ವತಃ ದಲಿತ ಸಮಾಜದ ಒಳಗೆಯೇ ಇಪ್ಪತ್ತನೆ ಶತಮಾನದಲ್ಲಿ ಗುಪ್ತವಾದ ಜಾತಿಯು ಇನ್ನಷ್ಟು ಬಲವಾಗಿ ಬೇರು ಬಿಡುವಂತೆ ಮಾಡುತ್ತಿದೆ. ಕೆಳಜಾತಿಗಳಿಲ್ಲೆ ಜಾತಿ ಕಲಹ ಹಲ್ಲೆ ಆಕ್ರಮಣ ಬಹಿಷ್ಕಾರ ಮುಂತಾದ ಹೇಯ ಘಟನೆಗಳು ನಿರಂತರವಾಗಿ ನಡೆಯುತ್ತಲೇ ಪ್ರತಿ ವರ್ಷವು ಅವುಗಳ ಪ್ರಮಾಣ ಹೆಚ್ಚುತ್ತಿದೆ. ಒಳಜಾತಿಗಳಲ್ಲೆ ಉಂಟಾಗುವ ಇಂತಹ ದುರಂತಗಳು ಹೊರಗೆ ವ್ಯವಸ್ಥೆಯ ಕೇಂದ್ರದಲ್ಲಿ ಕುಳಿತ ಮೇಲು ಜಾತಿಗಳಿಗೆ ಯಾವ ಬಗೆಯ ಅಪಾಯವನ್ನು ತರುವುದಿಲ್ಲ. ಕಂಬಾಲಪಲ್ಲಿಯಲ್ಲಿ ಉಂಟಾದ ನರಮೇಧದಿಂದ ಬಲಿಷ್ಠ ಜಾತಿ ಸಮಾಜಕ್ಕೆ ರಾಜಕೀಯವಾಗಿ ಯಾವ ಸೋಲೂ ಉಂಟಾಗುವುದಿಲ್ಲ.

ಇಂದು ಕೆಳ ಜಾತಿಗಳ ಒಳಗೆಯೆ ಅನ್ಯತ್ವದ ಪ್ರಜ್ಞೆಯು ದಟ್ಟವಾಗಿದ್ದು ತನ್ನ ಸಮೀಪದ ಅಥವಾ ಕೆಳಗಿನ ಜಾತಿಯ ಮೇಲೆಯೆ ಅದು ಮೊದಲ ಆಕ್ರಮಣವನ್ನು ಮಾಡುತ್ತಿರುವುದು ಈ ಆಕ್ರಮಣಕ್ಕೆ ಉಳಿದ ಮೇಲು ಜಾತಿಗಳ ಅಡ್ಡಿ ಇರುವುದಿಲ್ಲ. ಮಗೂ ಆಗಿ ಆಗಲಿ ಬಿಡು ಎಂಬ ತಂತ್ರವಿರುತ್ತದೆ. ಅಷ್ಟೇ ಅಲ್ಲದೆ ಸ್ವಯಂ ತನ್ನ ಒಳಜಾತಿಯ ಒಳಗೆ ಕೂಡ ಸಂದರ್ಭ ಬಂದಾಗ ಬಹುಸಂಖ್ಯಾತ ಮನೋಧರ್ಮಕ್ಕೆ ಹೊಂದಿಕೊಂಡು ಅನ್ಯಾಯದ ವಿರುದ್ಧ ಮಾತನಾಡುವುದಿಲ್ಲ. ಹೀಗಾಗಿ ಒಳಜಾತಿಗಳು ತಮ್ಮ ತಮ್ಮ ವಿರುದ್ಧವಾಗಿ ಮಾಡಿಕೊಳ್ಳುವ ಹಲ್ಲೆಗಳಿಗೆ ಬಲಿಷ್ಠವಾದ ಮೇಲು ಸಮಾಜವು ನಿರ್ಣಾಯಕವಾದ ಘಟ್ಟದಲ್ಲಿ ಹಿಂದೆ ಸರಿದು ಇದು ಅವರವರ ಕರ್ಮ ಎಂದು ಮರೆಗೆ ಸರಿಯುತ್ತದೆ.

ಒಳ ಜಾತಿಗಳ ಒಳಗಿನ ಆಕ್ರಮಣಗಳು ಯಾವ ಬಗೆಯ ನ್ಯಾಯಕ್ಕಾಗಿ ಹೀಗೆ ವರ್ತಿಸುತ್ತವೆ ಎಂಬುದನ್ನು ಗಮನಿಸಿಬೇಕು. ಇಲ್ಲಿ ರಾಜಕೀಯ ಪಾಲಿನ ಒಳಜಗಳ ಒಂದು ಕಡೆಗಿದ್ದರೆ; ಇದೇ ದೊಡ್ಡ ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನು ರೂಪಿಸಿಕೊಂಡು ಅವುಗಳ ಜೊತೆ ಸ್ಪರ್ಧಿಸಲಾರದ ಬಿಡಿ ಬಿಡಿ ಸಮುದಾಯಗಳು ತಮ್ಮೊಳಗೇ ನಿಕಾರವಾಗಿ ಪಾಲಿನ ಹಕ್ಕನ್ನು ಚಲಾಯಿಸಿ ಸ್ಪರ್ಧೇಗಿಳಿದು ಹತಾಶೆಯಿಂದ ಆತ್ಮ ಹತ್ಯಾತ್ಮಕವಾಗಿ ಒಬ್ಬರನ್ನೊಬ್ಬರು ಸ್ವಯಂ ನಿಷೇಧಿಸಿ ಕೊಳ್ಳುತ್ತಲೇ ಸ್ವಯಂ ಹಲ್ಲೆಗಳಿಗೆ ಮುಖಾ ಮುಖಿಯಾಗುತ್ತಿರುತ್ತವೆ. ಇದು ಜಾತಿಯ ಮೂಲ ಪ್ರಜ್ಞೆಯು ಆಧುನಿಕ ಸಮಾಜದಲ್ಲಿ ಮತ್ತೆ ವಿಭಜಿತ ನ್ಯಾಯಕ್ರಮದಲ್ಲಿ ವಿಕೃತಗೊಳ್ಳುವ ಸ್ಥಿತಿ.

ಇಂತಹ ವಿಭಜಿತ ಸಮಾನತೆಗೆ ಒತ್ತಾಯಿಸುವ ಸಮುದಾಯಗಳ ಭವಿಷ್ಯ ಮತ್ತು ಅನಿಶ್ಚತವೇ. ಹಾಗೆಯೆ ಈ ದಲಿತ ಸಮಾಜ ಮುಂದೆ ಈಗಿರುವುದಕ್ಕಿಂತಲು ಹೆಚ್ಚಾಗಿ ತಮಗೆ ತಾವೇ ಅಪಾಯಕಾರಿಯಾಗಿ ತಂತಮ್ಮ ವಿರುದ್ಧವಾಗಿಯೆ ಬಡಿದಾಡಿಕೊಂಡು ಮತ್ತೆ ಅದೇ ಹಳೆಯ ಯಜಮಾನನ ಮುಂದೆ ನ್ಯಾಯ ಕೇಳುತ್ತ ಕಾಯಬೇಕಾಗುತ್ತದೆ. ದಲಿತ ಸಮಾಜದ ವಿಪರ್ಯಾಸವೇ ಇದಿರಬೇಕೇನೊ. ತಾನು ಎಚ್ಚರಗೊಳ್ಳುತ್ತಲೇ ಅದು ತನ್ನ ನಿಜವಾದ ಶತ್ರುವಿನ ಕಡೆ ನೋಡುವುದಿಲ್ಲ. ನೋಡಿದರೂ ಅದನ್ನು ಪಳಗಿಸುವ ಪರಿಯು ಬಲಿಷ್ಠ ರಾಜಕಾರಣಕ್ಕೆ ಕರಗತವಾಗಿರುತ್ತದೆ. ಸಮುದಾಯಗಳು ಹೀಗೆ ಸೀಳಿಕೊಳ್ಳುವುದು ಜಾತಿ ವ್ಯವಸ್ಥೆಯನ್ನು ಇನ್ನಷ್ಟು ಸಂಕೀರ್ಣ ಹಾಗೂ ಶಕ್ತಿಯುತ ಗೊಳಿಸುತ್ತದೆ.

ಒಂದು ದೇಶದ ಸರ್ವೊಚ್ಚ ನೈತಿಕತೆಯ ತಾರತಮ್ಯದಿಂದ ವರ್ತಿಸಿದರೆ ದಲಿತತ್ವದ ಯಾವ ಜಾಗೃತಿಯೂ ಫಲಗೊಳ್ಳುವುದಿಲ್ಲ. ಅಖಂಡವಾದ ನೈತಿಕ ಪ್ರಜ್ಞೆಯನ್ನು ಕಳೆದುಕೊಳ್ಳುವ ಯಾವ ಪ್ರಭುತ್ವವೂ ರಾಜಕಾರಣವೂ ತನ್ನ ನಾಡಿನ ಎಲ್ಲ ಸಮುದಾಯಗಳನ್ನು ಉನ್ನತ ನಾಗರೀಕತೆಯ ಕಡೆಗೆ ಕೊಂಡೊಯ್ಯಲಾರರು. ಪ್ರತಿಸಲದ ಚುನಾವಣೆಗಳನ್ನು ಗಮನಿಸಿದರೆ; ಬಹುಸಂಖ್ಯಾತರಾದ ದಲಿತಸಮುದಾಯಗಳ ಉನ್ನತ ನಾಗರೀಕ ಪ್ರಜ್ಞೆಯನ್ನು ಮತ್ತೆ ಮತ್ತೆ ಕಿರಿದುಗೊಳಿಸುವ ರಾಜಕಾರಣವೆ ವಿಜೃಂಭಿಸುತ್ತಿರುವುದು ಭವಿಷ್ಯವು ಮತ್ತಷ್ಟ ಆತಂಕಕಾರಿಯಾದುದು ಎಂಬುದನ್ನು ಸೂಚಿಸುತ್ತಿದೆ.

ತಮ್ಮ ಎಲ್ಲ ತರದ ಬಿಡುಗಡೆಯೂ ಸರ್ಕಾರದ ಮೂಲಕವೆ ಆಗಿಬಿಡುತ್ತದೆ ಎರಬ ಭ್ರಮೆಯು ಅನೇಕ ಸಂಘಟನೆಗಳಿಗೆ ಇದೆ. ಆರಂಭದಲ್ಲಿ ದಸಂಸ ತನ್ನ ಚಳುವಳಿಯ ಉದ್ದಕ್ಕೂ ಸರ್ಕಾರದ ವಿರುದ್ಧವಾಗಿಯೆ ಎಚ್ಚರಿಕೆಯ ಗಂಟೆಯನ್ನು ಬಾರಿಸಿತು. ಅದು ಅನಿವಾರ್ಯವು ಆಗಿತ್ತು. ಸಮಾಜದ ಜೊತೆ ನೇರ ಹೋರಾಟ ಮಾಡುವುದು ಅವತ್ತಿಗೆ ಅಷ್ಟು ಸಲೀಸಾದ ಕೆಲಸವಾಗಿರಲಿಲ್ಲ. ವಿಧಾನಸೌಧದ ಮುಂದೆ ಧರಣಿ ಕುಳಿತು ಘೋಷಣೆ ಕೂಗಿದರೆ ಅದು ಪರೋಕ್ಷವಾಗಿ ಜಾತಿನಿಷ್ಠ ಸಮಾಜಕ್ಕೆ ಎಚ್ಚರವನ್ನು ಕೊಟ್ಟಂತಾಗುತ್ತಿತ್ತು. ಆದರೆ ಅಂಬೇಡ್ಕರ್ ಅವರೊಬ್ಬರೆ ಇಡೀ ದೇಶದ ಒಟ್ಟು ಸಮಾಜವನ್ನು ಅಂತಹ ಮಹಾತ್ಮ ಗಾಂಧಿಯನ್ನ ಎದುರು ಹಾಕಿಕೊಂಡು ಏಕಾಂಗಿಯಾಗಿ ತನ್ನ ಬಹು ಸಮಾಜಗಳನ್ನು ಬೆನ್ನು ಮೇಲೆ ಹೊತ್ತುಕೊಂಡು ಇಡೀ ವಶಹಾತುಶಾಹಿ ಜಗತ್ತೇ ಒಮ್ಮೆ ಕೇಳಿಸಿಕೊಂಡು ಸ್ಪಂದಿಸುವಂತೆ ವೈಚಾರಿಕವಾದ ಆಕ್ರಂಧನವನ್ನು ಮಾಡಿದರು. ಆ ವೈಚಾರಿಕ ಕಹಳೆಗೆ ಗಾಂಧಿ ತಲೆಬಾಗಿದರು. ಅವತ್ತಿನ ಇಡೀ ದೇಶದಲ್ಲಿ ದಲಿತ ಸಮುದಾಯದ ಪ್ರತಿನಿಧಿಯಾಗಿ ಅಂಬೇಡ್ಕರ್ ಸಂಚಲನೆ ಉಂಟು ಮಾಡಿದರು. ಆದರೂ ಅಂತಹ ಧೀಮಂತ ನಾಯಕನಿಗೆ ಅವತ್ತು ಕೂಡ ಇಡೀ ದೇಶದ ದಲಿತ ಸಮುದಾಯಗಳೂ ಒಟ್ಟಾಗಿ ಹಿಂಬಾಲಿಸಿರಲಿಲ್ಲ ಎನ್ನುವ ಚಾರಿತ್ರಿಕ ವಿಷಾದವಿದೆ. ಇಂದಿನ ದಲಿತ ಹೋರಾಟಗಳಲ್ಲಿ ಎಡಗೈ ಬಲಗೈ ರಾಜಕೀಯವು ಮೂರ್ತ ರೂಪವನ್ನು ಪಡೆದುಕೊಳ್ಳುತ್ತಾ ತನ್ನ ಅನನ್ಯತೆಯ ಮೂಲಕವೆ ಅನ್ಯಗೊಳ್ಳುವ ಹಂತವನ್ನು ತಲುಪುತ್ತಿವೆ.

ಈ ಬಗೆಯ ವೈರುಧ್ಯದಿಂದಲೆ ತಳ ಜಾತಿಗಳು ಆಧುನಿಕ ಭಾರತದಲ್ಲಿ ರಾಜಕೀಕರಣಗೊಳ್ಳುತ್ತಲೇ ಅವು ಪ್ರಧಾನ ಜಾತಿಗಳ ಜೊತೆ ಒಪ್ಪಂದವನ್ನು ಮಾಡಿಕೊಳ್ಳಬೇಕಾಗಿದ್ದು ಜಾತ್ಯತೀತೆಯ ಮೂಲಾಶಯವೇ ಅಪಮೌಲ್ಯಗೊಂಡು ಬಿಟ್ಟಿದೆ. ಅಂಬೇಡ್ಕರ್ ಅವರ ಜಾತಿವಿನಾಶದ ಚಿಂತನೆಗಳೆಲ್ಲವೂ ಇವತ್ತಿನ ಇಂತಹ ಒಳಜಾತಿಗಳ ಬಿಗಡಾಯಿಸಿದ ಸಂಬಂಧಗಳಲ್ಲ ಯಾವ ರೀತಿಯಲ್ಲಿ ಉಪಯುಕ್ತ ಎಂಬ ಅನುಮಾನಕ್ಕೆ ಒಳಪಡುತ್ತಿವೆ. ತೀರ ಕೆಳಜಾತಿಗಳು ರಾಜಕೀಕರಣಕೊಳ್ಳುವುದು ಅಪರಾಧವಲ್ಲ. ಪ್ರಬುಧ್ದ ರಾಜಕೀಯ ಸಮುದಾಯವಾಗಿ ಇಡೀ ದಲಿತ ಸಮುದಾಯ ಪರಿವರ್ತನೆ ಆಗಬೇಕಾದ ಅಗತ್ಯ ಇದೆ ಎಂದು ಅಂಬೇಡ್ಕರ್ ಅವರ ಒಟ್ಟು ಚಿಂತನೆಯಲ್ಲಿ ತಿಳಿಯುತ್ತದೆಯಾದರೂ ಇಂತಹ ಆಶಯವೇ ಇಂದಿನ ರಾಜಕಾರಣದಲ್ಲಿ ಅಸಾಧ್ಯವಾಗುತ್ತದೆ. ಬಲಿಷ್ಠ ಜಾತಿಗಳು ಈಗಾಗಲೆ ಪ್ರಭುತ್ವದ ರಾಜಕೀಕರಣಗೊಂಡು ಬಹಳ ದೂರ ಹೊರಟು ಹೋಗಿವೆ. ಜಾತಿನಿಷ್ಠವಾಗಿ ರಾಜಕಾರಣವು ಕೊಬ್ಬಿ ಹೋಗಿದೆ. ಜಾತಿಯನ್ನು ಹೊರತು ಪಡಿಸಿ ಯಾವ ಪಕ್ಷವೂ ರಾಜಕಾರಣಕ್ಕೆ ಇಳಿಯಲಾಗದ ಸ್ಥಿತಿ ನಿರ್ಮಾಣವಾಗಿದೆ. ಜಾತ್ಯತೀತೆಯ ಹೆಸರಿನಲ್ಲೆ ಜಾತಿಯ ಅಪರಾಧಕಾರಿಗಳು ಧೈತ್ಯವಾಗಿ ಬೆಳೆಯುತ್ತಿವೆ.

ವರ್ತಮಾನದ ಈ ವಿರಾಟ್ ಜಾತಿ ಕಥನಗಳು ಇಡೀ ಭಾರತದ ಪ್ರಜಾಪ್ರಭುತ್ವವಸ್ಥೆಯನ್ನೆ ನಿಯಂತ್ರಿಸಬಲ್ಲವು. ಧರ್ಮಕ್ಕಿಂತಲು ಜಾತಿಯೆ ಇವತ್ತಿನ ವಾಸ್ತವ. ದಲಿತ ಸಮುದಾಯಗಳು ಜಾತಿಯ ಚಹರೆಯಿಂದಲೆ ಪೈಪೋಟಿ ನಡೆಸಬೇಕಾದ ಇಕ್ಕಟ್ಟು ಇದರಿಂದಲೆ ಉಂಟಾಗಿರುವುದು. ಜಾತಿಯನ್ನು ಬಿಡಬೇಕೆಂಬುದು ದಲಿತತ್ವದ ತಾತ್ವಿಕತೆಯಾದರೂ ಅದರ ಇನ್ನೊಂದು ತುದಿಯಲ್ಲಿ ತಾನು ಅದೇ ಜಾತಿಯ ಏಣಿಯನ್ನು ಹೇರಿಯೇ ರಾಜಕಾರಣದ ಎತ್ತರದ 'ಆ ಮನೆಗೆ' ಪ್ರವೇಶಿಸಬೇಕಾದ ಧಾವಂತವಿದೆ. ಹೀಗೆ ಜಾತಿಯ ಏಣಿಗಳನ್ನು ಅನಿವಾರ್ಯವಾಗಿ ಪ್ರತಿಯೊಬ್ಬ ದಲಿತ ನಾಯಕನೂ ಸದಾಕಾಲ ಕಂಕುಳಲ್ಲಿ ಹೊತ್ತುಕೊಂಡೇ ಪ್ರತಿ ಹಂತವನ್ನು ಏರಿ ಇಳಿದು ಸುತ್ತುಬಳಸಿನ ಆಚೆ ತೀರದ ದಾರಿ ತಲುಪುವ ವೇಳೆಗೆ ಆತ ರಾಜಕೀಯ ಸನ್ಯಾಸ ಸ್ವೀಕರಿಸುವ ಹಂತಕ್ಕೆ ಬಂದಿರುತ್ತಾನೆ. ಅಷ್ಟರಮಟ್ಟಿಗೆ ಅವನ ದಲಿತ ಸಮೂಹವೂ ವಿಫಲಗೊಂಡಿರುತ್ತದೆ. ಜಾತಿಯ ಈ ಏಣಿಗಳಲ್ಲೆ ಪೈಪೋಟಿಯು ಈಗ ವಿಪರೀತ. ದಲಿತ ಜಾತಿಗಳು ತಮ್ಮವರ ಏಣಿಗಳನ್ನೆ ಬೀಳಿಸಿ ದೊಡ್ಡ ದೊಡ್ಡ ಜಾತಿ ಏಣಿಗಳ ಮುಂದೆ ತಲೆಬಾಗಿ ನಿಲ್ಲುತ್ತವೆ.

ಜಾತಿ ವ್ಯವಸ್ಥೆಯು ಶ್ರೇಣೀಕರಣದಲ್ಲಿದೆ ಎಂಬುದು ನಿಜವೇ. ಆದರೆ ರಾಜಕಾರಣದಲ್ಲಿ ಸ್ವಯಂ ಜಾತಿಗಳು ಏಣಿಗಳಾಗಿ ಪರಿವರ್ತನೆಯಾಗುವ ರೀತಿಯು ಇಡೀ ಸಮಾಜದ ವ್ಯವಸ್ಥೆಯನ್ನು ಹೊಸ ಕಾಲದಲ್ಲಿ ಬಲಯುತವಾಗಿ ತನ್ನ ತೆಕ್ಕೆಗೆ ತಂದುಕೊಳ್ಳುತ್ತದೆ. ಈ ಬಗೆಯಲ್ಲಿ ರಾಜಕೀಕರಣಗೊಳ್ಳುವ ಕೆಳಜಾತಿಗಳು ಬಹಳ ದೂರ ಕ್ರಮಿಸಲಾರವು. ಈಗಾಗಲೆ ಬಲಿಷ್ಠವಾಗಿ ರಾಜಕೀಯರಣಗೊಂಡಿರುವ ಮೇಲು ಜಾತಿಗಳು ತನಗಿಂತ ಕೆಳಗಿನಿಂದ ಬಂದ ಜಾತಿಯ ಏಣಿಗಳನ್ನು ಉಪ್ಪರಿಗೆಯ ಮೇಲೆ ನಿಂತು ನಿಭಾಯಿಸಬಲ್ಲವು. ಹಾಗೆಯೆ ತನಗೆ ಈ ಏಣಿಯ ಅಗತ್ಯ ಇಲ್ಲ ಎಂದಾಗ ಒದ್ದು ಬಿಡಬಲ್ಲದು. ಇದು ಆ ಮಟ್ಟಿಗೆ ಆ ಒಂದು ಜಾತಿಯ ವೈಫಲ್ಯವಾಗಿರದೆ ಇಡೀ ಸಮಾಜದ ವೈರುದ್ಯ ಬಾಂಧವ್ಯದ ಹುಸಿಯನ್ನು ತೋರುತ್ತಲೇ ಮೇಲು ಜಾತಿಗಳ ರಾಜಕೀಯ ಸಮುದಾಯಗಳಾಗಿ ಬೆಳೆದುಬಿಟ್ಟ ಮೇಲೆ ಯಾರನ್ನು ಬೇಕಾದರೂ ದಂಡಿಸಿ ಗೆದ್ದುಕೊಳ್ಳಬಲ್ಲೆವು ಎಂಬುದನ್ನು ಮಾರ್ಮಿಕವಾಗಿ ತಿಳಿಸುತ್ತಿರುತ್ತದೆ.

ಆರಂಭದಲ್ಲಿ ದಸಂಸ ತನ್ನ ಚಳುವಳಿಯ ಉದ್ದಕ್ಕೂ ಸರ್ಕಾರದ ವಿರುದ್ಧವಾಗಿಯೆ ಎಚ್ಚರಿಕೆಯ ಗಂಟೆಯನ್ನು ಬಾರಿಸಿತು. ಅದು ಅನಿವಾರ್ಯವು ಆಗಿತ್ತು. ಸಮಾಜದ ಜೊತೆ ನೇರ ಹೋರಾಟ ಮಾಡುವುದು ಅವತ್ತಿಗೆ ಅಷ್ಟು ಸಲೀಸಾದ ಕೆಲಸವಾಗಿರಲಿಲ್ಲ. ವಿಧಾನಸೌಧದ ಮುಂದೆ ಧರಣಿ ಕುಳಿತು ಘೋಷಣೆ ಕೂಗಿದರೆ ಅದು ಪರೋಕ್ಷವಾಗಿ ಜಾತಿನಿಷ್ಠ ಸಮಾಜಕ್ಕೆ ಎಚ್ಚರವನ್ನು ಕೊಟ್ಟಂತಾಗುತ್ತಿತ್ತು. ಆದರೆ ಅಂಬೇಡ್ಕರ್ ಒಬ್ಬರೆ ಇಡೀ ದೇಶದ ಒಟ್ಟು ಸಮಾಜವನ್ನು ಗಾಂಧಿಯನ್ನ ಎದುರು ಹಾಕಿಕೊಂಡು ಏಕಾಂಗಿಯಾಗಿ ತನ್ನ ಬಹು ಸಮಾಜಗಳನ್ನು ಬೆನ್ನು ಮೇಲೆ ಹೊತ್ತುಕೊಂಡು ಇಡೀ ವಶಹಾತುಶಾಹಿ ಜಗತ್ತೇ ಒಮ್ಮೆ ಕೇಳಿಸಿಕೊಂಡು ಸ್ಪಂದಿಸುವಂತೆ ವೈಚಾರಿಕವಾದ ಆಕ್ರಂಧನವನ್ನು ಮಾಡಿದರು.

ಇಂತಲ್ಲಿ ದಲಿತ ಸಮುದಾಯಗಳು ತಮ್ಮೊಳಗೇ ನಡೆಸುವ ರಾಜಕೀಯ ಪಾಲಿನ ಪೈಪೋಟಿಯು ಅಂಬೇಡ್ಕರ್ ಅವರ ಕನಸನ್ನು ಭಗ್ನಗೊಳಿಸುತ್ತಲೆ ಸಾಗುತ್ತದೆ. ಇನ್ನು ದಲಿತತ್ವದ ಪ್ರಜ್ಞೆಯನ್ನು ಇಂತಹ ಭಗ್ನತೆಯಲ್ಲಿ ಸಂಯೋಜಿಸುವುದು ಭಗೀರಥ ಪ್ರಯತ್ನದಂತೆಯೆ ಕಾಣುತ್ತಿದೆ. ದಲಿತ ರಾಜಕಾರಣವನ್ನು ಬೇರೊಂದು ಆಯಾಮದಿಂದ ರೂಪಿಸಿದ ಕಾನ್ಸಿರಾಂ ಮಾಯಾವತಿಯವರ ರಾಜಕೀಯ ಚಳುವಳಿಯು ಚಾರಿತ್ರಿಕವಾದುದು. ದಲಿತತ್ವದ ಒಂದು ಸಾಧ್ಯತೆ ಬಿ.ಎಸ್.ಪಿ. ಜಾತಿಗಳನ್ನು ರಾಜಕೀಯಗೊಳಿಸುತ್ತಲೆ ಮೇಲು ಜಾತಿಗಳ ಜಾತಿರಾಜಕಾರಣದ ಜೊತೆಗೆ ಪೈಪೋಟಿಗಿಳಿದು ರಾಜ್ಯಾಧಿಕಾರವನ್ನು ಹಿಡಿದ ಮಾಯಾವತಿಯ ರಾಜಕೀಯ ಪ್ರಯೋಗಗಳು ಹೇಗೆ ಮತ್ತೆ ಮತ್ತೆ ಜಾತಿಗಳು ಆಧುನಿಕ ಭಾರತದ ರಾಜಕಾರಣದಲ್ಲಿ ಹೊಸದಾಗಿ ನವೀಕರಿಸಿಕೊಂಡು; ಜಾತಿಯನ್ನು ಅನಿವಾರ್ಯವಾಗಿಯೆ ಉಳಿಸಿಕೊಳ್ಳಬೇಕಾದ ದಲಿತರ ದುರಂತ ಸ್ಥಿತಿಯನ್ನು ಬಿಂಬಿಸುತ್ತಿವೆ. ಈ ದಾರಿಯಲ್ಲಿ ಉತ್ತರ ಭಾರತದ ರಾಜಕಾರಣದಲ್ಲಿ ಜೊತೆಗೊಂಡ ಹಲವಾರು ಕೆಳಜಾತಿಗಳು ತಮ್ಮ ಒಳಗೇನು ಗಾಢವಾದ ಒಪ್ಪಂದಗಳನ್ನು ಭವಿಷ್ಯದ ಕಾರಣಕ್ಕಾಗಿ ಮಾಡಿಕೊಂಡಿರಲಿಲ್ಲ. ಸದ್ಯದ ಅಧಿಕಾರದ ಹಂಚಿಕೆಯಲ್ಲಿ ಮಾತ್ರ ಪ್ರತಿಯೊಂದು ಜಾತಿಯೂ ಅದರ ರಾಜಕೀಯ ಪಕ್ಷವೂ ಲೆಕ್ಕ ಹಾಕುತ್ತಿರುತ್ತವೆ.

ಮಾಯಾವತಿಯ ಜೊತೆ ಅಧಿಕಾರ ಹಂಚಿಕೊಳ್ಳುವುದು ಮೇಲು ಜಾತಿಗಳಿಗೆ ತಾತ್ಕಲೀನ ಒಪ್ಪಂದವಾಗಿತ್ತೆ ಹೊರತು ಅದು ದಲಿತ ಸಮುದಾಯಗಳ ಭವಿಷ್ಯದ ಆಶಯದಿಂದಲ್ಲ. ರಾಜಕೀಕರಣಗೊಂಡಿರುವ ಸಮುದಾಯಗಳು ಯಾವತ್ತೂ ತಮ್ಮ ಅಧಿಕಾರವನ್ನು ಬಿಟ್ಟುಕೊಡುವುದಿಲ್ಲ. ಬಿಟ್ಟರೂ ಮುಂದಿನ ಅಧಿಕಾರ ಹಿಡಿಯುವ ತಂತ್ರಕ್ಕೆ ಬಿಟ್ಟಿರುತ್ತದೆ. ದಲಿತ ಸಮಾಜವು ಇದರಲ್ಲೇ ಹೋರಾಡುತ್ತ ಪ್ರತಿತಂತ್ರ ಮಾಡುತ್ತ ಅಖಂಡವಾದ ಹಾದಿಯಲ್ಲಿ ಚಲಿಸಲಾಗದೆ ಅಧಿಕಾರದ ಕೇಂದ್ರದ ಸುತ್ತಲೇ ಸುತ್ತುವ ಇಕ್ಕಟ್ಟಿಗೆ ಸಿಲುಕುತ್ತದೆ.

ಇದು ಒಂದು ಸಮುದಾಯದ ಸಮಷ್ಟ ನ್ಯಾಯಕ್ಕೆ ಬೇಕಾದ ರಾಜಕಾರಣವಾಗಿರುವುದಿಲ್ಲ. ಹಿಂದುಳಿದ ವರ್ಗ ಗಳೆಲ್ಲವೂ ಕ್ಷಣಿಕವಾದ ರಾಜಕೀಯ ಒಪ್ಪಂದ ಹಾಗೂ ನಂಬಿಕೆಗಳಲ್ಲೇ ಮುಂದುವರಿದು ಶಾಶ್ವತವಾಗಿ ಎಲ್ಲರ ಬಗೆಗೂ ಅವಿಶ್ವಾಸವನ್ನೆ ಇಟ್ಟುಕೊಳ್ಳಬೇಕಾದ ಸಾಮಾಜಿಕ ಮೌಲ್ಯಗಳ ಹೇರಿಕೆ ಇರುವುದರಿಂದ ಅಖಂಡವಾದ ದಲಿತ ರಾಜಕಾರಣವಾಗಲಿ ಹಿಂದುಳಿದ ವರ್ಗಗಳ ಸಮ್ಮಿಶ್ರ ರಾಜ ಕಾರಣವಾಗಲಿ ಘಟಿಸುವುದೇ ಇಲ್ಲ ಎಂಬಷ್ಟು ಹತಾಶೆಯ ವಾತಾವರಣ ನಿರ್ಮಾಣವಾಗಿದೆ.

ದೇವರಾಜಅರಸು ಅವರ ಕಾಲದ ರಾಜಕೀಯ ಎಚ್ಚರವು ಈ ಹೊತ್ತಿಗೆ ಒಂದು ಬಲವಾದ ಹಂತವನ್ನು ತಲುಪಿದ್ದರೂ ಅದಕ್ಕೆ ರಾಜ್ಯಾಧಿಕಾರದ ಹಂತವನ್ನು ತಲುಪುವುದು ಇನ್ನೂ ಅಸಾಧ್ಯವಾಗಿಯೇ ಉಳಿದಿದೆ. ಹೀಗೆ ಅಲಕ್ಷ್ಯಕ್ಕೆ ಒಳಗಾಗಿರುವ ಎಲ್ಲ ಹಿಂದುಳಿದ ಸಮುದಾಯಗಳು ಕೂಡ ದಲಿತ ಸಮುದಾಯಗಳನ್ನು ನಂಬಲಾರವು ಹಾಗೆಯೆದಲಿ ಸಮಾಜವು ಹಿಂದುಳಿದ ವರ್ಗಗಳ ಸಾಮಾಜಿಕ ರಚನೆಯ ಜೊತೆ ಬೆರೆಯಲು ಸಾಧ್ಯವಾಗಿಲ್ಲ.

(ಮುಂದುವರೆಯುವುದು) □

'ಅಹಿಂದ' ರಾಜಕಾರಣ ಮತ್ತು ಜಾಗತೀಕರಣ

ಅಹಿಂದ ಮತ್ತು ಕರ್ನಾಟಕದ ರಾಜಕಾರಣ

ಚರ್ಚೆ

ಚರ್ಚೆ

'ಅಹಿಂದ' ಕುರಿತ ಚರ್ಚೆ ನಾಡಿನಲ್ಲೀಗ ವ್ಯಾಪಕವಾಗಿ ನಡೆಯುತ್ತಿದೆ. ೧೯೭೭ಲರಲ್ಲಿ ಕೋಲಾರದಲ್ಲಿ ಆರಂಭ ಗೊಂಡಿದ್ದ 'ಅಹಿಂದ' ಇಂದು ರಾಜಕೀಯ ಸ್ಥಿಂತ್ಯಂತರಗಳಿಂದಾಗಿ ಇಡೀ ನಾಡಿನಲ್ಲಿ ಸಂಚಲನವನ್ನು ಹುಟ್ಟಿ ಹಾಕಿದೆ. ಸಾಮಾಜಿಕ ಬದಲಾವಣೆಗೆ ಕಾರಣವಾಗುವ ಇಂಥ ಚರ್ಚೆಗಳು ಆರಂಭವಾದಾಗಲೆಲ್ಲಾ 'ಸಂವಾದ' ಪತ್ರಿಕೆ ತಳೆದಿರುವ ಆರೋಗ್ಯಕರ ನಿಲುವು ಹಾಗೂ ಅದು ರೂಪಿಸುತ್ತಾ ಬಂದಿರುವ ಚಿಂತನೆಗಳ ಬಗೆಗೆ 'ಸಂವಾದ'ದ ಓದುಗರಿಗೆಲ್ಲ ಅರಿವಿದೆ. 'ಅಹಿಂದ' ರಾಜಕಾರಣವು ದಿಕ್ಕು ತಪ್ಪದಂತೆ ನಡೆಯಲು ಕರ್ನಾಟಕದ ಪ್ರಜ್ಞಾವಂತ ವಲಯ ಈ ನಿಟ್ಟಿನಲ್ಲಿ ಹೊಸ ಚಿಂತನೆಯನ್ನು ರೂಪಿಸಬೇಕೆಂಬ ಆಶಯ ದೊಂದಿಗೆ ಸಂವಾದ, ಪ್ರಶ್ನೋತ್ತರ ಹಾಗೂ ಚರ್ಚೆ ಗಳನ್ನು ಆರಂಭಿಸಿದೆ.

○ಪ್ರೊ॥ ರಹಮತ್ ತರೀಕೆರೆ

ಕರ್ನಾಟಕದಲ್ಲಿ ಈಚೆಗೆ ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು ಹಾಗೂ ದಲಿತರು ಒಂದಾಗುವ ಮತ್ತು ಪರ್ಯಾಯ ರಾಜಕಾರಣ ಕಟ್ಟುವ ಮಾತುಗಳು ಕೇಳಿ ಬರುತ್ತಿವೆ. ಈ ಮಾತುಗಳಲ್ಲಿ ಕನಸಿನ ಕರ್ನಾಟಕವೊಂದು ಹುದುಗಿದೆ. ಆದರೆ ಈ ಕನಸಿನ ನಾಡು ಕಟ್ಟುವಲ್ಲಿ ಅನೇಕ ತಾತ್ವಿಕ, ರಾಜಕೀಯ ಸಮಸ್ಯೆಗಳಿವೆ. ಅವನ್ನು ಮುಖಾಮುಖಿ ಮಾಡುವುದು ಅಗತ್ಯವಾಗಿದೆ.

1. ಪರ್ಯಾಯ ರಾಜಕಾರಣದ ಚರ್ಚೆಯಲ್ಲಿ ಎದ್ದು ಕಾಣುವುದು ಜಾಗತೀಕರಣದ ಗೈರು ಹಾಜರಾತಿ, ಭೂಮಂಡಲವನ್ನು ಆವರಿಸುತ್ತಿರುವ ಮಾರುಕಟ್ಟೆ ಎಕಾನಮಿ, ಯುದ್ಧ ಸಂಸ್ಕೃತಿ, ಬೆದರಿಸಿ ಮಣಿಸುವ ನೀತಿಗಳನ್ನು ಅನುಸರಿಸುತ್ತಿರುವ ಅಮೆರಿಕೆಯ ಸಾಮ್ರಾಜ್ಯಶಾಹಿ ಈಗ ಮೂರ್ತರೂಪದಲ್ಲಿಯೇ ನಿಂತಿದೆ. ಇರಾಕಿನ ಮೇಲಿನ ಯುದ್ಧವು ಒಂದು ಉದಾಹರಣೆ ಅಷ್ಟೆ. ಇದರ ವಿರುದ್ಧ ಕರ್ನಾಟಕದಲ್ಲಿ ಸಮರ್ಥನೆಗಳೂ ಇವೆ. ಸಂಘರ್ಷಗಳೂ ನಡೆಯುತ್ತಿವೆ. ಇಲ್ಲಿನ ಸರಕಾರ, ಬಹು ರಾಷ್ಟ್ರೀಯ ಕಂಪನಿಗಳು ಹಾಗೂ ಹಿಂದುತ್ವವಾದವು ಈ ಜಾಗತೀಕರಣದ ಯಜಮಾನರ ಜತೆ ಮೈತ್ರಿ ಇರಿಸಿಕೊಂಡಿವೆ. ಅದರಲ್ಲೂ ಸಂಘ ಪರಿವಾರವು ಸ್ಥಳೀಯವಾಗಿ ಎಬ್ಬಿಸುವ ಸಣ್ಣ ದೊಂಬಿಯ ಹಿಂದೆ ಅಂತಾ ರಾಷ್ಟ್ರೀಯ ಯಜಮಾನರ ನೆರಳಿರುವಂತಿದೆ.

ಯಾಕೆ ಸಂಘ ಪರಿವಾರಕ್ಕೆ ರೈತರ ಸಾವು ಕಾಡುವುದಿಲ್ಲ? ಧರ್ಮದ ಹೆಸರಲ್ಲಿ ಅದು ನಮ್ಮ ಸಮಾಜವನ್ನು ಯಾಕೆ ಸೀಳುತ್ತಿದೆ? ಈ ಪ್ರಶ್ನೆಗಳಿಗೂ ಅದರ ಅಂತಾರಾಷ್ಟ್ರೀಯ ಯಜಮಾನರ ಜತೆ ಅದು ಇರಿಸಿಕೊಂಡಿರುವ ಮೈತ್ರಿಗೂ ಸಂಬಂಧವಿದೆ ಇದನ್ನು ಗಣಿಸದಿದ್ದರೆ ಎಲ್ಲ ಸಮಸ್ಯೆಗಳು ನಮ್ಮ ಸಮಾಜದ ಒಳಗೇ ಇರುವ ಅಂತಃಕಲಹಕ್ಕೆ ಸಂಬಂಧಿಸಿದವು ಎಂಬರ್ಥ ಬರುತ್ತದೆ. ಅಂತಾರಾಷ್ಟ್ರೀಯ ರಾಜಕೀಯ ಆರ್ಥಿಕ ವಿದ್ಯಮಾನಗಳ ಜತೆಗೆ ಸ್ಥಳೀಯ ಸಮಸ್ಯೆಗಳನ್ನು ಜೋಡಿಸಿ ಚಿಂತಿಸುವ ವಿಷಯದಲ್ಲಿ ದಲಿತ ಶೂದ್ರ ಚಿಂತನೆಗಳು ಮೊದಲಿಂದಲೂ ಹಿಂಜರಿಕೆ ಮಾಡಿಕೊಂಡು ಬಂದಿವೆ. ಇದಕ್ಕೆ ಕಾರಣ ಅವು ಮಾರ್ಕ್ಸ್‌ವಾದದ ಜತೆ ಇರಿಸಿ ಕೊಂಡಿರುವ ಅನುಮಾನಗಳಿರಬಹುದು. ಇದಕ್ಕೆ ಭಾರತದ ಕಮ್ಯೂನಿಷ್ಟರೂ ಕಾರಣವಾಗಿರಬಹುದು. ಹೀಗಾಗಿ ಕೂಡ ತಾತ್ವಿಕವಾಗಿ, ವೈಚಾರಿಕವಾಗಿ ಸ್ಥಳೀಯ ನೆಲೆಯಲ್ಲಿ ಎಲ್ಲ ಸಮಸ್ಯೆಗಳು ಇವೆ. ಅವನ್ನು ಸ್ಥಳೀಯವಾಗಿಯೇ ಬಗೆಹರಿಸಿಕೊಳ್ಳಬಹುದು ಎಂಬ ಚಿಂತನೆ ಇದ್ದಂತಿದೆ. ನಮ್ಮ ರೈತರ ಆತ್ಮಹತ್ಯೆಗಳು, ಬಹುರಾಷ್ಟ್ರೀಯ ಕಂಪನಿಗಳು ರಾಜ್ಯಾಧಿಕಾರವನ್ನು ನಿಯಂತ್ರಿಸುವುದು. ಇವೆಲ್ಲ ಕೇವಲ ಸ್ಥಳೀಯವಲ್ಲ ತಾನೆ? ಅಂತರಾಷ್ಟ್ರೀಯ ಸನ್ನಿವೇಶಗಳನ್ನು 'ನಮಗೆ ಸಂಬಂಧ ಇಲ್ಲದು' ಎಂಬಂತೆ ಕೇವಲ ಸ್ಥಳೀಯ ರಾಜಕಾರಣ ಮಾಡಬಹುದೆ?

2. ಎರಡನೆಯದಾಗಿ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ದಲಿತರು ಹೊರತುಪಡಿಸಿದ ಜನ ಸಮುದಾಯಗಳ ಪಾತ್ರದ ಗೈರು ಹಾಜರಾತಿ. ಸಾಮಾನ್ಯವಾಗಿ ಅಹಿಂದದ ರಾಜಕೀಯ ಚಿಂತನೆಯಲ್ಲಿ ಯಾವಾಗಲೂ ಬ್ರಾಹ್ಮಣ್ಯ ವಿರೋಧಿ ನಿಲುವು ತೀವ್ರವಾಗಿರುತ್ತದೆ. ಆದರೆ ಕನಸಿನ ಹೊಸ ಸಮಾಜ ಕಟ್ಟುವಲ್ಲಿ ಅಹಿಂದೇತರ ಸಮುದಾಯಗಳ ಜತೆ ಅಹಿಂದದ ಸಂಬಂಧ ಎಂತಹದು ಎಂಬ ಪ್ರಶ್ನೆ ನನಗೆ ಮುಖ್ಯವೆಂದು ತೋರುತ್ತದೆ. ಯಾಕೆಂದರೆ ನಮ್ಮ ಸಮಾಜದ ಉಚ್ಚ ಜಾತಿಯ ಒಂದು ಭಾಗ ತಂತನ್ನ ಮತದ ಸನಾತನವಾದದಿಂದ ಬಿಡಿಸಿಕೊಂಡು ಒಟ್ಟು ಸಮಾಜದ ಆರೋಗ್ಯಕ್ಕಾಗಿ ಕೆಲಸ ಮಾಡುತ್ತಿದೆ. ಅಹಿಂದದ ಹೊಸ ರಾಜಕಾರಣದಲ್ಲಿ ತಂತಮ್ಮ ಜಾತಿಯ ಸನಾತನ ವಾದದಿಂದ ಬಿಡಿಸಿಕೊಂಡು ಒಟ್ಟು ಸಮಾಜದ ಹೋರಾಟಗಳಲ್ಲಿ ಬರುತ್ತಿರುವ ಈ ಮಾನವತಾವಾದಿ ಗಳನ್ನು ಕೂಡಿಕೊಳ್ಳುವ ಬಾಹುಗಳೆ ಕಡಿಮೆ ಎಂದು ನನಗೆ ಅನುಮಾನ. ತಾವೂ ಬಿಡುಗಡೆಯಾಗುತ್ತ ಒಟ್ಟು ಸಮಾಜದ ಬಿಡುಗಡೆಯಲ್ಲಿ ತೊಡಗಿರುವ ಈ ಧಾರೆ ಯನ್ನು ಒಟ್ಟು ಸಾಮಾಜಿಕ

ಬದಲಾವಣೆಯ ಹೋರಾಟದಲ್ಲಿ ಸೇರುವ ನದಿಯೆಂದು ಭಾವಿಸದಿದ್ದರೆ, ನಮ್ಮ ಸಾಮಾಜಿಕ ಬದಲಾವಣೆಯ ಪರಿಕಲ್ಪನೆ ಅರೆಬರೆ ಯಾಗುವುದು. ಆಯಾ ಸಾಮಾಜಿಕ ಸಮುದಾಯವು ತನ್ನ ಕಷ್ಟಗಳಿಗೆ ತಾನೇ ಹೋರಾಡಬೇಕು ಎಂಬಂಥ ವಾತಾವರಣ ನಿರ್ಮಾಣವಾಗಿಬಿಟ್ಟರೆ, ಕೂಡು ಹೋರಾಟದ ಪರಿಕಲ್ಪನೆಯು ಬಲಗೊಳ್ಳದಿದ್ದರೆ, ಯಾವುದೇ ಪ್ರಗತಿಪರ ರಾಜಕಾರಣದ ಮಾನವೀಯತೆಯೇ ಮುಕ್ಕಾಗುವುದಿಲ್ಲವೆ ಎಂಬ ಆತಂಕ ಕಾಡುತ್ತಿದೆ.

3. ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳೂ, ದಲಿತರು (ಅಹಿಂದ) ಎನ್ನುವಾಗ ಅವು ಒಂದು ಬಗೆಯ ಆಲೋಚನೆ ಮಾಡುವ ಗುಂಪುಗಳು ಎಂಬ ಗ್ರಹಿಕ ಪ್ರಶ್ನೆಗಳಲ್ಲಿದೆ. ಆದರೆ ಅವು ಏಕರೂಪಿ ಚಿಂತನೆ ಮಾಡುವ ಗುಂಪುಗಳಲ್ಲ. ಅವುಗಳ ಒಳಗೆ ಸಾಮಾಜಿಕ ಆರ್ಥಿಕ ಭೇದಗಳಿವೆ. ತಾತ್ವಿಕವಾಗಿ ವಿಭಿನ್ನ ಚಿಂತನೆಯ ಧಾರೆಗಳಿವೆ. ಅವು ಅನೇಕ ವಾದಗಳಲ್ಲಿ, ಸಂಘಟನೆಗಳಲ್ಲಿ, ರಾಜಕೀಯ ಪಕ್ಷಗಳಲ್ಲಿ ಚದುರಿ ಹೋಗಿವೆ. ಇಲ್ಲಿರುವ ಗುಂಪುಗಳಲ್ಲಿ ಸಾಮಾಜಿಕವಾದ ಏಕತೆಯನ್ನು ತಾತ್ಕಾಲಿಕವಾಗಿ ಕಲ್ಪಿಸಿಕೊಳ್ಳಬಹುದು. ಆದರೆ ಇವುಗಳ ಒಳಗೇ ಇರುವ ನಿರ್ಗತಿಕರು ಹಾಗೂ ಉಳ್ಳವರ ನಡುವೆ ವ್ಯತ್ಯಾಸವನ್ನು ಮರೆಯುವಂತಿಲ್ಲ. ಈ ವರ್ಗಭೇದಗಳು ಅಮುಖ್ಯವಾದರೆ ಅಹಿಂದದ ರಾಜಕೀಯ ಏಕತೆಯೂ ಇಲ್ಲಿರುವ ಬಲಿಷ್ಠರ ಪಾಲಿಗೆ ಹಾಲು ಹಿಂಡುವ ಹಸುವಾಗುವುದಿಲ್ಲವೆ?

4. ಇನ್ನು ಮುಸ್ಲಿಮರ ಬಹುಮುಖಿ ಕಷ್ಟಗಳ ಸಮಸ್ಯೆ. ಮುಸ್ಲಿಮರಲ್ಲಿ ದೊಡ್ಡ ಪ್ರಮಾಣದ ಜನ ಸಂಖ್ಯೆಯು ಇವತ್ತು ತನ್ನ ಬಡತನ ಸಾಮಾಜಿಕ ಹಿಂದುಳಿವಿಕೆಗಳ ಅನಕ್ಷರತೆಗಳ ವಿರುದ್ಧ ಸೆಣಸುತ್ತಿದೆ. ತಮ್ಮ ಬದುಕುವ ಹಕ್ಕನ್ನೇ ನಿರಾಕರಿಸುತ್ತಿರುವ ಸಂಘ

ನಿವಾರದ ಜತೆ ಮುಖಾಮುಖಿಯಾಗಬೇಕಿದೆ. ಜತೆಜತೆಗೆ ಮ್ಮದೇ ಧರ್ಮದ ಮೂಲಭೂತವಾದದ ವಿರುದ್ಧವೂ ಾಸಬೇಕಾದ ವಿಚಿತ್ರ ಇಕ್ಕಟ್ಟಿನಲ್ಲಿದೆ. ಹೀಗಾಗಿ ಹಿಂದೂ ೋಮುವಾದದ ವಿರುದ್ಧದ ನಿಷ್ಠುರ ನಿಲುವನ್ನು ತಳೆಯು ಂತೆಯೇ ಮುಸ್ಲಿಂ ಮೂಲಭೂತವಾದದ ವಿರುದ್ಧವೂ ಾಕ್ತ ನಿಲುವು ತಳೆಯುವುದು ಅಗತ್ಯವಾಗಿದೆ.

ಅಹಿಂದದ ಪರ್ಯಾಯ ರಾಜಕಾರಣ ಕಲ್ಪನೆ ುಲ್ಲಿ ಮಹಿಳೆಯರ ಬುಡಕಟ್ಟುಗಳ ಭಾಗವಹಿಸುವಿಕೆಯ ಸ್ತಾಪಗಳು ಇರುವುದೇ ಕಡಿಮೆ. ಇವತ್ತು ಕೋಮುವಾದ, ತ್ಯಲೆಬ್ಬಿಸುವಿಕೆ. ರೈತರ ಆತ್ಮಹತ್ಯೆ ಇವೆಲ್ಲ ದುರಂತಗಳ ೂರೆಯನ್ನು ಹೆಚ್ಚು ಹೊರುತ್ತಿರುವವರು ಮಹಿಳೆಯರು. ಾಗಾಗಿ ಪರ್ಯಾಯ ರಾಜಕಾರಣದಲ್ಲಿ ಮಹಿಳೆಯ ಮಸ್ಯೆಗಳೂ ಅವರ ಭಾಗವಹಿಸುವಿಕೆಯೂ ಮುಖ್ಯ ಾಗಿದೆ.

ಈ ತಾತ್ವಿಕ ಸಮಸ್ಯೆಗಳ ಪ್ರಸ್ತಾಪ ನಮ್ಮೆದುರು ುವ ಸಾಮಾಜಿಕ, ರಾಜಕೀಯ, ಆರ್ಥಿಕ ಸನ್ನಿವೇಶದ ಂಕೀರ್ಣತೆ ಸೂಚಿಸುತ್ತದೆ.

ದಲಿತರು, ಓಬಿಸಿಗಳು, ಮುಸ್ಲಿಮರು, ಕ್ರೈಸ್ತರು ಂದುಗೂಡಬೇಕು ಎಂಬ ಕಲ್ಪನೆ ಈ ಹೊತ್ತಿನ ಚಾರಿತ್ರಿಕ ಗತ್ಯವಾಗಿರಬಹುದು. ಪ್ರಶ್ನೆ ಎಂದರೆ ಒಗ್ಗೂಡುವಿಕೆಯಾ ಗಿ ಮತ್ತು ಹೇಗೆ ಎಂಬುದು. ಇವರನ್ನು ಸೇರಿಸುವ ರಿದ ಮೇಲೆ ಕೂಡಿಕೆಯನ್ನು ಕಾಯ್ದುಕೊಳ್ಳುವ ಮಾನ ತತ್ವ ಯಾವುದು? ಸಮಾನ ತತ್ವವಿಲ್ಲದೆ ಸಮಾನ ತ್ರುವಿನ ವಿರುದ್ಧ ಸೇರುವ ಯಾವ ಏಕತೆಗಳೂ ಬಹು ಲ ಬದುಕಲಾರವು. ದಲಿತರು, ಮುಸ್ಲಿಮರು, ಕ್ರೈಸ್ತರು ಜಾತಿಯವರು ಎಂದೊಡನೆ ನಮ್ಮ ಸಮಾಜದ ವಿಭಿನ್ನ ಾತಿ ಧರ್ಮಗಳು ಅವುಗಳ ಒಳಗಿನ ಭೇದಗಳು ನೆನಪಾ ತ್ತವೆ. ಈ ಭೇದಗಳನ್ನು ಇಟ್ಟುಕೊಂಡೇ ಜನ ನಿತ್ಯಜೀವ ದಲ್ಲಿ ಬದುಕುತ್ತಾರೆ ಎಂದು ಭಾವಿಸಬೇಕಿಲ್ಲ. ಆದರೆ ಸಮಾನಗಳ ಚರಿತ್ರೆಯುಳ್ಳ ಈ ಭೇದಗಳನ್ನು ಅಮುಖ್ಯ ಳಿಸುವ ತತ್ವ ಕಾರ್ಯಕ್ರಮ ಯಾವುದು? ಸಾಮಾನ್ಯ ಗಿ ಮುಸ್ಲಿಮರ ಬಗ್ಗೆ ನಗರದಲ್ಲಿರುವ ಮಧ್ಯಮ ವರ್ಗದ ಲಿತರು ಸವರ್ಣೀಯರಂತೆಯೇ ಆಲೋಚಿಸುತ್ತಾರೆ. ಚ್ಚಿನ ಮುಸ್ಲಿಮರು ಹಾಗೂ ಹಿಂದುಳಿದ ಜಾತಿಯವರು ಲಿತರ ಬಗ್ಗೆ ಸವರ್ಣೀಯರಂತೆಯೋ ಅಲೋಚಿಸು ರೆ.

ನಮ್ಮ ಗ್ರಾಮಗಳಲ್ಲಿ ದಲಿತ ಂದುಳಿದ ಜಾತಿ ಹಾಗೂ ಮುಸ್ಲಿಮರ ಂಬಂಧಗಳು, ನಗರಗಳಲ್ಲಿ ಕುಳಿತು ಜಕೀಯವಾಗಿ ಮಾಡುವ ಏಕತೆಯ ಕ್ಯಾಚಾರಗಳಿಗೆ ಅನುಗುಣವಾಗಿಲ್ಲ. ದಲಿ ಲ್ಲೇ ಇರುವ ಸಾಮಾಜಿಕ ಒಳಭೇದ ು ದೊಡ್ಡ ಪ್ರಶ್ನೆಯಾಗಿ ದಲಿತ ಎಂಬ ಕಲ್ಪನೆಯನ್ನು ಎಡಗೈ ಬಲಗೈ ಎಂದು ರು ಮಾಡಿವೆ. ಪರಿಶಿಷ್ಟ ಜಾತಿಗಳಲ್ಲಿ ್ಯ-ಅಸ್ಪೃಶ್ಯ ಭೇದಗಳು ತಲೆಯೆತ್ತುತ್ತಿವೆ. ೀಸಲಾತಿಯ ಒಂದೇ ಕೆಟಗರಿಯಲ್ಲಿ ುವ ಜಾತಿಗಳು ಪಾಲಿಗಾಗಿ ಮಾಡುವ ಜಗಳಗಳು ಬಹಳ ತೀವ್ರವಾಗಿವೆ. ಥ ಹೊತ್ತಲ್ಲಿ ವಿಶಾಲ ಚೌಕಟ್ಟಿನ ಂದದ ರಾಜಕೀಯ ಸಾಮಾಜಿಕ ಏಕತೆ ಬಗ್ಗೆ ಯೋಚಿಸಲಾಗುತ್ತಿದೆ. ತಂತಮ್ಮ ಜಾತಿ ಗುರುತುಗಳನ್ನು ಒಳಗೆ ಆಳವಾಗಿ ಹಿಡಿದುಕೊಂಡೇ ಒಗ್ಗೂಡುವ ಈ ಏಕತೆಯು, ಸಣ್ಣ ಭಿನ್ನಾಭಿಪ್ರಾಯ ಬಂದರೂ ಕುಸಿದು ಬೀಳುತ್ತವೆ. ತಂತಮ್ಮ ಜನಾಂಗಗಳ ಪಾಲು ಪಡೆಯುವ ಹಪಾಪಿ ತನ ಹಕ್ಕು ದಾರಿಕೆಗಳು ಅವಕಾಶವಾದಿತನ ಹೆಚ್ಚಿಸುತ್ತವೆ. ಈ ಕಾರಣ ಕ್ಕಾಗಿಯೇ ಬ್ರಾಹ್ಮಣ ವಿರೋಧ ಮಾಡುವುದಕ್ಕೆ ಉತ್ಸಾಹ ತೋರುವ ಆದರೆ ರಾಜಕೀಯವಾಗಿ ದಲಿತ ಅಲ್ಪಸಂಖ್ಯಾ ತರನ್ನು ಒಳಗೊಳ್ಳುವ ಉಳಿದಂತೆ ಸಾಮಾಜಿಕವಾಗಿ ದ್ವೇಷಿ ಸುವ ವಿಚಿತ್ರ ಓಬಿಸಿ ಸಮಾಜಶಾಸ್ತ್ರವು ಹುಟ್ಟಿರುವುದು.

ಎಂತಲೇ ಅಹಿಂದದ ರಾಜಕೀಯ ಏಕತೆ, ಶಿಕ್ಷಣ, ನೌಕರಿ, ರಾಜಕೀಯ ಅಧಿಕಾರಗಳೆಲ್ಲ ಮೀಸಲಾತಿ ಪ್ರಕಾರ ಪಾಲು ಹಂಚಿಕೊಳ್ಳುವ ನೆಲೆಯಿಂದ ಬಹಳ ಮೇಲಕ್ಕೇಳುವುದಿಲ್ಲ; ಇದು ಜಾತಿಧರ್ಮಗಳನ್ನು ಕೆಲಮಟ್ಟಿಗಾದರೂ ಬೈಪಾಸ್ ಮಾಡಬಲ್ಲ ಆರ್ಥಿಕ ರಾಜಕೀಯ ಇಶ್ಯೂಗಳ ಮೇಲೆ ನಾವು ಒಗ್ಗೂಡುವುದು ಸಾಧ್ಯವೇ ಇಲ್ಲ ಎಂಬ ಸಾಧ್ಯತೆಯತ್ತ ಕರೆದೊಯ್ಯಬಹುದು, ಜಾತಿಮತಗಳ ಹಂಗನ್ನು ಬೈಪಾಸ್ ಮಾಡಬಲ್ಲ ಕಾರ್ಯಕ್ರಮಗಳೆಂದರೆ ರೈತರ ಸಮಸ್ಯೆ, ಬಡತನದ ಸಮಸ್ಯೆ, ಮಹಿಳೆಯರ ಕಷ್ಟಗಳು, ಅಮೆರಿಕನ್ ಸಾಮ್ರಾಜ್ಯಶಾಹಿ ವಿರುದ್ಧದ ಕೂಡುವಿಕೆ. ಇಂತಹವು; ಮಾನವ ಹಕ್ಕುಗಳ ವಿಷಯದಲ್ಲಿ ಕೂಡುವಿಕೆ ಕೋಮುವಾದದ ವಿರುದ್ಧ ಕೂಡುವಿಕೆ ಇಂಥವು. ಇವು ತಮಗಾಗಿ ಹೋರಾಡುವ ಬದಲು ಇಡೀ ಸಮಾಜದ ಹದುಳಕ್ಕಾಗಿ ಕೆಲಸ ಮಾಡುವ ವಿಶಾಲ ನೆಲೆಯನ್ನು ಕೊಡುತ್ತವೆ.

ಸಾಮಾಜಿಕ ಸಂಘಟನೆ ಚಳವಳಿ ಆದರ್ಶವಾದಿ ಆಶಯವನ್ನು ವ್ಯಕ್ತಮಾಡುವುದು ಸುಲಭ. ಸಾಮಾಜಿಕ ವಾಸ್ತವದಲ್ಲಿ ಸಮುದಾಯಗಳ ಸಂಬಂಧಗಳು ಬಹಳ ಜಟಿಲವಾಗಿರುತ್ತವೆ. ಉದಾ: ಕೋಮುವಾದವು ಹೆಚ್ಚಿನ ದಲಿತರಿಗೆ, ಕೆಳಜಾತಿಯವರಿಗೆ ಉರಿಯುವ ಸಮಸ್ಯೆ ಎಂದು ಯಾಕೆ ಅನಿಸಿಲ್ಲ? ದಲಿತರು ಜಾತಿ ದಬ್ಬಾಳಿಕೆಗೆ ಸೆನ್ಸಿಟಿವ್ ಆಗಿರುವಷ್ಟು ದಲಿತರು ಕೋಮುವಾದಕ್ಕೆ ಯಾಕೆ ಸೆನ್ಸಿಟಿವ್ ಆಗಿರುವುದಿಲ್ಲ? ಈ ಪ್ರಶ್ನೆಯನ್ನು ನಾನು ಅನೇಕ ಸಲ ಕೇಳಿಕೊಂಡಿದ್ದೇನೆ. ಇದಕ್ಕೆ ಕಾರಣ ಗ್ರಾಮೀಣ ಭಾಗದಲ್ಲಿ ಇವು ಮುಸ್ಲಿಮರ ಜತೆ ಇಟ್ಟುಕೊಂಡಿರುವ ಸಹಜ ಸಂಬಂಧಗಳ ಕಾರಣಕ್ಕಿರಬಹುದು; ಅನೇಕ ದಲಿತ ಚಿಂತಕರಿಗೆ ಕೋಮುವಾದವು ಮುಸ್ಲಿಮರನ್ನು ಹದ್ದುಬಸ್ತಿನಲ್ಲಿಡಲು ಹುಟ್ಟಿರುವ ರಾಜಕಾರಣವಿರಬಹುದು; ಅದರಲ್ಲೂ ಉತ್ತರದಲ್ಲಿ ಬಿಎಸ್ಪಿ, ಬಿಜೆಪಿ, ಜತೆ ಸರಕಾರ ಮಾಡಿದ ಅನುಭವ ಕೂಡ ಕಾರಣ ಇರಬಹುದು;

ಆದರ ಸಂಘ ಪರಿವಾರಕ್ಕೆ ಆಳದಲ್ಲಿ ಭಯವಿರುವುದು ಮುಸ್ಲಿಮರ ಮೇಲಲ್ಲ. ದಲಿತರ ಮೇಲೆ. ಪಾಕಿಸ್ತಾನ ವಿದೇಶಿ ನಿಷ್ಠೆ ಪರಕೀಯ ಧರ್ಮ ಎಂಬ ಆಯುಧ ಬಳಸಿ ಮುಸ್ಲಿಮರನ್ನು ಅದು ಕಟಕಟೆಯಲ್ಲಿ ನಿಲ್ಲಿಸಿಬಿಡುತ್ತದೆ. ಅವರ ತಪ್ಪೇನು ಎಂದು ಸಾಬೀತಾಗುವ ಮೊದಲೆ ಶಿಕ್ಷಿಸಿಬಿಡುತ್ತದೆ. (ಗೋಧ್ರಾದಲ್ಲಿ ರೈಲಿಗೆ ಬೆಂಕಿ ಹಚ್ಚಿದವರು ಯಾರೆಂಬುದು ತೀರ್ಪು ಬರುವ ಮೊದಲೇ ಮುಸ್ಲಿಮರಿಗೆ ಶಿಕ್ಷೆ ಆಗಿ ಬಿಟ್ಟಿದೆ) ಆದರೆ ದಲಿತರ ವಿಷಯ ಬಂದೊಡನೆ ತಾನೇ ಕಟಕಟೆಗೆ ನಿಲ್ಲುತ್ತದೆ. ಎಂತಲೇ ಅದು ತನ್ನ ಆತ್ಮ ಪರೀಕ್ಷೆ ಮಾಡಿಕೊಳ್ಳುವ ತಪ್ಪೊಪ್ಪಿಕೊಳ್ಳುವ ಸನ್ನಿವೇಶ ನಿವಾರಿಸಿ ಕೊಳ್ಳಲು ಮುಸ್ಲಿಮರು ಚಾರಿತ್ರಿಕ ಹಾಗೂ ವರ್ತಮಾನದ 'ತಪ್ಪು'ಗಳನ್ನು ಮುಂದಿಡುವ ತಂತ್ರ ಬಳಸುತ್ತದೆ. ಮತಾಂತರ, ಗೋಹತ್ಯೆ, ದೇವಸ್ಥಾನ ಕೆಡವಿದ ಘಟನೆಗಳನ್ನು ಮುಂದು ಮಾಡಲಾಗುತ್ತಿರುವುದು ಹೀಗೆ.

ಸಾಮಾನ್ಯವಾಗಿ ಮುಸ್ಲಿಮರು ಮತ್ತು ದಲಿತರು ಎರಡು ವಿಷಯಗಳಲ್ಲಿ ಒಟ್ಟಾಗುವ ಸನ್ನಿವೇಶ ಬರುತ್ತದೆ. ಅದು ಮತಾಂತರ ಹಾಗೂ ದನದ ಮಾಂಸದ ಪ್ರಶ್ನೆಯಲ್ಲಿ. ದಲಿತರು ಮತಾಂತರ ಮಾಡುವುದು ಇಸ್ಲಾಂ ಧರ್ಮ ಆಕರ್ಷಣೆಯಿಂದಲ್ಲ. ಹಿಂದೂ ಜಾತಿವ್ಯವಸ್ಥೆಗೆ ರೋಸಿ, ಅದನ್ನುಧಿಕ್ಕರಿಸಿ ಅಪಮಾನಿಸಬೇಕು ಎಂಬ ರೋಷದಿಂದ. ನನ್ನ ಪ್ರಕಾರ ಮತಾಂತರವು ದಲಿತರಿಗೆ ಈಗಲೂ ನೇತ್ಯಾತ್ಮಕ ಪ್ರತಿಭಟನೆಯ ಮಾರ್ಗವಾಗಿದೆ. ವಾಸ್ತವದಲ್ಲಿ ದಲಿತರು ಇಸ್ಲಾಮಿಗೆ ಮತಾಂತರವಾಗುವುದು ಕಡಿಮೆ. ಬೌದ್ಧ ಧರ್ಮಕ್ಕೆ ಹೆಚ್ಚು. ಆದರೂ ಸಂಘ ಪರಿವಾರವು ಹರಿಹಾಯುವುದು ಮುಸ್ಲಿಮರ ಮೇಲೆ. ಕೆಲವು ತಿಂಗಳ ಹಿಂದೆ ಅಷ್ಟೊಂದು ದಲಿತರು ಬೌದ್ಧ ಧರ್ಮಕ್ಕೆ ಬೆಂಗಳೂರಿನಲ್ಲಿ ಸೇರಿದರು. ಆಗ ಅದು ತುಟಿ ಒಡೆಯಲಿಲ್ಲ ಎನ್ನುವುದು ಗಮನಾರ್ಹ. ದಲಿತರು ಮತಾಂತರವಾಗಲಿ ಬಿಡಲಿ, ಮತಾಂತರದ ಬೆದರಿಕೆ ಹಾಕಿದಾಗೆಲ್ಲ ಸಂಘ ಪರಿವಾರ ಆತ್ಮವಿಮರ್ಶೆಗೆ ಇಳಿಯುವ ಬದಲು, ಮುಸ್ಲಿಮ್ ದ್ವೇಷವನ್ನು ಹೆಚ್ಚಿಸಿಕೊಡುತ್ತದೆ. ಇದರಿಂದ ದಲಿತರು ಅಪರೋಕ್ಷವಾಗಿ ಮುಸ್ಲಿಮ್ ದ್ವೇಷವನ್ನು ಹೆಚ್ಚಿಸುತ್ತಾರೆಯೇ ಎಂದು ಅನಿಸುತ್ತದೆ.

ಅಹಿಂದ ರ್‍ಯಾಲಿಯೊಂದರಲ್ಲಿ ವಿವಿಧ ಪಕ್ಷಗಳ ಮುಖಂಡರು

ಇನ್ನು ದನದ ಮಾಂಸದ ಪ್ರಶ್ನೆ. (ನಾನು 'ಗೋಮಾಂಸ' ಎಂಬ ಶಬ್ದ ಬಳುಸುವುದಿಲ್ಲ. ಯಾಕೆಂದರೆ ಇದು 'ಬೀಫ್' ತಿನ್ನುವವರು ಬಳಸುವ ಪದವಲ್ಲ. ದನದ ಮಾಂಸಕ್ಕೆ ಧಾರ್ಮಿಕ ಸಂವೇದನೆಯ ಅಯಾಮ ಕೊಟ್ಟು ಅದನ್ನು ತಿನ್ನವವರು ದುಷ್ಟರೆಂಬಂತೆ ಚಿತ್ರಿಸಲು ಸಂಘ ಪರಿವಾರ ಉದ್ದೇಶಪೂರ್ವಕವಾಗಿ ಸೃಷ್ಟಿಸಿದ ಪದವಿದು. ಆದ್ದರಿಂದ ದನದ ಮಾಂಸದ ಚರ್ಚೆಯಲ್ಲಿ ಪ್ರಗತಿಪರರು ಗೋಮಾಂಸ ಎಂಬ ಶಬ್ದವನ್ನು ಎಂದೂ ಬಳಸಬಾರದು.) ಚಾರಿತ್ರಿಕ ದಾಖಲೆಗಳು ಹೇಳುವಂತೆ ಒಂದು ಕಾಲಕ್ಕೆ ಬ್ರಾಹ್ಮಣರ ಪೂರ್ವಜರು ದನದ

ಮಾಂಸ ವನ್ನು ಸೇವಿಸುತ್ತಿದ್ದರು. ಆದರೆ ಈಗ ಈ ಚರಿತ್ರೆಯ ನೆನಪೇ ಇಲ್ಲದಂತೆ ಸಂಘ ಪರಿವಾರ ಮಾತಾಡುತ್ತದೆ. ದನದ ಮಾಂಸದ ಪ್ರಶ್ನೆ ಬಂದಾಗಲೆಲ್ಲ ಅದು ಹಲ್ಲೆ ಮಾಡುವುದು ಮುಸ್ಲಿಮರ ಮೇಲೆ. ವಾಸ್ತವದಲ್ಲಿ ಇದು ದಲಿತರನ್ನು ಒಳಗೊಂಡಂತೆ ನಾಗರಿಕ ಸಮಾಜದಲ್ಲಿ ಒಬ್ಬರ ಆಹಾರದ ಹಕ್ಕಿನ ಪ್ರಶ್ನೆ. ದನದ ಮಾಂಸವನ್ನು ಯಾರೂ ಮತ್ತೊಬ್ಬರ ಧಾರ್ಮಿಕ ಭಾವನೆ ನೋಯಿಸಲು ತಿನ್ನುವುದಿಲ್ಲ. ಅದು ಕುರಿ, ಕೋಳಿಕೊಳ್ಳಲಾಗದ ಬಡವರ ಆಹಾರ ಕೂಡ.

ದನ ಕೊಯ್ದು ಮಾಂಸ ಮಾರಾಟ ಮಾಡುವ ಕೆಲಸವನ್ನು ಮುಸ್ಲಿಮರು ಮಾಡುತ್ತಾರೆ, ನಿಜ. ಆದರೆ ತಿನ್ನುವವರಲ್ಲಿ ಮುಸ್ಲಿಮೇತರರು ಮತ್ತು ಬಡವರು ಹೆಚ್ಚು; ಇದು ಬೀಫ್ ಅಂಗಡಿಯಲ್ಲೊ ಹೋಟೆಲಲ್ಲೊ ಒಂದು ಗಂಟೆ ಕೂತರೆ ಗೊತ್ತಾಗುತ್ತದೆ. ಮತಾಂತರ ಹಾಗೂ ದನದ ಮಾಂಸದ ವಿಷಯದಲ್ಲಿ ಸಂಘ ಪರಿವಾ ರವು ಆಳದಲ್ಲಿ ದಲಿತರ ಧಾರ್ಮಿಕ ಮತ್ತು ಆಹಾರದ ಹಕ್ಕುಗಳ ಮೇಲಿನ ಹಲ್ಲೆಯನ್ನು ಮಾಡುತ್ತಿದೆ. ನೆಪಕ್ಕೆ ಅದು ಹಸುವಿನ ಹೆಗಲ ಮೇಲೆ ತುಪಾಕಿಯಿಟ್ಟು ಮತ್ತೆ ಮತ್ತೆ ಮುಸ್ಲಿಮರನ್ನೇ ಗುರಿ ಮಾಡಿ ಹೊಡೆಯುತ್ತದೆ.

ಹಿಂದುತ್ವವಾದವನ್ನು ಮೂಲಭೂತ (ಫಂಡ ಮೆಂಟಲಿಸಂ) ಎಂದು ಕರೆಯುವುದಕ್ಕಿಂತ ಕೋಮುವಾದ (ಕಮ್ಯುನಲಿಸಂ) ಎಂದು ಕರೆಯುವುದು ತಾತ್ವಿಕವಾಗಿ ಉಚಿತ. ಇಸ್ಲಾಮಿನಲ್ಲಿ ಧಾರ್ಮಿಕ ಮೂಲಭೂತವಾದವಿದೆ. ಇದು ಗತಕಾಲದ ನಿಯಮಗಳಿಗೆ ವರ್ತಮಾನವನ್ನು ನಿಷ್ಠವಾಗಿಸಲು ಯತ್ನಿಸುತ್ತದೆ. ಮಹಿಳೆಯರನ್ನು ಪ್ರಗತಿ ಪರರನ್ನು ದಮನಿಸುತ್ತದೆ. ಆಧುನಿಕ ಪ್ರಗತಿಯಿಂದ ತನ್ನ ಸಮುದಾಯವನ್ನು ಪ್ರಗತಿಯಿಂದ ವಂಚಿಸಿ ದಮನಿಸುತ್ತದೆ. ಅದಕ್ಕೆ ಮುಸ್ಲಿಮರ ಬಡತನ ಹಸಿವುಗಳಿಗಿಂತ ಅವರನ್ನು ಸ್ವರ್ಗಕ್ಕೆ ಕಳಿಸುವುದು ಮುಖ್ಯ.

ಈ ಕಾರಣಕ್ಕೆ ತನ್ನ ಸಮುದಾಯವನ್ನು ತಾನೇ ನಾಶ ಮಾಡುವ ಭಸ್ಮಾಸುರ ಅದು. ಆದರೆ ಹಿಂದುತ್ವವಾದವು ಧಾರ್ಮಿಕ ಶ್ರದ್ಧೆಯಿಂದ ಹುಟ್ಟಿದ ಮೂಲಭೂತವಾದವಲ್ಲ. ಅದು ತನ್ನ ವರ್ಗಗಳ ಹಿತಾಸಕ್ತಿ ಕಾಪಾಡಲು ಹುಟ್ಟಿರುವ ಯೋಜನಾಬದ್ಧ ರಾಜಕಾರಣ. ಅದು ದೇಶಭಕ್ತಿಯ ಎಷ್ಟೇ ಕೂಗಾಟ ಮಾಡಿದರೂ ದೇಶಕ್ಕೆ ವಿರುದ್ಧವಾಗಿ ಅದು ಯಾವತ್ತೂ ಪರಕೀಯ ಶಕ್ತಿಗಳ ಜತೆ ಕೈಜೋಡಿಸಿದೆ. ಹಿಂದೆ ಅದು ಬ್ರಿಟಿಷರ ಜತೆ ಕೈಜೋಡಿಸಿತ್ತು. (ಸಾವರ್ಕರರು ಅಂಡಮಾನಿನ ಜೈಲಿನಲ್ಲಿ ಬರೆದುಕೊಟ್ಟ ತಪ್ಪೊಪ್ಪಿಗೆ ಪತ್ರ ಒಂದು ನಿದರ್ಶನ ಮಾತ್ರ) ನಂತರ ಅದು ಜಗತ್ತಿನ ಶಕ್ತಿಶಾಲಿ ಮಿಲಿಟರಿ ಶಕ್ತಿಯಾದ ಅಮೆರಿಕೆಯ ಜತೆ ಕೈಜೋಡಿಸಿದೆ. ಅದಕ್ಕೆ ಯಯೂದಿಗಳ ಜಿಯೋನಿಸಂ ಜತೆ ಮಾತ್ರ ಹೋಲಿಸಬಹುದು. ಯಾಕೆಂದರೆ ಈ ಎರಡಕ್ಕೂ ತನ್ನ ಜತೆ ಸಹಜೀವನ ಮಾಡುವ ಸಮುದಾಯವನ್ನು ದ್ವೇಷಿಸುವ ಮತ್ತು ದಮನಿಸುವ ಗುಣವಿದೆ.

ತಮಗಿಂತ ಬಲಿಷ್ಠ ಶಕ್ತಿಯ ಜತೆ ಅಪವಿತ್ರ ಮಾಡಿಕೊಂಡು ಗುಲಾಮಗಿರಿಗೆ ದೂಡುವ ಗುಣವಿದೆ. ಸಂಘ ಪರಿವಾರದ ಹಿತವಚನದಲ್ಲಿ ನಡೆಯುತ್ತಿರುವ ಕೇಂದ್ರ ಸರಕಾರವು ಪ್ಯಾಲೆಸ್ಟೇನಿನ ನೆಲವನ್ನು ಸೈನಿಕ ಬಲದಿಂದ ಕಬಳಿಸಿರುವ ಇಸ್ರೇಲಿನ ಜತೆ ಗಾಢ ಗೆಳತನ ಬೆಳೆಸುತ್ತಿರುವುದು ಆಕಸ್ಮಿಕವಲ್ಲ. ಪ್ರವೀಣ್ ತೊಗಾಡಿಯಾ

ಹಿಂದುತ್ವವಾದವು ಧಾರ್ಮಿಕ ಶ್ರದ್ಧೆಯಿಂದ ಹುಟ್ಟಿದ ಮೂಲಭೂತವಾದವಲ್ಲ. ಅದು ತನ್ನ ವರ್ಗಗಳ ಹಿತಾಸಕ್ತಿ ಕಾಪಾಡಲು ಹುಟ್ಟಿರುವ ಯೋಜನಾಬದ್ಧ ರಾಜಕಾರಣ. ಅದು ದೇಶಭಕ್ತಿಯ ಎಷ್ಟೇ ಕೂಗಾಟ ಮಾಡಿದರೂ ದೇಶಕ್ಕೆ ವಿರುದ್ಧವಾಗಿ ಅದು ಯಾವತ್ತೂ ಪರಕೀಯ ಶಕ್ತಿಗಳ ಜತೆ ಕೈಜೋಡಿಸಿದೆ. ಹಿಂದೆ ಅದು ಬ್ರಿಟಿಷರ ಜತೆ ಕೈ ಜೋಡಿಸಿತ್ತು. (ಸಾವರ್ಕರರು ಅಂಡಮಾನಿನ ಜೈಲಿನಲ್ಲಿ ಬರೆದುಕೊಟ್ಟ ತಪ್ಪೊಪ್ಪಿಗೆ ಪತ್ರ ಒಂದು ನಿದರ್ಶನ ಮಾತ್ರ) ನಂತರ ಅದು ಜಗತ್ತಿನ ಶಕ್ತಿಶಾಲಿ ಮಿಲಿಟರಿ ಶಕ್ತಿಯಾದ ಅಮೆರಿಕೆಯ ಜತೆ ಕೈಜೋಡಿಸಿದೆ. ಅದಕ್ಕೆ ಯಯೂದಿಗಳ ಜಿಯೋನಿಸಂ ಜತೆ ಮಾತ್ರ ಹೋಲಿಸಬಹುದು. ಯಾಕೆಂದರೆ ಈ ಎರಡಕ್ಕೂ ತನ್ನ ಜತೆ ಸಹಜೀವನ ಮಾಡುವ ಸಮುದಾಯ ವನ್ನು ದ್ವೇಷಿಸುವ ಮತ್ತು ದಮನಿಸುವ ಗುಣವಿದೆ.

ಅವರು ಅಮೆರಿಕದ ಯುದ್ಧಗಳನ್ನು ಭಾರತ ಬೆಂಬಲಿಸಬೇಕೆಂದು ಕರೆಗೊಟ್ಟಿದ್ದು ಆಕಸ್ಮಿಕವಲ್ಲ. ಸಂಘ ಪರಿವಾರವು ಜಗತ್ತಿನ ಏಕೈಕ ಹಿಂದೂ ರಾಷ್ಟ್ರ ಎಂದು ಕರೆಯುವ ನೇಪಾಳವನ್ನು ಬಲಿಕೊಟ್ಟಿರುವ ರೀತಿ ಗಮನಿಸಿದರೆ ಅದರ ನೀತಿ ತಿಳಿಯುತ್ತದೆ. ಅಮೆರಿಕ ಹೇಳಿದಂತೆ ಕೇಳುತ್ತ ತನ್ನ ದೇಶದ ಜನಬೆಂಬಲವನ್ನು ಕಳೆದುಕೊಂಡಿರುವ ನೇಪಾಳದ ಒಬ್ಬ ಫ್ಯೂಡಲ್ ಹಿಂದೂ ದೊರೆಗೆ ಭಾರತದ ಸಂಘ ಪರಿವಾರದ ಸರಕಾರ ಬೆಂಬಲಿಸುತ್ತದೆ.

ಆದರೆ ಬಡ ನೇಪಾಳಿಗಳು ರಾಜಶಾಹಿಯ ವಿರುದ್ಧ ಅಮೆರಿಕದ ಬಹು ರಾಷ್ಟ್ರೀಯ ಕಂಪನಿಗಳ ವಿರುದ್ಧ ತಮ್ಮ ಬಡತನ ಹಿಂದುಳಿವಿಕೆ ವಿರುದ್ಧ ಹೋರಾಟ ಮಾಡುತ್ತಿದ್ದಾರೆ. ಈ ಹೋರಾಟವನ್ನು ದಮನಿಸಬಲ್ಲ ಅಮೆರಿಕದ 500 ಜನ ಅಧಿಕಾರಿಗಳನ್ನು ನೇಪಾಳದಲ್ಲಿಟ್ಟಿದೆ. ಅಂದರೆ ಏನಾಯಿತು? ನೇಪಾಳವು ಅಮೆರಿಕಕ್ಕೆ ತುತ್ತಾದರೂ ಸರಿ. ಅವರಿಗೆ ಹಿಂದೂ ರಾಜ್ಯ ಉಳಿಯಬೇಕು. ಕೋಮುವಾದಕ್ಕೆ ನಮ್ಮ ಸಮಾಜದ ಬಡವರ ಹಸಿವು ಸಂಕಟಗಳು ಎಂದೂ ಯಾಕೆ ಮುಖ್ಯವಾಗಲಿಲ್ಲ ಎಂಬುದನ್ನು ಇಲ್ಲಿ ಅರಿಯ ಬಹುದು. ಇದನ್ನೆ ನಾನು ಸಂಘ ಪರಿವಾರದ ಅಂತರಾಷ್ಟ್ರಿಯ ರಾಜಕಾರಣದ ಜತೆ ಇರಿಸಿಕೊಂಡಿರುವ ಸಂಬಂಧ ಎಂದು ಕರೆದಿರಬಹುದು; ಸ್ಥಳೀಯವಾಗಿ ಒಂದು ಕೋಮುಗಲಭೆ ಮಾಡಿದರೂ ಅದರ ಹಿಂದೆ ಈ ವಿದೇಶಿ ಸಂಬಂಧದ ನೆರಳಿರುತ್ತದೆ ಎಂದಿದ್ದು; ಅಮೆರಿಕದ ಯುರೋಪುಗಳ ಮಾರುಕಟ್ಟೆ ಅರ್ಥಶಾಸ್ತ್ರವೂ ಭಾರತದ ಕೋಮುವಾದವೂ ಗುಪ್ತವಾಗಿ ಒಂದಾಗಿರುವಂತಿದೆ ಅವಕ್ಕೆ ಸಮಾನ ಶತ್ರುಗಳೆಂದರೆ ಒಂದು ಇಸ್ಲಾಂ. ಎರಡು ಜನರ ಆರ್ಥಿಕ ಸಂಕಟಗಳ ಬಗ್ಗೆ ದನಿಯೆತ್ತುವ ಸಾಮ್ರಾಜ್ಯ ಶಾಹಿಯ ಯುದ್ಧಗಳನ್ನು ಅಥವಾ ಕೋಮು ಸಂಘರ್ಷಗಳನ್ನು ವಿರೋಧಿಸುವ ಜನಪರ ಎಡಪಂಥೀಯ ಹೋರಾಟಗಳು ಇಂತಹ ಸಂಘ ಪರಿವಾರದ ಜತೆ ರಾಜಕೀಯ ಲಾಭಕ್ಕಾಗಿ ದಲಿತ ಹಿಂದುಳಿದ ವರ್ಗದವರು ಜತೆಗೂಡಬಹುದು ಎಂ ಹೇಳುವವರು ಇದ್ದಾರೆ.

ದಲಿತ ಮಧ್ಯಮವರ್ಗಗಳೊಳಗಿಂದ, ನಿ ದ್ಯೋಗಿ ದಲಿತ ಒಳಗಿಂದ 'ಯಾರಾದರೂ ಸರಿ ನಮ ರಾಜಕೀಯ ಅಧಿಕಾರ ಸಿಗಲಿ' ಎಂಬ ಹೊಂದಾಣಿಕೆ ರಾಜಕೀಯ ಚಿಂತನೆ ಬಲವಾಗಿ ಹುಟ್ಟುತ್ತಿದೆ. ಇದೊಂ ಬಗೆಯಲ್ಲಿ ರಾಜಕೀಯವಾಗಿ ವಾಸ್ತವವಾದಿ ಇನ್ನೊಂ ಬಗೆಯಲ್ಲಿ ವಿಚಿತ್ರವಾಗಿ ಅವಕಾಶವಾದಿ. ಯಾಕೆಂದರೆ ಇ ರಲ್ಲಿ ನಗರದ ದಲಿತರ ಮಧ್ಯಮವರ್ಗದ ಹಿತಗಳಿಸಿರು ಹಾಗೆ, ಗ್ರಾಮೀಣ ಭೂರಹಿತ ದಲಿತರಿಗೆ ಯಾವ ಪ ಹಾರವಿಲ್ಲ. ಹೀಗಾಗಿ ಕೂಡ ಬ್ರಾಹ್ಮಣಶಾಹಿಯ ಹೊ ಅವತಾರದ ಸಂಘ ಪರಿವಾರದ ಕೋಮುವಾದ ಹುನ್ನಾರ ಅನೇಕ ಕಲಿತ ದಲಿತರಿಗೆ ಮುಖ್ಯ ಸಮಸ್ಯೆ ಅ ಸುತ್ತಿರಬೇಕು. ಜಾಗತಿಕರಣ ಮುಖ್ಯ ಸಮಸ್ಯೆಯಲ್ಲ ಅನಿ ತ್ತಿರಬೇಕು. ನಮಗೆ ಅಧಿಕಾರ ಬೇಕು. ಯೋಗ್ಯ ಬೇಕ ಯಾವ ಪಕ್ಷದವನಾದರೇನು ತತ್ವವಾದರೇನು ಅನ್ನಿಸುತ್ತಿ ಬೇಕು.

ಬಿಎಸ್‌ಪಿ ಜತೆ ಕೆಲಸ ಮಾಡುತ್ತಿರುವ ವಿದ ವಂತ ನಿರುದ್ಯೋಗಿ ದಲಿತ ತರುಣನನ್ನು ಮಾತಾಡಿ ದರೆ ಇದು ಗೊತ್ತಾಗುತ್ತದೆ. ನನ್ನ ವಿದ್ಯಾರ್ಥಿ ಕುಶಾ ಬಹಳ ದಿನಗಳ ಬಳಿಕ ಸಿಕ್ಕಾಗ ಹೇಳಿದರು. 'ಕರ್ನಾಟಕ ಬುದ್ಧಿಜೀವಿಗಳಿಗೆ ಮಯಾವತಿ ಬಿಜೆಪಿ ಜತೆ ಹೊಂದಾಣಿ ಮಾಡಿಕೊಂಡು ಮಾಡಿದ ರಾಜಕೀಯ ಪ್ರಯೋ ಅರ್ಥವೇ ಆದಂತಿಲ್ಲ. ರಾಜಕೀಯ ಅಧಿಕಾರ ಇಲ್ಲದೆ ದ ತರಿಗೆ ಯಾವ ಸವಲತ್ತೂ ಸಿಗುವುದಿಲ್ಲ. ಈ ಅಧಿಕಾರ ಹಳೆ ದಲಿತ ಸಂಘರ್ಷ ಸಮಿತಿಯ ಚಳವಳಿಗಳಿಂ ಸಾಧ್ಯವಿಲ್ಲ. ದಲಿತರು ಶಕ್ತಿ ರಾಜಕಾರಣದಲ್ಲಿ ಆದರ್ಶಗ ಹಂಗಿಲ್ಲದೆ ನೇರ ಚೌಕಾಸಿ ಮಾಡಿ ಅಧಿಕಾರ ಪಡೆಯ ಬೇಕು. ಇದನ್ನು ಅರ್ಥ ಮಾಡಿಕೊಳ್ಳಲು ನಿಮಗೆಲ್ಲ ಆಗ ಇಲ್ಲ'

ಬಹುಶಃ ನನ್ನ ಈ ಮಿತ್ರ ವಾಸ್ತವಿಕವಾ ಸತ್ಯವನ್ನೇ ಹೇಳುತ್ತಿರಬಹುದು. ಈ ಮಾತುಗಳನ ಆದರ್ಶಗಳ ಬೆನ್ನುಬಿದ್ದು ಯಾವ ನೌಕರಿಯೂ ಸಿಗದ ಅಲೆದು ಸಾಕಾದ ಬಳಿಕ ಆತ ಆಡುತ್ತಿದ್ದಾನೆ ಎಂಬುದನ ಮರೆಯುವಂತಿಲ್ಲ. ಹೀಗಾಗಿ ದಲಿತರಲ್ಲಿ ಒಂದು ಗುಂಪ ರಾಜಕೀಯ ಅಧಿಕಾರವನ್ನು ಪಡೆಯಲು ಇರುವ ಯಾವುದೇ ರಾಜಕೀಯ ಗುಂಪುಗಳ ಜತೆ ಹೊಂದಾಣಿಕ ಮಾಡಿಕೊಳ್ಳುವುದು ತಪ್ಪಿಲ್ಲ ಎಂದು ಭಾವಿಸಿದೆ. ಜೀವನ ಕೊಡದ ಭಾಷೆ, ಸಂಸ್ಕೃತಿ, ಆದರ್ಶ, ತತ್ವ ಇವುಗಳಿಗ ಬದ್ಧವಾಗಿರಬೇಕೆಂದು ಅವರ ನಿರುದ್ಯೋಗ ಕಷ್ಟಗಳಲ್ಲಿ ಚಳವಳಿಗಳು ಹೇರಿದ ಭಾರಕ್ಕೆ ಹೊಸ ತಲೆಮಾರಿನ ಒಂದು ಭಾಗ ಹೀಗೆ ಪ್ರತಿಭಟಿಸುತ್ತಿರಬಹುದು. ಇದಕ ಕಾರಣ ಪ್ರಭುತ್ವದ ಜತೆಗಿನ ದಲಿತರ ಸಂಬಂಧದಲ್ಲಿರು ವುದು. ಹಿಂದಿನಿಂದಲೂ ದಲಿತರು, ಅಲ್ಪಸಂಖ್ಯಾತರು ಹಿಂದುಳಿದ ಜಾತಿಗಳ ಪ್ರಭುತ್ವದ ಜತೆಗಿನ ಸಂಬಂಧ ಎಂದರೆ ಹಾಸ್ಟೆಲ್, ಶಾಲೆ, ನೌಕರಿ; ಮೀಸಲಾತಿ ಮುಂತಾ ದವನ್ನು ಗುದ್ದಾಡಿ ಪಾಲು ಪಡೆಯುವುದು ಎಂಬಂತಾ ಗಿದೆ. ಇಲ್ಲ ಪ್ರಭುತ್ವದ ಜತೆ ಸಂಘರ್ಷಕ್ಕಿಂತ ಚೌಕಾಸಿ ಮುಖ್ಯ. ಒತ್ತಡದ ತಂತ್ರ ಮುಖ್ಯ. ಅಗ ಪ್ರಭುತ್ವವು ಯಾವ ಬಗೆಯ ಅಂತರಾಷ್ಟ್ರೀಯ ನೀತಿಯನ್ನು ತಾಳುತ್ತದ

(27ನೇ ಪುಟಕ್ಕೆ)

ಶ್ರೀಧರ ಕಲಿವೀರ, ವಕ್ತಾರರು, ಬಿ.ಎಸ್.ಪಿ

ಅಹಿಂದ ಚರ್ಚೆ ಮತ್ತು ಕರ್ನಾಟಕದ ರಾಜಕಾರಣ

ಮತ ಕ್ರೋಢೀಕರಣ ಬೇಕು

ಪ್ರಶ್ನೆ: ಅಲ್ಪಸಂಖ್ಯಾತ, ಹಿಂದುಳಿದ, ದಲಿತ ತಿಗಳ ಸಂಘಟನೆ 'ಅಹಿಂದ' ಕರ್ನಾಟಕದ ರಾಜಕೀ ಕ್ಕೆ ಇಂದು ಅಗತ್ಯವೆ?

ಉತ್ತರ: 'ಅಹಿಂದ' ರಾಜಕೀಯೇತರ ಸಂಘ ನೆಯಾಗಿದ್ದು, ಅದರಲ್ಲಿ ವಿವಿಧ ರಾಜಕೀಯ ಪಕ್ಷದವರು ತ್ತು ಪಕ್ಷಗಳೊದಿಂಗೆ ಗುರುತಿಸಿಕೊಳ್ಳದವರು ತೊಡಗಿಸಿ ಂಡಿದ್ದಾರೆ. ಈ ರಾಜಕೀಯೇತರ ಸಂಘಟನೆ ನಡೆಸುವ ಚಾರಿಕ ಆಂದೋಲನವು ಕರ್ನಾಟಕದ ರಾಜಕೀಯಕ್ಕೆ ೂಸ ಚಿಂತನೆಗಳನ್ನು ನೀಡಬಲ್ಲದು. ಆದರೆ "ಶಾಶ್ವತ' ರಿಹಾರ"ವನ್ನಲ್ಲ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಾಶ್ವತ ಪರಿಹಾರ'ವನ್ನು ಕೇಂದ್ರ ಮತ್ತು ರಾಜ್ಯ ಮತ್ತು ರ್ಕಾರಗಳು ನೀಡಬಲ್ಲವು. ಅಂದರೆ ಸರ್ಕಾರ ರಚಿಸಲು ಾಜಕೀಯ ಪಕ್ಷಗಳು ನೀಡಬಲ್ಲವು. ರಾಜಕೀಯ ಪಕ್ಷ ಂದು ಶೋಷಿತ ವರ್ಗಗಳ ವಿಮೋಚನೆಗಾಗಿ ಹಮ್ಮಿ ಳ್ಳುವ ರಾಜಕೀಯ ಚಳುವಳಿ ಮಾತ್ರ ಶಾಶ್ವತ ಪರಿ ರ ನೀಡಬಲ್ಲದು.

'ಭಾರತದಲ್ಲಿ ಜಾತಿರಹಿತ–ವರ್ಗರಹಿತ–ಲಿಂಗ ೀದ ರಹಿತ ಸಮಾಜ ರಚನೆಯ ಗುರಿ ಹೊಂದಿದ ರಾಜ ಯ ಚಳುವಳಿಯನ್ನು ಆರಂಭಿಸಿದವರು, ಡಾ॥ಬಿ.ಆರ್. ಂಬೇಡ್ಕರ್‌ರವರು. ಅವರ ಪರಿ ನಿಬ್ಬಾಣದ ತರುವಾಯ ವರ ಅನುಯಾಯಿಗಳು ಆ ಚಳುವಳಿಯನ್ನು ಸೈದ್ಧಾಂತಿ ವಾಗಿ ಮುಂದುವರೆಸಲಿಲ್ಲ. ಡಾ॥ ಲೋಹಿಯಾರವರ ೋಷಲಿಸ್ಟ್‌ಪಾರ್ಟಿ ಸ್ವಲ್ಪ ಮಟ್ಟಿಗೆ ಈ ನಿಟ್ಟಿನಲ್ಲಿ ಹೆಜ್ಜೆ ಟ್ಟರೂ ಸಹಾ ಅವರ ಅನುಯಾಯಿಗಳು ಪಕ್ಷವನ್ನೇ ಸರ್ಜಿಸಿ ಅಸಾಹುತಗೈದರು. 70ರ ದಶಕದಲ್ಲಿ ಆ ೋಷಿಯಲಿಸ್ಟ್‌ಪಾರ್ಟಿ ಹಾಗೂ ಅದರ ಸಮಾಜವಾದಿ ುವಜನಸಭಾ ಚಳುವಳಿಯನ್ನು ಪ್ರೊ॥ ಎಂ.ಡಿ.ಎನ್., ಲಂಕೇಶ್, ತೇಜಸ್ವಿ ಹಾಗೂ ದಲಿತ ವರ್ಗಗಳಿಗೆ ರಿದ ಪ್ರೊ॥ ಬಿ.ಕೃಷ್ಣಪ್ಪ, ದೇವನೂರು ಮಹಾದೇವ, ನು (ಶ್ರೀಧರ ಕಲಿವೀರ) ಇತರರು ಕಟ್ಟಿ ಬೆಳೆಸಿದ್ದೆವು.

ಜನಪರ ಸರ್ಕಾರ ಸ್ಥಾಪನೆಗಾಗಿ 'ಜೆ.ಪಿ. ಳುವಳಿ'ಗಾಗಿ ದುಡಿದೆವು. ಆ ಚಳುವಳಿ 'ಜನತಾ ಪಕ್ಷ' ಾಗಿ ವ್ಯವಸ್ಥೆಯನ್ನೇ ಮುಂದುವರಿಸಿತು. ಹೀಗೆ ರಾಜ ಯೇತರ ಚಳುವಳಿಗಳು ಆರಂಭವಾಗಿ ಅದು ಸಿದ್ಧಾಂತ ಲ್ಲದ ಪಕ್ಷಗಳಲ್ಲಿ ಸೇರಿದರೆ, ಸಮತಾ ಸಮಾಜ ಸ್ಥಾಪಿಸ ಗದು. ನಾನು ಈ ಮಾತನ್ನು ಇತಿಹಾಸದ ದೃಷ್ಟಾಂತ ನ್ನು ಆಧರಿಸಿ ನನ್ನ 33 ವರ್ಷಗಳ ಅನುಭವವನ್ನು ಧರಿಸಿ ಹೇಳುತ್ತಿದ್ದೇನೆ. "ಅಹಿಂದ" ಕೂಡ ಸರಿಯಾದ ದ್ಧಾಂತವಿರುವ ಪಕ್ಷದಲ್ಲಿ ಸೇರಿಕೊಂಡು ತನ್ನ ಸಮಾನತೆ ರಿ ತಲುಪಬಹುದೇ ವಿನಃ ಸಿದ್ಧಾಂತವಿಲ್ಲದ ಹೊಸ ಕ್ಷವಾಗಿ ಪರಿವರ್ತಿತವಾದರೆ ಸಾಧ್ಯವಿಲ್ಲ. ಅಥವಾ ಅದು ಡಿ.ಎಸ್. ಬಂಡಾಯವಾದರೂ 'ಅದು ಸರಳ ಬಹು ತ ಗಳಿಸಲಾರದು'.

ಪ್ರಶ್ನೆ: ಜಾತಿಪದ್ಧತಿ ಪ್ರಬಲವಾಗಿ ಬೇರೂರಿರುವ ಾಜದಲ್ಲಿ ಹಿಂದುಳಿದ, ದಲಿತ, ಅಲ್ಪಸಂಖ್ಯಾತ ತಿವರ್ಗಗಳನ್ನು ಸಾಂಸ್ಕೃತಿಕವಾಗಿ ಒಂದುಗೂಡಿಸುವುದು ಧ್ಯವೆ?

ಉತ್ತರ: ಜಾತಿ ಪದ್ಧತಿ ಪ್ರಬಲವಾಗಿ ಬೇರೂರಿ ುವ ಸಮಾಜದಲ್ಲಿ ಅದು ಸಾಧ್ಯವಿಲ್ಲ. ಆ ಸಾಂಸ್ಕೃತಿಕ ಂದೋಲನವನ್ನು ಸಮಾನಾಂತವಾಗಿ ಇಟ್ಟುಕೊಂಡು ಗೆ ಮುಖ್ಯವಾಗಿ ರಾಜಕೀಯ ಆಂದೋಲನದ ವೇದಿಕೆ ಲ್ಲಿ ಆ ಶೋಷಿತ ಜಾತಿ ವರ್ಗಗಳನ್ನು ಒಗ್ಗೂಡಿಸುವುದು ನಿರೀಕ್ಷಿತ ಫಲಿತಾಂಶ ಮತ್ತು ಅದಕ್ಕಾಗಿ ಹಿಡಿಯುವ ಸಮಯದ ಮಾನದಂಡಗಳ ಪ್ರಕಾರ ಹೆಚ್ಚು ವಿವೇಕ ಯುತ.

ಪ್ರಶ್ನೆ: ಜಾತಿಪ್ರಜ್ಞೆ ವರ್ಗಪ್ರಜ್ಞೆಯಾಗುವುದರ ಮೂಲಕ ಅಲ್ಪಸಂಖ್ಯಾತ ಶೂದ್ರ, ದಲಿತ ಜಾತಿಗಳು ಒಗ್ಗೂಡುವುದು ಸಾಧ್ಯವೆ? ಜಾತಿಪ್ರಜ್ಞೆ ವರ್ಗಪ್ರಜ್ಞೆಯಾಗುವ ಕ್ರಮ ಯಾವುದು?

ಉತ್ತರ: ಪೆರಿಯರ್, ಬುದ್ಧ ಮತ್ತು ವಚನ ಚಳುವಳಿಗಳ ಆಶಯಗಳನ್ನು ಹೆಣೆದು ರಾಜಕೀಯ ಪಕ್ಷವನ್ನು ಕಟ್ಟಿ ಜನಪರ ಸರ್ಕಾರ ಕಟ್ಟಲು ಹೋರಾಡಿದ 'ಅಂಬೇಡ್ಕರ್' ಮಾಡೆಲ್‌ನಲ್ಲಿ ಮುನ್ನಡೆಯಲು ಸಾಧ್ಯ. ಇತರೆ ಮಾರ್ಗಗಳು ವಿಫಲವಾಗಿವೆ.

ಪ್ರಶ್ನೆ: ಅಹಿಂದ, ಬಿ.ಎಸ್.ಪಿ., ಸರ್ವೋದಯ ಕರ್ನಾಟಕ ಮುಂತಾದ ವೇದಿಕೆಗಳು–ಪಕ್ಷಗಳು ಒಂದೇ ಮತದಾರವಲಯಕ್ಕೆ ಕೈಹಾಕುವುದರಿಂದ ಜಾತ್ಯತೀತತೆಯ ಪರವಾಗಿರುವ ಮತಗಳು ವಿಭಜನೆಯಾಗುವುದಿಲ್ಲವೆ?

ಉತ್ತರ: 'ಜಾತಿಗಳು ಮುಚ್ಚಿದ ವರ್ಗಗಳು' ಎಂಬುದನ್ನು ಅಂಬೇಡ್ಕರ್‌ರವರು ವೈಜ್ಞಾನಿಕವಾಗಿ ಸಾದರ ಪಡಿಸಿದ್ದಾರೆ. 'ಜಾತಿ ಪ್ರಜ್ಞೆ' ಬಹುತೇಕ 'ವರ್ಗ ಪ್ರಜ್ಞೆ' ಯಾಗಿದೆ. ಕೆಳಜಾತಿಗಳು ಕೆಳವರ್ಗಗಳಾಗಿವೆ. ಕೆಳಜಾತಿಗಳೆಲ್ಲವೂ ಒಂದು ರಾಷ್ಟ್ರೀಯ ರಾಜಕೀಯ ಪಕ್ಷದ ಚಳುವಳಿಯಲ್ಲಿ ಒಂದಾಗಿ ಜಾತಿ ರಹಿತ, ಸಮಾಜ ರಚನೆಗಾಗಿ ಸರ್ಕಾರ ರಚಿಸುವತ್ತ ಹೆಜ್ಜೆಯಿಟಲ್ಲಿ ವರ್ಗರಹಿತ ಸಮಾಜ ಕಟ್ಟುವತ್ತ ಹೆಜ್ಜೆ ಇಟ್ಟಂತೆ. ಜಾತಿ ಜಾತಿಗಳ ನಡುವಿನ ಸಮಾನತೆ ತಂದಲ್ಲಿ ವರ್ಗ ಪ್ರಜ್ಞೆ, ಮೇಳೈಸಿ 'ಸರ್ವ ಸಮತಾ' ಸಮಾಜ ನಿರ್ಮಾಣವಾಗುತ್ತದೆ.

ಪ್ರಶ್ನೆ: ಅಹಿಂದ, ಬಿ.ಎಸ್.ಪಿ, ಸರ್ವೋದಯ ಕರ್ನಾಟಕದಂಥ ತಾತ್ವಿಕ ತಳಹದಿಯಿರುವ ವೇದಿಕೆಗಳು ಹಾಗೂ ಪಕ್ಷಗಳು ಒಟ್ಟಾಗಿ ಚುನಾವಣೆಗಳನ್ನು ಎದುರಿಸುವ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ: ಖಂಡಿತವಾಗಿ ವಿಭಜನೆಯಾಗುತ್ತವೆ. ಜಾತಿಪದ್ಧತಿ, ಮನುವಾದ, ಕೋಮುವಾದ, ಬಂಡವಾಳ ಷಾಹಿವಾದ ರಾಷ್ಟ್ರೀಯ ಆಯಾಮ ಹೊಂದಿದ್ದು, ಆ ಶೋಷಣೆ ಮುಂದುವರಿಸಲು ಕೇಂದ್ರ ಸರ್ಕಾರದಲ್ಲಿ ರಾಜಕೀಯ ಅಧಿಕಾರ ಹಿಡಿಯಬೇಕಾಗಿದ್ದು, ಶೋಷಣೆ ಸಿದ್ಧಾಂತವಿರುವ ಕಾಂಗ್ರೆಸ್, ಬಿ.ಜೆ.ಪಿ., ಜನತಾದಳ ಮತ್ತಿತರ ಪಕ್ಷಗಳು 57ವರ್ಷ ಆ ಅಧಿಕಾರ ಹಿಡಿದು ಶೋಷಣೆ ನಡೆಸಿವೆ. ಶೋಷಣೆ ಪರವಿರುವ ಜಾತಿ, ವರ್ಗಗಳ ಮತಗಳು ವಿಭಜನೆಯಾಗುವಂತಾಗಬೇಕು. ಅದೇ ವೇಳೆ ಶೋಷಣಾರಹಿತ ಸಮಾಜ, ಅಗತ್ಯವಿರುವ ಜಾತಿ, ವರ್ಗಗಳು 'ಒಂದೇ' ರಾಷ್ಟ್ರೀಯ ಪಕ್ಷದಡಿ ಒಗ್ಗೂಡಿ ಮತಗಳ ಕ್ರೋಢೀಕರಣ ಮಾಡಬೇಕು. ವಿಭಜನೆ ತಡೆಯುವ ಸರಳ ನೇರ, ಪರಿಣಾಮಕಾರಿ, ಫಲಿತಾಂಶದಾಯಕ ಮಾರ್ಗ ಇದೊಂದೆ. ಎಲ್ಲ ಪೂರ್ವಗ್ರಹಗಳನ್ನು ಬಿಟ್ಟು ಯೋಚಿಸಿದಾಗ ಹೊಳೆಯುವ ಸತ್ಯವಿದು. ವೈಯಕ್ತಿಕ ಪ್ರತಿಷ್ಠೆಗಿಂತ 'ಜನಹಿತ' ಮುಖ್ಯವೆಂಬ ಉದಾರ ಚಿಂತನೆ ಸಮಾನತಾ ಚಳುವಳಿಯ ಮುಖಂಡರಲ್ಲಿ ಮೂಡಬೇಕು. ಅಂಬೇಡ್ಕರ್‌ರವರು ಇದನ್ನು ಸಾರಿ ಸಾರಿ ಹೇಳಿದರು.

ಅವರ ತರುವಾಯ ಈ ದೇಶದ 'ಸಮತಾವಾದಿಗಳೆಲ್ಲ' ಒಂದೇ ಪಕ್ಷದಡಿ ಒಗ್ಗೂಡಿದ್ದಲ್ಲಿ ಈ ದೇಶದಲ್ಲೂ ಸಮಾಜವಾದಿ ಸರ್ಕಾರವನ್ನು ಎಂದೋ ರಚಿಸಿ ಜನರ ಕಣ್ಣೀರು ವರೆಸಬಹುದಿತ್ತು. ಈಗಲೂ ಎಲ್ಲಾ ಸಹೃದಯರು ಅದನ್ನು ಸಾಧಿಸುವತ್ತ ದೊಡ್ಡಮನಸ್ಸು ಮಾಡಬೇಕು. ನಾವು ಅಗಾಧವಾಗಿ ಪ್ರೀತಿಸುವ ನಮ್ಮ ಜನತೆಯ ಒಳಿತಿಗಾಗಿ ಇದನ್ನು ಮಾಡಬೇಕು. ಈ ನಿಟ್ಟಿನಲ್ಲಿ ಈ ದೇಶದ ಎಲ್ಲಾ ರಾಜ್ಯಗಳಲ್ಲಿ, ಜಿಲ್ಲೆಗಳಲ್ಲಿ, ಪ್ರಾದೇಶಿಕ ಸ್ವರೂಪದ ನೂರಾರು ಸಂಘಟನೆ, ಪಕ್ಷಗಳು ತಮ್ಮನ್ನು ವಿಸರ್ಜಿಸಿಕೊಂಡು ಒಂದು ಜನಪರ ರಾಷ್ಟ್ರೀಯ ಪಕ್ಷದಡಿ ವಿಲೀನ ಗೊಳ್ಳಬೇಕು. ಅಲ್ಲೀ ತನಕ ಅವುಗಳು ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳಬೇಕು.

ಬಹುಸಮಾಜ ಪಕ್ಷವು ಕಾನ್ಶಿರಾಂ, ಮಾಯಾವತಿಯವರಂತ ಅಂಬೇಡ್ಕರ್‌ವಾದಿ (ಸಮಾಜವಾದಿ) ರಾಷ್ಟ್ರೀಯ ಮುಖಂಡರ ನೇತೃತ್ವದಲ್ಲಿ 3ನೇ ಅತಿದೊಡ್ಡ ರಾಷ್ಟ್ರೀಯ ಪಕ್ಷವಾಗಿ ಹೊರ ಹೊಮ್ಮಿದೆ. ಈ ಬುಟ್ಟಿಗೆ ಶೇಕಡ 85ರಷ್ಟಿರುವ ಶೋಷಿತ ಜಾತಿ–ವರ್ಗಗಳ ಮತಗಳನ್ನು ಕ್ರೋಢಿಕರಿಸಿದಲ್ಲಿ ಮುಂದಿನ ಲೋಕಸಭೆಯಲ್ಲಿ ಸಮಾನತಾವಾದವು ಸರಳ ಬಹುಮತ ಪಡೆಯಬಹುದು. ಸುಮಾರ ನಾಲ್ಕು ಸಾವಿರ ವರ್ಷಗಳಿಂದ ವರ್ಣಜಾತಿ, ವರ್ಗ, ಲಿಂಗ ಶೋಷಣೆಗೆ ಗುರಿಯಾಗಿರುವವರು 10 ವರ್ಷಗಳಲ್ಲಿ ಸಮತಾ ಸಮಾಜ ಹೊಂದಲು ಸಾಧ್ಯ. ಈ ರಾಷ್ಟ್ರೀಯ ಪಕ್ಷದೊಂದಿಗೆ ಅಂತದೇ ಆಶಯಗಳನ್ನಿಟ್ಟು ಕೊಂಡಿರುವ ಎಲ್ಲ ಪ್ರಾದೇಶಿಕ ಚಳುವಳಿ, ಸಂಘಟನೆ, ಪಕ್ಷಗಳು ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವುದು ಸರಳ ಬುದ್ಧಿವಂತಿಕೆ ಕ್ರಮವಾಗಿದೆ. ಕರ್ನಾಟಕದಲ್ಲಿ ಸುಮಾರು 5 ಲಕ್ಷ ಮತಗಳನ್ನು ಸಾಧಿಸಿರುವ, ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರದ ಯುಗ ಆರಂಭಕ್ಕೆ ಕಾರಣೀಭೂತವಾಗಿರುವ ಬಿ.ಎಸ್.ಪಿ. ಈ ಥರದ ಪ್ರಕ್ರಿಯೆಯನ್ನು ಸ್ವಾಗತಿಸುತ್ತದೆ. □

ಸಾಮಾಜಿಕ ನ್ಯಾಯ ದಯಪಾಲಿಸುವವರಾರು?

○ದಾಸನೂರು ಕೂಸಣ್ಣ

'ಸಾಮಾಜಿಕ ನ್ಯಾಯ ಪರಿಕಲ್ಪನೆ' ಕೇವಲ ಪ್ರಸ್ತುತ ವಿದ್ಯಮಾನವೇನಲ್ಲ. ಇದು ನಿರಂತರವಾಗಿ ಸಮಾಜದೊಳಗೆ ಸಂವಾದಿಸಿಕೊಳ್ಳುತ್ತಿರುವ ಅದರ ನಡಾವಳಿಯ ಅಮೂರ್ತ ಸ್ವರೂಪದ ಪರಿಕರ. ಸಮಾಜದಲ್ಲಿ ಇಂತಹ ಪರಿಕಲ್ಪನೆಗಳಾದರೂ ಏಕೆ ಉದ್ಭವಿಸುತ್ತವೆ, ಅದಕ್ಕಿರುವ ಕಾರಣೀಭೂತ ಸಮಸ್ಯೆಗಳಾವುವು ಎಂಬ ಗಂಭೀರತೆಯನ್ನು ತುಲನಾತ್ಮಕವಾಗಿ ಪರಾಮರ್ಶಿಸಿದಾಗ ಅದರ ಪ್ರಸ್ತುತತೆಯ ಅನಿವಾರ್ಯತೆ ಸ್ಪಷ್ಟವಾಗಿ ಗೋಚರಿಸುತ್ತದೆ.

ಭಾರತೀಯ ಸಮಾಜದೊಳಗೆ ಇದು ಆಗಾಗ ಸುಂಟರಗಾಳಿಯಂತೆ ಬೀಸಿ ತೇಲಿ ಹೋಗುತ್ತಲೇ ಇದೆ. ಜಗತ್ತಿನ ಇತರ ರಾಷ್ಟ್ರಗಳಲ್ಲೂ ಸಹ ಇದರ ಅಳವಡಿಕೆಗಾಗಿ ಒತ್ತಾಯಗಳು ನಡೆಯುತ್ತಿವೆ ಹಾಗೂ ಚಿಂತನೆಗಳು ಸಹ ನಡೆದಿವೆ. ಆದರೆ ಭಾರತದಲ್ಲಿ ಆಧುನಿಕ ಶೈಕ್ಷಣಿಕತೆಯಿಂದ ಪ್ರಭಾವಿತರಾದ ಶೋಷಿತರು ಅವರವರ ಸಮುದಾಯಗಳ ಸುತ್ತಲೂ ತುಂಬಿರುವ ಸಾಮಾಜಿಕ ವೈರುಧ್ಯಳನ್ನು ವಿಶ್ಲೇಷಿಸಿ ಕೊಂಡು, ಅದರ ನಿರ್ಮೂಲನೆಗಾಗಿ ಸಾಮಾಜಿಕ ನ್ಯಾಯದ ಮೂಲಕ ನಿರ್ಮಲ ಸಾಮಾಜೀಕರಣ ಕ್ಕಾಗಿ ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಇಂತಹ ನಡವಳಿಕೆಗಳು ಸಮಾಜ ದೊಳಗೇನಾದರೂ ಸಂಭವಿಸಿದರೆ ಜಾತಿವಾದಿಗಳ ಮನಸ್ಸು ಎಲ್ಲಿಲ್ಲದ ಖಿನ್ನತೆಯನ್ನು ಅನುಭವಿಸುತ್ತದೆ. ಅಂತಹವರು ಅದರ ಪಥವನ್ನು ದಿಕ್ಕೆಡಿಸಲು ಶೋಷಿತರೊಳಗೆ ಮತ್ತಷ್ಟು ಗೊಂದಲ ಸೃಷ್ಟಿಸಿ ನವಬ್ರಾಹ್ಮಣಿಕೆಯ ಬ್ರಹ್ಮಾಸ್ತ್ರ ಪ್ರಯೋಗದಿಂದ ವಿಚಲಿತರನ್ನಾಗಿಸುತ್ತಾರೆ. ಆದರೂ ಅಲ್ಪಪ್ರಮಾಣದ ಮಾನವ ಹಕ್ಕುಗಳ ಪ್ರತಿಪಾದಕರು ಶೋಷಿತ ಸಮುದಾಯಗಳ ಅಂತರಾಳದ ಅಭಿಮತಗಳನ್ನು ಎತ್ತಿಹಿಡಿಯಲು ಪ್ರಯತ್ನಿಸುತ್ತಿದ್ದಾರೆ.

ಪ್ರಾಚೀನ ಕಾಲದಲ್ಲಿ ಬುದ್ಧ, ಮಧ್ಯಯುಗದಲ್ಲಿ ಬಸವಣ್ಣ, ತದನಂತರ ಅವರ ವಚನಕಾರರು, ತತ್ವ ಪದಗಾರರು ಹಾಗೂ ಇತ್ತೀಚಿನ ಸಂವೇದನಾಶೀಲರೂ ಸಹ ಇದರ ಅಳವಡಿಕೆಯ ಬಗ್ಗೆ ಅವರವರ ಅಭಿವ್ಯಕ್ತಿ ಮಾಧ್ಯಮಗಳ ಮುಖಾಂತರ ಸ್ಪಷ್ಟ ಸ್ವರೂಪಗಳೊಂದಿಗೆ ಸ್ಪಷ್ಟೀಕರಿಸುತ್ತಿದ್ದಾರೆ. ಸಾಮಾಜಿಕ ನ್ಯಾಯದ ಸೈದ್ಧಾಂತಿಕ ಪರಿಕಲ್ಪನೆ ಯಾವುದೇ ಬಗೆಯ ಅಸಮಾನತೆಗಳನ್ನು ಬೆಂಬಲಿಸುವುದಿಲ್ಲ. ಸಂಪತ್ತಿನ ಸೂರೆಯನ್ನಾಗಲಿ, ಅಧಿಕಾರದ ಕೇಂದ್ರೀಕೃತತೆಯನ್ನಾಗಲಿ ಮಾನ್ಯ ಮಾಡಲು ಬಯಸುವುದಿಲ್ಲ. ಅದರ ಮೂಲಧ್ಯೇಯದೊಳಗೆ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬುದನ್ನು ಒತ್ತಿಹೇಳುತ್ತದೆ. ಮತ್ತೊಂದೆಡೆ ಅದು ರಾಷ್ಟ್ರೀಯ ಅಭಿವೃದ್ಧಿ ಫಲಗಳನ್ನು ಆದಷ್ಟು ಸಮಾನವಾಗಿ ಹಂಚಿ ಅನುಭೋಗಕ್ರಿಯೆಗೆ ಅವಕಾಶ ಕಲ್ಪಿಸುತ್ತದೆ. ಅದರ ಪ್ರಾಯೋಗಿಕ ದೃಷ್ಟಿಕೋನಗಳನ್ನು ಭಾರತೀಯ ಸಂವಿಧಾನ ನಿರ್ಮಾತೃಗಳು ಒಪ್ಪಿ ಸ್ವೀಕರಿಸಿದ್ದಾರೆ. ಅದರಲ್ಲಿ ಅಡಕಗೊಂಡಿರುವ ಉದ್ಯೋಗ ಮೀಸಲಾತಿಗಳನ್ನಷ್ಟೇ ಸಾಮಾಜಿಕ ನ್ಯಾಯವೆಂದು ತೀರ್ಮಾನಿಸಿಕೊಂಡರೆ ಅದರ ವಿಸ್ತಾರ ಸಂಕುಚಿತಗೊಳ್ಳುವುದು. ಇದೊಂದು ಬಹುಮುಖಿ ಆಯಾಮಗಳಲ್ಲಿ ಅನುಷ್ಠಾನಗೊಳ್ಳ ಬಹುದಾದಂತಹ ಪ್ರಾಯೋಗಿಕ ನಡವಳಿಕೆಯಾಗಿದೆ. ಒಟ್ಟಾರೆ ಶೋಷಿತ ಸಮಾಜಗಳಾದ ಅಲ್ಪಸಂಖ್ಯಾತರು, ಹಿಂದುಳಿದವರು ಹಾಗೂ ದಲಿತರು (ಅಹಿಂದರು) ಇದರಡಿ ಸರಿಸುಮಾರು ಶೇಕಡ ೪ ರಷ್ಟು ಜನ ಉದ್ಯೋಗಸ್ಥರಾಗಿದ್ದಾರೆ. ಆದರೆ ಇನ್ನುಳಿದ ಶೇ.೯೬ರಷ್ಟು ಜನರ ದೈನಂದಿನ ಸ್ಥಿತಿಗತಿಗಳನ್ನು ಒಮ್ಮೆ ಪರಾಮರ್ಶಿಸಿದರೆ ಇದರ (ಸಾಮಾಜಿಕ ನ್ಯಾಯದ) ಪ್ರಸ್ತುತತೆಯ ಅರಿವಾಗುತ್ತದೆ.

> ಸಾಮಾಜಿಕ ನ್ಯಾಯದ ಸೈದ್ಧಾಂತಿಕ ಪರಿಕಲ್ಪನೆ ಯಾವುದೇ ಬಗೆಯ ಅಸಮಾನತೆಗಳನ್ನು ಬೆಂಬಲಿಸುವುದಿಲ್ಲ. ಸಂಪತ್ತಿನ ಸೂರೆಯನ್ನಾಗಲಿ, ಅಧಿಕಾರದ ಕೇಂದ್ರೀಕೃತತೆಯನ್ನಾಗಲಿ ಮಾನ್ಯ ಮಾಡಲು ಬಯಸುವುದಿಲ್ಲ. ಅದರ ಮೂಲಧ್ಯೇಯದೊಳಗೆ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬುದನ್ನು ಒತ್ತಿಹೇಳುತ್ತದೆ. ಮತ್ತೊಂದೆಡೆ ಅದು ರಾಷ್ಟ್ರೀಯ ಅಭಿವೃದ್ಧಿ ಫಲಗಳನ್ನು ಆದಷ್ಟು ಸಮಾನವಾಗಿ ಹಂಚಿ ಅನುಭೋಗ ಕ್ರಿಯೆಗೆ ಅವಕಾಶ ಕಲ್ಪಿಸುತ್ತದೆ. ಅದರ ಪ್ರಾಯೋಗಿಕ ದೃಷ್ಟಿಕೋನಗಳನ್ನು ಭಾರತೀಯ ಸಂವಿಧಾನ ನಿರ್ಮಾತೃಗಳು ಒಪ್ಪಿ ಸ್ವೀಕರಿಸಿದ್ದಾರೆ. ಉದ್ಯೋಗ ಮೀಸಲಾತಿಗಳನ್ನಷ್ಟೇ ಸಾಮಾಜಿಕ ನ್ಯಾಯವೆಂದು ತೀರ್ಮಾನಿಸಿಕೊಂಡರೆ ಅದರ ವಿಸ್ತಾರ ಸಂಕುಚಿತಗೊಳ್ಳುವುದು.

ಸಬಲ ಸಮುದಾಯದಲ್ಲಿ ಒಂದಷ್ಟು ದುರ್ಬಲರೂ ಇರುತ್ತಾರೆ. ಆದರೆ ಬಹುಸಂಖ್ಯಾತ ಶೋಷಿತರಲ್ಲಿ ಸಬಲರು ನಗಣ್ಯ ಪ್ರಮಾಣದಲ್ಲಿರುತ್ತಾರೆ. ಇವರು ಬಲಿ[...] ಜಾತಿ ಸಮುದಾಯಗಳೊಂದಿಗೆ ಯಾವ ಸಂದರ್ಭದಲ[...] ಪೈಪೋಟಿ ನಡೆಸಲಾರರು. ಶೋಷಿತ ವರ್ಗಗಳ ದುಬ[...]ಲರು ಸದಾ ಜಾತಿಯ ವಿಷ ವರ್ತುಲದೊಳಗೆ ಸಿಕ್ಕಿ ನ[...]ಳುತ್ತಲೇ ಇರುತ್ತಾರೆ. ಇವರು ಸದಾ ಸಬಲರ ಕೃ[...] ಶೀರ್ವಾದದಲ್ಲಿ ಬಾಳು ವಂತಹ ಸಾಮಾಜಿಕ ವ್ಯವ[...] ನಿರ್ಮಾಣ ಗೊಂಡಿರುತ್ತದೆ. ದುರ್ಬಲರ ಮನೋ[...] ಧರ್ಮವೂ ಸಹ ವಿಘಟಿತ ಸ್ವರೂಪದಲ್ಲಿರುತ್ತದೆ. ಸಾಮ[...]ಜಿಕ ನ್ಯಾಯ ತತ್ವವು ಇಂತಹ ಜಾ[...] ಸಮುದಾಯಗಳನ್ನು ಸಬಲೀ ಕರಣಗೊ[...]ಸಲು ಹಾತೊರೆಯುತ್ತಿರುತ್ತದೆ. ಅಧಿಕಾ[...] ಆಸ್ತಿ, ಪಾಸ್ತಿಗಳನ್ನು ಸಮೃದ್ಧವಾ[...] ಹೊಂದಿದ ಬಲಿಷ್ಠ ಜಾತಿ ಸಮುದಾ[...]ಗಳು ತಮ್ಮ ಅಸ್ತಿತ್ವವನ್ನು ಕಾಪಾ[...]ಕೊಳ್ಳಲು ಕರ್ಮಠ ಜಾತಿವಾದವನ[...] ಬಹಿರಂಗವಾಗಿ ಮುಂದುಮಾಡಿ, ದುಬ[...]ಲರನ್ನು ಹೊಂಚುಹಾಕಿ ಹರಕೆಯ ಕುರಿಗ[...]ನ್ನಾಗಿಸುತ್ತಾರೆ. ಇಂತಹವರ ಅಟ್ಟಹಾಸವನ[...] ಸದೆಬಡಿಯಲು ಈ ರಾಜ್ಯದಲ್ಲಿ ಪ್ರಪ್ರಥ[...]ವಾಗಿ ಅಧಿಕಾರ ವಿಭಜೀಕರಣದ ಆಶಯ[...]ಗಳನ್ನು ದೇವರಾಜ ಅರಸು ಜಾ[...]ಗೊಳಿಸಲು ಮುಂದಾಗಿ ಉಳ್ಳವ[...] ಕೆಂಗಣ್ಣಿಗೆ ಗುರಿಯಾದರು. ಇದು[...] ಪ್ರತಿಫಲವೆಂಬಂತೆ, ಅವರನ್ನು ಅ[...]ಮಾನಕರ ರೀತಿಯಲ್ಲಿ ಅಧಿಕಾರ[...] ಗದ್ದುಗೆಯಿಂದ ಕೆಳಗಿಳಿಸಿದರು.

ಭಾರತದ ಸಂಸದೀಯ ಇ[...]ಹಾಸದಲ್ಲಿ ಇಲ್ಲಿನ ಬಹುತೇಕ ರಾಜಕೀಯ ಪಕ್ಷಗಳೆಲ್ಲವ[...] ಅವಕಾಶ ಸಿಕ್ಕಿದಾಗಲೆಲ್ಲಾ ಸಾಮಾಜಿಕ ನ್ಯಾಯ[...] ದಯಪಾಲಿಸುವ ಢೋಂಗಿತನವನ್ನು ಪ್ರದರ್ಶಿಸುತ್ತಲೇ ಬಂದಿವೆ. ಅವುಗಳ ಅಂತರಾಳದಲ್ಲಿ ತುಂಬಿರುವ ಜಾ[...]ವಾದಿ ಗುಣಗಳಿಂದಾಗಿ ಪ್ರಾಯೋಗಿಕವಾಗಿ ಸಾಮಾಜಿ[...] ನ್ಯಾಯದ ಪರಿಕಲ್ಪನೆಯನ್ನು ನೈಜ ಪರಿವರ್ತನೆಗಾ[...] ಎಲ್ಲೂ ಮನಪೂರ್ವ ಕವಾಗಿ ಅನುಷ್ಠಾನಗೊಳಿಸಲು ಮುಂದಾಗಿಲ್ಲ. ಬಹುಶಃ ಇದರ ನೈಜ ಸೈದ್ಧಾಂತಿಕ ನೆ[...] ನಿರಂತರವಾಗಿ ಸ್ವತಂತ್ರ ಭಾರತದಲ್ಲಿ ಅನುಷ್ಠಾನಗೊಂಡಿದ್ದರೆ ಯಾರೊಬ್ಬರಲ್ಲೂ "ಜಾತಿಪ್ರಜ್ಞೆ" ಅಷ್ಟೊಂದಾಗಿ ಕೆರಳುತ್ತಿರಲಿಲ್ಲ. ಸವರ್ಣೀಯ ಜಾತಿಗಳಲ್ಲಿ ತುಂಬಿರುವ ಈರ್ಷ್ಯೆಯ ನಡವಳಿಕೆಗಳಿಂದಾಗಿ ಸಾಮಾಜಿಕ ನ್ಯಾಯಕ್ಕಾಗಿ ಹಂಬಲಿಸುವ ಸಮುದಾಯಗಳೆಲ್ಲವೂ ಅಪಮಾನಗೊಳ್ಳುತ್ತಲೇ ಬಂದಿವೆ. ಆದರೆ ಪ್ರತಿ ಚುನಾವಣೆಯ ಸಂದರ್ಭದ ಪಕ್ಷ ರಾಜ ಕಾರಣಿಗಳಾದವರಿಗೆ ಇದೊಂದು ಹೂಡಿಕೆರಹಿತ ಮೂಲ ಬಂಡವಾಳವಾಗಿದೆ.

ಪ್ರಸ್ತುತದಲ್ಲಿ ಸಾಮಾಜಿಕ ನ್ಯಾಯ ಬಯಸುತ್ತಿರುವ ಅತಿ ಹಿಂದುಳಿದ ಸಮುದಾಯಗಳಾದ ಕುರುಬ, ಮಡಿವಾಳ, ಗೊಲ್ಲ, ಈಡಿಗ, ದೇವಾಂಗ[...] ವಿಶ್ವಕರ್ಮ, ನಾಯಕ, ಬೆಸ್ತ, ಹೆಳವ, ದೇವಾಡಿಗ, ತಿಗಳ[...] ಹಾಗೂ ಇತ್ಯಾದಿಗಳೊಳಗೆ ಕರ್ಮಠ ಜಾತಿವಾದಿಯ[...] ನವಬ್ರಾಹ್ಮಣಿಕೆ ಅಳಿಯದೆ ಮಡುಗಟ್ಟಿ ನಿಂತಿದೆ. ಇವು[...]ಗಳೆಲ್ಲವು ಅವಕಾಶ ಸಿಕ್ಕಾಗಲೆಲ್ಲ ಸಾಮಾಜಿಕ ನ್ಯಾಯದ ಬಿಲ್ಲನ್ನು ಹೆಗಲಿಗೇರಿಸಿ ಬೀದಿಗಿಳಿಯುತ್ತವೆ. ಅವುಗಳ[...]

ಂತರಿಕ ಮತ್ತು ಬಾಹ್ಯ ನಡವಳಿಕೆಗಳಲ್ಲಿ ತುಂಬಿ ಳುಕಾಡುತ್ತಿರುವ ಜಾತಿವಾದಿತನದಿಂದಾಗಿ ಇದನ್ನು ಪೂರ್ಣವಾಗಿ ಅನುಭವಿಸಲು ಸಾಧ್ಯವಾಗುತ್ತಿಲ್ಲ. ವಿಷ ರ್ಬಲರದೊಳಗೆ ಅಸಂಘಟಿತವಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ ಕಾಲಹರಣ ಮಾಡುತ್ತಿವೆ. ಇದರಿಂದಾಗಿ ವುಗಳು ಇಲ್ಲಿಯ ತನಕ ಅನುಭವಿಸಿರುವ ಸಾಮಾಜಿಕ ನ್ಯಾಯವು ಕೊಳೆತ ನೀರಿನ ತಿಳಿಯನ್ನು ಕುಡಿದು ಬೇನೆ ಅನುಭವಿಸುವವರಂತೆ ಚಡಪಡಿಸುತ್ತಿವೆ. ಇದಕ್ಕೆ ಪರಿಶಿಷ್ಟ ಜಾತಿ-ವರ್ಗದವರೇನೂ ಹೊರತಾದವರಲ್ಲ.

ಅತಿ ಹಿಂದುಳಿದ ಸಮುದಾಯಗಳೊಳಗೆ ಸಂಖ್ಯಾಬಲದಲ್ಲಿ ಪ್ರಬಲವಾಗಿರುವವರ ಮುಂದೆ ಇದೇ ಸಮುದಾಯದೊಳಗಿರುವ ನಿಕೃಷ್ಟ ದುರ್ಬಲರು ಹೇಗೆ ಬದುಕುತ್ತಿದ್ದಾರೆ ಎಂಬ ವಿಚಾರವೂ ಅವಲೋಕನೆಗೆ ಒಳಪಡಬೇಕಾಗಿದೆ. ಇಂತಹ ನಡವಳಿಕೆಗಳನ್ನು ದಟ್ಟವಾಗಿ ಉದ್ಯೋಗ ಮೀಸಲಾತಿ, ರಾಜಕೀಯ ಅಧಿಕಾರ ವಿತರಣೆ ಅಥವಾ ಸರ್ಕಾರಿ ವಿಶೇಷ ಸವಲತ್ತುಗಳ ಹಂಚಿಕೆ ಸಂದರ್ಭಗಳಲ್ಲಿ ಸಾಮಾಜಿಕ ನ್ಯಾಯದಡಿ ದನಿ ಪಡೆದವರ ಅಸಲಿ ವರ್ತನೆಗಳು ಜಾಹೀರುಗೊಳ್ಳುತ್ತವೆ. ಜಗತ್ತಿನ ಹೊರ ನಡವಳಿಕೆಗಳಲ್ಲಿ ಪ್ರತಿಯೊಂದು ಜಾತಿ-ಉಪಜಾತಿಗಳು ಸಮಾನ ಅವಕಾಶಗಳಿಗಾಗಿ ಹಕ್ಕೊತ್ತಾಯಿಸುತ್ತಿರುತ್ತವೆ. ಆದರೆ ಅವುಗಳ ಆಂತರಿಕ ಪ್ರಭುತ್ವದೊಳಗೆ ಇದನ್ನು ಇನ್ನೊಂದು ಜಾತಿ-ಉಪಜಾತಿಗಳಿಗೆ ನೀಡುವುದನ್ನು ಪ್ರಬಲವಾಗಿ ನಿರಾಕರಿಸುತ್ತವೆ. ಇಂತಹ ನಡವಳಿಕೆಗಳಿಂದ ಭಾರತೀಯ ಸಮಾಜದ ಪರಿವರ್ತನೆ ಒಂದು ಸಮಾನಾಂತರ ಚಕ್ರೀಯ ಸಂಬಂಧದ ಸ್ವರೂಪದಲ್ಲಿ ಜರುಗುತ್ತಿಲ್ಲ. ಏಕೆಂದರೆ, ಅಹಿಂದರ ಸಾಮಾಜಿಕ ಒಳಜೀವನದೊಳಗಿರುವ ಜಾತಿವಾದಿ ಪ್ರಭುತ್ವ ಅಳಿದಿಲ್ಲ.

ಆದರೂ, ಸಾಮಾಜಿಕ ನ್ಯಾಯದ ರಥವನ್ನು ಮುನ್ನಡೆಸಬೇಕೆಂಬ ಸಂಕಲ್ಪವನ್ನು ಅಹಿಂದರು ತೊಟ್ಟಿದ್ದಾರೆ. ಈ ಜನರು ಒಂದು ವೇಳೆ ಒಂದು ಕಾಲಗಟ್ಟದಲ್ಲಿ ಉದ್ಭವಿಸಿದ ತಾತ್ಕಾಲಿಕ ರಾಜಕೀಯ ವಿಪ್ಲವದ ರಾಗ-ದ್ವೇಷಗಳಿಗೆ ಒತ್ತಾಸೆಯಾಗಿ ನಿಂತಲ್ಲಿ ಅವರ ಓಟದ ಗಾಲಿಯ ಪಟ್ಟಿಗಳು ಒಂದೊಂದಾಗಿ ಕಳಚಿ ಬೀಳುತ್ತವೆ. ಅದರ ಬದಲು ಅಹಿಂದರು ಕರ್ಮಠ ಜಾತಿವಾದಿತನದ ನಡವಳಿಕೆಗಳಿಂದ ಮುಕ್ತರಾಗಲು ತಾತ್ಕಾಲಿಕವಾಗಿ ಬರುವ ರಾಗ-ದ್ವೇಷಗಳ ಆವೇಶಗಳಿಂದ ಮುಕ್ತರಾಗಬೇಕಾಗಿದೆ. 'ಸಾಮಾಜಿಕ ನ್ಯಾಯ' ಕೇವಲ ಆಗ್ರಹಿಸುವವರ ಅನುಭೋಗಕ್ಕಾಗಿ ಮಾತ್ರವೇ ಇದೆ, ಅನ್ಯರಿಗೆ ಇದನ್ನು ದಯಪಾಲಿಸಲು ಅಸಾಧ್ಯವೆಂದಾಗ ಅದರಿಂದ ಏನೇನೂ ಸಾಧನೆಯಾಗದು. ಇಂಥಹ ನಡವಳಿಕೆಗಳೇನಾದರೂ ಅಹಿಂದರಲ್ಲಿ ಶಾಶ್ವತವಾಗಿ ಮನೆ ಮಾಡಿಕೊಂಡರೆ ಅವರ ನಡವಳಿಕೆಗಳು ಕಂಗೊಳಿಸುವ ಗೋಡೆಯ ಬರಹಗಳಂತೆ ವಿಜೃಂಭಿಸಿ ನಿಧಾನವಾಗಿ ಕಣ್ಮರೆಯಾಗುತ್ತವೆ. □

ಅಹಿಂದ ಚರ್ಚೆ ಮತ್ತು ಕರ್ನಾಟಕದ ರಾಜಕಾರಣ

'ಅಹಿಂದ' ರಾಜಕಾರಣ ಮತ್ತು ಜಾಗತೀಕರಣ

(24ನೇ ಪುಟದಿಂದ)

ಬಹುದು ಸಂಬಂಧ ಇಲ್ಲದ ಸಂಗತಿಯಾಗುತ್ತದೆ. ನನ್ನ ಮಿತ್ರ ಕುಶಾಲ ಹೇಳಿದ್ದು ಸತ್ಯವೋ, ನಾವು ಹೊಸ ಪರ್ಯಾಯ ರಾಜಕಾರಣಕ್ಕಾಗಿ ಹೊಸ ಏಕತೆಯ ಆದರ್ಶಗಳನ್ನು ಜಪಿಸುವುದು ಸತ್ಯವೋ ನಿರ್ಣಯಿಸುವುದು ಕಷ್ಟವಾಗುತ್ತಿದೆ.

ಕೋಮುವಾದವು, ಅಮೆರಿಕದ ಮಾರುಕಟ್ಟೆ ನೀತಿಗಳು ಇಸ್ಲಾಮನ್ನು ಹಾಗೂ ಮುಸ್ಲಿಮರನ್ನು ಏಕಕಾಲಕ್ಕೆ ಸಮಾನ ಶತ್ರುವೆಂದು ಭಾವಿಸಿರುವ ಈ ಚಾರಿತ್ರಿಕ ಸಂದರ್ಭದಲ್ಲಿ, ತಮ್ಮ ರಕ್ಷಣೆಗಾಗಿ ಕೋಮುವಾದ ಎದುರಿಸಲು ಮುಸ್ಲಿಮರು ಮೂಲಭೂತವಾದದ ತೆಕ್ಕೆಗೆ ಹೋಗುವ ಅಪಾಯಕಾರಿ ಸಾಧ್ಯತೆಯಿದೆ. ಅರಬ್ ಸಮಾಜಗಳಲ್ಲಿ ಅಮೆರಿಕ ಯೂರೋಪುಗಳ ಆರ್ಥಿಕ, ರಾಜಕೀಯ ಆಕ್ರಮಣಗಳನ್ನು ತಡೆಯಲು ಪ್ರಗತಿಪರ ರಾಜಕಾರಣವಾಗಲಿ, ಆಧುನಿಕ ನಾಗರಿಕ ಸಮಾಜವಾಗಲಿ ಬಲವಾಗಿ ಇರದ ಕಾರಣದಿಂದ ಇಸ್ಲಾಮಿಕ್ ಮೂಲಭೂತವಾದವೇ ದೇಶರಕ್ಷಣೆಯ ಯುದ್ಧವನ್ನು ಎತ್ತಿಕೊಂಡಿದೆ.

ಮುಸ್ಲಿಂ ಮೂಲಭೂತವಾದವು ಸಮಸ್ಯೆ ನಿಜ. ಆದರೆ ಅದು ಜಗತ್ತಿನ ಅತಿದೊಡ್ಡ ಶತ್ರುವಾಗುತ್ತಿರುವ ಅಮೆರಿಕಾದ ಸಾಮ್ರಾಜ್ಯಶಾಹಿಯನ್ನು (ಧಾರ್ಮಿಕ ಕಾರಣಗಳಿಗಾಗಿಯೆ ಎಂದುಕೊಂಡರೂ) ಅಂತೂ ಮುಖಾಮುಖಿ ಮಾಡುತ್ತಿದೆ. ಇವತ್ತು ಪಾಕಿಸ್ತಾನದಲ್ಲಿ, ಅಫಘಾನಿಸ್ಥಾನದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗೆ ದೊಡ್ಡ ಸವಾಲನ್ನು ಇಟ್ಟಿರುವುದು ಅಲ್ಲಿನ ಮುಸ್ಲಿಂ ಮೂಲಭೂತವಾದಿಗಳು. ಇಂತಹದೊಂದು ವಿಚಿತ್ರ ಸತ್ಯ ನಮ್ಮೆದುರು ಇದೆ. ಅಮೆರಿಕ ಯೂರೋಪಗಳ ಆರ್ಥಿಕ ಸೈನಿಕ ದಾಳಿಗಳನ್ನು ತಡೆಯಲು ಪ್ರಜಾಪ್ರಭುತ್ವದ ಮಾರ್ಗವಾಗಿ ಆಯ್ಕೆಯಾಗಿ ಬಂದ ಸರಕಾರಗಳು ಅಥವಾ ಜನಪರ ಚಳವಳಿಗಳು ಸೋತುಹೋಗಿರುವ ಕಾರಣದಿಂದಾಗಿ ಈ ವಿಚಿತ್ರ ಸ್ಥಿತಿ ಬಂದಿರಬಹುದು.

ಇಂತಹ ಪ್ರಮಾದ ನಮ್ಮಲ್ಲಿ ಸಂಭವಿಸಬಾರದು ಎಂದರೆ, ಈ ಹೊತ್ತಲ್ಲಿ ಮುಸ್ಲಿಮರು ಪ್ರಗತಿಪರ ಚಳವಳಿಗಳ ಭಾಗವಾಗಬೇಕು. ಇದು ಅವರಿಗೆ ಇರುವ ಚಾರಿತ್ರಿಕ ಅವಕಾಶವೋ ಅನಿವಾರ್ಯತೆಯೋ ಗೊತ್ತಿಲ್ಲ. ಅಂತೂ ಆಗಬೇಕು. ಇದೇ ಹೊತ್ತಲ್ಲಿ ಈ ಸಮುದಾಯವನ್ನು ಪ್ರಗತಿಪರ ರಾಜಕಾರಣವು ತನ್ನ ಸಂಗಾತಿಯಾಗಿಸಿಕೊಳ್ಳಬೇಕು. ಮುಸ್ಲಿಮರ ಜತೆ ರಾಜಕೀಯ, ಸಾಮಾಜಿಕ ಕಾರಣಕ್ಕಾಗಿ ಹೊರ ಸಂಬಂಧ ಬೆಳೆಸಬೇಕು ಎಂದಾಗ ಅದು ಮುಸ್ಲಿಮರಲ್ಲಿ ಇರುವ ಧಾರ್ಮಿಕ ಮೂಲಭೂತವಾದಿಗಳು, ಬಂಡವಾಳಶಾಹಿಗಳೂ, ಕ್ರಿಮಿನಲ್‌ಗಳ ಜತೆ ಎಂದರ್ಥವಲ್ಲ. ಬದುಕಲು ಸೆಣಸುತ್ತಿರುವ ಸಾಮಾನ್ಯ ಸಮುದಾಯ ಹಾಗೂ ಅದರ ಪ್ರಗತಿಪರ ಆಧುನಿಕ ಮನಸ್ಸಿನ ಮಧ್ಯಮವರ್ಗ ಎಂದರ್ಥ.

ಸಮಸ್ಯೆ ಎಂದರೆ ಮುಸ್ಲಿಂ ಸಮುದಾಯವನ್ನು ಅದು ಮೂಲತಃ ಧರ್ಮಾಂಧವಾದುದು ಎಂದು ಪೂರ್ವಗ್ರಹೀತ ಪರಿಭಾಷೆಯಲ್ಲಿ ಪ್ರಗತಿಪರರೂ ಗ್ರಹಿಸಿರುವುದು. ಇದು ಕೋಮು ವಾದೀಕರಣಗೊಂಡಿರುವ ಪಠ್ಯಪುಸ್ತಕಗಳು, ಚರಿತ್ರೆ, ಮಾಧ್ಯಮಗಳು ಬಹುಕಾಲದಿಂದ ಕೊಟ್ಟ ಸಾಮಾಜಿಕ ಶಿಕ್ಷಣದ ಪರಿಣಾಮ. ಎಂತಲೇ ಈ ಪೂರ್ವಗ್ರಹಗಳು ಆಧುನಿಕ ಶಿಕ್ಷಣ ಪಡೆದವರಲ್ಲಿ ಹೆಚ್ಚುಸ್ವಂತ ಅನುಭವಗಳ ಮೂಲಕವೇ ಮುಸ್ಲಿಮರನ್ನು ಗ್ರಹಿಸಿರುವ ಅಧುನಿಕ ಶಿಕ್ಷಣ ಪಡೆಯದ ಸಮುದಾಯಗಳಲ್ಲಿ ಈ ಪೂರ್ವಗ್ರಹಗಳು ಕಡಿಮೆ ಎಂಬುದು ಗಮನಾರ್ಹ. ಪ್ರಶ್ನೆಯೆಂದರೆ ಈ ಜಾತಿ ಧರ್ಮದ ನೆಲೆಗಳ ಒಳಗೆ ರಾಜಕಾರಣ ಮಾಡುವ ಅಹಿಂದವು ಇದಕ್ಕೆ ಅವಕಾಶ ಕಲ್ಪಿಸಿಕೊಡುವಷ್ಟು ತಾತ್ವಿಕವಾಗಿ ಸಿದ್ಧವಾಗಿದೆಯೇ ಎಂಬುದು?

ಇದು ಕೂಡ ನನಗೆ ನಾನೇ ಕೇಳಿಕೊಳ್ಳುತ್ತಿರುವ ಪ್ರಶ್ನೆ. □



ಡಾ॥ ಸರಜೂ ಕಾಟ್ಕರ್

ದೇವರಾಯ

೧

ಅಡ್ಡ ಹೆಸರುಗಳನ್ನು ಉದ್ದುದ್ದ ಸೀಳುತ್ತಾ...

ಇನ್ನೂ ಬೆಳಕು ಹರಿದಿರಲಿಲ್ಲ. ಆಗ ತಾನೆ ಸೂರ್ಯ ಮೂಡಣವನ್ನು ಕೆಂಪಾಗಿಸುತ್ತಿದ್ದ. ಪಕ್ಷಿಗಳು ತಮ್ಮ ಪೊಟರೆಯನ್ನು ಬಿಟ್ಟು ಆಹಾರಕ್ಕಾಗಿ ಆಗಲೇ ಹೊರಗೆ ಬಂದಿದ್ದವು. ನಸು ಬೆಳಕಿನಲ್ಲಿ ಒಬ್ಬ ವ್ಯಕ್ತಿ ಇಂಗಳಿಯಿಂದ ಚಿಕ್ಕೋಡಿ ದಾರಿ ಕತ್ತರಿಸುತ್ತಿದ್ದ. ಆತನ ನಡಿಗೆಯ ವೇಗ ಆಗಸದಲ್ಲಿ ಮೂಡುತ್ತಿದ್ದ ಸೂರ್ಯನ ನಡಿಗೆಯನ್ನೇ ಹೋಲುತ್ತಿತ್ತು. ಆದಷ್ಟು ಬೇಗ ಚಿಕ್ಕೋಡಿಯನ್ನು ತಲುಪಬೇಕೆಂಬುದು ಆ ವ್ಯಕ್ತಿ ತವಕಿಸುವಂತಿತ್ತು.

ಎದುರಿಗೆ ನಿಂಗಪ್ಪ ಮಹಾರ್ ಭೇಟಿಯಾದ. ವ್ಯಕ್ತಿಯನ್ನು ನೋಡಿದೊಡನೆ ನಿಂಗಪ್ಪ 'ಯಾಕೋ ದೇವರಾಯ, ಎಲ್ಲಿಗೆ ಹೊಂಟಿ?' ಎಂದು ಕೇಳಿದ.

'ಗೊತ್ತಿಲ್ಲೇನು ನಿನಗೆ? ಚಿಕ್ಕೋಡಿಯಲ್ಲಿ ಇವತ್ತು ಮೀಟಿಂಗ್ ಇಟ್ಟೇನಿ. ನೀನೂ ಬಾ' ಎಂದ ದೇವರಾಯ.

'ನಾ ಊರಾಗ ಇರಲಿಲ್ಲ. ಧಣಿ ಕೊಲ್ಲಾಪುರಕ್ಕ ಕಳಿಸಿದ್ದ. ನಿನ್ನೆ ರಾತ್ರಿ ಬಂದೆ. ನಿನ್ನ ಮೀಟಿಂಗ್ ವಿಚಾರ ಗೊತ್ತಿಲ್ಲ. ಯಾಕ್ ಮೀಟಿಂಗ್ ಕರದಿ?' ಕೇಳಿದ ನಿಂಗಪ್ಪ ಮಹಾರ್.

ದೇವರಾಯನಿಗೂ ಆತಂಕವಿತ್ತು. ಇಂದಿನ ಮೀಟಿಂಗ್ ಬಗ್ಗೆ ಆತ ಖುದ್ದು ತಹಶೀಲದಾರ್ ಜೊತೆಗೆ ಚರ್ಚಿಸಿದ್ದ. ಇವನ ವಿಚಾರಗಳನ್ನು ಕೇಳಿ ತಹಶೀಲದಾರ್ ಹೈರಾಣಾಗಿದ್ದರು. ದೇವರಾಯನ ಪ್ರಾಮಾಣಿಕತೆ ಬಗ್ಗೆ ವಿಶ್ವಾಸವಿದ್ದ ತಹಶೀಲದಾರ 'ಇದು ಸಾಧ್ಯವಾಗಬಹುದೇ?' ಎಂದು ಸಂಶಯ ವ್ಯಕ್ತಪಡಿಸಿದ್ದರು. 'ನೀವು ನನಗೆ ಸಾಥ್ ಕೊಟ್ರೆ ಈ ಕೆಲಸ ಚಿಟಕಿ ಹೊಡೆಯುವುದರಲ್ಲಿ ಮುಗಿಸ್ತೇನೆ' ಎಂದಿದ್ದ ದೇವರಾಯ. 'ಆಯ್ತು; ಮೀಟಿಂಗ್ ಕರಿ ನಿನ್ನ ವಿಚಾರ ಅಲ್ಲಿ ಹೇಳು. ಸರ್ಕಾರದ ಪರವಾಗಿ ಏನ್ ಬೇಕೋ ಅದನ್ನು ನಾನು ಮಾಡ್ತೇನೆ' ಎಂದಿದ್ದರು ತಹಶೀಲದಾರ್.

ದೇವರಾಯ, ನಿಂಗಪ್ಪನನ್ನು ದಿಟ್ಟಿಸಿ ನೋಡಿದ. ಐವತ್ತರ ಆಸುಪಾಸಿನ ನಿಂಗಪ್ಪ ತನ್ನ ಇಡಿ ಜೀವನವನ್ನು ದೇಸಾಯರ ಜೀತದಾಳಾಗಿ ಕಳೆದಿದ್ದ. ಈಗ ಅವನ ಮಗನೂ ಜೀತದಾಳಾಗಿ ದೇಸಾಯರ ಹೊಲದಲ್ಲಿದ್ದ. ಇಬ್ಬರು ಹೆಣ್ಣು ಮಕ್ಕಳು ಮುತ್ತು ಕಟ್ಟಿಸಿಕೊಂಡು ದೇವದಾಸಿಯರಾಗಿದ್ದರು. ಮನೆಯಲ್ಲಿ ಅಪಾರ ಬಡತನ. ಈ ವಯಸ್ಸಿನಲ್ಲೂ ಆತ ದೇಸಾಯರ ಕೆಲಸಕ್ಕಾಗಿ ಊರೂರು ಅಡ್ಡಾಡುತ್ತಿದ್ದ. ಮನೆಯ ಎಲ್ಲ ಜನರು ಶ್ರಮಪಡುತ್ತಿದ್ದರೂ ಹೊಟ್ಟೆ ತುಂಬ ಕೂಳು ಸಿಗುತ್ತಿರಲಿಲ್ಲ.

ತಾನು ಚಿಕ್ಕೋಡಿಗೆ ಯಾಕೆ ಹೋಗುತ್ತಿದ್ದೇನೆಂದು ಹೇಳದ ದೇವರಾಯ, ನಿಂಗಪ್ಪನಿಗೆ

'ನನ್ನ ಜೊತೆ ನೀನೂ ಚಿಕ್ಕೋಡಿಗೆ ಬರ್ತೀಯಾ?' ಕೇಳಿದ.

'ಆದ್ರೆ ಯಾಕೆ ಅಂತ ನೀನು ಹೇಳಲಿಲ್ಲ'

'ಅಲ್ಲೇ ನಿನಗೆ ಗೊತ್ತಾಗ್ತದೆ'

'ಹಂಗಾರ್ ನಡಿ, ನಾನೂ ನಿನ್ನ ಜೊತೆ ಬರ್ತೇನಿ'

ಏಕಾಂಗಿಯಾಗಿದ್ದ ದೇವರಾಯನಿಗೆ ನಿಂಗಪ್ಪ ಜೊತೆಯಾದ. ಇಬ್ಬರೂ ದಾರಿ ಸವೆಸಹತ್ತಿದರು.

ನಿಂಗಪ್ಪ ಒಂದೆರಡು ಮಾತಾಡಿದರೂ ದೇವರಾಯ ಅದಕ್ಕೆ ಉತ್ತರಿಸಲಿಲ್ಲ. ಅತನ ಮನಸ್ಸು ಏನೋ ಗಂಭೀರವಾಗಿ ವಿಚಾರಿಸುತ್ತಿದೆಯೆಂದು ನಿಂಗಪ್ಪನಿಗೆ ಅನ್ನಿಸಿತು. ಫಕ್ಕನೇ ದೇವರಾಯ ನಿಂಗಪ್ಪನಿಗೆ ಕೇಳಿದ

'ನಿಂಗಪ್ಪ, ಇವತ್ತಿನ ಮೀಟಿಂಗ್ ಯಶಸ್ವಿ ಆಗತೇತಲ್ಲ?'

ಆತನ ಪ್ರಶ್ನೆಗೆ ನಿಂಗಪ್ಪ ನಕ್ಕ. 'ಅಲ್ಲ ದೇವರಾಯ, ಚಿಕ್ಕೋಡಿಗೆ ಯಾಕೆ ಹೊಂಟಿ, ಏನ್ ಮೀಂಟಿಗ್–ಏನೇನೂ ನನಗೆ ಗೊತ್ತಿಲ್ಲ. ನೀ 'ನಡಿ' ಅಂದಿ; ನಾ ನಿನ್ನ ಜೊತೆ ಹೊಂಟೆ. ಈಗ ಕೇಳ್ತಿ ಮೀಟಿಂಗ್ ಯಶಸ್ವಿ ಆಗತೇತೋ ಇಲ್ಲೋ ಅಂತ. ನೀ ಕರ್ದಿ ಅಂದಮ್ಯಾಲ್ ಅದು ಯಶಸ್ವಿ ಆಗಾಕ ಬೇಕು ಅಂತೀನಿ.'

ಅವರಿಂದ ಆಶ್ವಾಸನೆ ಪಡೆದ ನಂತರವೇ ದೇವರಾಯ ಹ್ಯಾಂಡ್‌ಬಿಲ್ ಪ್ರಿಂಟ್ ಮಾಡಿಸಿ ಚಿಕ್ಕೋಡಿ, ಹುಕ್ಕೇರಿ, ನಿಪ್ಪಾಣಿ, ಕಾಗವಾಡ, ಕಾರದಗಾ, ಸಂಕೇಶ್ವರ ಮುಂತಾದೆಡೆಗಳಲ್ಲಿ ಅವನ್ನು ಹಂಚಿಸಿದ್ದ. 'ಈ ಭಾಗದ ಸಮಸ್ತ ದಲಿತ ಬಾಂಧವರು ಚಿಕ್ಕೋಡಿಗೆ ಖುದ್ದಾಗಿ ಬಂದು ಮೀಟಿಂಗ್‌ಗೆ ಹಾಜರಾಗಬೇಕೆಂದೂ ಮೀಟಿಂಗ್‌ನಲ್ಲಿ ಬಹುಮುಖ್ಯ ವಿಷಯವೊಂದು ನಿರ್ಧರಿಸಬೇಕಾಗಿದೆಯೆಂದೂ' ಹ್ಯಾಂಡ್‌ಬಿಲ್‌ನಲ್ಲಿ ಪ್ರಿಂಟಿಸಿದ್ದ. ಹ್ಯಾಂಡ್‌ಬಿಲ್‌ನ ಪ್ರತಿಯೊಂದನ್ನು ಡಾ. ಬಾಬಾಸಾಹೇಬ ಅಂಬೇಡ್ಕರ್‌ರಿಗೂ, ಕೊಲ್ಲಾಪುರದ ಶಾಹು ಮಹಾರಾಜರಿಗೂ ಕಳಿಸಿದ್ದ.

ದೇವರಾಯನ ಮನಸ್ಸಿನಲ್ಲಿ ಬಹಳ ದಿನಗಳಿಂದ ವಿಚಾರವೊಂದು ಹೊಳೆಯುತ್ತಿತ್ತು. ಆತನ ಸಂಬಂಧಿಕರ ಅಡ್ಡ ಹೆಸರುಗಳೆಲ್ಲ ಒಂದೇ ರೀತಿಯಲ್ಲಿದ್ದವು. ಯಾರಿಗೆ ಕೇಳಿದರೂ ಅವರು ತಮ್ಮ ಅಡ್ಡಹೆಸರನ್ನು 'ಹೊಲೇರ್' ಎಂದೂ 'ಮಹಾರ್' ಎಂದೂ ಹೇಳುತ್ತಿದ್ದರು. ದಲಿತ ಜನರಿಗೆ ಸಂಬಂಧಪಟ್ಟ ಉಳಿದ ಜನರ ಅಡ್ಡಹೆಸರುಗಳೂ ಒಂದೇ ರೀತಿಯಲ್ಲಿದ್ದವು. ಕೆಲವರು 'ಚಾಂಬಾರ್'ಗಳಾಗಿದ್ದರೆ. ಮತ್ತೆ ಕೆಲವರು 'ಮೋಚಿ'ಗಳಾಗಿದ್ದರು. ಮತ್ತಷ್ಟು ಜನರು 'ಢೋರ್' ಎಂಬ ಅಡ್ಡಹೆಸರಿನವರಾಗಿದ್ದರೆ ಕೆಲವರನ್ನು 'ನಾವಲಗ್ಯಾರ್' ಎಂದೂ ಕರೆಯುತ್ತಿದ್ದರು. ಈ ಎಲ್ಲ ಅಡ್ಡಹೆಸರುಗಳು ಅವರವರು ಮಾಡುವ ವೃತ್ತಿಯಿಂದ ಬಂದವುಗಳಾಗಿದ್ದವು. ಈ ಅಡ್ಡ ಹೆಸರಿನಿಂದಲೇ ಈ ಜನ ಯಾವ ಜಾತಿಯವರೆಂದು ಸುಲಭದಲ್ಲಿ ಗುರುತಿಸಬಹುದಿತ್ತು. ಹೊರ ವೇಷದಲ್ಲಿ ಎಲ್ಲರಂತೆಯೇ ಕಾಣುವ ವ್ಯಕ್ತಿ ತಾನು 'ಹೊಲೇರ್' ಅಥವಾ 'ಚಾಂಬಾರ್' ಅಥವಾ 'ಢೋರ್' ಎಂದು ಹೇಳಿತ್ತಿದ್ದಂತೆಯೇ, ಹೊರ ವೇಷದಲ್ಲಿ ಅವನಂತೆಯೇ ಕಾಣುವ ಸವರ್ಣೀಯರು ಕೂಡಲೇ ಸಾವಧರಾಗುತ್ತಿದ್ದರು. ಆತನ ಅಡ್ಡಹೆಸರನ್ನು ಕೇಳುತ್ತಿದ್ದಂತೆಯೇ ಈ ಜನ ಅವನನ್ನು ಅಸಹ್ಯಿಸುವಂತೆ ನೋಡುತ್ತ ಅಲ್ಲಿಂದ ಜಾಗ ಖಾಲಿ ಮಾಡುತ್ತಿದ್ದರು. ಒಂದು ವೇಳೆ ಆಕಸ್ಮಾತ್ ಅವನನ್ನು ಮುಟ್ಟಿದ್ದರೆ, ಮನೆಗೆ ಹೋಗಿ ಜಳಕ ಮಾಡುತ್ತಿದ್ದರು. ಸವರ್ಣೀಯರ

ಬದುಕು

ದೇವರಾಯ ನಮ್ಮ ಬಹಳಷ್ಟು ದಲಿತ ಹೋರಾಟಗಾರರಿಗೆ ಅಪರಿಚಿತ ಹೆಸರು. ಅಂಬೇಡ್ಕರರ ವಿಚಾರ ಬಲಕ್ಕಿಂತ ಹೆಸರು ಬಲವನ್ನಷ್ಟೇ ನಂಬಿರುವ ಈ ಹೋರಾಟಗಾರರಿಗೆ ಮಾರ್ಗ ದರ್ಶಕವಾಗಬೇಕಾಗಿರುವ ದೇವರಾಯರ ಬದುಕು ಅನನ್ಯವಾದುದು. ಅಂಬೇಡ್ಕರ್ ಅವರ ಸಮಕಾಲೀನರಾಗಿದ್ದ ದೇವರಾಯ, ಅಂಬೇಡ್ಕರ್ ಮಹಾರಾಷ್ಟ್ರದಲ್ಲಿ ಆರಂಭಿಸಿದ ಚಳವಳಿಯನ್ನು ಉತ್ತರ ಕರ್ನಾಟಕದಲ್ಲಿ ಮುಂದುವರೆಸಿದರು. ವಿಶೇಷವಾಗಿ ಬೆಳಗಾವಿ ಜಿಲ್ಲೆ ದೇವರಾಯರ ಹೋರಾಟದ ಕ್ಷೇತ್ರವಾಗಿತ್ತು. ಜೀವನ ಪರ್ಯಂತ ಅವಿರತ ಹೋರಾಟ ನಡೆಸುತ್ತಲೇ ಸಮುದಾಯದ ದಿವ್ಯನಿರ್ಲಕ್ಷ್ಯಕ್ಕೊಳಗಾಗಿ ದೇವರಾಯ ಕೊನೆಯುಸಿರೆಳೆದರು. ಅವರ ಜೀವನ ಗಾಥೆ ಈ ಸಂಚಿಕೆಯಿಂದ ಆರಂಭ.

ಡಾ॥ ಸರಜೂ ಕಾಟ್ಕರ್

ಈ ರೀತಿಯ ವರ್ತನೆಯಿಂದ ಕುಗ್ಗಿ ಹೋಗಿದ್ದರೂ ಈ ನ ಏನೂ ಮಾಡುವಂತಿರಲಿಲ್ಲ. ಸ್ವತಃ ಹೊಲೇರ್'ನಾಗಿದ್ದ ದೇವರಾಯ ಸಹಿತ ಈ ಅವ ಮಾನವನ್ನು ಅನೇಕ ಸಲ ಅನುಭವಿಸಿದ್ದ. ಒಂದು ಸಲ ಆತ ಕೊಲ್ಲಾಪುರಕ್ಕೆ ಹೋಗಿದ್ದಾಗ ದಾಡಿ ಮಾಡಿಸಿ ಕೊಳ್ಳಲು ಒಂದು ಕ್ಷೌರಿಕನ ಅಂಗಡಿಗೆ ಹೋಗಿದ್ದ. ಕ್ಷೌರಿಕ ಅವನಿಗೆ ಸೋಪು ಲೇಪಿಸುತ್ತ 'ಯಾ ಊರಾಂವ' ಎಂದು ಕೇಳಿದ. ದೇವರಾಯ ತಾನು ಇಂಗಳಿಯವ ಎಂದು ಹೇಳಿದ. ಕ್ಷೌರಿಕನಿಂದ ಮುಂದಿನ ಪ್ರಶ್ನೆ ಬಂತು 'ಏನ್ ಅಡ್ಡಹೆಸರು?' ದೇವರಾಯ ನಿಜವನ್ನೇ ನುಡಿದ 'ಹೊಲೇರ್' ಎಂದು.

ಮರುಕ್ಷಣ ನಾಗರಹಾವಿನ ಹೆಡೆಯ ಮೇಲೆ ಕಾಲಿಟ್ಟಂತೆ ಕ್ಷೌರಿಕ ಅವನಿಂದ ದೂರ ಸಿಡಿದು ನಿಂತು. ಏಳು, ಏಳು ಇಲ್ಲಿಂದ. ಇಲ್ಲಿ ಒಳ ಬರಲು ನಿನಗೆ ಅದೆಷ್ಟು ಧೈರ್ಯ? ನಿನ್ನನ್ನು ಮುಟ್ಟಿದ್ದಕ್ಕೆ ನಾನು ಈಗ ಜಳಕ ಮಾಡಬೇಕು. ನೀನು ಇಲ್ಲಿ ಬಂದೆಯೆಂದು ಉಳಿದ ಜನರಿಗೆ ಗೊತ್ತಾದರೆ, ನಾನು ಹೊಟ್ಟೆಗೆ ಗೋಣಿತಟ್ಟು ಕಟ್ಟಿಕೊಳ್ಳಬೇಕಾಗುತ್ತದೆ' ಎಂದು ಚೀರಾಡಹತ್ತಿದ. ಮುಖಕ್ಕೆ ಸೋಪು ಹಚ್ಚಿದ ರೀತಿಯಲ್ಲಿಯೇ ಆ ಕ್ಷೌರಿಕ ದೇವರಾ ಯನನ್ನು ಹೊರ ಹಾಕಿದ. 'ಇನ್ನೊಂದು ಸಲ ಈ ಕಡೆ ಬಂದ್ರೆ ಸೊಂಟ ಮುರಿಯುವ' ಬೆದರಿಕೆಯನ್ನೂ ಹಾಕಿದ.

ಅಸಾಧ್ಯವಾದ ಅವಮಾನದಿಂದ ಕುಗ್ಗಿ ಹೋಗಿದ್ದ ದೇವರಾಯ ರಸ್ತೆಗೆ ಬಂದು ತನ್ನ ಹೆಗಲ ಮೇಲಿದ್ದ ಟಾವೆಲ್‌ನಿಂದ ಮುಖ ಒರೆಸಿಕೊಂಡ. ಏನು ಮಾಡಬೇಕೆಂಬುದು ಆತನಿಗೆ ಹೊಳೆಯಲೊಲ್ಲದು. ಕ್ಷೌರಿಕನ ಮೇಲೆ ಖಂಡುಗದಷ್ಟು ಸಿಟ್ಟು ಬಂದಿದ್ದರೂ ತಾನು ಅವನಿಗೆ ಏನೂ ಮಾಡಲಿಲ್ಲವಲ್ಲ ಎಂಬ ದುಃಖವು ದೇವರಾಯನಿಗಾಯಿತು. ಅಷ್ಟರಲ್ಲಿ ರಸ್ತೆಯ ಇನ್ನೊಂದು ಬದಿಯಲ್ಲಿ ಮತ್ತೊಂದು ಕ್ಷೌರಿಕನ ಅಂಗಡಿ ಆತನ ಕಣ್ಣಿಗೆ ಬಿತ್ತು. 'ಇವತ್ತು ಏನ್ ಬೇಕಾದ್ದು ಆಗಲಿ; ಅಂಗಡಿಯಲ್ಲೇ ದಾಡಿ ಮಾಡಿಸಿಕೊಳ್ಳುತ್ತೇನೆಂಬ' ಹಟದೊಂದಿಗೆ ಇನ್ನೊಂದು ಅಂಗಡಿ ಹೊಕ್ಕ.

ಆ ಕ್ಷೌರಿಕನೂ ಇವನ ಮುಖಕ್ಕೆ ಸೋಪು ಹಚ್ಚಿದ. ಅವನಂತೆಯೇ ಈತನೂ ದೇವರಾಯನ ಅಡ್ಡಹೆಸರು ಕೇಳಿದ.

ಈಗ ದೇವರಾಯ ಹುಶಾರಾಗಿದ್ದ. ಹಿಂದಿನ ಅನುಭವ ಅವನ ಕಣ್ಣ ಮುಂದಿತ್ತು. ಪಟಕ್ಕನೇ 'ಇಂಗಳೆ' ಎಂದು ಹೇಳಿದ.

'ಇಂಗಳೆ' ಅಡ್ಡಹೆಸರು ಮರಾಠರಲ್ಲಿ, ಲಿಂಗಾಯತರಲ್ಲಿ, ಜೈನರಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದ್ದ ಅಡ್ಡಹೆಸರು. ಕ್ಷೌರಿಕ ಮುಂದೆ ಪ್ರಶ್ನೆ ಕೇಳುವ ಗೋಜಿಗೆ ಹೋಗಲಿಲ್ಲ. ದಾಡಿ ಜೊತೆಗೆ ತಲೆಗೆ ಮಾಲಿಶ್‌ನ್ನೂ ಮಾಡಿದ ಕ್ಷೌರಿಕ.

ಈ ಎರಡೂ ಘಟನೆಗಳು ದೇವರಾಯನ ವಿಚಾರ ಲಹರಿಯನ್ನೇ ಬದಲಿಸಿದವು. ಒಂದು ಅಂಗಡಿಯಲ್ಲಿ ತನ್ನ ಅಡ್ಡ ಹೆಸರನ್ನು 'ಹೊಲೇರ್' ಎಂದು ಹೇಳಿದ್ದಕ್ಕೆ ಸಿಕ್ಕ ತಿರಸ್ಕಾರ ಮತ್ತು ಇನ್ನೊಂದು ಅಂಗಡಿಯಲ್ಲಿ 'ಇಂಗಳೆ' ಎಂದು ಹೇಳಿದ್ದಕ್ಕೆ ಸಿಕ್ಕ ಗೌರವ ಎರಡೂ ಆತನ ಕಣ್ಣು ಮುಂದಿದ್ದವು. ಜನರು ಅಡ್ಡಹೆಸರಿಗೂ ಜಾತಿಗೂ ಸಂಬಂಧ ಏರ್ಪಡಿಸಿ ಆಯಾ ರೀತಿಯಲ್ಲಿ ವರ್ತಿಸುತ್ತಾರೆಂಬ ಸತ್ಯ ದೇವರಾಯನಿಗೆ ಗೋಚರಿಸಿತು. 'ನನ್ನಂತಹ ನನಗೇ ಈ ಅನುಭವವಾಗುತ್ತಿದ್ದರೆ, ಅಶಿಕ್ಷಿತರಾದ, ಬಡವರಾದ, ಮೂಢ ನಂಬಿಕೆಗಳಲ್ಲಿ ಹೂತು ಹೋಗಿರುವ ಉಳಿದ ದಲಿತ ಜನರಿಗೆ ಅದಾವ ರೀತಿಯಲ್ಲಿ ಅವಮಾನವಾಗುತ್ತಿರುಬಹುದೆಂದು ಆತ ಚಿಂತಿಸಹತ್ತಿದ. ಇದಕ್ಕೆ ಏನಾದರೂ ಉಪಾಯ ಕಂಡು ಹಿಡಿಯಲೇ ಬೇಕೆಂದು ಯೋಚಿಸಹತ್ತಿದ. ಅಷ್ಟರಲ್ಲಿ ಅವನಿಗೆ ಎರಡನೆಯ ಅಂಗಡಿಯಲ್ಲಾದ ಅನುಭವ ನೆನಪಿಗೆ ಬಂತು. ತನ್ನ ಜಾಣತನಕ್ಕೆ ತಾನೇ ನಕ್ಕ. ಒಂದು ವೇಳೆ

> **ದೇವರಾಯನ ಮನಸ್ಸಿನಲ್ಲಿ ಬಹಳ ದಿನಗಳಿಂದ ವಿಚಾರವೊಂದು ಹೊಳೆಯುತ್ತಿತ್ತು. ಆತನ ಸಂಬಂಧಿಕರ ಅಡ್ಡ ಹೆಸರುಗಳೆಲ್ಲ ಒಂದೇ ರೀತಿಯಲ್ಲಿದ್ದವು. ಯಾರಿಗೆ ಕೇಳಿದರೂ ಅವರು ತಮ್ಮ ಅಡ್ಡಹೆಸರನ್ನು 'ಹೊಲೇರ್' ಎಂದೂ 'ಮಹಾರ್' ಎಂದೂ ಹೇಳುತ್ತಿದ್ದರು. ದಲಿತ ಜನರಿಗೆ ಸಂಬಂಧಪಟ್ಟ ಉಳಿದ ಜನರ ಅಡ್ಡಹೆಸರುಗಳೂ ಒಂದೇ ರೀತಿಯಲ್ಲಿದ್ದವು. ಕೆಲವರು 'ಚಾಂಬಾರ್'ಗಳಾ ಗಿದ್ದರೆ. ಮತ್ತೆ ಕೆಲವರು 'ಮೋಚಿ'ಗಳಾಗಿದ್ದರು. ಮತ್ತಷ್ಟು ಜನರು 'ಢೋರ್' ಎಂಬ ಅಡ್ಡಹೆಸರಿನವರಾಗಿದ್ದರೆ ಕೆಲವರನ್ನು 'ನಾವಲಗ್ಯಾರ್' ಎಂದೂ ಕರೆಯುತ್ತಿದ್ದರು. ಈ ಎಲ್ಲ ಅಡ್ಡ ಹೆಸರುಗಳು ಅವರವರು ಮಾಡುವ ವೃತ್ತಿಯಿಂದ ಬಂದವುಗಳಾಗಿದ್ದವು. ಈ ಅಡ್ಡ ಹೆಸರಿನಿಂದಲೇ ಈ ಜನ ಯಾವ ಜಾತಿಯವರೆಂದು ಸುಲಭದಲ್ಲಿ ಗುರುತಿಸಬಹುದಿತ್ತು. ಹೊರ ವೇಷದಲ್ಲಿ ಎಲ್ಲರಂತೆಯೇ ಕಾಣುವ ವ್ಯಕ್ತಿ ತಾನು 'ಹೊಲೇರ್' ಅಥವಾ 'ಚಾಂಬಾರ್' ಅಥವಾ 'ಢೋರ್' ಎಂದು ಹೇಳಿತ್ತಿದ್ದಂತೆಯೇ, ಹೊರ ವೇಷದಲ್ಲಿ ಅವನಂತೆಯೇ ಕಾಣುವ ಸವರ್ಣೀಯರು ಕೂಡಲೇ ಸಾವಧರಾಗುತ್ತಿದ್ದರು.**

ಎರಡನೆಯ ಅಂಗಡಿಯಲ್ಲಿ ತನ್ನ ಅಡ್ಡಹೆಸರು 'ಹೊಲೇರ್' ಎಂದು ಹೇಳಿದ್ದರೆ ಏನಾಗುತ್ತಿತ್ತೆಂದು ಚಿಂತಿಸಿದ.

'ನಾನು ಇಂಗಳೆ ಊರಿನವ; ಇಂಗಳೆ ಎಂದು ಅಡ್ಡ ಹೆಸರು ಹೇಳಿದೆ. ಇದರಲ್ಲಿ ತಪ್ಪೇನು?' ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡು ಸಮಾಧಾನಪಟ್ಟ. ಅಷ್ಟರಲ್ಲಿ ಅವನ ಕಣ್ಣುಮುಂದೆ ಒಂದು ಸತ್ಯ ಅನಾವರಣಗೊಂಡಿತ್ತು. 'ಹಾಗಿದ್ದರೆ ಹಾಗಿದ್ದರೆ.... ಉಳಿದ ದಲಿತರ ಅಡ್ಡಹೆಸರುಗಳನ್ನು ಬದಲಿ ಮಾಡಿಬಿಟ್ಟರೆ ಹೇಗೆ?' ಎಂಬ ವಿಚಾರ ಅವನಿಗೆ ಹೊಳೆಯಿತು. 'ಹೌದಲ್ಲ; ಎಷ್ಟು ಸರಳ ಮಾರ್ಗ ಇದು. ಇದರಿಂದ ಸಾರ್ವಜನಿಕವಾಗಿ ಆಗುವ ಅವಮಾನದಿಂದ ಸುಲಭದಲ್ಲಿ ಪಾರಾಗಬಹುದು' ಎಂಬ ನಿರ್ಧಾರಕ್ಕೆ ಬಂದ.

ಈ ವಿಚಾರ ಬರುತ್ತಿದ್ದಂತಿಯೇ ದೇವರಾಯ ನೇರವಾಗಿ ಚಿಕ್ಕೋಡಿಗೆ ಬಂದ. ಚಿಕ್ಕೋಡಿ ತಹಶೀಲದಾರ್ ಇವನನ್ನು ತುಂಬ ಗೌರವಿಸುತ್ತಿದ್ದರು. ಜಾತಿಯಿಂದ ಹೂಗಾರರಾಗಿದ್ದ ತಹಶೀಲದಾರ್ ಕೊಲ್ಲಾಪುರದಲ್ಲಿ ಶಿಕ್ಷಣ ಪಡೆದು ಬಲು ಕಷ್ಟದಿಂದ ಜೀವನದಲ್ಲಿ ಮುಂದೆ ಬಂದಿದ್ದರು. ಕೊಲ್ಲಾಪುರದ ಶಾಹು ಮಹಾರಾಜರು ನಡೆಸುತ್ತಿದ್ದ ಸತ್ಯ ಶೋಧನಾ ಚಳುವಳಿಯನ್ನು ಬಲು ಹತ್ತಿರದಿಂದ ಅವರು ಕಂಡಿದ್ದರು. ಹಿಂದೂ ಧರ್ಮದಲ್ಲಿರುವ ಶ್ರೇಣಿಕೃತ ವ್ಯವಸ್ಥೆಯಲ್ಲಿ ಹೇಗೆ ಮನುಷ್ಯ ಮನುಷ್ಯನನ್ನು ಶೋಷಿಸುತ್ತಿದ್ದಾನೆಂಬ ಅರಿವು ಅವರಿಗಿತ್ತು. ಮಹಾತ್ಮಾ ಫುಲೆಯವರ ವೈಚಾರಿಕತೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದ ತಹಶೀಲದಾರ್‌ರು ದೇವರಾಯನ ಬಗ್ಗೆ ವಿಶೇಷವಾದ ಪ್ರೀತಿ, ಅಭಿಮಾನ ಹೊಂದಿದ್ದರು. ಹಿಂದೂ ಧರ್ಮದ ಶ್ರೇಣೀಕೃತ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕಿತ್ತು ಹಾಕಬೇಕೆಂಬ ದೇವರಾಯನ ವಿಚಾರ ಅವರಿಗೆ ಹಿಡಿಸಿತ್ತು. ಆತ ಮಾಡುವ ಕೆಲಸಕ್ಕೆ ಇವರು ಅಪ್ರತ್ಯಕ್ಷ ರೀತಿಯಲ್ಲಿ ಸಹಾಯ ಸಹಕಾರಗಳನ್ನು ನೀಡುತ್ತಿದ್ದರು. ತಹಶೀಲದಾರ್ ಜೊತೆಗಿನ ಇವನ ಸಲಿಗೆ ಕಂಡ ಉಳಿದ ದಲಿತರು ದೇವರಾಯನನ್ನು ಅಸಾಮಾನ್ಯನೆಂದು ಗೌರವಿಸುತ್ತಿದ್ದರು. ದೇವರಾಯ ಅಸ್ಖಲಿತವಾಗಿ ಕನ್ನಡ, ಮರಾಠಿ, ಹಿಂದಿ ಮತ್ತು ಇಂಗ್ಲಿಷ್ ಮಾತಾಡುತ್ತಿದ್ದ. ಆತ ಅಧಿಕಾರಿಗಳ ಜೊತೆ ಇಂಗ್ಲಿಷಿನಲ್ಲಿ ಮಾತಾಡಿದ್ದನ್ನು ಅನೇಕ ದಲಿತರು ಹಾಗೂ ಸವರ್ಣಿಯರು ಅತ್ಯಾಶ್ಚರ್ಯಗಳಿಂದ ನೋಡುತ್ತಿದ್ದರು. ತಹಶೀಲದಾರ್ ಕಚೇರಿಯಲ್ಲಿಯೂ ದೇವರಾಯನಿಗೆ ಆದರ ಗೌರವಗಳಿದ್ದವು. ಸ್ವತಃ ತಹಶೀಲದಾರ್‌ರು ತಮ್ಮ ಖಾಸ ಟಾಂಗಾದಲ್ಲಿ ಅವನನ್ನು ಕರೆದುಕೊಂಡು ಹೋಗುತ್ತಿದ್ದುದನ್ನು ಕಚೇರಿಯ ಉಳಿದ ನೌಕರ ವರ್ಗ ಅನೇಕ ಸಲ ನೋಡಿತ್ತು. ಹೀಗಾಗಿ ತಹಶೀಲದಾರ್ ಕಚೇರಿಯಲ್ಲಿ ಆತನಿಗೆ ಯಾವ ಅಡೆತಡೆಗಳು ಇರಲಿಲ್ಲ.

ಕೊಲ್ಲಾಪುರದಲ್ಲಿ ನಡೆದ ಕಥೆಯನ್ನು ದೇವರಾಯ ತಹಶೀಲದಾರ್‌ರಿಗೆ ಹೇಳಿದ. ಎರಡನೆಯ ಅಂಗಡಿಯಲ್ಲಿಯ ಅವನ ಅನುಭವ ಕೇಳಿ ತಹಶೀಲದಾರ್‌ರು ಹೊಟ್ಟೆ ಹುಣ್ಣಾಗುವಂತೆ ನಕ್ಕರು. 'ಭಾರಿ ಚಾಲಕಿನವ ನೀನು' ಎಂದು ಅವನ ಜಾಣತನಕ್ಕೆ ಶಹಭಾಸಗಿರಿ ನೀಡಿದರು.

ತನ್ನ ಮನಸ್ಸಿನಲ್ಲಿ ಬಂದ ವಿಚಾರವನ್ನು ದೇವರಾಯ ತಹಶೀಲದಾರ್‌ರೆದುರು ಮಂಡಿಸಿದ. ಅದನ್ನು ಕೇಳಿ ತಹಶೀಲದಾರ್‌ರು ಗಂಭೀರರಾದರು. ಅವರ ಮುಖದಲ್ಲಿ ಸಂಶಯದ ಒಂದೆರಡು ಗೆರೆಗಳು

ಮೂಡಿದವು. 'ಇದು ಸಾಧ್ಯವಾಗಬಹುದೇ?' ಎಂದು ತಮ್ಮಷ್ಟಕ್ಕೆ ತಾವೇ ಹೇಳಿಕೊಂಡರು. ಅವರ ಮನಸ್ಸಿನಲ್ಲಿಯ ತುಮುಲವನ್ನು ಓದಿಕೊಂಡವನಂತೆ ದೇವರಾಯ 'ಸಾಹೇಬ್ರ, ನೀವು ಸಹಾಯ ಮಾಡಿದರೆ, ಇದನ್ನು ನಾನು ಸಾಧ್ಯಮಾಡಿ ತೋರಿಸ್ತೇನಿ' ಎಂದ.

'ಹಾಗಲ್ಲ ದೇವರಾಯ, ಈ ಜನ ಅದಕ್ಕೆ ತಯಾರಾಗ್ತಾರೇನ್?' ತಹಶೀಲದಾರ್ ಕೇಳಿದರು.

'ಅದ್ರಿಂದ ಅವರಿಗೆ ಏನ್ ಲುಕ್ಸಾನ್ ಆಗತೇತಿ ಸಾಹೇಬ್ರ? ಒಂದು ಅಡ್ಡಹೆಸರು ಹೋಗಿ ಇನ್ನೊಂದು ಬರ್ತೇತಿ. ಈ ಬದಲಾವಣೆಯಿಂದ ಕನಿಷ್ಠ ಗೌರವವಾದ್ರೂ ಸಿಗತೇತಲ್ಲ?' ಎಂದು ಸಮಜಾಯಿಸಿ ನೀಡಿದ ದೇವರಾಯ.

'ಆಯ್ತು. ಆದ್ರೆ ಇದರಲ್ಲಿ ನನ್ನ ಪಾಲೇನು?' ಕೇಳಿದರು ತಹಶೀಲದಾರ್‌ರು.

'ಈ ಅಡ್ಡಹೆಸರು ಬದಲಾವಣೆಗೆ ಸರ್ಕಾರಾನೂ ಬೆಂಬಲ ಕೊಡ್ತೆತೆಂದು ದಲಿತರಿಗೆ ಮನವರಿಕೆ ಯಾದರೆ, ಅವರು ಇದನ್ನು ಖಂಡಿತವಾಗಿ ಒಪ್ಪಿಕೋಳ್ತಾರೆ. ಆಗ ಅವರಿಗೆ ಯಾವ ಸಂಶಯಗಳೂ ಇರುವುದಿಲ್ಲ.' ಹೇಳಿದ ದೇವರಾಯ.

'ಆಯ್ತು. ನೀನು ಈ ಎಲ್ಲ ಜನರ ಒಂದ್ ಮೀಟಿಂಗ್ ಕರಿ. ಅದರಲ್ಲಿ ಬಾಬಾಸಾಹೇಬರು ತಮ್ಮ ಅಡ್ಡಹೆಸರಿನಲ್ಲಿ 'ಅಂಬೇಡ್ಕರ್'ವೆಂಬುದನ್ನು ಸೇರಿಸದೆ 'ಮಹಾರ್' ಎಂದು ಸೇರಿಸಿದ್ದರೆ ಅವರು ಇಷ್ಟು ಮುಂದೆ ಬರುತ್ತಿರಲಿಲ್ಲವೆಂದು ಹೇಳು. ಈ ಅಡ್ಡಹೆಸರು ಬದಲಾವಣೆಗೆ ಸರ್ಕಾರದಿಂದಲೂ ಬೆಂಬಲ ಇದೆಯೆಂದೂ ಜಾಹೀರುಪಡಿಸು. ನಿನ್ನ ಜೊತೆಗೆ ನಾನು ತಲಾಠಿಯನ್ನು ಕಳಿಸುತ್ತೇನೆ. ಅವನ ಎದುರಿಗೆ ಈ ಮೀಟಿಂಗ್ ನಡೆದರೆ ನಿಮ್ಮ ಜನಕ್ಕೂ ಇದು 'ಸರ್ಕಾರಿಮಾನ್ಯ ಕಾರ್ಯಕ್ರಮ'ವೆಂದು ಮನವರಿಕೆಯಾಗಬಹುದು. ಎಂದರು ತಹಶೀಲದಾರ್‌ರು.

ಅವರ ಈ ಮಾತುಗಳಿಂದ ದೇವರಾಯನ ತಲೆ ಹಗುರವಾದಂತೆನ್ನಿಸಿತು. ಅಲ್ಲಿಂದ ಆತ ನೇರವಾಗಿ ಪ್ರಿಂಟಿಂಗ್ ಪ್ರೆಸ್‌ಗೆ ಹೋಗಿ ಹ್ಯಾಂಡುಬಿಲ್ಲುಗಳನ್ನು ಪ್ರಿಂಟ ಮಾಡಿಸಿ ಅವುಗಳನ್ನು ಊರೂರಿಗೆ ಹಂಚಿಸಿದ. ನಿಗದಿಯಾದ ದಿನಕ್ಕೆ ದಲಿತರೆಲ್ಲ ಚಿಕ್ಕೋಡಿ ಹೊಲಗೇರಿಯಲ್ಲಿ ಸೇರಬೇಕೆಂದು ಕೇಳಿಕೊಂಡಿದ್ದ. ಅದಕ್ಕಾಗಿಯೇ ಆತ ಈಗ ಚಿಕ್ಕೋಡಿಗೆ ಹೊರಟಿದ್ದ.

ದೇವರಾಯ ಮತ್ತು ನಿಂಗಪ್ಪ ಮಹಾರ್ ಚಿಕ್ಕೋಡಿ ತಲುಪಿದಾಗ ಅಲ್ಲಿ ಇವರಿಗಿಂತ ಮುಂಚೆ ಅನೇಕ ದಲಿತರು ಬಂದು ಸೇರಿದ್ದರು. ಬೆಳಗಾವಿ ಹಾಗೂ ಆಗಿನ ಕೊಲ್ಲಾಪುರ ಸಂಸ್ಥಾನದ ನಾನಾ ಕಡೆಗಳಿಂದ ದಲಿತರು ಚಿಕ್ಕೋಡಿಗೆ ಆಗಮಿಸಿದ್ದರು. ಇನ್ನೂ ಅನೇಕರು ಮೀಟಿಂಗಿಗಾಗಿ ಬರುತ್ತಿದ್ದರು. ಸುಮಾರು 500 ಜನ ಈ ಮೀಟಿಂಗ್‌ನಲ್ಲಿದ್ದರು. ಚಿಕ್ಕೋಡಿ ತಲಾಠಿಯೂ ಮೀಟಿಂಗಿಗೆ ಬಂದಿದ್ದರಿಂದ ಮೀಟಿಂಗ್ ಯಾವುದೋ ಗಂಭೀರ ವಿಷಯಕ್ಕಾಗಿ ಕರೆಯಲಾಗಿದೆಯೆಂದು ಎಲ್ಲರೂ ಭಾವಿಸಿದ್ದರು. ತಲಾಠಿಗೆ ಖುರ್ಚಿ ಹಾಕಿ ಕೂಡ್ರಿಸಲಾಗಿತ್ತು. ಆತನ ಪಕ್ಕದಲ್ಲಿ ದೇವರಾಯ ಇನ್ನೊಂದು ಖುರ್ಚಿಯಲ್ಲಿ ಕುಳಿತುಕೊಂಡ.

ಅಲ್ಲಿ ಬಂದವರಲ್ಲಿ ಎಲ್ಲರ ಅಡ್ಡಹೆಸರುಗಳು ಅವರವರ ಜಾತಿವಾಚಕಗಳಾಗಿದ್ದವು. ದೇವರಾಯ ಮೀಟಿಂಗಿನ ವಿಷಯವನ್ನು ಸವಿಸ್ತಾರವಾಗಿ ಸಭೆಗೆ ತಿಳಿಸಿದ. ಕೊಲ್ಲಾಪುರದಲ್ಲಿ ತನಗಾದ ಅವಮಾನ ನಂತರ ತನಗೆ ಸಿಕ್ಕ ಗೌರವ ಎರಡನ್ನೂ ಸಭೆಗೆ ವಿವರವಾಗಿ ಹೇಳಿದ. ತಹಶೀಲದಾರ್‌ರು ಹೇಳಿದಂತೆ ಬಾಬಾ ಸಾಹೇಬರ ವಿಷಯವನ್ನು ಅಲ್ಲಿ ಹೇಳಿ ಜಾತಿವಾಚಕ ಅಡ್ಡಹೆಸರುಗಳಿಂದ ತಮಗೆಲ್ಲರಿಗೆ ಆಗುತ್ತಿದ್ದ ಅವಮಾನಗಳನ್ನು ಎಳೆ ಎಳೆಯಾಗಿ ಬಿಡಿಸಿ ಸಭೆಯ ಮುಂದಿಟ್ಟ. ಅಲ್ಲಿದ್ದ ಎಲ್ಲ ಜನರೂ ಈ ರೀತಿಯ ಅವಮಾನಗಳನ್ನು ಒಂದಲ್ಲ ಹತ್ತಾರು ಸಾರಿ ಅನುಭವಿಸಿದ್ದರು. ತಾನು ಹೊಲೇರವ ಅಥವಾ ತಾನು ಚಾಂಬಾರ್ ಅಥವಾ ತಾನು ಢೋರ್‌ನೆಂದು ಗೊತ್ತಾದಾಗ ಚಲಿಸುವ ಬಸ್ಸಿನಿಂದ ಕಂಡಕ್ಟರ್ ತಮ್ಮನ್ನು ಹೊರಹಾಕಿದ್ದನ್ನು ಒಂದಿಬ್ಬರು ಹೇಳಿ ತಮ್ಮ ಜಾತಿಯನ್ನು ನಿಂದಿಸಿಕೊಂಡರು. ಆದರೆ ಈ ಸಮಸ್ಯೆಯಿಂದ ಪಾರಾಗುವುದು ಹೇಗೆ ಎಂದು ದೇವರಾಯನನ್ನೇ ಕೇಳಿದರು. ಇದನ್ನೇ ನಿರೀಕ್ಷಿಸುತ್ತಿದ್ದ ದೇವರಾಯ, ಕಾದ ಕಬ್ಬಿಣಕ್ಕೆ ಹೊಡೆತ ಹಾಕುವಂತೆ 'ನಾವು ನಮ್ಮ ನಮ್ಮ ಅಡ್ಡಹೆಸರುಗಳನ್ನು ಬದಲಿಸೋಣ. ಅದಕ್ಕೆ ಸರ್ಕಾರದವರೂ ಮನ್ನಣೆ ಕೊಡುತ್ತಾರೆ' ಎಂದು ಹೇಳಿ ತಲಾಠಿಯ ಕಡೆಗೆ ನೋಡಿದ.

ಅಲ್ಲಿ ಬಂದವರಲ್ಲಿ ಎಲ್ಲರ ಅಡ್ಡಹೆಸರುಗಳು ಅವರವರ ಜಾತಿವಾಚಕಗಳಾಗಿದ್ದವು. ದೇವರಾಯ ಮೀಟಿಂಗಿನ ವಿಷಯವನ್ನು ಸವಿಸ್ತಾರವಾಗಿ ಸಭೆಗೆ ತಿಳಿಸಿದ. ಕೊಲ್ಲಾಪುರದಲ್ಲಿ ತನಗಾದ ಅವಮಾ
ನಂತರ ತನಗೆ ಸಿಕ್ಕ ಗೌರವ ಎರಡನ್ನೂ ಸಭೆಗೆ ವಿವರವಾಗಿ ಹೇಳಿದ. ತಹಶೀಲದಾರ್‌ರು ಹೇಳಿದ
ಬಾಬಾಸಾಹೇಬರ ವಿಷಯವನ್ನು ಅಲ್ಲಿ ಹೇಳಿ ಜಾತಿವಾಚಕ ಅಡ್ಡಹೆಸರುಗಳಿಂದ ತಮಗೆಲ್ಲರಿಗೆ ಆಗುತ್ತಿದ್ದ ಅವಮಾನಗಳನ್ನು ಎಳೆ ಎಳೆಯಾಗಿ ಬಿಡಿಸಿ ಸಭೆಯ ಮುಂದಿಟ್ಟ. ಅಲ್ಲಿದ್ದ ಎಲ್ಲ ಜನರೂ ಈ ರೀತಿಯ ಅವಮಾನಗಳನ್ನು ಒಂದಲ್ಲ ಹತ್ತಾರು ಸಾರಿ ಅನುಭವಿಸಿದ್ದರು. ತಾನು ಹೊಲೇರವ ಅಥವಾ ತಾನು ಚಾಂಬಾರ್ ಅಥವಾ ತಾನು ಢೋರ್‌ನೆಂದು ಗೊತ್ತಾದಾಗ ಚಲಿಸುವ ಬಸ್ಸಿನಿಂದ ಕಂಡಕ್ಟರ್ ತಮ್ಮನ್ನು ಹೊರಹಾಕಿದ್ದನ್ನು ಒಂದಿಬ್ಬರು ಹೇಳಿ ತಮ್ಮ ಜಾತಿಯನ್ನು ನಿಂದಿಸಿಕೊಂಡರು. ಆದರೆ ಈ ಸಮಸ್ಯೆಯಿಂದ ಪಾರಾಗುವುದು ಹೇಗೆ ಎಂದು ದೇವರಾಯನನ್ನೇ ಕೇಳಿದರು. ಇದನ್ನೇ ನಿರೀಕ್ಷಿಸುತ್ತಿದ್ದ ದೇವರಾಯ, ಕಾದ ಕಬ್ಬಿಣಕ್ಕೆ ಹೊಡೆತ ಹಾಕುವಂತೆ 'ನಾವು ನಮ್ಮ ನಮ್ಮ ಅಡ್ಡಹೆಸರುಗಳನ್ನು ಬದಲಿಸೋಣ. ಅದಕ್ಕೆ ಸರ್ಕಾರದವರೂ ಮನ್ನಣೆ ಕೊಡುತ್ತಾರೆ' ಎಂದು ಹೇಳಿ

'ಹೌದಪ್ಪ; ನೀನು ಹೇಳಿದ್ದು ಸರಿ. ಆದರೆ ಅಡ್ಡಹೆಸರುಗಳನ್ನು ಏನೆಂದು ಬದಲಿಸಿಕೊಳ್ಳಬೇಕು?' ಪ್ರಶ್ನಿಸಿದ ಕೃಷ್ಣಾ ಹೊಲೇರ್.

'ನೀನು ಯಾವ ಊರಿನವ?' ಕೇಳಿದ ದೇವರಾಯ.

'ನಾನು ಕಲ್ಲೋಳಿಯವ' ಹೇಳಿದ ಕೃಷ್ಣಾ ಹೊಲೇರ್.

'ನೀನು ಇಂದಿನಿಂದ ಕೃಷ್ಣಾ ಕಲ್ಲೋಳಿಕರ್' ಘೋಷಿಸಿದ ದೇವರಾಯ.

ಇದನ್ನು ಕೇಳಿ ಇಡಿ ಸಭೆಯೇ ಅವಾಕ್ ವಾಯಿತು. ಎಲ್ಲರಲ್ಲೂ ಒಂದು ರೀತಿಯ ವಿದ್ಯುತ್ ಸಂಚಾರವಾದಂತಾಯಿತು. ಇಷ್ಟು ಸುಲಭದಲ್ಲಿ ಹೊಸ ಅಡ್ಡಹೆಸರುಗಳು ಸಿಗಬಹುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಅವರ ಉತ್ಸುಕತೆಯನ್ನು ನೋಡಿಯೇ ಸರಿಯಾದ ವೇಳೆಯಲ್ಲಿ, ಸರಿಯಾದ ಸ್ಥಳಕ್ಕೆ ದೇವರಾಯ ವೈಚಾರಿಕ ಖಡ್ಗದಿಂದ ಪ್ರಹಾರ ಮಾಡಿದ್ದ. ಆತ ಬಿಟ್ಟ ಬಾಣ ಅವರಿಗೆ ಸರಿಯಾಗಿಯೇ ತಾಗಿತ್ತು.

'ಹಾಗಾದರೆ ನಾನು ನಿಪ್ಪಾಣಿಕರ್' ಎಂದು ಎದ್ದ ಭೀರು ಮಹಾರ್ ಅತ ನಿಪ್ಪಾಣಿಯಿಂದ ಬಂದಿದ್ದ.

ಒಂದು ತಾಸಿನಲ್ಲಿ ಅಲ್ಲಿದ್ದ ಬಹಳಷ್ಟು ಜ ಹೊಲೆಯರು, ಮಹಾರ್‌ರು ಮೋಚಿಗಳು, ಮಾದಿಗರ ಢೋರ್‌ರು, ಸಮಗಾರರು ಮುಂತಾದವರು 'ರಾಯಬ ಗಕರ್', 'ಮಿರಜಕರ್', 'ಚಿಂಚಲಿಕರ್'. 'ಕೊಲ್ಲಾಪುರ 'ಕಣಗಾಲೆ', 'ಶಿರಗಾಂವಕರ್', 'ಸಾಂಗ್ಲೀಕರ್'ಗಳಾದರ ಊರುಗಳೇ ಇಲ್ಲದ ಜಂಗಮ ದಲಿತರೂ ಅಲ್ಲಿದ್ದರ ಅವರಿಗೆ ತಮ್ಮ ಹುಟ್ಟೂರಿನ ವಿಚಾರವೂ ತಿಳಿಯದ ಆದರೆ ತಮಗೂ ಒಂದು ಹೊಸ ಅಡ್ಡಹೆಸರು ಬೇಕೆಂ ಅದಮ್ಯ ಆಸೆ ಅವರ ಕಣ್ಣುಗಳಲ್ಲಿ ಕಾಣಿಸುತ್ತಿತ್ತು.

ಅಂತಹ ಒಬ್ಬ ದಲಿತನನ್ನು ದೇವರಾಯ ಎಬ್ಬಿಸಿ 'ನೀನು ಯಾರಲ್ಲಿ ಕೆಲಸ ಮಾಡ್ತೀ?' ಎಂದ ಕೇಳಿದ.

'ಪಟವರ್ಧನ್‌ರ ಮನೆಯಲ್ಲಿ' ಆತ ಹೇಳಿದ.

'ಹಾಗಾದರೆ ನೀನು ಇಂದಿನಿಂದ ಪಟ ವರ್ಧನ್' ತೀರ್ಪು ನೀಡಿದ ದೇವರಾಯ.

ಈ ರೀತಿ ಅವರಿವರ ಮನೆಗಳಲ್ಲಿ, ಹೊಲ ಳಲ್ಲಿ ಕೆಲಸ ಮಾಡುತ್ತಿದ್ದವರು 'ಮಾನೆ', 'ಚೌಗುಲೆ' 'ಕಾಮತ', 'ಜೋಶಿ', 'ಪಾಟೀಲ', 'ಭವಾನೆ', 'ಸೂರ್ಯ ವಂಶಿ', ಪಟವರ್ಧನ್', 'ಭೋಸಲೆ', 'ಜೊಲ್ಲೆ' 'ಇನಾಂದಾರ್', 'ಭೋಗಲೆ'ಗಳಾದರು. ಕೂತ ಕೂ ಲ್ಲಿಯೇ ತಮ್ಮ ಈ ಹೊಸ ಅಡ್ಡಹೆಸರುಗಳ ರೋಮಾಂಚ ನವನ್ನು ಅನುಭವಿಸಿದರು. ಈ ಎಲ್ಲ ಅಡ್ಡಹೆಸರುಗಳ ಸವರ್ಣೀಯರದ್ದಾಗಿದ್ದವು. ಈಗ ಇವು ತಮಗಂಟಿಕೊಂಡ ಬಗ್ಗೆ ಅವರಿಗೆ ಸಂತೋಷವಾಗಿತ್ತು.

ಬೆಳಗಾವಿ ಜಿಲ್ಲೆಯ ಹಲಕೆಲ ಭಾಗಗಳಲ್ಲಿದ್ದ ದಲಿತರು 'ರಾಯನಾಕ', ತಾಮನಾಕ', 'ಧಾಮನಾಕ' 'ಮೇಘನಾಕ', 'ಶೆಟ್ನಾಕ್' ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಿದ್ದರು. ಇವರಿಗೆ ತಾವು ಯಾರು, ತಮ ಪೂರ್ವಜರ ಇತಿಹಾಸವೇನು? ತಾವು ಎಲ್ಲಿಂದ ಬಂದ ವೆಂಬುದು ಲವಲೇಶವೂ ಗೊತ್ತಿರಲಿಲ್ಲ. ಅದರೆ ಈ ಜನರು, ಜನೇವರಿ 1,1818ರಲ್ಲಿ ಪುಣೆಯ ಸಮೀಪ ಕೋರೆಗಾಂವ ಊರಿನ ಭೀಮಾ ನದಿಯ ದಂಡೆಯಲ್ಲಿ ನಡೆದ ಪೇಶ್ವೆ ಹಾಗೂ ಬ್ರಿಟಿಷ್ ಸೈನಿಕರ ಯುದ್ಧದ ಬ್ರಿಟಿಷ ಸೈನ್ಯದಲ್ಲಿದ್ದ ಮಹಾರ್‌ರ ವಂಶಜರೆನ್ನುವುದು ದೇವರಾ ಯನಿಗೆ ಗೊತ್ತಿತ್ತು. ಆಗ ನಡೆದ ಭಾರೀ ಯುದ್ಧದಲ್ಲಿ ಮಹಾರ್ ರೆಜಿಮೆಂಟಿಗೆ ಸೇರಿದ 500 ಜನ ದಲಿತ ಸೈನಿಕರು ಪೇಶ್ವೆಯ 30,000 ಸೈನಿಕರನ್ನು ಸೋಲಿಸಿ ಜಾಗತಿಕ ಇತಿಹಾಸವನ್ನೇ ನಿರ್ಮಿಸಿದ್ದರು.

ಇದರಲ್ಲಿ ಮಹಾರ್ ರೆಜಿಮ್ಮೆಂಟಿನ ಕೇವಲ 21 ನ ಸೈನಿಕರು ಸತ್ತಿದ್ದರು. ಈ ಸೈನಿಕರ ಸ್ಮರಣಾರ್ಥ ೀರೆಗಾಂವದಲ್ಲಿ ಶೌರ್ಯಸ್ತಂಭವನ್ನು ಸ್ಥಾಪಿಸಲು ಸ್ವತಃ ಕ್ಟೋರಿಯಾ ರಾಣಿ ಆಜ್ಞಾಪಿಸಿ ಆಗಿನ ಭಾರತದ ಸಮಸ್ತ ನಿಕರ ತುಕಡಿಗಳು ಪ್ರತಿ ವರ್ಷ ಜನೇವರಿ 1 ರಂದು ೀರೆಗಾಂವದಲ್ಲಿ ಈ ಶೌರ್ಯಸ್ತಂಭಕ್ಕೆ ಗೌರವ ಲ್ಲಿಸಬೇಕೆಂದು ಆಜ್ಞಾಪಿಸಿದ್ದಳು. ಈ ಇತಿಹಾಸ ಬಾಸಾಹೇಬ ಅಂಬೇಡ್ಕರ್‌ರಿಗೆ ಗೊತ್ತಿತ್ತು. 1926 ರಲ್ಲಿ ಟಿಷ್ ಸರ್ಕಾರ ಸೈನ್ಯ ಮತ್ತು ಪೊಲೀಸ ಖಾತೆಯಲ್ಲಿದ್ದ ಲಿತರನ್ನು ವಜಾ ಮಾಡುವ ಆಜ್ಞೆ ಜಾರಿಗೊಳಿಸಿದಾಗ ಬಾಸಾಹೇಬ ಅಂಬೇಡ್ಕರ್‌ರು ಆಗಿನ ಗವ್ರ್ನರ್ ನರಲ್‌ರಿಗೆ ಹಾಗೂ ಸ್ವತಃ ರಾಣಿಗೆ ಕೋರೆಗಾಂವ ಯುದ್ಧದ ವಿವರಗಳನ್ನು ನೀಡಿ ಈ ಯುದ್ಧದಲ್ಲಿ ದಲಿತರು ಇಂಗ್ಲಿಷರ ಪರವಾಗಿ ಹೋರಾಡದೇ ಇದ್ದಿದ್ದರೆ, ರತದಲ್ಲಿ ಇಂಗ್ಲಿಷ್ ಸಾಮ್ರಾಜ್ಯ ನಿರ್ನಾಮವಾಗಿ ೀಗುತ್ತಿತ್ತೆಂದು ಮನವರಿಕೆ ಮಾಡಿಕೊಟ್ಟಿದ್ದರು.

ಈ ವಿವರಗಳನ್ನು ನೋಡಿ ಸರ್ಕಾರ ತನ್ನ ಜ್ಞೆಯನ್ನು ಹಿಂತೆಗೆದುಕೊಂಡಿತು. ಇಲ್ಲಿ ಯುದ್ಧ

ಹೊಲೆಯ, ಮಹಾರ್, ಚಾಂಬಾರ, ಮಾದಾರ, ಮಾದಿಗ, ಮೋಚಿ, ಸಮಗಾರ, ಢೋರ್ ಆಗಿ ಬಂದವರು ಚಿಕ್ಕೋಡಿಯಿಂದ ತಮ್ಮೂರಿಗೆ ಹೋಗುವಾಗ ಹೊಸ ಅಡ್ಡಹೆಸರುಗಳೊಂದಿಗೆ ಹೊಸ ವ್ಯಕ್ತಿತ್ವವನ್ನು ಪಡೆದುಕೊಂಡಿದ್ದರು. ಇವರನ್ನು ಯಾರೂ ಅಡ್ಡಹೆಸರುಗಳ ಸಹಾಯದಿಂದ ಅಪಮಾನಿಸುವಂತಿರಲಿಲ್ಲ. ಇವರ ಈ ಉತ್ಸಾಹಕಂಡು ದೇವರಾಯನ ಕಣ್ಣಲ್ಲಿ ನೀರು ಬಂತು.

ಾಡಿದ ಈ ಜನರ ಪೀಳಿಗೆಯವರು ಕಾರಣಾಂತ ಳಿಂದ ಬೆಳಗಾವಿ ಜಿಲ್ಲೆಯ ಅನೇಕ ಕಡೆಗಳಲ್ಲಿ ವಲಸೆ ಂಡಿದ್ದರು. ಇವರ ವೀರತೆಯ ಇತಿಹಾಸ ಗೊತ್ತಿದ್ದ ವರಾಯ ಇವರನ್ನು 'ರಾಯಣ್ಣವರ' (ರಾಯನಾಕ), ಮ್ಮಣ್ಣವರ' (ತಾಮನಾಕ), 'ಧಾಮಣ್ಣವರ' (ಧಾಮ ಕ), 'ಮೇಘಣ್ಣವರ' (ಮೇಘನಾಕ), 'ಶೆಟ್ಟೆಣ್ಣವರ' ಟ್ನಾಕ)-ಎಂದು ಮರು ನಾಮಕರಣ ಮಾಡಿದ. ಹಾಸವನ್ನು ಸೃಷ್ಟಿಸಿ, ಇತಿಹಾಸದ ಮರೆಗೆ ಹೋಗಿದ್ದ ಜನರಿಗೆ ಅವರ ಉಜ್ವಲ ಇತಿಹಾಸದ ಪುಟಗಳನ್ನು ಮು ತೋರಿಸಿದ.

ಹೊಲೆಯ, ಮಹಾರ್, ಚಾಂಬಾರ, ದಾರ, ಮಾದಿಗ, ಮೋಚಿ, ಸಮಗಾರ, ಢೋರ್ ಆಗಿ ದಿದ್ದ ಇವರು ಚಿಕ್ಕೋಡಿಯಿಂದ ತಮ್ಮೂರಿಗೆ ಹೋಗು ಗ ಹೊಸ ಅಡ್ಡಹೆಸರುಗಳೊಂದಿಗೆ ಹೊಸ ವ್ಯಕ್ತಿತ್ವವನ್ನು ದುಕೊಂಡಿದ್ದರು. ಇವರನ್ನು ಈಗ ಯಾರೂ ಅಡ್ಡ ರುಗಳ ಸಹಾಯದಿಂದ ಅವಮಾನಿಸುವಂತಿರಲಿಲ್ಲ ವಾ ಲೇವಡಿ ಮಾಡುವಂತಿರಲಿಲ್ಲ. ಇವರ ಈ ಸಾಹಕಂಡು ದೇವರಾಯನ ಕಣ್ಣಲ್ಲಿ ನೀರು ಬಂತು. ಹೊತ್ತು ಅಲ್ಲಿದ್ದ ತಲಾಠಿಗೆ ಈ ಇಡೀ ಘಟನೆಯ ಬುಡವೂ ಅರ್ಥವಾಗಲಿಲ್ಲ. 'ದೇವರಾಯ ಏನಿದೆಲ್ಲ?' ದು ಆತ ಕೇಳಿದ. 'ಮೀಟಿಂಗ್ ಯಶಸ್ವಿ ಆತು ಅಂತ ಶೀಲದಾರ್ ಸಾಹೇಬ್ರಿಗೆ ಹೇಳು' ಎಂದು ದೇವರಾಯ ನಿಗೆ ಕೈ ಮುಗಿದ. (ಮುಂದುವರೆಯುವುದು) □

ಬಸವಾದಿ ಶರಣ'

ನಿದ್ದೆಯ ಬೀದಿಯೊಳಗೆ
ಎದ್ದು ನಡೆಯುತ್ತಿದ್ದೆ
ಆ ಮೌನವಾದ ನವರಾತ್ರಿಯಲ್ಲಿ
ಯಾರನ್ನೊ ಹುಡುಕುತ್ತಾ......

ಎದುರಾದರಿಬ್ಬರು
ವಿಭೂತಿದಾರರು.....
ಯಾರು ನೀವು ಎಂದು ಕೇಳಿದೆ?
ಚಣ ಹೊತ್ತು ಅವರ ಮುಖಗಳಲ್ಲಿ ಮೌನ!

ಮತ್ತೆ ಅವರ ಮುಖಗಳಲ್ಲಿ ಕೊಂಚ ನಗು,
ಯಾರಿರಬಹುದೆಂದು
ಮನದಲ್ಲೆ ಹಾಕಿದೆ ಲೆಕ್ಕಾಚಾರ

ಅವರಲ್ಲೊಬ್ಬರು ತುಟಿಬಿಚ್ಚಿದರು
ನನ್ನ ಹೆಸರು ಮಾದರ ಚೆನ್ನಯ್ಯನೆಂದು
ನಿನ್ನೆಸರೇನು ಕಂದಾ!
ಯಾರಿಗಾಗಿ ಹುಡುಕುತ್ತ ಹೊರಟಿರುವೆ
ಈ ನಿಶಾಂತ ರಾತ್ರಿಯಲ್ಲಿ

ಮತ್ತೆ ಕಾಡಿತು ನನ್ನೊಳಗೆ ಚಿಂತೆ
ಅಜ್ಜ, ನಿನ್ನ ಸನಿಹ ನಿಂತಿರುವ ಆ
ಅಜ್ಜ ಯಾರು? ಎಂದೆ

ಮತ್ತೆ ಉತ್ತರಿಸುತ್ತಾ ಆ ಅಜ್ಜನ ಹೆಸರು
ಕಲ್ಯಾಣದ ಬಸವಣ್ಣನೆಂದು
ಹೊರಟಿರುವೆವು "ಮಹಾಮನೆ' ಕಾಯಲು
ಎಂದು ಹೇಳುತ್ತ ನಕ್ಕರಿಬ್ಬರು.

ಈ ಮಹಾಅನುಭವಿಗಳ ಪಾದಗಳ ಮುಟ್ಟುತ್ತ,
ಅರುಹಿದೆ ಗೊತ್ತಾಗಲಿಲ್ಲವಾ ನಾನು ನಿಮ್ಮ ಮರಿಮಗ
ನನ್ನ ಪೂರ್ವಿಕರು ನೀವು ಎಂದೆ,

ಗಾಬರಿಯಿಂದ ಜಾರಿಬಿದ್ದೆ ಮಂಚದ ಕೆಳಗೆ
ಕಣ್ತೊಡೆದದ್ದೆ ತಡ ನನ್ನ ನೋಡಿ ನಗುತ್ತಿದ್ದರು
ಗೋಡೆಯ ಪಟಗಳಲ್ಲಿದ್ದ ಬಸವ, ಚೆನ್ನರು

○ಗಂಗಪ್ಪ ತಳವಾರ

ಜನಪದ ಸಾಹಿತ್ಯ, ನಂಬಿಕೆ, ಆಚರಣೆ, ಸಂಪ್ರದಾಯಗಳು, ಉಡುಪು, ವೈದ್ಯಕೀಯ, ಯಕ್ಷಿಣಿ ಮೊದಲಾದ ಬದುಕಿನ ಸಮಗ್ರ ಸಂಗತಿಗಳನ್ನು ಒಳಗೊಳ್ಳುವಂಥದ್ದು ಜಾನಪದ. ಸಮಗ್ರ ಜಾನಪದ ಸಂಗತಿಗಳನ್ನು ಇಲ್ಲಿ ಚರ್ಚಿಸಲಾಗುವುದಿಲ್ಲ. ಅದಕ್ಕಾಗಿ ಜನಪದ ಸಾಹಿತ್ಯವನ್ನು ಆಕರವಾಗಿಟ್ಟುಕೊಂಡು ಮಹಿಳೆಯ ನೋವಿನ ನೆಲೆಗಳನ್ನು ವಿಶ್ಲೇಷಿಸಲಾಗಿದೆ. ಮಹಿಳೆ ಎನ್ನುವುದು ಅಕಾಡೆಮಿಷಿಯನ್‌ಗಳು ಹಾಗೂ ಶಿಕ್ಷಿತರು ಬಳಸುವ ಪದವಾಗಿದೆ. ದಿನ ನಿತ್ಯದ ವ್ಯವಹಾರಿಕ ಬದುಕಿನಲ್ಲಿ ಈ ಪದ ಚಾಲ್ತಿಯಲ್ಲಿಲ್ಲ. ವ್ಯವಹಾರಿಕ ಬದುಕಿನಲ್ಲಿ ಹೆಣ್ಣು, ಹೆಂಗಸು ಎನ್ನುವ ಪದಗಳನ್ನು ಬಳಸಲಾಗುತ್ತದೆ. ನೀನೂ ಒಂದು ಹೆಣ್ಣಾ? ಹೆಣ್ಣೆಂದರೆ ಹೀಗಿರಬೇಕು ಎಂದು ಬದುಕಿನ ಸಂದರ್ಭದಲ್ಲಿ ಆಗಾಗ ಹೇಳಲ್ಪಡುವ, ಆಗಾಗ ಕೇಳಲ್ಪಡುವ ಈ ಮಾತುಗಳು ಹೆಣ್ಣಿನ ಬಗ್ಗೆ ಒಂದು ನಿರ್ದಿಷ್ಟ ಗ್ರಹಿಕೆಗಳನ್ನು ಕಟ್ಟಿಕೊಂಡುತ್ತಿರುತ್ತವೆ. ತ್ಯಾಗಿ, ಸಹನಶೀಲೆ, ನೀತಿವಂತಳು, ಶೃಂಗಾರಜೀವಿ, ಸಂತಾನವನ್ನು ನೀಡುವವಳು ಮೊದಲಾದ ಸಂಗತಿಗಳೆಲ್ಲವೂ ಹೆಣ್ಣೆಂದರೆ ಹೀಗಿರಬೇಕು ಎನ್ನುವ ನಿರ್ವಚನದಲ್ಲಿ ಸೇರಿಕೊಂಡಿರುತ್ತವೆ. ಈ ನಿರ್ವಚನ ಪಿತೃಪ್ರಧಾನ ಕೌಟುಂಬಿಕ ಚೌಕಟ್ಟಿನಾಚೆ ಗುರುತಿಸಲ್ಪಡುವ ಸೂಳೆಗೆ ಅನ್ವಯಿಸುವುದಿಲ್ಲ. ಇದು ಬೇರೆ ಬಗೆಯ ಚರ್ಚೆಯನ್ನು ಬಯಸುತ್ತದೆ.

ಜಾನಪದ, ಮಹಿಳೆ ಮತ್ತು ನೋವಿನ ನೆಲೆಗಳು

ಡಾ॥ ಶೈಲಜಾ ಹಿರೇಮಠ

ಮಹಿಳೆಯನ್ನು ಪ್ರಕೃತಿಯನ್ನಾಗಿ, ಪುರುಷನನ್ನು ಸಂಸ್ಕೃತಿಯನ್ನಾಗಿ ಗುರುತಿಸಲಾಗುತ್ತದೆ. ಮಹಿಳೆಯ ಸ್ಥಾನಮಾನಗಳ ಹಿಂದೆ ಪುರುಷ ಪ್ರಧಾನ ವ್ಯವಸ್ಥೆ ಪ್ರಕೃತಿಯನ್ನು ನೋಡುವ ವಿಧಾನ ಮತ್ತು ವ್ಯಾಖ್ಯಾನಗಳ ಪ್ರಭಾವ ಇದೆ. ಪ್ರಕೃತಿಯ ಕುರಿತು ಪುರುಷರು ಯಾವ, ಯಾವ ದೃಷ್ಟಿಕೋನಗಳನ್ನು ರೂಪಿಸಿ ಕೊಂಡಿರುವರೋ ಅದೇ ದೃಷ್ಟಿಕೋನಗಳನ್ನು ಮಹಿಳಾ ಸಂಬಂಧಿತ ವಿಷಯಗಳಿಗೂ ವಿಸ್ತರಿಸಿಕೊಂಡಿರುವರು. ಈ ಹಿನ್ನಲೆಯಲ್ಲಿಯೇ ಮಹಿಳೆಯನ್ನು ಸಿದ್ಧಾಂತಿಕರಿಸಲಾಗಿದೆ. ಪ್ರಕೃತಿಯಲ್ಲಿ ಬಂಜೆ ನೆಲ, ಬಂಜೆಗಿಡ, ಕಳ್ಳ ಹೂವು ಕಾಣಿಸಿಕೊಳ್ಳುವವು. ಆದರೆ ಸಂಸ್ಕೃತಿಯ ವಿಷಯದಲ್ಲಿ ಹಾಗಲ್ಲ. ಅಲ್ಲಿರುವುದೆಲ್ಲ ಶ್ರೇಷ್ಠವಾದುದ್ದು, ಇತ್ಯಾತ್ಮಕವಾದದ್ದು, ಮೌಲಿಕವಾದದ್ದು ಎನ್ನುವ ಗ್ರಹಿಕೆಗಳೇ ಪ್ರಬಲವಾಗಿವೆ. ಹೀಗಾಗಿ ಪ್ರಕೃತಿಗಿಂತಲೂ ಸಂಸ್ಕೃತಿ ಪರಿಪೂರ್ಣವೆನಿಸಿಕೊಳ್ಳುತ್ತದೆ. ಈ ಹಿನ್ನಲೆಯಲ್ಲಿ ಹೆಣ್ಣನ್ನು ಕೊರತೆಯನ್ನಾಗಿ, ಪುರುಷನನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ಗುರುತಿಸಲಾಗಿದೆ. ಲಿಂಗ ಸಂಬಂಧವನ್ನು ಕಟ್ಟಿಕೊಳ್ಳುವಲ್ಲಿ ಪ್ರಕೃತಿಯನ್ನು ಅರ್ಥಮಾಡಿಕೊಳ್ಳುವ ವಿಧಾನದ ಪಾತ್ರ ಇದೆ.

ಹೀಗೆ ಯಾವತ್ತೂ ಕೂಡ ಪರಿವರ್ತನೆಗೆ ಅವಕಾಶ ಕೊಡದ, ಪರಿವರ್ತನೆಗೆ ಪ್ರಯತ್ನಿಸಿದ, ಪ್ರಯತ್ನಗಳನ್ನು ನಿಯಂತ್ರಿಸುವ ಸಾಮಾಜಿಕ ರಚನೆಯಲ್ಲಿ ನಾವಿದ್ದೇವೆ. ಹರಿವ ನೀರಿಗೆ ಡ್ಯಾಮ್ ಕಟ್ಟುವಲ್ಲಿ, ಗಿಡಗಳಿಗೆ, ಬಳ್ಳಿಗಳಿಗೆ ಕಸಿ ಮಾಡುವಿಕೆಯಲ್ಲಿ ಪ್ರಕೃತಿ ಮನುಷ್ಯ ನಿಯಂತ್ರಣಕ್ಕೊಳಪಟ್ಟಿರುವುದು ತಿಳಿದುಬರುತ್ತದೆ. ಸುನಾಮಿಯಂತಹ ಪ್ರಕೃತಿ ವಿಕೋಪಗಳು ಯಾವಾಗಲೋ ಕಾಣಿಸಿಕೊಳ್ಳಬಹುದು. ಯಾವುದೋ ಸಂದರ್ಭದಲ್ಲಿ ಘಟಿಸುವ ಇಂತಹ ಪ್ರಕೃತಿ ವಿಕೋಪಗಳನ್ನು ಹೊರತು ಪಡಿಸಿದರೆ ಪ್ರಕೃತಿ ಸಾಮಾನ್ಯವಾಗಿ ಮನುಷ್ಯ ನಿಯಂತ್ರಣದಲ್ಲಿರುತ್ತದೆ. ಆದರೆ ಸಂಸ್ಕೃತಿಗಳು ಇಡಿ ಸಮುದಾಯಗಳನ್ನು, ಸಮಾಜಗಳನ್ನು ನಿಯಂತ್ರಣಕ್ಕೆ ಒಳಪಡಿಸಿರುತ್ತವೆ. ಪ್ರಕೃತಿ ಕೇಂದ್ರಿತವಾಗಿ ನಿರ್ವಚಿಸಲ್ಪಟ್ಟ ನಿಯಂತ್ರಣಕ್ಕೊಳಪಡುವುದು ಹಾಗೂ ಸಂಸ್ಕೃತಿ ಕೇಂದ್ರಿತವಾಗಿ ಹೆಣೆಯಲ್ಪಟ್ಟ ನಿಯಂತ್ರಿಸುವುದು– ಈ ಎರಡೂ ಗುಣಗಳು ಮಹಿಳೆಯನ್ನು ಅಧೀನ ನೆಲೆಯಲ್ಲ, ಪುರುಷನನ್ನು ಪ್ರಧಾನ ನೆಲೆಯಲ್ಲಿ ನಿರೂಪಿಸುವಂತೆ ಮಾಡಿವೆ. ಮಹಿಳೆಗೆ ಸಮಗ್ರವ್ಯಕ್ತಿತ್ವ ಇಲ್ಲ ಎನ್ನುವುದನ್ನೇ ಈ ಬಗೆಯ ಗ್ರಹಿಕೆಗಳು ಕಟ್ಟಿಕೊಡುತ್ತಿರುತ್ತವೆ.

ಸಾಮಾಜಿಕ ನೆಲೆಯಲ್ಲಿ ಮಹಿಳೆ ಕೊರತೆಯಾಗಿ ಗುರುತಿಸಲ್ಪಟ್ಟರೆ, ಕೌಟುಂಬಿಕ ನೆಲೆಯಲ್ಲಿ ಹೆಂಡತಿಯಾಗಿ, ತಾಯಿಯಾಗಿ, ಮಗಳಾಗಿ, ಅತ್ತೆಯಾಗಿ, ಸೊಸೆಯಾಗಿ ಹೀಗೆ ಬಿಡಿ, ಬಿಡಿ ನೆಲೆಗಳಲ್ಲಿ ಗುರುತಿಸಲ್ಪಡುತ್ತಾಳೆ. ಹೆಣ್ಣಿನ ಪ್ರತಿನಿಧೀಕರಣದ ಈ ಒಂದೊಂದು ಮಾದರಿಗಳು ನೋವಿನ ನೆಲೆಗಳನ್ನು ಕಟ್ಟಿಕೊಡುತ್ತವೆಯೆ, ಅದರ ಸ್ವರೂಪವೇನು ಅದರ ಹಿಂದಿನ ರಾಜಕಾರಣ ಯಾವುದು, ಅದು ಮಹಿಳಾ ಸಮುದಾಯದ ಮೇಲೆ ಎಂತಹ ಪ್ರಭಾವವನ್ನು ಬೀರುತ್ತದೆ ಎನ್ನುವುದನ್ನು ವಿಶ್ಲೇಷಿಸುವ ಜರೂರಿದೆ. ಇಷ್ಟಕ್ಕೆ ವಿರುದ್ಧವಾದದ್ದು, ಆತ್ಮಾಭಿಮಾನಕ್ಕೆ ದಕ್ಕೆ ತರುವಂತದ್ದು, ವ್ಯಕ್ತಿತ್ವವನ್ನು ಅಪಮೌಲ್ಯೀಕರಣ ಗೊಳಿಸುವುದು, ಮೌಲ್ಯಗಳ ಹೆಸರಿನಲ್ಲಿ ದೈಹಿಕ ಹಾಗೂ ಮಾನಸಿಕ ಹಿಂಸೆಯನ್ನು ಅನುಭವಿಸುವುದು ಇವೆಲ್ಲವನ್ನು ಎಂದು ಅರ್ಥೈಸಿ ಕೊಂಡಿದ್ದೇನೆ. ಈ ಲೇಖನದಲ್ಲಿ ಹೆಂಡತಿ ಪ್ರತಿನಿಧೀಕರಣವನ್ನು ಚಿತ್ರಿಸುತ್ತಲೇ ಅವಳ ನೋವಿನ ನೆಲೆಗಳನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಜನಪದ ಸಾಹಿತ್ಯದಲ್ಲಿನ ಮಹಿಳೆಯ ನೋವಿನ ನೆಲೆಗಳನ್ನು ಪರಿಶೀಲಿಸುವ ಮುನ್ನ ನೋವಿನ ತಾತ್ವಿಕ ನೆಲೆಗಳನ್ನು ಸ್ಪಷ್ಟಪಡಿಸಿ ಕೊಳ್ಳುವ ಅಗತ್ಯವಿದೆ. "ಒಂದು ಇಂದ್ರಿಯ ಗಮ್ಯ ಅನುಭವವಾಗಿ ನೋವು ಅದನ್ನು ಅನುಭವಿಸುತ್ತಿರುವವರ ಹೊರೆತು ಬೇರೆ ಯಾರಿಗೂ ತಲುಪುದು ಸಾಧ್ಯವಿಲ್ಲ. ನೋವನ್ನು ಮತ್ತೊಬ್ಬರಿಗೆ ಸಂವಹನ ಮಾಡುವುದು ಅಸಾಧ್ಯವೆನಿಸುವಷ್ಟು ಕಷ್ಟ. ಏಕೆಂದರೆ ನೋವಿನ ವರ್ಣನೆಗೆ ಅದನ್ನು ಹಿಡಿದುಕೊಂಡವ ಶಕ್ತಿ ಇರುವುದಿಲ್ಲ... ನೋವು ಜಾಸ್ತಿಯಾದಂತೆ 'ಮಾತು' ಕಡಿಮೆಯಾಗುತ್ತಾ ಹೋಗುವುದು ಗಮನಿಸಬೇಕಾದ ಸಂಗತಿ... ನಿಜವಾದ ನೋವು ಮಾತನ್ನ ನಿರಾಕರಿಸುವುದಷ್ಟೇ ಅಲ್ಲ. ಆ ಸಾಮಾರ್ಥ್ಯವನ್ನೇ ನಾಶ ಮಾಡಿಬಿಡುತ್ತದೆ" (ರಾಘವೇಂದ್ರರಾವರ.ಎಚ್.ಎಸ್. 1993,

ಮಹುಕ್ತಿ

ಮಹಿಳೆಯನ್ನು ಪ್ರಕೃತಿಯನ್ನಾಗಿ, ಪುರುಷನನ್ನು ಸಂಸ್ಕೃತಿಯನ್ನಾಗಿ ಗುರುತಿಸಲಾಗುತ್ತದೆ. ಮಹಿಳೆಯ ಸ್ಥಾನಮಾನಗಳ ಹಿಂದೆ ಪುರುಷ ಪ್ರಧಾನ ವ್ಯವಸ್ಥೆ ಪ್ರಕೃತಿಯನ್ನು ನೋಡುವ ವಿಧಾನ ಮತ್ತು ವ್ಯಾಖ್ಯಾನಗಳ ಪ್ರಭಾವ ಇದೆ. ಪ್ರಕೃತಿಯ ಕುರಿತು ಪುರುಷರು ಯಾವ, ಯಾವ ದೃಷ್ಟಿಕೋನಗಳನ್ನು ರೂಪಿಸಿ ಕೊಂಡಿರುವರೋ ಅದೇ ದೃಷ್ಟಿಕೋನಗಳನ್ನು ಮಹಿಳಾ ಸಂಬಂಧಿತ ವಿಷಯಗಳಿಗೂ ವಿಸ್ತರಿಸಿಕೊಂಡಿರುವರು. ಈ ಹಿನ್ನಲೆಯಲ್ಲಿಯೇ ಮಹಿಳೆಯನ್ನು ಸಿದ್ಧಾಂತಿಕರಿಸಲಾಗಿದೆ. ಪ್ರಕೃತಿಯಲ್ಲಿ ಬಂಜೆ ನೆಲ, ಬಂಜೆಗಿಡ, ಕಳ್ಳಹೂವು ಕಾಣಿಸಿಕೊಳ್ಳುವವು. ಆದರೆ ಸಂಸ್ಕೃತಿಯ ವಿಷಯದಲ್ಲಿ ಹಾಗಲ್ಲ. ಅಲ್ಲಿರುವುದೆಲ್ಲ ಶ್ರೇಷ್ಠವಾದುದ್ದು, ಇತ್ಯಾತ್ಮಕವಾದದ್ದು, ಮೌಲಿಕವಾದದ್ದು ಎನ್ನುವ ಗ್ರಹಿಕೆಗಳೇ ಪ್ರಬಲವಾಗಿವೆ.

ು.2-3) ನೋವುಗಳು ಪ್ರಕಟ್ಟಗೊಳ್ಳುವ ಐದು ಆಯಾಮಗಳನ್ನು ಗುರುತಿಸಿ ಅದರ ವಿವರಗಳನ್ನು ರಾಘವೇಂದ್ರರಾವ್ ಅವರು ಹೀಗೆ ನೀಡುತ್ತಾರೆ.

"ಅ. ಶಾರೀರಿಕ ನೆಲೆ: ಹಸಿವು, ರೋಗ, ಅತಿ ಪ್ರಂಗಿಕತೆ, ಹಿಂಸೆ, ಅಂಗವಿಕಲತೆ ಹಾಗೂ ಮತಿವಿಕಲ ಗಳ ಫಲವಾದ ದೇಹದ ನೋವುಗಳು

ಆ. ಮಾನಸಿಕ ನೆಲೆ: ಭಾವನಾತ್ಮಕವಾದ ನೋವು ಸ್ಪರ್ಧೆ, ಈರ್ಷೆ, ನಿರಾಶೆ, ಮರಣಭಯ ಇತ್ಯಾದಿ

ಇ. ಕೌಟುಂಬಿಕ ನೆಲೆ: ಕಾಲ, ಸಮಾಜಗಳ ಹಿನ್ನೆಲೆಯಲ್ಲಿ ಆದರೆ ಕುಟುಂಬದ ಚೌಕಟ್ಟಿನೊಳಗೆ, ಅಂತರ್ ಮಾನುಷ್ಯ ಸಂಬಂಧಗಳಲ್ಲಿ ಹುಟ್ಟಿಕೊಳ್ಳುವ ನೋವುಗಳು (ಸ್ತ್ರೀಪುರುಷ ಸಂಬಂಧದ ಸಂಕೀರ್ಣದ ನೆಲೆಗಳೂ ಸೇರಿದಂತೆ)

ಈ. ಆರ್ಥಿಕ ಹಾಗೂ ಸಾಮಾಜಿಕ ನೆಲೆ: ವರ್ಗ, ವರ್ಣ, ವ್ಯವಸ್ಥೆಗಳಿಂದಲೂ ಉಂಟಾದ ನಿಯಂತ್ರಿ ತವಾದ ಹಲವು, ಎಲ್ಲಾ ರೀತಿಯ ಅಸಮಾನತೆ ಇದರ ಮುಖ್ಯ ಕಾರಣ.

ಉ. ತಾತ್ವಿಕ ನೆಲೆ: ಮನುಷ್ಯ ತನ್ನ ಬದುಕಿನ ಬಗೆಗೆ ಕೆಲವು ಮಹತ್ವದ ಪ್ರಶ್ನೆಗಳನ್ನು ಕೇಳಿ ಕೊಂಡು, ದೊರೆಯುವ ಉತ್ತರಗಳ ಫಲವಾಗಿ ಅನುಭವಿಸುವ ನೋವು, ಮನುಷ್ಯ ಸಂಬಂಧಗಳ ಅರ್ಥಶೂನ್ಯತೆ, ಜೀವ ದ ಅರ್ಥ ಶೂನ್ಯತೆ, ಬದಲಾವಣೆಯ ಬಗೆಗಿನ ಭ್ರಮ ನಿರಸನದ ಫಲವಾಗಿ ಯಾತನೆಗಳು ಇಲ್ಲಿ ಸೇರಿಕೊಳ್ಳು ವೆ. ಒಂದು ರೀತಿಯ ಅಸಹಾಯಕತೆ ಇಂಥಾ ನೋವಿಗೆ ಮುಖ್ಯಕಾರಣ" (ರಾಘವೇಂದ್ರರಾವ್ ಎಚ್. ಎಸ್. ೧೯೯೩, ಪುಟ ೨೦-೨೧)

ಮಹಿಳೆಯ ನೋವುಗಳು ಈ ಮೇಲಿನವು ಗಳನ್ನು ಯಾವುದರಲ್ಲಿ ಹೆಚ್ಚಾಗಿ ಪ್ರಕಟಗೊಳ್ಳುತ್ತವೆ ಅಥವಾ ಅವಳ ನೋವುಗಳನ್ನು ಈ ಶಾರೀರಿಕ ನೆಲೆ, ಮಾನಸಿಕ ನೆಲೆ ಎಂದು ಪ್ರತ್ಯೇಕಗೊಳಿಸಿ ನೋಡಲು ಬರುತ್ತದೆಯೆ ಇಲ್ಲವೇ ಅವಳ ನೋವುಗಳು ಈ ಎಲ್ಲವನ್ನೂ ಒಳಗೊಳ್ಳುತ್ತವೆಯೆ ಎನ್ನುವುದನ್ನು ಜನಪದ ಸಾಹಿತ್ಯದ ಮೂಲಕ ನೋಡಲು ಪ್ರಯತ್ನಿಸಲಾಗಿದೆ.

ಹೆಂಡತಿ ಪ್ರತಿನಿಧೀಕರಣದಲ್ಲಿ ವ್ಯಕ್ತಗೊಳ್ಳುವ ನೋವಿನ ನೆಲೆಗಳನ್ನು ಎರಡು ಹಂತಗಳಲ್ಲಿ ವಿಂಗಡಿಸಿ ಕೊಳ್ಳಲಾಗಿದೆ: ೧. ಕೌಟುಂಬಿಕವಾಗಿ, ಸಾಮಾಜಿಕವಾಗಿ ಎದುರಾಗುವ ಅಪಮಾನಗಳನ್ನು ಹಾಗೂ ಅದರಿಂದಾಗಿ ಅವಳು ಅನುಭವಿಸುವ ಕೀಳರಿಮೆಗಳನ್ನು, ಯಾತನೆಗ ಳನ್ನು ವಿಶ್ಲೇಷಿಸುವುದು. ೨. ಹೀಗೆ ಎದುರಾದ ಅಪಮಾ ನಗಳಿಗೆ ಪ್ರತಿರೋಧವನ್ನು ಒಡ್ಡಿದ ಮಹಿಳೆಯರ ಸ್ಥಿತಿ ಗತಿಗಳನ್ನು ವಿಶ್ಲೇಷಿಸುವುದು. ಮೇಲಿನ ಈ ಎರಡು ಹಂತಗಳ ವಿಶ್ಲೇಷಣೆಗಳ ಮೂಲಕ ಮಹಿಳಾ ನೋವಿನ ನೆಲೆಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಲಾಗಿದೆ

ಹೆಂಡತಿ ನಿರ್ವಚನ

ಜನಪದ ಪಿತೃಪ್ರಧಾನ ಮೌಲ್ಯಗಳು ಹೆಂಡತಿ ಪರಿಕಲ್ಪನೆಯನ್ನು ಹೇಗೆ ಪ್ರತಿನಿಧಿಕರಿಸಿದೆ ಎನ್ನುವುದನ್ನು ತಿಳಿದುಕೊಳ್ಳಲು ಈ ಕೆಳಗಿನ ತ್ರಿಪದಿಯನ್ನು ವಿಶ್ಲೇಷಿಸ ಲಾಗಿದೆ:

> ಕಾಲಲಿಪ್ಪ ಮೆಟ್ಟು ಕಾಲಲಿದ್ದರೆ ಚೆಂದೂ
> ತಲಿ ಮ್ಯಾಲದನು ಹೊರಬ್ಯಾಡ ॥ ತಮ್ಮಯ್ಯ
> ಸಲಗಿ ಮಡದಿಗ ಕೊಡಬ್ಯಾಡ

ಕಾಲಲಿಪ್ಪ ಮೆಟ್ಟು ಕಾಲಲಿದ್ದರೆ ಚೆಂದೂ ತಲಿ ಮ್ಯಾಲದನು ಹೊರಬ್ಯಾಡ ॥ ತಮ್ಮಯ್ಯ ಸಲಗಿ ಮಡದಿಗೆ ಕೊಡಬ್ಯಾಡ

ಇಲ್ಲಿ ಯಾರು, ಯಾರಿಗೆ, ಯಾರ ಕುರಿತು ಈ ಮಾತನ್ನು ಹೇಳಿದರು, ಅವರ ಸಂಬಂಧಗಳು ಹೇಗಿವೆ ಎಂದು ಚರ್ಚಿಸುವುದು ಮುಖ್ಯವಲ್ಲ. ಹೆಂಡತಿಯ ಅಸ್ತಿತ್ವವನ್ನು ಯಾವುದಕ್ಕೆ ಹೋಲಿಸಲಾಗಿದೆ, ಈ ಹೋಲಿಕೆಯು ಹೆಂಡತಿಯನ್ನು ಹೇಗೆ ಪ್ರತಿನಿಧೀಕರಿಸುತ್ತದೆ ಎನ್ನುವುದನ್ನು ಚರ್ಚಿಸುವುದು ಮುಖ್ಯವೆನಿಸುತ್ತದೆ. 'ಮೆಟ್ಟು' ಉಪಭೋಗದ ನೆಲೆಯಲ್ಲಿಯೇ ಗುರುತಿಸಲ್ಪಟ್ಟಿದೆ. ದಿನ ನಿತ್ಯದ ತಿರುಗಾಟದಲ್ಲಿ ಅತ್ಯವಶ್ಯಕವಾಗಿ ಮೆಟ್ಟಬೇಕಾದ ವಸ್ತುವೂ ಆಗಿದೆ. ಇಷ್ಟಾಗಿಯೂ ಅದಕ್ಕೆ ಯಾವ ಗೌರವವಿಲ್ಲ. ಅವುಗಳನ್ನು ಮೈಲಿಗೆಯಾಗಿ ಕಾಣಲಾಗಿದೆ. ವಂಶದ ಮುಂದುವರಿಕೆಗೆ ಹೆಂಡತಿಯ ಅಗತ್ಯವಿದೆ. ಗಂಡನ ವಂಶವನ್ನು ಮುಂದುವರೆಸಲು, ಅವನ ಆಸ್ತಿ ಪಾಸ್ತಿಗೆ ಹಕ್ಕುದಾರರನ್ನು ಹಡೆದು ಕೊಡಲು, ಇಂದ್ರಿಯ ಭೋಗವನ್ನು ತೃಪ್ತಿ ಪಡಿಸಲು ಬಂದವಳಂತೆ ಹೆಂಡತಿ ಯನ್ನು ಉಪಭೋಗದ ನೆಲೆಯಲ್ಲಿಯೇ ಪ್ರತಿನಿಧೀಕರಿ ಸಲಾಗಿದೆ.

ಹೆಂಡತಿಯು ಗಂಡನ ದಾಸಿಯಾಗಿರಬೇಕೆ ಹೊರೆತು ಯಜಮಾನಿಯಾಗಿ ಅಲ್ಲ. ಹಾಗೊಂದು ವೇಳೆ ನಡೆದುಕೊಂಡರೆ ಅವಳು ತನ್ನ ಹೆಣ್ತನಕ್ಕೆ, ಗಂಡನ ಶ್ರೇಷ್ಠತನಕ್ಕೆ ಅಪಮಾನಿಸಿದ ಹಾಗಾಗುತ್ತದೆ. 'ಕಾಲಿಲಿಪ್ಪ ಮೆಟ್ಟಿನ' ಹಾಗೆ ಹೆಂಡತಿ ಯಾವಾಗಲೂ ಗಂಡನ ಅಡಿಯಾಳಾಗಿ ಇರಬೇಕು. ಚಪ್ಪಲಿಗಳನ್ನು ಮೆಡುವ ವ್ಯಕ್ತಿಗಳು, ತಮ್ಮ ಚಪ್ಪಲಿಗಳಿಗೆ ಒಡೆತನ ಹೊಂದುವುದಿಲ್ಲ. ಚಪ್ಪಲಿಗೆ ಯಾವುದೇ ರೀತಿಯ ವೈಯಕ್ತಿಕ ಚಹರೆ ಇರುವುದಿಲ್ಲ. ಅದಕ್ಕೆ ಮೌಲ್ಯ ಬರುವುದೇ ಪಾದಗಳಿಗೆ ಬಳಕೆಯಾಗುವುದರ ಮೂಲಕ. ಹೆಣ್ಣಿಗೆ ಚಹರೆ ಬರಬೇಕಾದರೆ, ಮೌಲ್ಯ ಕಲ್ಪಿತವಾಗಬೇಕಾದರೆ, ಅವಳು ಒಬ್ಬನ ಹೆಂಡತಿ ಯಾಗಬೇಕು. ಹೆಂಡತಿಗಿರುವ ಕನಿಷ್ಠ ಸ್ಥಾನಮಾನಗಳನ್ನು ಮತ್ತು ಆಕೆ ಉಪಭೋಗದ ನೆಲೆಯಲ್ಲಿ ಬಳಕೆಯಾ ಗಲ್ಪಡುವುದನ್ನು ಮಹಿಳೆ ಹೇಳಿದ ಈ ಮೇಲಿನ ಜನಪದ ಹಾಡು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ.

ಹೆಂಡತಿಯು ಗಂಡನ ದಾಸಿಯಾಗಿರಬೇಕೆ ಹೊರೆತು ಯಜಮಾನಿಯಾಗಿ ಅಲ್ಲ. ಹಾಗೊಂದು ವೇಳೆ ನಡೆದುಕೊಂಡರೆ ಅವಳು ತನ್ನ ಹೆಣ್ತನಕ್ಕೆ, ಗಂಡನ ಶ್ರೇಷ್ಠತನಕ್ಕೆ ಅಪಮಾನಿಸಿದ ಹಾಗಾಗುತ್ತದೆ. 'ಕಾಲಿಲಿಪ್ಪ ಮೆಟ್ಟಿನ' ಹಾಗೆ ಹೆಂಡತಿ ಯಾವಾಗಲೂ ಗಂಡನ ಅಡಿಯಾಳಾಗಿ ಇರಬೇಕು. ಚಪ್ಪಲಿಗಳನ್ನು ಮೆಡುವ ವ್ಯಕ್ತಿಗಳು, ತಮ್ಮ ಚಪ್ಪಲಿಗಳಿಗೆ ಒಡೆತನ ಹೊಂದುವುದಿಲ್ಲ. ಚಪ್ಪಲಿಗೆ ಯಾವುದೇ ರೀತಿಯ ವೈಯಕ್ತಿಕ ಚಹರೆ ಇರುವುದಿಲ್ಲ. ಅದಕ್ಕೆ ಮೌಲ್ಯ ಬರುವುದೇ ಪಾದಗಳಿಗೆ ಬಳಕೆಯಾಗುವುದರ ಮೂಲಕ. ಹೆಣ್ಣಿಗೆ ಚಹರೆ ಬರಬೇಕಾದರೆ, ಮೌಲ್ಯ ಕಲ್ಪಿತವಾಗಬೇ ಕಾದರೆ, ಅವಳು ಒಬ್ಬನ ಹೆಂಡತಿಯಾಗಬೇಕು.

ಹೆಂಡತಿ: ನಿರ್ವಚನದ ನೆಲೆಗಳು

ಮದುವೆಯಾಗುವ ಹುಡುಗನ ಜಾತಿ ಮತ್ತು ವರ್ಗಕ್ಕನುಸರಿಸಿ ಹೆಂಡತಿಯು ಭಿನ್ನಭಿನ್ನವಾಗಿ ಪ್ರತಿನಿಧೀ ಕರಿಸಲ್ಪಟ್ಟಿದ್ದಾಳೆಯೇ ಎನ್ನುವುದನ್ನು ಅರ್ಥ ಮಾಡಿಕೊಳ್ಳ ಬೇಕಿದೆ. ಈ ವಿಶ್ಲೇಷಣೆಗೆ ಆಯ್ದುಕೊಂಡ ಮೂರು ಜನಪದ ಕಥೆಗಳ ಸಾರಾಂಶಗಳನ್ನು ಈ ಕೆಳಗೆ ಕೊಟ್ಟಿದೆ. ಮಾರಿಯ ಕಥೆ, ಮಾಳಿಯ ಕಥೆ ಹಾಗೂ ಶಿವಕುಮಾರನ ಕಥೆ ಈ ಮೂರು ಕಥೆಗಳನ್ನು ಅಧ್ಯಯನಕ್ಕೆಂದು ಆಯ್ದು ಕೊಳ್ಳಲಾಗಿದೆ.

ಅ. ತುಪ್ಪದ ಮಾಳಿ ಹೆಗಡೆ ಮಾರ್ಲೇಗೌಡನ ಮಗಳು. ಅವಳಿಗೆ ಏಳು ಜನ ಅಣ್ಣ ತಮ್ಮಂದಿರು. ಕ್ವಾಟೆ ಅರಮನೆಯಲ್ಲಿರುವ ರಾಜುಕುಮಾರಿ ಅವಳು. ಏಳು ಕೊಪ್ಪಾಲ ಕುರಿ, ಏಳ್ನೂರು ಎಕರೆ ಹೊಲ ಹಾಗೂ ನೂರೊಂದು ಕಂಬ್ಳಿ ಮಗ್ಗ ಇದ್ದ ಶ್ರೀಮಂತ ಮನೆತನ ದಲ್ಲಿ ಜನಿಸಿದವಳು. ಮೇಲ್ಜಾತಿಗೆ ಸೇರಿದ ಮೈಲಾರನು ಅವಳನ್ನು ಮದುವೆಯಾಗಲು ಇಷ್ಟ ಪಡುತ್ತಾನೆ. ಅವ ನೆಂದೂ ಮಾಳಿಯನ್ನು ಮದುವೆ ಯಾಗಲು ಒಪ್ಪಿಗೆ ಇದೆಯಾ ಎಂದು ಕೇಳುವುದೇ ಇಲ್ಲ. ತನ್ನ ಮನಸ್ಸಿಗೆ ಅವಳು ಹಿಡಿಸಿದ ತಕ್ಷಣ ಅವಳನ್ನು ಪಡೆದಕೊಳ್ಳುವ ಹಠಮಾರಿತನಕ್ಕೆ ಬೀಳುತ್ತಾನೆ. ಒಂಟಿಯಾಗಿ ಸಿಕ್ಕ ಮಾಳಿ ಯನ್ನು ನಾನಾ ವಿಧಗಳಿಂದ ಮಾನಸಿಕ ಹಿಂಸೆ ನೀಡು ತ್ತಾನೆ. ಅವನ ಕಾಟವು ಮಾಳಿಯಲ್ಲಿ ಅದೆಂತಹ ಮಾಸಿಕ ಅಸ್ವಸ್ಥತೆಯನ್ನು ಹುಟ್ಟುಹಾಕುತ್ತದೆ ಎಂದರೆ "ಮೈಮ್ಯಾಲೆ ಬಟ್ಟೆಗಳಿಲ್ಲದೆ ತನ್ನ ಬಟ್ಟಗಳನ್ನು ತಾನೇ ಹರಿದು ಚಿಂದಿ ಮಾಡಿಬಿಟ್ಟು, ತಾಯ ಹೊಟ್ಟೆಯಿಂದ ಹೆಂಗ ಬಂದ್ರೂ ಅದೇ ರೀತಿ" (ಚಿಕ್ಕೆರೆ ಶಿವಶಂಕರ ಸಂ. ೧೯೮೭, ಪು. ೯೪) ನಿಂತುಬಿಡುತ್ತಾಳೆ.

ಬಳೆಗಾರ ವೇಷದಲ್ಲಿ ಬಂದ ಮೈಲಾರನು, ಮಾಳಿಗೆ ಬಳೆ ತೊಡಿಸುತ್ತಾನೆ. ಬಳೆ ತೊಟ್ಟುಕೊಂಡ ಮಾಳಿ ಬಳೆ ಮಲಾರಕ್ಕೆ ಬಗ್ಗಿ ನಮಸ್ಕರಿಸುವಾಗ, ಅವ ಳನ್ನು ಎತ್ತಿಕೊಂಡು ಕೈಲಾಸಕ್ಕೆ ಹೋಗುವನು. ಅಲ್ಲಿ ಮೈಲಾರನ ಮೊದಲ ಮಡದಿಯು\ ಮಾಳಿಯನ್ನು ಹಿಂಸಿಸಿ, ಮನೆಯಿಂದ ಹೊರಗಟ್ಟುವಳು. ಮತ್ತೆ ಅವ ಳನ್ನು ಹುಡುಕಿಕೊಂಡು ಮೈಲಾರನು ಬರುವನು. ಆಯಾ ಸದಿಂದ ಹಾಗೂ ಗಾಭರಿಯಿಂದ ಮಲಗಿಕೊಂಡ ಮಾಳಿಯ ಮೇಲೆ ಮೈಲಾರನು ದೈಹಿಕ ಹಲ್ಲೆಯನ್ನು ಎಸಗುತ್ತಾನೆ. "ಈ ಕಳ್ಳ ಮುಂಡೆ ನಿದ್ರೆ ಬಂದು ಮನಗ ವಳೆ ಅಂದಬಿಟ್ಟ ಪರಮೇಶ್ವರ ಒಂದು ಚೇಳು ಮಾಡಿ ಬುಟ್ರು. ಅದು ಬಂದು ಹೀಂಗ ಚುಚ್ಚಿತು. ಈ ಕಡೆ ಹೀಂಗ ಹೊಳ್ಳಿದ ಕೂಡ್ಲೆ ಒಂದು ಹಾವು ಮಾಡಿ ಬಿಟ್ರು. ಅದು ಬಂದ ಹೀಂಗ ಕಚ್ತು (ಪು. ೧೩೭) ಹೀಗೆ ಹಿಂಸಿಸಿ ಅವಳನ್ನು ತನ್ನ ಜೊತೆ ಬರಲು ಒತ್ತಾಯಿಸು ತ್ತಾನೆ. ಒಟ್ಟದಿದ್ದಾಗ ಅವಳನ್ನು ಹುಚ್ಚಿಯನ್ನಾಗಿಸುತ್ತಾನೆ. ಹೆತ್ತವರು ಹಾಗೂ ಊರಿನವರು ಅವಳನ್ನು ಕಾಡಿಗಟ್ಟು ತ್ತಾರೆ. ಹೆತ್ತವರು ಹಾಗೂ ಒಡಹುಟ್ಟಿದವರಿದ್ದೂ ಅನಾಥಳಾದ ಮಾಳಿ ಮಾನಸಿಕವಾಗಿ ಸಂಪೂರ್ಣ ಕುಸಿಯುತ್ತಾಳೆ.

ಹೀಗೆ ಧೃತಿ ಕಳೆದುಕೊಂಡ ಮಾಳಿ, ಅನ್ಯ ಮಾರ್ಗ ಕಾಣದೆ ಮೈಲಾರರನನ್ನು ಮದುವೆಯಾಗಲು ನಿರ್ಧರಿಸುತ್ತಾಳೆ. ಆಗ ಮೈಲಾರನು ಮಾಳಿಯನ್ನು ತಿರಸ್ಕರಿಸುತ್ತಾನೆ. ತನ್ನಿಂದಾಗಿಯೇ ಮಾಳಿ ಬೀದಿ ಪಾಲಾಗಿದ್ದಾಳೆ ಎನ್ನುವ ಸಂಗತಿ ಮೈಲಾರನಿಗೆ ಚೆನ್ನಾಗಿಯೆ ತಿಳಿದಿದೆ. ಆದರೂ ಅವಳಿಗೆ ಪೀಡಿಸುವುದನ್ನು ಬಿಡುವುದಿಲ್ಲ. ಈ ಭಾಗವನ್ನು ಕಥನಕಾರರ ಭಾಷೆಯಲ್ಲಿಯೇ ಕೇಳಬೇಕು; "ನೀವುಹೆಂಗೇಳತೀರೋ ಹಂಗೆ ಕೇಳತಿನಿ ಗುರುವೆ... ಹೆಂಗ ಬಂದೊ ಹಂಗೆ ಹೊಂಟೋಗ ಬಿಡು... ಇಲ್ಲಾ ಸ್ವಾಮಿ ತಂ ಪಾದಕ್ಕೆ ಹೂವುಗಳನ್ನು ತರತೀನಿ, ತಂ ಮಡಿಗೆ ನೀರು ತುಂಬತೀನಿ ಸ್ವಾಮಿ, ಅದೂ ಅಲ್ದೊ ನಿಂ ಕೊಳೆ ಬಟ್ಟೇನ ಹಿಂಡಕೊಡತೀನಿ ಸ್ವಾಮಿ ಅಂತ ಹೇಳತಾವ್ರೆ... ಹಂಗಾರೆ ನೋಡು ನನಗೆ ಕೈಲಾಸದಲ್ಲಿ ಇನ್ನು ಇಬ್ರು ಮಡದೀರುಂಟು.

ಒಂದು ಮುದ್ದೆ ಇದ್ರೆ ಅದನ್ನು ಮೂರು ಭಾಗ ಮಾಡಿ ಉಣತೀರೋ, ಉಣತೀನಿ ಸ್ವಾಮಿ, ಒಂದು ಸೀರೆ ಇದ್ರೆ ಅದನ್ನು ಮೂರು ಭಾಗ ಮಾಡಿ ಉಟ್ಕೋತೀಯೊ, ಉಟ್ಕೋತೀನಿ ಗುರುವೆ. ನೀನು ಕುರುಬರ ಜಾತಿ ಹೆಣ್ಣು. ನಿನಗೆ ಏಳು ಮಾರುದ್ದ ಮಂಡೆ ಉಂಟು. ಅದು ಬೋಳುಸ್ತೀನಿ, ಆಯ್ತು ಸ್ವಾಮಿ, ನಿನಗೆ ಚಿನ್ನದ ಕಡ್ಡಿ ಒಳಗೆ ಬೆಳ್ಳಿ ಕಡ್ಡೀಲಿ ನಾಲಗೇನ ಸುಟ್ಟು ತುಂಗಭದ್ರೆ ಒಳಗೆ ಸ್ನಾನಗಳನ್ನು ಮಾಡಿಸಿ ನಿನಗೆ ಲಿಂಗಧಾರಣೆ ಮಾಡಸ್ತೀನಿ ಒಪ್ಕೋತ್ತೀಯ" (ಪ ೧೪೪-೧೪೫) ಎಂದು ಕೇಳಿ ದಾಗ ಅದಕ್ಕೂ ಒಪ್ಪಿಗೆ ಕೊಡುವಳು. ಅನಂತರವೇ ತುಪ್ಪದ ಮಾಳಿಯನ್ನು ಮೈಲಾರನು ಮದುವೆ ಯಾಗುವನು.

ಆ. ತನಗೆ ಗೊತ್ತಿದ್ದ ವಿದ್ಯೆ ಬಲ್ಲವನಿಗೆ ಮಾತ್ರ ಹೆಣ್ಣು ಕೊಡುವೆನೆಂದು ನಿರ್ಧರಿಸಿದ ಬ್ರಾಹ್ಮಣನ ಮನೆಯಲ್ಲಿ ಮಾದಿಗನು ಕೆಲಸಕ್ಕಿದ್ದನು. ಅವನು ಆ ಬ್ರಾಹ್ಮಣನ ಎಲ್ಲ ವಿದ್ಯೆಯನ್ನು ಕಲಿತುಕೊಂಡಿದ್ದನು. ಬ್ರಾಹ್ಮಣನ ಮಗಳನ್ನು ಮದುವೆಯಾಗುವುದಕ್ಕಾಗಿ, ಅವರ ಮನೆಯ ಕೆಲಸ ಬಿಟ್ಟು " ಮನೆಗೆ ಬಂದ ತಾಯಿಯಲ್ಲಿದ್ದ ಜಾತಿ ಸೂಚಕ ಬಟ್ಟೆ ಒಡವೆಗಳನ್ನೆಲ್ಲಾ ತೆಗೆಸಿ ಹಾಕಿದ. ಆಮ್ಯಾಲೆ ಬ್ರಾಮ್ರುಂತವು ಎರಡು ಸೀರೆ ತಂದ್ಕೊಟ್ಟ, ಯವ್ವಾ ನೀನು ಅವಳು ಬಂದಾಗ... ಅಂಕಣವ್ವ, ಇಂದಣವ್ವ ಅಂತ ಮುದ್ದಾಗಿ ಮಾತಾಡು ಬ್ರಾಮ್ರು ಮಾತಾಡಂಗೆ ಅಂತ ಹೇಳ್ದ. ಆ ಗಂಗ್ಳ ಚೆಂಬೆಲ್ಲನು ತಣತಣ ಅನ್ನಂಗೆ ಬೆಳಿಕೊ. ನೆಲ ಬಳ್ದು ರಂಗಾಲೆ ಬುಡು, ಬಾಕುಲ್ಗೆ ಅರಸಿಣ, ಸುಣ್ಣ, ಕುಂಕುಮ ಇಡು. ಅಂದ ಇವ್ನು ಬ್ರಾಮ್ರಂಗೆ ಅಡ್ನಾಮು ಹೊಡ್ಕಂಕ್ಯಬುಟ್ಟ, ಒಂದು ಜನಿವರ ಹಾಕಿಕೊಟ್ಟ, ಒಳ್ಳೊಳ್ಳೆ ಬಟ್ಟೆ ಹಾಕೊಂಡು ಹೊರ್ಟ ಬ್ರಾಮ್ರ ಮನೆಗೆ ಆಮ್ಯಾಲೆ ಒಳಕ್ಹೋಗಿ ಕೂತ್ಗಂಡ. ನಿಮ್ಮಲ್ಲಿ ಒಂದು ಹೆಣ್ಣು ಐತಂತೆಲ ಕೊಡ್ತಿರಾ" ಅಂತ ಕೇಳ್ದ. ಆಗ್ಲಪ್ಪ ಕೊಡ್ತಿನಿ ನಾನ್ಹೇಳೋ ಪುಸ್ತಕನೆಲ್ಲ ಹೇಳ್ಬಿಡು"... ಅಂದ.

ಇವು ಇನ್ನ ಇದ್ದಿದ್ದ ಇದ್ದಂಗೆ ಗಟ್ಟಿ ಮಾಡ್ಕಿಂಡಿದ್ನೆಲ್ಲ ಒಂದ್ಕಡಿಂದ ಹೇಳಿ ಬುಟ್ಟ, ಅವ್ನ ಮಗ್ಳು ಬಟ್ಟೆ ಮರೇಲಿ ಇವ್ನ ಗೊತ್ಮಡ್ಲೇಯಿಲ್ಲ, ಇವ್ನು ನಮ್ಮಲ್ಲಿದ್ದ ಮಾದ ಅಂತ. ಬಂದು ಹೂ ಮಾಲೆ ಹಾಕೇಬುಟ್ಟು, ಮುದ್ಕ ಹೋಗಪ್ಪ ಕರ್ಕಂಡ್ಹೋಗಿ ಬದಿಕೊ ಅಂತವ ಕಳ್ಸೆ ಬುಟ್ಟ 'ಅಮ್ಮ ತಿಂಡಿ ಏನ್ಮಾಡನಮ್ಮ' ಅಂತ ಕೇಳಿದ್ಲು. ಅಕ್ಕಿ ತಿರ್ವ್ವಿ, ದ್ವಾಸೆ ಉಯ್ಯಿ, ಚಟ್ನಿ ಅರಿ ಅಂತ ಹೇಳಿದ್ಲು. ಆಗ ಮಾದ್ಗ ತಿಂಡಿ ಕೊಡು ಅಂದ... ಮಾದ್ಗ ಸುಮ್ನೆ ತಿಂತಾವ್ನೆ, ತಿಂದು ನೋಡಿದ್ನಲಾರುಚಿಯ ಅದಕೆ. ಇವ್ಳು ಮಾದ್ಗಿತ್ತಿ ಕೈಗೆ ಕೊಟ್ಟೆ ಏಟ್ಗೆ, ದ್ವಾಸೆ ಇಸ್ಕಂಡೇಟ್ಗೆ ನಗೆ ಬಂದುಡ್ತು. ಕುಲಕುಲ್ನೆ ನಕ್ಬುಟ್ಟಳು, ಯವ್ವೆ ಅಮ್ಮಿ, ಎಲ್ಲಿ ಕಲ್ತಿದ್ದೆವ್ವ ಇಂಗೆ ನಾಯಿ ನಾಲ್ಗೆಯಂಗೆ ಉಯ್ಯಾದ ಅಂದ್ಲು. ಓಹೋ! ಇದೇನು ಬ್ರಾಮ್ರುಜ್ಯಾತಾಗಿದ್ರೆ ಇದಾಕೆ ಇಂತ ಮಾತಾಡಳು... ನಾನು ಇವ್ರ ಮಲ್ಲಿ ಊಟ ಮಾಡ್ಬಾರ್ದು ಅಂತ ಮನಸ್ನಾಗೆ ಅಂದ್ಕಂಡು ಸುಮ್ನೆ ಅವ್ಳೆ".

ಮಾದಿಗ ತನ್ನ ಬ್ರಾಹ್ಮಣ ವೇಷವನ್ನು ತೆಗೆದು ಹಾಕಿ ಮನೆಗೆ ದೂರದ ಜಾಗದಲ್ಲಿ, ಮೆಟ್ಟು ಹೋಲಿಯುತ್ತಿದ್ದ. ಸುಮ್ಮನೆ ಆ ಕಡೆ ಹೋಗಿದ್ದಾಗ ಬ್ರಾಹ್ಮಣ ಹುಡುಗಿ ಇವನನ್ನು ಗುರುತಿಸಿದಳು. ರಾತ್ರಿ ಅವ್ನು ಮಗ್ಳು ಊಟಕ್ಕೆ ಇಕ್ಕಿ ಬುಟ್ಲು. ಆ ಮ್ಯಾಲೆ ಇವ್ಳು ಊಟ ಮಾಡಳಂಗೆ ಅಡ್ಗೆ ತಗಂಡೋಗಿ ಚೆಲ್ಲಿಬುಟ್ಟು, ಆ ಮ್ಯಾಲೆ ಅವ್ನ ಮಗ್ಗು ದಿಸಾ ಹಾಸಿಕೊಡ್ತಿದ್ದಂಗೆ ಹಾಸ್ಕೊಟ್ಟು. ಅವ್ಳು ಕ್ವಾಣೆಲಿ ಹಾಸ್ಕೊಂಡ್ಲು. ಅವ್ನೂ ಮಗ್ನೂ ಮಲಿಕಬುಟ್ಟು, ಇವ್ಳು ಮೆತ್ಗೆ ಎದ್ದು ಈಚೆಗ್ಬಂದು ಈಚೆಲಿ ಚಿಲ್ಕ ಹಾಕ್ಯಂಡ್ಬುಟ್ಟು, ಗುಡ್ಲು ಮನೆ ಅಲ್ವ, ಬೆಂಕಿಗೀರಿ ಸ್ವಗ್ಗೆ ತೋರ್ಸಿ ಬುಟ್ಲು ನಡೀತಿದ್ಲು ಮೂಡ್ಮರೆಯ.

ದೊರೆಯ ಮನೆಯ ಶೃಂಗಾರ ತೋಟದ ಬಾಳೆ ಮರದೊಳಗೆ ಬಂದು ಸೇರಿಕೊಂಡಳು. ರಾಜಕುಮಾರ ಅವಳ ಕೈ ಹಿಡಿದು ಮದುವೆಯಾಗು ಎಂದ. ಹೀಗೆ ಬಂದರೆ ಓಡಿ ಬಂದವಳು ಎನ್ನುತ್ತಾರೆ. ನಾನಿರುವ ಬಾಳಿ ಮರದ ಜೊತೆಗೆ ಮದುವೆ ಮಾಡಿಕೊ ನಾನು ಹೊರ ಬರುತ್ತೇನೆ ಅಂದಳು. ಅದರಂತೆ ಮಾಡಿದ (ರಾಮಚಂದ್ರೇ ಗೌಡ ಹಿ. ಶಿ. ಸಂ. 1993, ಪು, 68).

ಇ. ಅಮರಾವತಿ ಪಟ್ಟಣದ ರಾಜನಿಗೆ ಒಬ್ಬ ಮಗಳು. ಗಂಡು ಸಂತಾನವಿಲ್ಲದ ಕಾರಣ, ವಯಸ್ಸಿ ಬಂದ ಮಗಳನ್ನು ಅವಳು ಇಷ್ಟ ಪಟ್ಟ ಹುಡುಗನೊಂದಿ ಅರ್ಧರಾಜ್ಯ ಕೊಟ್ಟು ಮದುವೆ ಮಾಡುವುದಾಗಿ ಡಂಗು ಹೊಡೆಸಿದನು. ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲ ಅಲೆಯುತ್ತಿದ್ದ ಶಿವಕುಮಾರನು ಬಡತನದ ನಿವರಣೆಗಾ ಸೋಳಾ ಸೋಮುವಾರದ ಪೂಜೆ ಮಾಡುತ್ತಿದ್ದ ವ್ರತವನ್ನು ಪೂರೈಸಲಿಕ್ಕೆ ಹಣದ ಅಗತ್ಯತೆ ಇದ್ದುದರಿಂ ಜಾತಿ ಕಾರಣದಿಂದಾಗಿ ತನಗೆ ರಾಜಕುಮಾರಿ ಮದುವೆಯಲ್ಲಿ ದಕ್ಷಣೆ ಸಿಗಬಹುದೆಂಬ ಆಸೆಯಿಂ ಶಿವಕುಮಾರನು, ಸ್ವಯಂವರ ನಡೆಯುವ ಸ್ಥಳ ಬರುತ್ತಾನೆ. ಅವನ ಜಾತಿ ಹಿನ್ನಲೆಯು ಅವನ ವ್ಯಕ್ತಿ ಕ್ಕೊಂದು ತೇಜಸ್ಸು ನೀಡಿರುತ್ತದೆ. ಇದಕ್ಕೆ ಆಕರ್ಷಿತಳಾ ರಾಜಕುಮಾರಿಗೆ ಎಲ್ಲಾ ರಾಜಕುಮಾರರನ್ನು ಬಿಟ್ಟ ದಕ್ಷಣೆಯ ಆಸೆಯಿಂದ ಬಂದ ಶಿವಕುಮಾರನಿಗೆ ಹಾ ಹಾಕುವಳು.

ರಾಜನು ತನ್ನ ಮಾತಿನಂತೆ ಅರ್ಧರಾ ವನ್ನು ಶಿವಕುಮಾರನಿಗೆ ನೀಡಿ, ತನ್ನ ಮಗಳೊಂದಿ ಅವನ ಮದುವೆ ಮಾಡುವನು. ಕೊನೆಯ ಸೋಳ ಸೋಮುವಾರ ವ್ರತದಂದು ತನ್ನ ಗುಡಿಸಲಲ್ಲಿ ಇದ ಕೊಂಡೇ ಮನೆಗೆ ಸೇವಕರನ್ನು ಕಳುಹಿಸಿ, ಗೋದಿಹಿಟ್ಟು ಬೆಲ್ಲ, ತುಪ್ಪ ತರಲು ಹೇಳುವನು. ರಾಜಕುಮಾರಿಗೆ ತನ ಗಂಡನು ಇಂತಹ ಕ್ಷಲ್ಲಕ ಆಹಾರಕ್ಕಾಗಿ ಏಕೆ ಆ ಪಟ್ಟಿರುವನು ಎಂದುಕೊಂಡು ಮುತ್ತು, ರತ್ನ, ಚಿನ್ನ, ವಜ್ರ ವೈಢೂರ್ಯಗಳನ್ನು ಕಳುಹಿಸುವಳು. ವ್ರತಕ್ಕೆ ಭಂಗ ತಂ ಳೆಂದು ಕುಪಿತನಾದ ಶಿವಕುಮಾರನು ಅವಳನ್ನು ಕಾಡಿ ಟ್ಟುವನು. ಕಾಡಿನಲ್ಲಿ ಹಲವಾರು ಕಷ್ಟ ನಷ್ಟಗಳನ್ನು ಎದು ಸಿದ ರಾಜಕುಮಾರಿಗೆ ಕೊನೆಗೆ ಋಷಿಯ ಆಶ್ರಯ ದೊರಕುವುದು. ಅಲ್ಲಿದ್ದು ಕೊಂಡೇ ಗಂಡನು ಮಾಡುತ್ತಿದ ಸೋಳಾ ಸೋಮುವಾರದ ವ್ರತಗಳನ್ನು ಮಾಡಿ, ಗಂಡ ಒಲುಮೆಗೆ ಪಾತ್ರಳಾಗುವಳು.

ಮೇಲಿನ ಮೂರು ಕಥೆಗಳನ್ನು ವರ್ಣ ಜಾತಿ, ವರ್ಗ ಮತ್ತು ಲಿಂಗ ಶ್ರೇಣೀಕರಣದ ಹಿನ್ನಲೆಯಲ್ಲಿ ವಿಶ್ಲೇಷಿಸಲಾಗಿದೆ. ಮಾಳಿ ರಾಜಕುಮಾರಿಯಾದರೂ ಅವಳು ಹೊಂದಿದ ಸಾಮಾಜಿಕ, ರಾಜಕೀಯ ಮತ್ತು ಅರ್ಥಿಕ ಸ್ಥಾನಮಾನಗಳು ಮೇಲ್ಜಾತಿಯ ಮೈಲಾರನ ಮುಂದೆ ಅರ್ಥಹೀನವಾಗುತ್ತವೆ. ದೊರೆಯಾದ ಆಕೆಯ ತಂದೆ ತನ್ನು ಬಲಶಾಲಿಯಾದ ಆಕೆಯ ಅಣ್ಣಂದಿರ ಕುರಿತು ಮೈಲಾರನು ಕಿಂಚಿತ್ತು ಭಯವನ್ನು ವ್ಯಕ್ತಪಡಿ ಸುವುದಿಲ್ಲ. ರಾಜಕುಮಾರಿಯಾದ ಮಾಳಿಯನ್ನು ಎಲ್ಲೆಂದ ರಲ್ಲಿ ನಿಲ್ಲಿಸಿ ಮಾನಸಿಕ ಹಾಗೂ ದೈಹಿಕ ಹಿಂಸೆಯನ್ನು ನೀಡುತ್ತಾನೆ. ಮಾಳಿಯನ್ನು ತಾನು ಇಷ್ಟಪಟ್ಟ ಮಾತ್ರಕ್ಕೆ ಮದುವೆಯಾಗಲು ಒತ್ತಾಯಿಸುತ್ತಾನೆ ಮತ್ತು ಅವಳ ಮೇಲೆ ಹಕ್ಕು ಸ್ಥಾಪಿಸಲು ದಬ್ಬಾಳಿಕೆ ನಡೆಸುತ್ತಾನೆ. ಜಾತಿ ಪ್ರಾಬಲ್ಯದೆದುರು ವರ್ಗ ಪ್ರಾಬಲ್ಯವು ಸೋಲುತ್ತದೆ. ಮಾಳಿ ರಾಜಕುಮಾರಿಯಾದರೂ ಜಾತಿಯಿಂದ ಕೆಳಸ್ತರಕ್ಕೆ ಸೇರ ಲ್ಪಟ್ಟಿದ್ದರಿಂದ, ಮೇಲ್ಜಾತಿಗೆ ಸೇರಿದ ಮೈಲಾರನು ಆಕೆ ಯನ್ನು ಮತ್ತು ಅವಳ ಕುಟುಂಬದವರನ್ನು ದಾಸರಂತೆ ಯೇ ನಡೆಸಿಕೊಳ್ಳುತ್ತಾನೆ. ಜಾತಿ ಶ್ರೇಣೀಕರಣವುಳ್ಳ ಭಾರ ತೀಯ ಸಮಾಜದಲ್ಲಿ ಮೇಲ್ಜಾತಿಯವರಿಗೆ ತಳಸಮುದಾ ಯಗಳ ಸ್ತ್ರೀ ಪುರುಷರಿಬ್ಬರೂ ದಾಸ, ದಾಸಿಯಾರಾಗಿರು ವರು. ಹೀಗಾಗಿ ಮಾಳಿಯ ಹಿನ್ನೆಲೆ. ಅವಳನ್ನು, ಅವಳ

ಜಾತಿ ಶ್ರೇಣೀಕರಣವುಳ್ಳ ಭಾರತೀಯ ಸಮಾಜದಲ್ಲಿ ಮೇಲ್ಜಾತಿಯವರಿಗೆ ತಳಸಮುದಾಯಗಳ ಸ್ತ್ರೀ ಪುರುಷರಿಬ್ಬರೂ ದಾಸ, ದಾಸಿಯಾರಾಗಿರುವರು. ಹೀಗಾಗಿ ಮಾಳಿಯ ಹಿನ್ನೆಲೆ. ಅವಳನ್ನು, ಅವಳ ತಂದೆಯನ್ನು ಮತ್ತು ಏಳು ಜನ ಬಲಶಾಲಿ ಅಣ್ಣಂದಿರನ್ನು ನಿಸ್ಸಾಹಯಕರನ್ನಾಗಿಸುತ್ತದೆ. ಅಧಿಕಾರ ಮತ್ತು ಸಂಪತ್ತು ಎರಡೂ ಇದ್ದು ಕೆಳಜಾತಿ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಮಾಳಿ ಕುಟುಂಬದವರು ಮೈಲಾರನಿಂದ ದಾಸ ದಾಸಿಯರಂತೆ ನಡೆಸಿಕೊಡಲ್ಪಡುತ್ತಾರೆ. ಊರಿಗೆ ರಕ್ಷಣೆ ನೀಡುವ ಮಾರ್ಲೇಗೌಡನು ಮಗಳು ಮಾಳಿಯನ್ನು ರಕ್ಷಿಸಲಾರದಷ್ಟು ಅಸಹಾಯಕನಾಗುತ್ತಾನೆ. ಮೈಲಾರನು ಹಾದಿ ಬೀದಿಯಲ್ಲಿ ಮತ್ತು ಮನೆಯಲ್ಲಿ ಮಾಳಿಯನ್ನು ಹಿಂಸಿಸಿ, ಅಪಮಾನಿಸಿದರೂ, ಅವಳನ್ನು ಅಪಹರಿಸಿದರೂ, ಈ ಯಾವ ಸಂಗತಿಗಳೂ ಮಾಳಿಯ ತಂದೆಯಾದ ಅರಸು ಮಾರ್ಲೇಗೌಡನ ಗಮನಕ್ಕೆ ಬರುವುದೇ ಇಲ್ಲ ಎನ್ನುವಂತೆ ಚಿತ್ರಿಸಲಾಗಿದೆ.

ದೆಯನ್ನು ಮತ್ತು ಏಳು ಜನ ಬಲಶಾಲಿ ಣ್ಣಂದೆರನ್ನು ನಿಸ್ಸಾಹಯಕರನ್ನಾಗಿಸುತ್ತದೆ. ಅಧಿಕಾರ ತ್ತು ಸಂಪತ್ತು ಎರಡೂ ಇದ್ದು ಕೆಳಜಾತಿ ಎನ್ನುವ ದೇ ಒಂದು ಕಾರಣಕ್ಕಾಗಿ ಮಾಳಿ ಕುಟುಂಬದವರು ಲಾರನಿಂದ ದಾಸ ದಾಸಿಯರಂತೆ ನಡೆಸಿಕೊಡ ತ್ತಾರೆ. ಊರಿಗೆ ರಕ್ಷಣೆ ನೀಡುವ ಮಾರ್ಲೇಗೌಡನು ಗಳು ಮಾಳಿಯನ್ನು ರಕ್ಷಿಸಲಾರದಷ್ಟು ಅಸಹಾಯಕ ಸುತ್ತಾನೆ.

ಮೈಲಾರನು ಹಾದಿ ಬೀದಿಯಲ್ಲಿ ಮತ್ತು ನೆಯಲ್ಲಿ ಮಾಳಿಯನ್ನು ಹಿಂಸಿಸಿ, ಅಪಮಾನಿಸಿದರೂ, ಳನ್ನು ಅಪಹರಿಸಿದರೂ, ಈ ಯಾವ ಸಂಗತಿಗಳೂ ಳಿಯ ತಂದೆಯಾದ ಅರಸು ಮಾರ್ಲೇಗೌಡನ ಗಮ ಬರುವುದೇ ಇಲ್ಲ ಎನ್ನುವಂತೆ ಕಾವ್ಯದಲ್ಲಿ ಚಿತ್ರಿಸಲಾ ಇದನ್ನು ತಂದೆಯಾದ ಮತ್ತು ಅರಸನಾದ ಮಾರ್ಲೇ ನ ಬೇಜವಾಬ್ದಾರಿ ಎನ್ನಬೇಕು? ಇಲ್ಲವೇ ಅಸಹಾಯ ಎಂದು ಪರಿಗಣಿಸಬೇಕೆ? ಮಾಳಿಗಿದ್ದ ಕೌಟುಂಬಿಕ ಲೆಯು, ಮೈಲಾರನನ್ನು ಬೈಯುವಷ್ಟು, ತಿರಸ್ಕರಿಸು , ಅವನ ವರ್ತನೆಗಳನ್ನು ಪ್ರತಿಭಟಿಸುವಷ್ಟು ಸಣ್ಣ ವನ್ನು ಅವಳಿಗೆ ನೀಡುವುದಿಲ್ಲ.

ಇಡೀ ಕಾವ್ಯದುದ್ದಕ್ಕೂ ತುಪ್ಪದ ಮಾಳಿ ಹಾಯಕ ಹೆಣ್ಣಾಗಿಯೇ ಪ್ರತಿನಿಧೀಕರಿಸಲ್ಪಟ್ಟಿರುವಳು. ಜಾತಿ ಹಿನ್ನಲೆಯು, ಅವಳಿಗಿರುವ ಆರ್ಥಿಕ ಮತ್ತು ಕೀಯ ಪ್ರಾಬಲ್ಯವನ್ನು ನಿಶಕ್ತಗೊಳಿಸುತ್ತದೆ. ಅದಕ್ಕಾ ೇ ಮೈಲಾರನು ಎಷ್ಟೇ ತೊಂದರೆಗಳನ್ನು ನೀಡಿ ದೈನೇಸಿಯಿಂದ ಕೈ ಮುಗಿದು ಕೇಳಿಕೊಳ್ಳುತ್ತಾಳೆ, ನ್ನು ಪೀಡಿಸುವ ಮೈಲಾರನು ಮೇಲ್ಜಾತಿಗೆ ಸೇರಿದ ಎಂದು ತಿಳಿದಿದ್ದ ಮಾಳಿ ದೊರೆಯಾದ ತನ್ನ ಗೆ ಮತ್ತು ಬಲಶಾಲಿಗಳಾದ ಅಣ್ಣಂದಿರಿಗೆ ತಿಳಿ ದಿಲ್ಲ. ಅವರಿಂದಲೂ ತನ್ನನ್ನು ರಕ್ಷಿಸಲಾಗುವುದಿಲ್ಲ ವ ಸತ್ಯವನ್ನು ತಿಳಿದುಕೊಂಡಿದ್ದಳೋ ಏನೋ! ಾರನ ಹೆಂಡತಿ ನೀಡುವ ದೌರ್ಜನ್ಯವನ್ನು ತಾಳಿ ಲಾರದೆ ಹಿಂದಿರುಗಿದ ಮಾಳಿಗೆ, ಮೈಲಾರನು ಗ್ನನಾಗಿ ಅವಾಚ್ಯ ಶಬ್ದಗಳನ್ನು ಬೈಯುತ್ತ ಮಾಳಿಯ ಮೇಲೆ ಮತ್ತಷ್ಟು ದೈಹಿಕ ಹಲ್ಲೆಗಳನ್ನು ನಡೆಸುವನು, ಚೇಳುಗಳನ್ನು ಅವಳ ಮೈಮೇಲೆ ಹರಿಯ ಬಿಟ್ಟು ಮದುವೆಯಾಗಲು ಒತ್ತಾಯಿಸುತ್ತಾನೆ. ಎಲ್ಲವನ್ನು ಒಳಗೆ ನುಂಗಿಕೊಂಡ ಮಾಳಿ ಕೊನೆಗೆ ಚಿತ್ತಸ್ವಾಸ್ಥ್ಯವನ್ನು ಕಳೆದು ಕೊಳ್ಳುತ್ತಾಳೆ. ಹೆತ್ತವರಿಂದಲೂ ತಿರಸ್ಕಾರಕ್ಕೆ ಒಳಗಾಗು ತ್ತಾಳೆ, ಮೇಲ್ಜಾತಿಯ ಪುರುಷ ಪ್ರಧಾನ ಮೌಲ್ಯಗಳೊಂದಿಗೆ, ಸ್ವಜಾತಿಯಲ್ಲಿರುವ ಪಿತೃನಿಷ್ಠ ಮೌಲ್ಯಗಳು ನಡೆಸುವ ದೌರ್ಜನ್ಯಗಳಿಗೆ ಮಾಳಿ ಬಲಿಯಾಗುತ್ತಾಳೆ.

ಜಾತಿ ಶ್ರೇಣೀಕರಣವುಳ್ಳ ಭಾರತೀಯ ಸಮಾಜದಲ್ಲಿ ಮೇಲ್ಜಾತಿಯವರಿಗೆ ತಳಸಮುದಾಯಗಳ ಸ್ತ್ರೀ ಪುರುಷರಿಬ್ಬರೂ ದಾಸ, ದಾಸಿಯಾರಾಗಿರುವರು. ಹೀಗಾಗಿ ಮಾಳಿಯ ಹಿನ್ನೆಲೆ. ಅವಳನ್ನು, ಅವಳ ತಂದೆಯನ್ನು ಮತ್ತು ಏಳು ಜನ ಬಲಶಾಲಿ ಅಣ್ಣಂದೆರನ್ನು ನಿಸ್ಸಾಹಯಕರನ್ನಾಗಿಸುತ್ತದೆ. ಅಧಿಕಾರ ಮತ್ತು ಸಂಪತ್ತು ಎರಡೂ ಇದ್ದು ಕೆಳಜಾತಿ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಮಾಳಿ ಕುಟುಂಬದವರು ಮೈಲಾರನಿಂದ ದಾಸ ದಾಸಿಯರಂತೆ ನಡೆಸಿಕೊಡಲ್ಪಡುತ್ತಾರೆ. ಊರಿಗೆ ರಕ್ಷಣೆ ನೀಡುವ ಮಾರ್ಲೇಗೌಡನು ಮಗಳು ಮಾಳಿಯನ್ನು ರಕ್ಷಿಸಲಾರದಷ್ಟು ಅಸಹಾಯಕನಾಗುತ್ತಾನೆ. ಮೈಲಾರನು ಹಾದಿ ಬೀದಿಯಲ್ಲಿ ಮತ್ತು ಮನೆಯಲ್ಲಿ ಮಾಳಿಯನ್ನು ಹಿಂಸಿಸಿ, ಅಪಮಾನಿಸಿದರೂ, ಅವಳನ್ನು ಅಪಹರಿಸಿದರೂ, ಈ ಯಾವ ಸಂಗತಿಗಳೂ ಮಾಳಿಯ ತಂದೆಯಾದ ಅರಸು ಮಾರ್ಲೇಗೌಡನ ಗಮನಕ್ಕೆ ಬರು ವುದೇ ಇಲ್ಲ ಎನ್ನುವಂತೆ ಕಾವ್ಯದಲ್ಲಿ ಚಿತ್ರಿಸಲಾಗಿದೆ

ಹೀಗೆ ಈ ಎಲ್ಲ ಕಷ್ಟನಷ್ಟಗಳನ್ನು, ಮಾನಾಪ ಮಾನಗಳನ್ನು ಎದುರಿಸುತ್ತ ಬೀದಿಪಾಲದ ಮಾಳಿ, ಬೇರೆ ದಾರಿ ಕಾಣದೆ ಮೈಲಾರನನ್ನು ಮದುವೆಯಾಗಲು ನಿರ್ಧ ರಿಸುತ್ತಾಳೆ. ಅವಳ ಈ ಅಸಹಾಯಕತೆ ಮತ್ತು ಅನಾಥ ಭಾವನೆಗಳನ್ನು EnCash ಮಾಡಿಕೊಂಡ ಮೈಲಾರನು ಮದುವೆಯಾಗುವುದಿಲ್ಲ ಎಂದು ತಿರಸ್ಕರಿಸುವನು. ದುಂಬಾಲು ಬಿದ್ದ ಮಾಳಿಯನ್ನು ಏನೋ ಅವಳನ್ನು ಉದ್ಧಾರ ಮಾಡುತ್ತಿದ್ದೇನೆ ಎನ್ನುವಂತೆ ನಟಿಸಿ ಮದುವೆ ಯಾಗಲು ಒಪ್ಪಿಕೊಳ್ಳುತ್ತಾನಾದರೂ, ಅದಕ್ಕೆ ಕೆಲವು ಶರ ತ್ತುಗಳನ್ನು ವಿಧಿಸುತ್ತಾನೆ. ಶರತ್ತುಗಳಲ್ಲಿ ಮುಖ್ಯವಾಗಿ ಗಮ ನಿಸಬೇಕಾದುದೆಂದರೆ ಅವಳಿಗೆ ನೀನು ಕುರುಬರವಳು ಆಗಿರುವುದರಿಂದ ನಿನ್ನ ಏಳು ಮಾರುದ್ದ ಮಂಡೆ ಬೋಳುಸ್ತೀನಿ, ಚಿನ್ನದ ಕಡ್ಡಿಯೊಳಗೆ ಬೆಳ್ಳಿ ಕಡ್ಡೀಲಿ ನಾಲಿಗೆ ಸುಟ್ಟು, ತುಂಗಭದ್ರೆಯೊಳಗೆ ಸ್ನಾನ ಮಾಡಸ್ತೀನಿ, ಲಿಂಗಧಾರಣೆ ಮಾಡುತಿನಿ ಎನ್ನುವ ಮಾತು. ಮೈಲಾ ರನು, ಮಾಳಿಯನ್ನು ನೇರವಾಗಿ ಜಾತಿ ಹಿಡಿದು ಅವ ಮಾನಿಸುತ್ತಾನೆ, ಆ ಕಾರಣಕ್ಕಾಗಿಯೇ ಅವಳ ತಲೆಯನ್ನು ಬೋಳಿಸುತ್ತೇನೆ ಎನ್ನುತ್ತಾನೆ. ಸಾಮಾಜಿಕವಾಗಿ ಬಹು ದೊಡ್ಡ ಅಪರಾದವನ್ನೆಸಗಿದವರಿಗೆ ಕೊಡುವ ಶಿಕ್ಷೆಗಳಲ್ಲಿ ತಲೆ ಬೋಳಿಸುವುದು ಒಂದು. ಹೀಗೆ ಕೂದಲು ತೆಗೆ ಸುವ ಪ್ರಕ್ರಿಯೆಯ ಹಿಂದೆ ಸಮಾಜಕ್ಕೆ ಅವರನ್ನು ಅಪ ರಾಧಿ ಎಂದು ಪರಿಚಯಿಸುವ ಮತ್ತು ಎಚ್ಚರಿಸುವ ತಂತ್ರ ವಿದೆ. ಹೆಣ್ಣು ಮಕ್ಕಳ ಸೌಂದರ್ಯವನ್ನು ಮೌಲ್ಯಮಾಪನ ಮಾಡುವ ಮಾನದಂಡಗಳಲ್ಲಿ ಕೇಶ ರಾಶಿಯೂ ಒಂದು.

ಈ ಮಾನದಂಡಗಳು ಕೂಡ ಪುರುಷಶಾಹಿ ವ್ಯವಸ್ಥೆಯಿಂದಲೇ ಪಡೆದುಕೊಂಡವುಗಳು. ಇಂತಹ ಕೇಶ ರಾಶಿಯನ್ನು ಮೈಲಾರನು ತೆಗೆದು ಹಾಕುತ್ತೇನೆ ಎಂದರೂ ಮಾಳಿ ಅದಕ್ಕೂ ಒಪ್ಪಗೆ ನೀಡುವಳು. ಮೇಲ್ಜಾ ತಿಯ ಗಂಡು ತಾನು ಮದುವೆಯಾಗ ಬೇಕೆಂದಿರುವ ಕೆಳಜಾತಿಯ ಹುಡುಗಿಯನ್ನು ಜಾತಿಗೆ ಒಳಗು ಮಾಡಿ ಕೊಳ್ಳಲು ನಡೆಸುವ ಆಚರಣೆಗಳಲ್ಲಿ ತಲೆ ಬೋಳಿಸುವ ಸಂಪ್ರದಾಯವು ಒಂದಿರಬಹುದೇನೋ! ಇದಕ್ಕಿರುವ ಸಾಂಸ್ಕೃತಿಕ ಹಿನ್ನಲೆಯನ್ನು ಹುಡುಕಬೇಕಿದೆ ಭಾರತೀಯ ಜಾತಿ ಪ್ರಧಾನ ಮತ್ತು ಪ್ರರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಗಳಲ್ಲಿ ಸಾಮಾನ್ಯವಾಗಿ ಅನ್ಯ ಜಾತಿಯ ಹುಡು ಗನನ್ನು ಮದುವೆಯಾದ ಹುಡುಗಿಯೇ ಜಾತಿಯನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಮದುವೆಯಾಗುವ ಹುಡುಗನ ಜಾತಿಗೆ ಇಲ್ಲವೇ ಧರ್ಮಕ್ಕೆ ವಧು ಜಾತ್ಯಾಂತರ ಇಲ್ಲವೆ ಧಮಾಂತರಗೊಳ್ಳಬೇಕಾಗುತ್ತದೆ.

ಮೈಲಾರನು ಮಾಳಿಯ ನಾಲಿಗೆಯನ್ನು ಚಿನ್ನದ ಕಡ್ಡಿಯೊಳಗೆ ಬೆಳ್ಳಿ ಕಡ್ಡೀಲಿ ಸುಟ್ಟು, ಅವಳಿಗೆ ನದಿಯೊಳಗೆ ಸ್ನಾನ ಮಾಡಲು ಹೇಳಿ, ಅನಂತರದಲ್ಲಿ ಲಿಂಗಧಾರಣೆ ಮಾಡಿ ಜಾತಿಯೊಳಗೆ ಹಾಕಿಕೊಂಡ ಮೇಲೆಯೇ ಮಾಳಿಯನ್ನು ಮದುವೆಯಾಗುತ್ತಾನೆ. ಕೆಳ ಜಾತಿಯವಳಾದರೂ ಮಾಳಿಗೆ ಅರಸು ಮನೆತನದ ಹಿನ್ನಲೆ ಇದ್ದುದರಿಂದ ಅವಳನ್ನು ಮೈಲಾರನು ಮದುವೆ ಯಾಗುತ್ತಾನೆ. ಕೆಳಜಾತಿ ಮತ್ತು ಕೆಳವರ್ಗಕ್ಕೆ ಸೇರಿದ ಗಂಗೆಯನ್ನು ಶಿವನು, ಚಾಮುಂಡಿಯನ್ನು ನಂಜುಂಡನು ಇಟ್ಟುಕೊಳ್ಳುತ್ತಾರೆ ಹೊರೆತು ಮದುವೆಯಾಗುವುದಿಲ್ಲ. □

(ಮುಂದುವರೆಯುವುದು)

ಬುದ್ಧನ ಮಹಿಳಾ ಸಂವೇದನೆ

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್



ಯುನಿಸೆಫ್ ಗರ್ಲಳರಲ್ಲಿ, ಮುಂಬಯಿಯಲ್ಲಿ ನಡೆಸಿದ ಒಂದು ಅಧ್ಯಯನದ ಪ್ರಕಾರ ೮೦೦೦ ಲಿಂಗ ನಿರ್ಧರಣೆ ಪರೀಕ್ಷೆಗಳ ಪೈಕಿ ೭೯೯೯ ಹೆಣ್ಣು ಭ್ರೂಣಗಳನ್ನು ಗುರುತಿಸಿ ಹತ್ಯೆ ಮಾಡಲಾಗಿತ್ತು. ಇನ್ನೊಂದು ಅಧ್ಯಯನದ ಪ್ರಕಾರ ಜೈಪುರದಲ್ಲೇ ವರ್ಷಕ್ಕೆ ಸುಮಾರು ೩೩೦೦ ಹೆಣ್ಣು ಭ್ರೂಣಗಳನ್ನು ಹತ್ಯೆ ಮಾಡಲಾಗುತ್ತದೆ.

ಸೀತಾ ಅಗರವಾಲರು ತಮ್ಮ ಪ್ರಮುಖ ಕೃತಿ "ವೇದಗಳ ನಿರ್ನಾಮ"ದಲ್ಲಿ ಕಳೆದ ದಶಕವೊಂದರಲ್ಲೇ ೫೦ ಮಿಲಿಯನ್ ಮಹಿಳೆಯರನ್ನು ಕೊಲ್ಲಲಾಗಿದೆ ಎಂಬುದನ್ನು ನಿರೂಪಿಸಿದ್ದಾರೆ. ಲಿಂಗ ನಿರ್ಧರಣಾ ತಂತ್ರಜ್ಞಾನವು ವಾಯುವ್ಯ ಭಾರತದ ಸಣ್ಣ ಪಟ್ಟಣಗಳ ಮೂಲೆ ಮೂಲೆಗೂ ಈಗ ಹರಡಿಬಿಟ್ಟಿದೆ. ಇದು ಹೆಣ್ಣು ಭ್ರೂಣ ಹತ್ಯೆಗೆ ಸಾಕ್ಷಿಯಾಗಿದೆ.

ನಾವೆಲ್ಲ ಪುರುಷಾಧಿಪತ್ಯದ ಜಗತ್ತಿನಲ್ಲಿ ಬದುಕುತ್ತಿದ್ದೇವೆ. ಪುರುಷಪ್ರಾಧಾನ್ಯತೆಯು ನಮ್ಮ ನರ-ನಾಡಿಗಳಲ್ಲಿ ಹರಿಯುತ್ತಿದೆ. ಕಾರಣ ಮತ್ತು ಮೂಲ ಮಾನವ ಸಹಜ ಜ್ಞಾನವನ್ನು ಆಧರಿಸಿದ ಬೌದ್ಧ ಧಮ್ಮದ ಕಡೆಗೆ ದಲಿತರು ವಾಲುತ್ತಿರುವುದು ಅಧಿಕವಾಗುತ್ತಿದೆ. ಆದ್ದರಿಂದ ಬುದ್ಧನನ್ನು ಅರ್ಥೈಸಿಕೊಳ್ಳುವ ಅವಶ್ಯಕತೆಯಿದೆ. ಬೌದ್ಧ ಧಮ್ಮವು ಹೆಚ್ಚಾಗಿ ವಿಧಿ-ಆಚರಣೆಗಳಲ್ಲಿ ಮುಳುಗಿಲ್ಲ. ಇದಕ್ಕೆ ಬದಲಾಗಿ ಅದು ವಿಚಾರ ಯೋಗ್ಯವಾಗಿದ್ದು, ಬೌದ್ಧಿಕ ಶಿಸ್ತನ್ನು ರೂಢಿಸಿಕೊಂಡಿದೆ.

ಒಮ್ಮೆ ಬುದ್ಧ ಶ್ರಾವಸ್ತಿಯಲ್ಲಿ ತಂಗಿದ್ದಾಗ, ಕೋಸಲದ ದೊರೆ ಪ್ರಸೇನಜಿತ ಬುದ್ಧನನ್ನು ಆಹ್ವಾನಿಸುತ್ತಾನೆ. ಅವರು ಗಂಭೀರ ಚರ್ಚೆಯಲ್ಲಿದ್ದಾಗ ಕೋಸಲದ ದೂತನೊಬ್ಬನು ಒಂದು ತುರ್ತು ಸಂದೇಶವನ್ನು ತರುತ್ತಾನೆ: ಆತನ ರಾಣಿಯು ಹೆಣ್ಣು ಮಗುವಿಗೆ ಜನ್ಮನೀಡಿದ್ದಳು. ಅದನ್ನು ಕೇಳಿದ್ದೇ ರಾಜ ಅಧೀರನಾಗುತ್ತಾನೆ. ರಾಜನ ಮುಖ ಚರ್ಯೆಯನ್ನು ಗಮನಿಸಿದ ಬುದ್ಧನು ಹೀಗೆಂದು ತಿಳಿ ಹೇಳುತ್ತಾನೆ: "ಅನೇಕ ಮಹಿಳೆಯರು ಪುರುಷರಿಗಿಂತ ಶ್ರೇಷ್ಠರಾಗಿದ್ದಾರೆ. ಜೊತೆಗೆ ವಿದ್ವಾಂಸರೂ ಕೂಡಾ ಆಗಿದ್ದಾರೆ. ಇವರು ಗಂಡು ಮಕ್ಕಳಿಗೆ ಜನ್ಮವಿತ್ತರೆ, ಅವರಲ್ಲಿ ಅನೇಕರು ರಾಜರಾಗುತ್ತಾರೆ."

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಬುದ್ಧನು ರಾಜನಿಗೆ ಅವನೂ ಕೂಡಾ ಒಬ್ಬ ಹೆಣ್ಣಿನ ಗರ್ಭದಲ್ಲೇ ಜನಿಸಿದವನು ಎಂಬುದನ್ನು ನೆನಪಿಸಿಕೊಡುತ್ತಾನೆ. ಬುದ್ಧನ ತತ್ವಶಾಸ್ತ್ರದಲ್ಲಿ ಪುರುಷ ಮತ್ತು ಮಹಿಳೆಯರಿಬ್ಬರೂ ಸಹ ಪರಸ್ಪರಾವಲಂಬಿಗಳು. ಇದು ಪರಸ್ಪರ ಮನ್ನಣೆ ಮತ್ತು ಗೌರವ ತೋರುವುದರಲ್ಲಿ ವ್ಯಕ್ತವಾಗುತ್ತದೆ.

ಈ ಸಂದರ್ಭದಲ್ಲಿ ಬುದ್ಧ ಮಹಿಳೆಯ ಪರವಾಗಿದ್ದಾನೆ. ನಾನು ತೀಕ್ಷ್ಣ ಓದುಗನಾಗಿದ್ದರೂ ನನ್ನ ಅರಿವಿಗೆ ಬಾರದ ಸಂಗತಿಯೊಂದಿದೆ. ನಾನು ಆನಂದ ಶ್ರೀಕೃಷ್ಣರ ಪುಸ್ತಕ "ಗೌತಮ ಬುದ್ಧ ಮತ್ತು ಆತನ ಉಪದೇಶ"ವನ್ನು ಓದಿದಾಗ ಅದು ನನ್ನ ಅರಿವಿಗೆ ಬಂತು. ಬೌದ್ಧ ಧರ್ಮದ ಒಬ್ಬ ವಿದ್ವಾಂಸನಾಗಿ ಶ್ರೀಕೃಷ್ಣ ಅವರು, ಬೌದ್ಧ ಧರ್ಮದ ಶ್ರೇಷ್ಠ ತತ್ವಜ್ಞಾನ ವನ್ನು ಬಾಬಾ ಸಾಹೇಬ್ ಅಂಬೇಡ್ಕರ್ ಅರಿತುದ್ದನ್ನು ಪುನರುಜ್ಜೀವನಗೊಳಿಸುತ್ತಿದ್ದಾರೆ.

ಯಾವುದೇ ರೀತಿಯ ಧಾರ್ಮಿಕ ತತ್ವಶಾಸ್ತ್ರವಾಗಲಿ ಅಥವಾ ರಾಜಕೀಯ ತತ್ವಶಾಸ್ತ್ರ ವಾಗಲಿ ಅದು ತನ್ನ ಹಿಂಬಾಲಕರ ಸೇವೆಗಾಗಿ ಇದೆಯೇ ಹೊರತು ಬೇರಾವುದಕ್ಕೂ ಅಲ್ಲ. ಧರ್ಮದ ಉದಾಹರಣೆಯನ್ನು ತೆಗೆದು ಕೊಂಡಲ್ಲಿ ಅದರ ಹಿಂಬಾಲಕರ ನಂಬಿಕೆಯನ್ನು ಒಪ್ಪಿದಾಕ್ಷಣ ಅದಕ್ಕೆ ತದ್ವಿರುದ್ಧವಾಗುತ್ತಾರೆ. ಅದು ವಿಧಿ-ಆಚರಣೆಗಳನ್ನಷ್ಟೇ ಗಳಿಸಿ ಕೊಳ್ಳುತ್ತಾರಲ್ಲದೆ ಅದರ ತರ್ಕವನ್ನಲ್ಲ. ಆಧುನಿಕ ಕಾಲದ ಬೌದ್ಧಾನುಯಾಯಿಗಳಾಗಿರುವ ದಲಿತರು ಬುದ್ಧ ಮತ್ತು ಅಂಬೇಡ್ಕರ್‌ರವರ ಮಾರ್ಗದಿಂದ ವಿಚಲಿತರಾಗಿರುವ ಸಂಗತಿ ಎದ್ದು ಕಾಣುತ್ತದೆ.

ಬೌದ್ಧ ಧರ್ಮದ ಬೌದ್ಧಿಕ ವಿಷಯವನ್ನು ಹೊರತುಪಡಿಸಿ ವಿಧಿಯಾಚರಣೆಯನ್ನಷ್ಟೇ ಈ ಸಂದರ್ಭದಲ್ಲಿ ಬಯಸಲಾಗುತ್ತದೆ. ಶ್ರೀಕೃಷ್ಣ ತನ್ನ ಈ ಹೊಳಹನ್ನು ಉಪಯೋಗಿಸಿ ಮಾನವಿಯತೆಗಾಗಿ ಬೌದ್ಧ ಧರ್ಮವನ್ನು ಮತ್ತಷ್ಟು ಶೋಭಿಸುವಂತೆ ಮಾಡಿದ್ದಾರೆ. ಲಿಂಗ-ಸಂಬಂಧಗಳನ್ನು ಬೌದ್ಧಧರ್ಮ ವಿವರಿಸಿ ಕೊಳ್ಳುತ್ತಿರುವ ಮಹತ್ವದ ಸಂಗತಿಯನ್ನು ತನ್ನ ಕೃತಿಯಲ್ಲಿ ಆತ ವಿವೇಚಿಸಿದ್ದಾರೆ. ಅಂದರೆ ಚರಿತ್ರೆಯಲ್ಲಿ ಅದು ಬುದ್ಧನನ್ನು ಮೊತ್ತ ಮೊದಲ ಸ್ತ್ರೀವಾದಿಯನ್ನಾಗಿ ಗುರುತಿಸುತ್ತದೆ.

ಬುದ್ಧನು ಒಂದು ಸ್ವತಂತ್ರವಾದ ಭಿಕ್ಷುನಿ ಸಂಘವನ್ನು ಅಥವಾ ಕನ್ಯಾಸ್ತ್ರೀ ಸಂಘವನ್ನು ಸ್ಥಾಪಿಸುತ್ತಾನೆ. ಈ ಬೌದ್ಧ ಸ್ತ್ರೀಯರು ತೇರಗಥವನ್ನು ಬರೆಯುವ ಮೂಲಕ ವೈದಿಕ ಪರಿಕಲ್ಪನೆಗಳಾದ ಪುನರ್ಜನ್ಮ ಮತ್ತು ಮುಕ್ತಿಯನ್ನು ಛಿದ್ರಗೊಳಿಸುತ್ತಾರೆ. ಅನೇಕ ಮಂದಿ ಮಹಿಳೆಯರು ಈ ಬೌದ್ಧ ಮಾರ್ಗದಲ್ಲಿ ತಪ್ಪ ಶ್ರೇಷ್ಠತೆಯನ್ನು ಗುರುತಿಸಿಕೊಂಡು, ತತ್ವಶಾಸ್ತ್ರ, ಧರ್ಮ, ಸಾಮಾಜಿಕ ಕಾರ್ಯ ಮತ್ತು ಮಾನವೀಯತೆಯಲ್ಲಿ ಅತ್ಯುನ್ನತ ಸ್ಥಾನಗಳನ್ನು ಪಡೆಯುತ್ತಾರೆ. ಇದು ತಮ್ಮ ಪುರುಷ ಸಮಕಾಲೀನರನ್ನು ಮೀರಿಸುತ್ತದೆ. ಅವರಲ್ಲಿ ಪ್ರಮುಖರನ್ನು ಗುರುತಿಸುವುದಾದರೆ ಸುಮಂಗಳ ಮಾತಾ, ಗೌತಮಿ, ಅಮರಪಾಲಿ, ರಾಜಕುಮಾರಿ ಕೇಮಾ ಹಾಗೂ ವಾಸಂತಿ. ಇವರು ಬೌದ್ಧ ಧರ್ಮವನ್ನು ಲಿಂಗ ಸಮಾನತೆಯ ಧರ್ಮವನ್ನಾಗಿಸುತ್ತಾರೆ.

ಆನಂದ ಶ್ರೀಕೃಷ್ಣ ಜ್ಞಾಪಿಸುವುದೇನೆಂದರೆ ವೈದಿಕ ವ್ಯವಸ್ಥೆಯಡಿ ಮಹಿಳೆಯರು ಎಲ್ಲ ಕೆಡುಕಿನ ಮೂಲವಾಗಿದ್ದಾರೆನ್ನುವುದನ್ನು 2500 ವರ್ಷಗಳ ಹಿಂದೆಯೇ ಬುದ್ಧನು ವ್ಯಕ್ತ ಪಡಿಸಿದ್ದ. ಆದ್ದರಿಂದ ವರ್ತಮಾನ ಕಾಲದ ಬೌದ್ಧಾನು ಯಾಯಿಗಳು ಸ್ತ್ರೀವಾದಿಗಳಾಗದೆ ಅನ್ಯಮಾರ್ಗವಿಲ್ಲ. ಅದರ ಮೊದಲ ಹೆಜ್ಜೆಯೆಂದರೆ ಪುರುಷಪ್ರಾಧಾನ್ಯ ಮೌಲ್ಯಗಳಿಂದ ಮುಕ್ತಿಗೊಳಿಸಿಕೊಳ್ಳಬೇಕಿದೆ.

ಇದರ ಒಂದು ಮುಖ್ಯ ಪರಿಣಾಮವೆಂದರೆ ಚೆನ್ನೈನಲ್ಲಿರುವ ರಾಷ್ಟ್ರೀಯ ಸಿದ್ಧ ಸಂಶೋಧನಾ ಕೇಂದ್ರಕ್ಕೆ ಜ್ಯೋತಿದಾಸ ಎಂಬ ಹೆಸರಿಡಲು ಕೇಂದ್ರ ಸರ್ಕಾರವು ನಿರ್ಧರಿಸಿದಾಗ ಆಗಸ್ಟ್ ೨೮, ೨೦೦೫ ರಂದು ಪಾಂಡಿಚೇರಿಯಲ್ಲಿರುವ ದಲಿತ ಸಿದ್ಧಾಂತಿ ರವಿಕುಮಾರ್ ಇದೆ ಕಾಲಂನಲ್ಲಿ ಅದರ ಬಗ್ಗೆ ಚರ್ಚಿಸುತ್ತಾ ದಲಿತ ನಾಯಕನ ಹೆಸರನ್ನು ತೆಗೆಯುವಂತೆ ಸೂಚಿಸಿದ್ದಾರೆ.

ದಲಿತ್ ಡೈರಿ

ಒಮ್ಮೆ ಬುದ್ಧ ಶ್ರಾವಸ್ತಿಯಲ್ಲಿ ತಂಗಿದ್ದಾಗ, ಕೋಸಲದ ದೊರೆ ಪ್ರಸೇನಜಿತ ಬುದ್ಧನನ್ನು ಆಹ್ವಾನಿಸುತ್ತಾನೆ. ಅವರು ಗಂಭೀರ ಚರ್ಚೆಯಲ್ಲಿದ್ದಾಗ ಕೋಸಲದ ದೂತನೊಬ್ಬನು ಒಂದು ತುರ್ತು ಸಂದೇಶವನ್ನು ತರುತ್ತಾನೆ: ಆತನ ರಾಣಿಯು ಹೆಣ್ಣು ಮಗುವಿಗೆ ಜನ್ಮನೀಡಿದ್ದಳು. ಅದನ್ನು ಕೇಳಿದ್ದೇ ರಾಜ ಅಧೀರನಾಗುತ್ತಾನೆ. ರಾಜನ ಮುಖ ಚರ್ಯೆಯನ್ನು ಗಮನಿಸಿದ ಬುದ್ಧನು ಹೀಗೆಂದು ತಿಳಿ ಹೇಳುತ್ತಾನೆ: "ಅನೇಕ ಮಹಿಳೆಯರು ಪುರುಷರಿಗಿಂತ ಶ್ರೇಷ್ಠರಾಗಿದ್ದಾರೆ. ಜೊತೆಗೆ ವಿದ್ವಾಂಸರೂ ಕೂಡಾ ಆಗಿದ್ದಾರೆ. ಇವರು ಗಂಡು ಮಕ್ಕಳಿಗೆ ಜನ್ಮವಿತ್ತರೆ, ಅವರಲ್ಲಿ ಅನೇಕರು ರಾಜರಾಗುತ್ತಾರೆ."ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಬುದ್ಧನು ರಾಜನಿಗೆ ಅವನೂ ಕೂಡಾ ಒಬ್ಬ ಹೆಣ್ಣಿನ ಗರ್ಭದಲ್ಲೇ ಜನಿಸಿದವನು ಎಂಬುದನ್ನು ನೆನಪಿಸಿಕೊಡುತ್ತಾನೆ.

ಅನು: ಡೊಮಿನಿಕ್ ಮತ್ತು ವಿದ್ಯಾ

ವೇಶಧಾರಿ ಕಾಂಗ್ರೆಸ್

ಮಹಾರಾಷ್ಟ್ರದಲ್ಲಿ ವಿಲಾಸ್‌ರಾವ್ ೀಶ್‌ಮುಖ್‌ರನ್ನು ಏಕೆ ಮುಖ್ಯಮಂತ್ರಿಯನ್ನಾಗಿ ಮಾಡ ಾಯಿತು ಎಂಬುದರ ಬಗ್ಗೆ ಚರಿತ್ರೆಯು ಅಚ್ಚರಿ ಕ್ತಪಡಿಸುತ್ತದೆ. ಏಕೆಂದರೆ ಕೆಲವೇ ವರ್ಷಗಳಲ್ಲಿ ಅವರನ್ನು ದಕ್ಷನೆನ್ನುವ ನೆಪವೊಡ್ಡಿ ಕೆಳಗಿಳಿಸಲಾಗುತ್ತದೆ. ಆತನೊಬ್ಬ ುನಾವಣಾ ಬೂತ್‌ಗಳನ್ನು ಕಾಯುವ ಖದೀಮ ಜಾತಿ ರಾತ ಗುಂಪನ್ನು ಪ್ರತಿನಿಧಿಸುತ್ತಾನೆಂದು ಆತನನ್ನು ೂರ ದೂಡಲಾಯಿತೇ? ಹಾಗಾದರೆ ವೈ ಎಸ್ ಡ್ಡಿಯನ್ನು ಆಂಧ್ರಾದ ಮುಖ್ಯಮಂತ್ರಿಯನ್ನಾಗಿ ಮಾಡಿದ್ದು ಕೆ? ಆತನೂ ಸಹ ಅಂಥದ್ದೇ ಜಾತಿಯ ಪ್ರತಿನಿಧಿ ೆಂದು ಅಲ್ಲವೇ?

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಂದ್ರದಲ್ಲಿ ಕಾಂಗ್ರೆಸ್ಸಿನ ದಿಗ್ವಿಜಯವೆಂದರೆ ಕಮ್ಮ ವಿರೋಧಿ ಂಘಟನೆಯ ಪರಿಣಾಮವೆಂದೇ ಹೇಳಬೇಕು. ಹೀಗಿ ದ್ದಾಗ್ಯೂ ಕೇವಲ ರೆಡ್ಡಿಯನ್ನಷ್ಟೇ ಗದ್ದುಗೆ ಮೇಲೆ ಕೂರಿ ಲಾಯಿತು ಏಕೆ? ಹರಿಯಾಣದ ಮುಖ್ಯಮಂತ್ರಿಯನ್ನಾಗಿ ೂಪೇಂದರ್ ಸಿಂಗ್ ಹೂಡಾನನ್ನು ಮಾಡಿದ್ದು ಏಕೆ? ಾಟ್ ವಿರೋಧಿ ಸಂಘಟನೆಯ ಪರಿಣಾಮವಾಗಿ ಚೌತಾ ನನ್ನು ಸೋಲಿಸಲಾಯಿತು. ಆದರೆ ಒಬ್ಬ ಜಾಟ್‌ನನ್ನು ದ್ದುಗೆಗೆ ತರಲಾಗುತ್ತದೆ ಏಕೆ? ಈ ಖದೀಮ ಜಾಟ್‌ರನ್ನು ೂರತು ಪಡಿಸಿದಲ್ಲಿ ಬೇರಾರೂ ಸಿಗುತ್ತಿರಲಿಲ್ಲವೇ? ಇಲ್ಲಿ ಮನಿಸಬೇಕಾದ ಕುತೂಹಲಕಾರಿ ಸಂಗತಿಯೆಂದರೆ ಈ ಮುಖ್ಯಮಂತ್ರಿಗಳು ಯಾರೂ ಸಹ ಚುನಾವಣಾ ಪ್ರಚಾ ದ ವೇಳೆ ಮುಖ್ಯಮಂತ್ರಿ ಸ್ಪರ್ಧಿಗಳೆಂದು ಬಿಂಬಿಸಿರಲಿಲ್ಲ. ದ್ದರಿಂದ ಗೋಹಾನ್‌ನ ದಲಿತ ವಿರೋಧಿ ದೌರ್ಜನ್ಯವು ದಿಕ್ಕಿನಲ್ಲಿ ಎತ್ತುವ ಪ್ರಶ್ನೆಯೆಂದರೆ ಕಾಂಗ್ರೆಸ್ ಕ್ಷದೊಳಗೆ ಗಂಭೀರವಾದುದೇನೂ ಸಂಭವಿಸುತ್ತಿದೆ!

ಈ ಗೋಹಾನ್ ಘಟನೆ ಮತ್ತು ಕಾಂಗ್ರೆಸ್ ರ್ತನೆಯನ್ನು ಇಲ್ಲಿ ಗಮನಿಸಬೇಕಾಗಿದೆ. ಒಬ್ಬ ದಲಿತ ುವಕ ತನ್ನ ಕುಟುಂಬದ ಫೋಟೋ ತೆಗೆಸಿಕೊಳ್ಳಲು ರ್ವ ಛಾಯಾಗ್ರಾಹಕನನ್ನು ಕರೆತರಲು ಸ್ಟುಡಿಯೋಗೆ ೋಗುತ್ತಾನೆ. ಅಂಗಡಿ ಮಾಲೀಕ ದುಬಾರಿ ಮೊತ್ತವನ್ನು ೇಳುತ್ತಾನೆ. ಅದಕ್ಕೆ ಆತನ ಪರ್ಯಾಯ ಉಪಾಯವೆಂದರೆ: ನ್ನ ಮನೆಯವರನ್ನೆ ಸ್ಟುಡಿಯೋಗೆ ಕರೆತರುವುದು. ಆ ುಡಿಯೋದಲ್ಲಿದ್ದ ಮತ್ತೋರ್ವ ಯುವಕ ಹೇಳಿದ್ದೇ ಂದರೆ, "ನಿನ್ನ ಹೆಂಡತಿಯನ್ನು ಕರೆ ತಂದಲ್ಲಿ ಪುಕ್ಕಟೆ ಾಗಿಯೇ ಅದನ್ನು ಮಾಡಿಕೊಡಲಾಗುತ್ತದೆ." ಆತ ಒಬ್ಬ ಡ್ಡಿ ಲೇವಾದೇವಿಗಾರನಾಗಿದ್ದು ಈ ಅಂಗಡಿಯಲ್ಲಿ ತನ್ನ ಾಭವನ್ನು ಬಯಸಿದ್ದ. ಇಂಥ ಮಾತನ್ನು ಅಪರಿಚಿತರಿಗೆ ೇಳಬಹುದೇ? ಈ ತಮಾಷೆಯು ಲಿಂಗ ತಾರತಮ್ಯದ ರವಾಗಿದ್ದುದು ಮಾತ್ರವಲ್ಲದೆ, ದಲಿತನಿಗೆ ಅವಮಾನ ಾಡಿದಂತಾಗಿ, ಜಗಳ ಶುರುವಾಗುತ್ತದೆ. ಸ್ಟುಡಿಯೋದಲ್ಲಿ ುಬಾರಿ ಮೊತ್ತದ ಬಗ್ಗೆ ಚೌಕಾಸಿಯ ಸಂದರ್ಭದಲ್ಲಿ ಆ ಾಟ್ ಯುವಕ ಈ ದಲಿತ ಕುಟುಂಬದ ಸಾಮಾಜಿಕ ಸ್ತಿತ್ವವನ್ನು ಊಹಿಸಿದ್ದನೆಂದು ಕಾಣುತ್ತದೆ.

ಆತನ ಸ್ವಂತ ಅಸ್ತಿತ್ವವನ್ನು ಮತ್ತು ಸಮಾಜದ ರ್ತನೆಯನ್ನು ನೆನಪಿಸಿಕೊಂಡ ದಲಿತ ಯುವಕನು ತನ್ನ ೇಹಿತರನ್ನು ಕರೆದುತಂದು ಆ ಜಾಟ್ ಯುವಕನನ್ನು ಲ್ಲುತ್ತಾನೆ. ದಲಿತರನ್ನು ಮಾತ್ರ ಹೊರತುಪಡಿಸಿ, ಎಲ್ಲಾ ಧ್ಯತೆಗಳನ್ನು ನೋಡಿದರೂ, ದಲಿತ ಯುವಕನಿಗೆ ಾಟ್‌ನ ಅಸ್ತಿತ್ವದ ಬಗ್ಗೆ ತಿಳಿದಿರಲೇ ಇಲ್ಲ. ಅಂದರೆ ಜಾಟ್‌ಯುವಕನನ್ನು ಕೊಂದದ್ದು ಪೂರ್ವಯೋಜಿತ ವೇನೂ ಅಲ್ಲ ಮತ್ತು ಯಾವುದೇ ದಲಿತ ಪಂಚಾಯಿತಿಯ ಆಜ್ಞೆಯೂ ಇರಲಿಲ್ಲ.

ಪೋಲೀಸರು ಪ್ರಕರಣ ದಾಖಲಿಸಿಕೊಂಡು ಕೆಲವರನ್ನು ಬಂಧಿಸಿದರು. ಉಳಿದವರ ಶೋಧ ನಡೆಯುತ್ತಿತ್ತು. ಇದರ ನಡುವೆ ಜಾಟ್ ಪಂಚಾಯಿತಿ ಸೇರಿ, ದಲಿತರಿಗೆ ಪಾಠ ಕಲಿಸುವ ತೀರ್ಮಾನ ತೆಗೆದುಕೊಂಡು, ಅಂತಿಮವಾಗಿ ಒಂದು ಠರಾವು ಜಾರಿಮಾಡಿದರು.

ಸರ್ಕಾರವು ಈ ವಿಷಯದ ಬಗ್ಗೆ ಅರಿತು, ೨೦೦ ಪೋಲೀಸರನ್ನು ದಲಿತ ಕಾಲೋನಿ ಸಂರಕ್ಷಣೆಗೆ ನಿಯೋಜಿಸಿತು. ಕರ್ತವ್ಯದಲ್ಲಿದ್ದ ಪೋಲೀಸರು ದಲಿತರಿಗೆ ಹೆದರಿಸಿ, ಹೇಳಿದ್ದೇನೆಂದರೆ, 'ಅವರು ಅಲ್ಲಿಂದ ಓಡಿ ಹೋಗದಿದ್ದರೆ ನರಮೇಧ ನಡೆಯುತ್ತದೆ' ಎಂದು. ಹೀಗೆ ಸರ್ಕಾರದ ಉದ್ದೇಶಗಳು ಸಂದೇಹಾತ್ಮಕವಾಗಿದ್ದರಿಂದ ದಲಿತರು ಪಲಾಯನಗೈದರು. ದಲಿತಕೇರಿಯನ್ನು ಲೂಟಿ ಮಾಡಿ, ಸುಟ್ಟು ನೆಲಸಮ ಮಾಡಲಾಯಿತು.

ಎಲ್ಲಿ ದಲಿತರ ಕಗ್ಗೊಲೆ ನಡೆಯುತ್ತದೋ ಅಥವಾ ದಲಿತ ದಲಿತ ಕೇರಿಯೊಂದು ಭಸ್ಮವಾಗುತ್ತದೋ ಅಲ್ಲೆಲ್ಲಾ ಅಪರಾಧಿಗಳು ಪಲಾಯನಗೈದು ಬಂಧನಕ್ಕೊಳಗಾಗುವುದನ್ನು ತಪ್ಪಿಸಲಾಗುತ್ತದೆ. ಸಮಕಾಲೀನ ಭಾರತದಲ್ಲಿ ಮೊದಲ ಬಾರಿಗೆ ಎಂಬಂತೆ ದೌರ್ಜನ್ಯಕ್ಕೊಳಗಾದವರು ಓಡಿಹೋಗುತ್ತಾರೆ. ಅಪರಾಧಿಗಳು ಪಂಚಾಯಿತಿಗಳನ್ನು ನಡೆಸುತ್ತಾ, ಪತ್ರಿಕಾಗೋಷ್ಠಿಗಳನ್ನು ಏರ್ಪಡಿಸುತ್ತಾ ಹಾಡುಹಗಲೇ ತೊಡೆ ತಟ್ಟಿ ನಿಲ್ಲುತ್ತಾರೆ. ರಾಜ್ಯ ಸರ್ಕಾರವು ಅವರನ್ನು ಬಂಧಿಸುವ ಬದಲು ಅವರೊಡನೆ ಕೊಸರುತ್ತಿದೆ. ಇವೆಲ್ಲವೂ ಸಹ ರಾಷ್ಟ್ರೀಯ ಮಾಧ್ಯಮಗಳೆದುರೇ ನಡೆಯುತ್ತಿರುತ್ತದೆ. ಗೊಹಾನವು ಡೆಲ್ಲಿಯಿಂದ ಕೇವಲ ೭೦ ಕಿ.ಮೀ ದೂರದಲ್ಲಿದೆ. ಒಬ್ಬ ಸಾಮಾನ್ಯ ನಾಗರಿಕನಿಗೂ ಸಹ ಅಲ್ಲಿ ಏನು ನಡೆಯುತ್ತಿದೆ ಎಂದು ತಿಳಿದಿರುತ್ತದೆ. ಡೆಲ್ಲಿಯಲ್ಲಿನ ಕಾಂಗ್ರೆಸ್ ಮತ್ತೊಂದು ರೀತಿಯಲ್ಲಿ ನಿರ್ಧರಿಸಿದಂತೆ ಕಾಣುತ್ತಿತ್ತು. ಕಾಂಗ್ರೆಸ್‌ನ ಅಧ್ಯಕ್ಷೆ ಸೋನಿಯಾಗಾಂಧಿಯು ದೆಹಲಿ ವಿಶ್ವ ವಿದ್ಯಾಲಯದ ಚುನಾವಣೆಗಳಲ್ಲಿ ಜಯಗಳಿಸಿದ NSUIನ ಅಭ್ಯರ್ಥಿಗಳನ್ನು ಅಭಿನಂದಿಸುತ್ತಾ ನಗುತ್ತಿದ್ದರು. ಕಾಂಗ್ರೆಸ್‌ನ ಸಿದ್ಧಾಂತ ಮತ್ತು ಸಾಮಾಜಿಕ ನೀತಿಯಲ್ಲಿ ತದ್ವಿರುದ್ಧವಾದ ತಿರುವೊಂದು ಕಾಣಿಸಿಕೊಳ್ಳುತ್ತಿದೆ. ಒಂದು ವರ್ಷದ ಹಿಂದೆ ನಾನು ಹಿರಿಯ ಪತ್ರಕರ್ತನೊಡನೆ ಎಸ್ ಸಿ/ ಎಸ್.ಟಿ ಗುತ್ತಿಗೆದಾರರಿಗೆ ಸರ್ಕಾರಿ ಗುತ್ತಿಗೆಗಳನ್ನು ನೀಡುವ ಪ್ರಸ್ತಾವಗಳನ್ನು ಕಾಂಗ್ರೆಸ್ ತನ್ನ ಸಿಎಂಪಿ ಚುನಾವಣಾ ಪ್ರಣಾಳಿಕೆಯಿಂದ ಏಕೆ ತೆಗೆದುಹಾಕಿತ್ತು ಎಂದು ಕೇಳಿದಾಗ, ಕೂಡಲೇ ಬಂದ ಪ್ರತ್ಯುತ್ತರವೆಂದರೆ, "ಇಂದಿನ ಕಾಂಗ್ರೆಸ್‌ನ ನಂಬಿಕೆ ಏನೆಂದರೆ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಬಲಶಾಲಿಯಾದ ದಲಿತರು ಪಕ್ಷವನ್ನು ತೊರೆಯುತ್ತಾರೆ. ಅಶಕ್ತರಾಗಿರುವವರಷ್ಟೇ ಪಕ್ಷದಲ್ಲಿ ನಂಬಿಗಸ್ತರಾಗಿ ಮುಂದುವರೆಯುತ್ತಾರೆ." ಅಂದು ನನ್ನ ಪತ್ರಕರ್ತ ಸ್ನೇಹಿತ ತಮಾಷೆ ಮಾಡುತ್ತಿದ್ದಾನೆಂದೇ ನಂಬಿದ್ದೆ. ಹೀಗಿದ್ದಾಗ್ಯೂ, ಕಾಂಗ್ರೆಸ್‌ನ ಒಂದು ವರ್ಷದ ಆಡಳಿತವನ್ನು ಗಮನಿಸಿದಾಗ ಮೇಲಿನ ಉಲ್ಲೇಖವು ಸರಿಯಾದುದೆಂಬ ನಂಬಿಕೆ ಬರುತ್ತಿದೆ. ಇಂದು ಕಾಂಗ್ರೆಸ್ ಈ ಖದೀಮ ಜಾತಿಗಳ ಹೊಸ ಸಾಮಾಜಿಕ ಚುನಾವಣಾ ಕ್ಷೇತ್ರಗಳನ್ನು ಕಟ್ಟುತ್ತಿದೆ. ನಗರ ಭಾರತದಲ್ಲಿ ಶ್ರೀಮಂತರನ್ನು ಆಶ್ರಯಿಸುತ್ತಿದೆ. ಈ ನಿಟ್ಟಿನಲ್ಲಿ ಗೊಹಾನ ಘಟನೆಯು ಒಂದು ನಿದರ್ಶನವಷ್ಟೇ.

ಇದು ಅಪಸ್ವರವೆಂದೇ ಹೇಳಬೇಕು. ಭಾರತೀಯ ಸಮಾಜದ ಅನೇಕ ಚುನಾವಣಾ ಕ್ಷೇತ್ರಗಳು ಅಸಹಜವಾಗಿ ಮರುರೂಪ ಪಡೆಯುತ್ತಿವೆ. ಸಮಾಜ ಶಾಸ್ತ್ರಜ್ಞರು ಗಮನಿಸದ ಈ ವಿಚಿತ್ರ ವಿದ್ಯಮಾನವು ದೊಡ್ಡ ಮಟ್ಟದಲ್ಲಿ ಕಾಣಿಸಿಕೊಳ್ಳುತ್ತಿದೆ. ಈ ವಿದ್ಯಮಾನವನ್ನು ಪಂ. ನೆಹರೂರವರು ಬಹಳ ಹಿಂದೆಯೇ ಊಹಿಸಿದ್ದರು. ಆಗ ಅವರು ವಾದಿಸಿದ್ದೆಂದರೆ, "ಸರ್ ಜಾರ್ಜ್ ಬರ್ಡ್‌ಹುಡ್ ಹೇಳಿದಂತೆ ಜಾತಿ ವ್ಯವಸ್ಥೆಯನ್ನು ಹಿಂದೂಗಳು ಹಿಡಿದಿಡುವ ತನಕ ಭಾರತವು ಭಾರತವಾಗಿರುತ್ತದೆ. ಆದರೆ ಯಾವಾಗ ಅವರು ಬಿಡಿಸಿ ಕೊಳ್ಳುತ್ತಾರೋ ಅಲ್ಲಿ ಭಾರತವೂ ಇರುವುದಿಲ್ಲ. ಆ ವೈಭ ವದ ದ್ವೀಪವು ಈಸ್ಟ್ ಇಂಡಿಯಾ ಕಂಪನಿಯ ಆಂಗ್ಲೋ-ಸಾಕ್ಸನ್ ಸಾಮ್ರಾಜ್ಯದ ಕೆಟ್ಟ ಮಾದರಿಯಾಗಿ ಉಳಿದುಬಿಡುತ್ತದೆ. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಜಾತಿ ಇದ್ದು ಅಥವಾ ಇಲ್ಲದೇನೆ ನಾವೆಲ್ಲಾ ಆ ಸ್ಥಿತಿಗೆ ಇಳಿದು ಬಿಟ್ಟದ್ದೇವೆ. ಅಲ್ಲದೆ ಯಾವುದೇ ಸಂದರ್ಭದಲ್ಲಿ ನಮ್ಮ ಭವಿಷ್ಯತ್ತು ಹೇಗಾದರೂ ಇರಲಿ, ಅದು ಆ ಸಾಮ್ರಾಜ್ಯದ ಚೌಕಟ್ಟಿನಲ್ಲಿ ಮಾತ್ರ ಇರದು."

ಮಿಸ್ಟರ್ ಜಾರ್ಜ್ ಬರ್ಡ್‌ಹುಡ್ ಹೇಳಿದ ಮೇಲಿನ ಮಾತುಗಳಲ್ಲಿ ಸ್ವಲ್ಪ ಸತ್ಯವಿದೆ. ಆತ ಈ ದೃಷ್ಟಿಯಿಂದ ಯೋಚಿಸಿರಲಾರ. ಬೃಹದಾಕೃತಿಯ ಮತ್ತು ಹಿಂದಿನಿಂದಲೂ ಸದೃಢವಾಗಿ ನಿಂತ ಸಾಮಾಜಿಕ ವ್ಯವಸ್ಥೆಯು ವಿಘಟನೆಗೊಂಡು ಸಾಮಾಜಿಕ ಬದುಕು ಸಂಪೂರ್ಣ ಅಸ್ತವ್ಯಸ್ತವಾಗಿ ಹೊಂದಾಣಿಕೆ ಇಲ್ಲದ ಸ್ಥಿತಿಗೆ ಕಾರಣವಾಗಿ, ಬಹು ಸಂಖ್ಯಾತ ಸಂಕಷ್ಟಗಳು ಮತ್ತು

ವರ್ತಮಾನದಲ್ಲೊಂದು ಹೊಸ ವ್ಯವಸ್ಥೆ

ವ್ಯಕ್ತಿಯ ಅಸಹಜ ವರ್ತನೆಗಳ ಮೇಲೆ ನಡೆಯುತ್ತಿರುವ ಅಭಿವೃದ್ಧಿಯ ಭಿನ್ನವಾದ ಸಾಮಾಜಿಕ ಸಂರಚನೆ ಇಲ್ಲವೇ ಬದಲಾಗುತ್ತಿರುವ ಕಾಲಕ್ಕೆ ಸ್ಪಂದಿಸುವಂತಹ ಪ್ರಜ್ಞಾವಂತ ಜನರಿಲ್ಲದಿದ್ದಲ್ಲಿ ದುರಂತ ಕಟ್ಟಿಟ್ಟದ್ದು. ಸಂಕ್ರಮಣ ಸಂದರ್ಭದಲ್ಲಿ ಇಂತಹ ವಿಘಟನೆ ಒಂದು ರೀತಿಯಲ್ಲಿ ಅನಿವಾರ್ಯ. ಇದು ಜಗತ್ತಿನಾದ್ಯಂತವೂ ಎದ್ದು ಕಾಣುತ್ತಿದೆ. ಬದುಕಿನ ಪಾಠ ಕಲಿಯಲು ಜನರು ಅಂಥ ವಿಘಟನೆಯ ಮೂಲಕ ನೊಂದು ಬೆಂದು ಸಾಗಬೇಕಾಗುತ್ತದೆ. ಆಗಲೇ ಜನ ಅಂಥ ಬದಲಾದ ಸ್ಥಿತಿಗೆ ಹೊಂದಾಣಿಕೆ ಮಾಡಿಕೊಳ್ಳುವುದು. (ಡಿಸ್ಕವರಿ ಆಫ್ ಇಂಡಿಯ)

ಒಬ್ಬ ದಲಿತ ಮದುಮಗ ಕುದುರೆ ಸವಾರಿ ಮಾಡಿದಾಗ ಆತನನ್ನು ಕಲ್ಲಿನಿಂದ ಹೊಡೆಯಲಾಗುತ್ತದೆ. ಇದು ಯಾಕೆಂದು ಸಾಮಾಜಶಾಸ್ತ್ರಜ್ಞರು ಇನ್ನೂ ಸಹ ವಿವರಿಸಲಾಗಿಲ್ಲ. ಮದುವೆಯ ಮೆರವಣಿಗೆಯಲ್ಲಿ ಸಾಮಾನ್ಯ ಮಾನವ ವರ್ತನೆಯು ಸಂತೋಷದಿಂದ ಕುಪ್ಪಳಿಸುತ್ತದೆ. ಅಥವಾ ವಿರಸವಿದ್ದಲ್ಲಿ ಮದುಮಗನ ಕುಟುಂಬದ ಮೇಲೆ ಕಲ್ಲೆಸೆಯಬಹುದು. ಆದರೆ ಹರಿಯಾಣ, ರಾಜಸ್ಥಾನ ಮತ್ತು ಪಶ್ಚಿಮ ಉತ್ತರ ಪ್ರದೇಶಗಳಲ್ಲಿ ಸಾಮಾಜಿಕ ಹೊಂದಾಣಿಕೆ ಇರುವಾಗಲೂ ದಲಿತ ಮದುವೆಯ ಕುದುರೆ ಸವಾರಿಯ ಮೆರವಣಿಗೆಯು ಅನೇಕ ಬಾರಿ ಕಲ್ಲೆಸೆತವನ್ನು ಕಾಣುತ್ತದೆ. ಈ ವರ್ತನೆಯಲ್ಲಿ ಹಿರಿಯರು, ಮಹಿಳೆಯರು, ಮಕ್ಕಳು, ಪುರುಷರೆಲ್ಲರು ಪಾಲ್ಗೊಳ್ಳುತ್ತಾರೆ. ಒಬ್ಬ ದಲಿತ ಕೂಲಿಂಗ್ ಗ್ಲಾಸ್ ತೊಟ್ಟು ತಮಿಳುಗ್ರಾಮವೊಂದರಲ್ಲಿ ಮುಕ್ತವಾಗಿ ನಡೆಯುವಂತಿಲ್ಲ. ನಗರದ ದಲಿತೇತರರು ಇದಕ್ಕೇನೂ ಹೊರತಾಗಿಲ್ಲ.

ಒಬ್ಬ ದಲಿತ ಬರಹಗಾರ ತನ್ನ ಅಭಿಪ್ರಾಯದ ಅಂಕಣವೊಂದನ್ನು ಬರೆಯುವುದು ಅಥವಾ ಆತನನ್ನು ಕೊಲ್ಲುವುದು – ಈ ಎರಡು ಆಯ್ಕೆಗಳಲ್ಲಿ ದಿನಪತ್ರಿಕೆಯ ಒಬ್ಬ ಸವರ್ಣೀಯ ಲಿಬರಲ್ ಸಂಪಾದಕನು ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತಾನೆಂದರೆ, ಕ್ಷಣವೂ ಯೋಚಿಸದೆ ಎರಡನೆಯದನ್ನು ಆಯ್ದುಕೊಳ್ಳಬಹುದು. ಕೆಲವರನ್ನು ಹೊರತು ಪಡಿಸಿದಲ್ಲಿ ಈ ಸಂಪಾದಕನಂತೆಯೇ ಒಬ್ಬ ಉದಾರವಾದಿ ಭಾರತೀಯ ಔದ್ಯಮಿಕ ವ್ಯಕ್ತಿ, ಒಬ್ಬ ಆಧುನಿಕೋತ್ತರ ಬಾಲಿವುಡ್ ಸಿನೇಮಾ ನಿರ್ಮಾಪಕ ಹಾಗೂ ಒಬ್ಬ ಸಬ್‌ಆಲ್ಟ್ರನ್ ವಿದ್ವಾಂಸನೂ ವರ್ತಿಸುತ್ತಾನೆ.

ಭಾರತೀಯರೆಲ್ಲರು ಸಾಮಾನ್ಯವಾಗಿ ಪರಿಕಲ್ಪಿಸುವ ಸಿದ್ಧಮಾದರಿಯ 'ಸ್ಟಾಂಡರ್ಡ್' ದಲಿತ ಹೇಗಿರುತ್ತಾನೆಂದರೆ: ಹಸಿವು, ಒಣಗಿದ ಚರ್ಮ, ಹೂತು ಹೋಗಿರುವ ಕಣ್ಣು, ಅರ್ಧ ಬಾಗಿದ, ಕೈಯಲ್ಲಿ ಪೊರಕೆ ಅಥವಾ ಗುದ್ದಲಿ ಹಿಡಿದ ವ್ಯಕ್ತಿಯಷ್ಟೆ. ಸರ್ಕಾರದ ಸಕಾರಾತ್ಮಕ ನೀತಿಯಿಂದಾಗಿ ೫ ಮಿಲಿಯನ್ ದಲಿತ/ಆದಿವಾಸಿ ಕುಟುಂಬಗಳು ಸರ್ಕಾರಿ ಉದ್ಯೋಗವನ್ನು ಪಡೆದಿದ್ದಾರೆ. ಅಂದರೆ ಸುಮಾರು ೨೫ ಮಿಲಿಯನ್ ದಲಿತ ವ್ಯಕ್ತಿಗಳು ವಾರ್ಷಿಕವಾಗಿ ರೂ. ೩೦೦ ಬಿಲಿಯನ್ ಹಣ ಖರ್ಚು ಮಾಡುತ್ತಿದ್ದಾರೆ. ಹಾಗಾಗಿ ಅನೇಕರು ಈ ಮೇಲಿನ ಸಿದ್ಧ ಮಾದರಿ ದಲಿತ ಪರಿಕಲ್ಪನೆಯನ್ನು ಬಿಟ್ಟು ಹೊರ ಬಂದಿದ್ದಾರೆ. ಅವರೆಲ್ಲಾ ಈಗ ನೀಟಾಗಿ ಬಟ್ಟೆ ತೊಟ್ಟು, ಆರೋಗ್ಯವಂತರಾಗಿ, ಕಣ್ಣುಗಳು ಫಳ ಫಳನೆ ಹೊಳೆಯುತ್ತಿರುತ್ತವೆ. ಆದರೆ ಇವರೆಲ್ಲ ಬೇರೆಯವರ ದೃಷ್ಟಿಯಲ್ಲಿ 'ವಿಚಿತ್ರ' ದಲಿತರು.

ಈ ವಿಚಿತ್ರ ರೀತಿಯ ದಲಿತ ಬಿಂಬಗಳು ದಲಿತೇತರರನ್ನು ಘಾಸಿಗೊಳಿಸಿದೆ. ಅಲ್ಲದೆ ಭಾವನೆಗಳು ಉಂಡೆಯಾಗಿ, ಒಂದು ಸಣ್ಣ ಕಿಡಿ ಬಿದ್ದೊಡನೆ ಹಿಂಸೆ ಭುಗಿಳೇಳುತ್ತದೆ. ಗೊಹಾನದ ಜಾಟ್ ಜನ ತಮ್ಮದೇ ಆದ ಪೂರ್ವಕಲ್ಪಿತ ಬಿಂಬಗಳಿಗೆ ಬಲಿಯಾಗಿದ್ದಾರೆ. ಗೊಹಾನದ ದಲಿತ ವಾಸಿಗಳು ಟಿವಿ, ರೆಫ್ರಿಜರೇಟರ್ ಮತ್ತು ಮ್ಯೂಸಿಕ್ ಸೆಟ್‌ಗಳನ್ನು ಹೊಂದಿದ್ದಾರೆನ್ನುವ ಗಾಳಿ ಸುದ್ದಿ ಹರಡಿರುತ್ತದೆ. ಜಾಟ್ ಯುವಕನ ಕೊಲೆಯು ಆ ಕಿಡಿಯನ್ನು ಒದಗಿಸುತ್ತದೆ. 'ಅಸಹಜ' ಸ್ಥಿತಿ ಬಂದೆರಗಿ ತನ್ನ ಬಾಹುಗಳನ್ನು ಚಾಚುವ ಮೊದಲೇ ಜಾಟ್‌ಜನ ದಲಿತ ಕೇರಿಯನ್ನು ಧ್ವಂಸಗೊಳಿಸುತ್ತಾರೆ. ಭಿನ್ನ ಕಾರಣಗಳು ಮತ್ತು ಮಾರ್ಗೋಪಾಯಗಳನ್ನು ಬಳಸಿ ನಗರ ಭಾರತದ ಬ್ರಾಹ್ಮಣರು 'ಸಹಜತೆ'ಯನ್ನು ಮರುಸ್ಥಾಪಿಸುತ್ತಾರೆ.

ಇವರ್‍ಯಾರು ಮೀಸಲಾತಿಯಿಂದಾಗಿ ದಲಿತವರ್ಗವೊಂದು ಸೃಷ್ಟಿಯಾಗಿ ಹಂಸಗೀತಾ ಹೋಟೆಲ್‌ಗಳಲ್ಲಿ ನೃತ್ಯಮಾಡುವುದನ್ನು ಮತ್ತು ಹೊಸ ಬೈಕುಗಳನ್ನು ಸವಾರಿ ಮಾಡುವುದನ್ನು ಒಪ್ಪಲಾರರು. ದಲಿತ ಮಹಿಳೆಯರು ಕಾಂಚಿಪುರಂ ಸಿಲ್ಕ್ ಸೀರೆಗಳನ್ನು ಕೊಂಡರೆ ಅದು ಮೀಸಲಾತಿ ಉದ್ಯೋಗಗಳ ದುರ್ಬಳಕೆಯೆಂದೇ ಭಾವಿಸಲಾಗುತ್ತದೆ. ಅವರ ದೃಷ್ಟಿಯಲ್ಲಿ ಖಾಸಗಿ ವಲಯದ ಮೀಸಲಾತಿಯನ್ನು ನೀಡಿದಲ್ಲಿ ಒಬ್ಬ ದಲಿತ CEO, ಸಂಪಾದಕ ಅಥವಾ ಸುದ್ದಿ ಮಾಧ್ಯಮದ ವ್ಯಕ್ತಿಯಾಗಿ ಆತ/ಆಕೆ ಅನುಕೂಲಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಾರೆ. ಆದ್ದರಿಂದ ಒಬ್ಬ 'ವಿಚಿತ್ರ' ದಲಿತನಿಂದಾಗಿ ಎಷ್ಟೇ ಪ್ರಜ್ಞಾವಂತನಾದ ಬ್ರಾಹ್ಮಣನೊಬ್ಬ ಘಾಸಿಗೊಳ್ಳುತ್ತಾನೆ.

ಆಧುನಿಕ ಭಾರತದ ಚರಿತ್ರೆಯಲ್ಲಿ ನೆಹರೂಗೆ ಒಂದು ವಿಶೇಷ ಸ್ಥಾನವಿದೆ. ಆತ ಭಾರತದ ಪ್ರಥಮ ಪ್ರಧಾನಿಯೆಂದಷ್ಟೇ ಅಲ್ಲ, ಆತ ಮಾಡಿದ ಮತ್ತೊಂದು ವಿಶಿಷ್ಟ ಸಂಗತಿಯೆಂದರೆ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಸಭ್ಯತೆಯನ್ನು ಪರಿಚಯಿಸುವುದರ ಮೂಲಕ ಆಧುನಿಕತೆ, ವಿಜ್ಞಾನ ಮತ್ತು ಔದ್ಯಮೀಕರಣದ ಸಂಕೇತವಾಗಿ ಮಾರ್ಪಟ್ಟ.

ಹೀಗಿರುವಾಗ ನೆಹರೂ ಆಧುನಿಕ ಭಾರತ ಚರಿತ್ರೆಯ ಅನಿವಾರ್ಯ ವ್ಯಕ್ತಿಯೆಂದು ಪರಿಗಣಿಸುವಾಗ ಆತ ಎತ್ತಿದ ಜಾತಿ ಪ್ರಶ್ನೆಯನ್ನೇಕೆ ಅಸಡ್ಡೆ ಮಾಡುತ್ತೇವೆ, ಅದರಲ್ಲೂ ಗೊಹಾನ ಘಟನೆಗಳು ಮತ್ತೆ ಮತ್ತೆ ಜರುಗು[...]ರುವಾಗ? ಅಂಥ ಶ್ರೇಷ್ಠ ವ್ಯಕ್ತಿಯು ಮನಗಂಡ[...] 'ಬಹುಸಂಖ್ಯಾತ ಸಂಕಟಗಳು' ಮತ್ತು 'ಅಸಹಜತೆಗಳ[...] ಇಂದಿನ ವಾಸ್ತವವಾಗಿದ್ದು, ಜಾತಿವ್ಯವಸ್ಥೆಯು ಛಿದ್ರಗೊ[...]ತ್ತಿದೆ. ಆದ್ದರಿಂದ ಭಾರತವೀಗ ಎದ್ದು, ಕೂಡ[...] ಪರಿಸ್ಥಿತಿಗೆ ಪರಿಹಾರವನ್ನು ಕಾಣಬೇಕಿದೆ.

ವರ್ತಮಾನ ಕಾಲಕ್ಕೆ ಅಗತ್ಯವಾದ ಮ[...] ಪ್ರಜ್ಞಾವಂತ ಜನರಿಗಾಗಿ ಒಂದು ಪರ್ಯಾಯ ಸಾಮಾಜ[...] ಸಂರಚನೆಯನ್ನು ನಾವು ರಚಿಸಲೇ ಬೇಕಾಗಿದೆ. ಇಲ್ಲ[...]ದಲ್ಲಿ ದಲಿತರ ಆಶೋತ್ತರಗಳನ್ನು ಸುಡುವ ಗೊಹಾನ[...] ಜಾಟ್ ಜನರನ್ನು ಸೇರಿಕೊಳ್ಳಬೇಕಾಗುತ್ತದೆ. ಅಂದರೆ 1[...] ಭಾಗದಷ್ಟು ಭಾರತೀಯ ಜನರನ್ನು ಸುಟ್ಟು ಬೂದಿ ಮಾ[...] ಬೇಕಾಗುತ್ತದೆ. ನಾವೇನಾದರು ಈ ಹೊಸ ಹಾದಿಯ[...] ತುಳಿಯದೇ ಹೋದಲ್ಲಿ 'ಅಸಹಜತೆ'ಯು ತನ್ನ ಅಗ[...]ವನ್ನು ಪೂರೈಸಿಕೊಳ್ಳುತ್ತದೆ. ಇದು 3/4ರಷ್ಟು ಜನರ[...] ಬಾಧಿಸುತ್ತದೆ.

ಸೆಪ್ಟೆಂಬರ್ ೨೦ರಂದು ಸೂಪರ್ ಜೆ[...] ಎಂಬ್ರಿಯರ್ ವಿಮಾನವನ್ನು ವಿ.ವಿ.ಐ.ಪಿಗಳ ಸುರಕ್ಷಿ[...] ಹಾಗೂ ಹಿತಕರ ಪ್ರಯಾಣಕ್ಕಾಗಿ ಭಾರತೀಯ[...] ವಾಯುಪಡೆಗೆ ಸೇರಿಸಿಕೊಳ್ಳಲಾಯಿತು. ಅದೇ ದಿ[...] ಪುಷ್ಕರ್ ನ್ಯಾಯಾಲಯ, ಜರ್ಮನಿ ಜೋಡಿಗಳಾ[...] ಓಪೆಲ್ ಅಲೋನ್ ಮತ್ತು ಸಲೇವ್ ಕೆರ್ಮಿಟ್‌ರವರ[...] ಸಾರ್ವಜನಿಕವಾಗಿ ಪರಸ್ಪರ ಮುತ್ತು ಕೊಟ್ಟದಕ್ಕೆ ರೂ.500[...] – ದಂಡ ವಿಧಿಸಿತು.

ಕಳೆದ ತಿಂಗಳು ಆಗಸ್ಟ್ 31ರಂದು ಸೆನ್ಸೆ[...] 8000 ಸೂಚ್ಯಾಂಕಗಳಷ್ಟು ಮೇಲೇರಿತು. ಅದೇ ದಿ[...] ಗೊಹಾನವು ಸುಟ್ಟು ಭಸ್ಮವಾಯಿತು. ತೀವ್ರವಾ[...] ಬೆಳೆಯುತ್ತಿರುವ ಚೈನಾ ಆರ್ಥಿಕತೆಯ ಕೇಂದ್ರವಾದ[...] ಶಾಂಘೈನಂತೆ ಮುಂಬಯಿಯು ಬೆಳೆಯುವ ನಿರೀ[...]

ಇವರ್‍ಯಾರು ಮೀಸಲಾತಿಯಿಂದಾಗಿ ದಲಿತವರ್ಗವೊಂದು ಸೃಷ್ಟಿಯಾಗಿ ಹೋಟೆಲ್‌ಗಳಲ್ಲಿ ನೃತ್ಯಮಾಡುವುದನ್ನು ಮತ್ತು ಹೊಸ ಬೈಕುಗಳನ್ನು ಸವಾರಿ ಮಾಡುವುದನ್ನು ಒಪ್ಪಲಾರರು. ದಲಿತ ಮಹಿಳೆಯರು ಕಾಂಚಿಪುರಂ ಸಿಲ್ಕ್ ಸೀರೆಗಳನ್ನು ಕೊಂಡರೆ ಅದು ಮೀಸಲಾತಿ ಉದ್ಯೋಗಗಳ ದುರ್ಬಳಕೆಯೆಂದೇ ಭಾವಿಸಲಾಗುತ್ತದೆ. ಅವರ ದೃಷ್ಟಿಯಲ್ಲಿ ಖಾಸಗಿ ವಲಯದ ಮೀಸಲಾತಿಯನ್ನು ನೀಡಿದಲ್ಲಿ ಒಬ್ಬ ದಲಿತ CEO, ಸಂಪಾದಕ ಅಥವಾ ಸುದ್ದಿ ಮಾಧ್ಯಮದ ವ್ಯಕ್ತಿಯಾಗಿ ಆತ/ಆಕೆ ಅನುಕೂಲಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಾರೆ.

ಇದೂ ಕೂಡಾ ಗೊಹಾನದೊಳಗಿನ ಹಿಂಸೆಯೇ!

ಖದೀಮರ ಕಗ್ಗಂಟುಗಳು

ಬಿಟ್ಟುಕೊಂಡಿದೆ. ಈ ಮಹಾನಗರದಲ್ಲಿ ರಾತ್ರಿ ಬದುಕು ಗುರೊಡೆಯುತ್ತಿದೆ. ಆದರೂ ಮುಂಬಾಯಿನ ಡಾನ್ಸ್ ಬಾರುಗಳು ಈಗ ಭೂತದ ನೆನಪುಗಳಷ್ಟೆ.

ಹದಿನೈದು ದಿನಗಳ ಹಿಂದೆ ದೆಹಲಿ ರ್ಕಾರವು ವಿದ್ಯುತ್ ಕಳ್ಳತನವಾಗುವುದನ್ನು ಪತ್ತೆಹಚ್ಚಲು ದ್ಯುತ್ ಪೋಲೀಸ್ ಪಡೆಯನ್ನು ರಚಿಸಿತು. ಕೊಳ ೇರಿಯ ನಿವಾಸಿಗಳು ಅಧಿಕ ಪ್ರಮಾಣದ ವಿದ್ಯುತ್ ಕಳವು ಮಾಡುತ್ತಿದ್ದಾರೆಂದು ಆರೋಪಿಸಲಾಗಿದೆ. ನೆರೆಯ ಪಂಜಾ ಬನಲ್ಲಿ ಸರ್ಕಾರವು ರೈತರಿಗೆ ಉಚಿತ ವಿದ್ಯುತ್ ಘೋಷಿ ಸಿದೆ. ಮುಚ್ಚಿಕೊಂಡಿರುವ ಸಮಾಜದಲ್ಲಿ ಗೊತ್ತಿಲ್ಲದೇ ಮುಕ್ತ ಆರ್ಥಿಕತೆಯನ್ನು ಜಾರಿಯಾಗಿಸಲಾಗುತ್ತಿದೆ. ಭಾರ ತವು ಬಹುವಿಧದ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಿದೆ. ಅದು ಪಾಶ್ಚಾತ್ಯ ಆಕಾಂಕ್ಷೆಗಳನ್ನು ಹೊಂದಿದ್ದರೂ ಅದರ ಂಸ್ಥಿಕ ರೂಪಗಳು ಇನ್ನೂ ಪೌರಾಸ್ತ್ಯವಾಗಿಯೇ ಇವೆ. ದರ ಹೃದಯ ಬಡಿತ ಮ್ಯಾನ್‌ಹಟನ್ ಕಡೆಗಿದ್ದರೆ ಅದರ ನಸ್ಸು ಮಾತ್ರ ಧಾರವಿಯಲ್ಲೇ ಕೊಳೆಯುತ್ತಿದೆ. ನ್ನೊಂದು ರೀತಿಯಲ್ಲಿ ಹೇಳುವುದಾದರೆ, ಭಾರತೀಯ ೂರ್ಜ್ವಾಗಳು ತನ್ನ ಬೌದ್ಧಿಕ ಪಡೆಯೊಂದಿಗೆ ತನ್ನ ಸ್ವಾಭಿ ಮಾನ ಮತ್ತು ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತಿವೆ. ಈ ಘಾತಕಾರಿ ಸ್ವ-ಸಂದೇಹದ ವಿದ್ಯಮಾನವು ಅವರನ್ನು ಳಗಿನಿಂದಲೇ ಹಿಂಡುತ್ತಿದೆ. ಆದ್ದರಿಂದಲೇ ಈ ಂದಿಗ್ಧತೆಗಳು!

ಹೀಗೆ ಭಾರತದ ಬೂರ್ಜ್ವಾಗಳು ಸಾಯುತ್ತಿರುವ ಗಿನ ಮರದಂತೆ ತೀವ್ರವಾಗಿ ಅನಭಿವೃದ್ಧಿಯತ್ತ ಸಾಗು ತ್ತಿದ್ದಾರೆ. ಅತ್ತ ಕಾಡೂ ಅಲ್ಲ ಇತ್ತ ಮರವೂ ಅಲ್ಲದ ಸ್ಥಿತಿ ಯಾಗಿದೆ. ಆದ್ದರಿಂದಲೇ ಇವರು ಒಣಗಿದ ತರಗೆಲೆ ಯಂತೆ ಭಾವಹೀನರಾಗಿದ್ದಾರೆ. ಅವರು ಯಾರನ್ನೂ ೀತಿಸುವುದಿಲ್ಲ, ಭಾರತವನ್ನು ಬಿಡಿ, ಮುಕ್ತ ಮಾರುಕಟ್ಟೆ ಯನ್ನೂ ಸಹ! ಆಗಸ್ಟ್ ೩೧ರಂದು ಅವರು ಗೊಹಾನದ ಗ್ಗೆ ಅನುಕಂಪವಿಲ್ಲದಂತೆ ದಲಾಲ್ ಬೀದಿಯ ಂಬರಾಟದಲ್ಲಿ ಮುಳುಗಿದ್ದರು.

ಬೂರ್ಜ್ವಾಗಳು ಎಲ್ಲಾ ಸಮಾಜಗಳಲ್ಲೂ ಮುಖವಾದ ಪಾತ್ರವನ್ನು ವಹಿಸುತ್ತಾರೆ. ಸಂವೇದನಾ ಲರಾಗಿ, ಮಾರುಕಟ್ಟೆ ಸ್ನೇಹಿಗಳಾಗಿ ಅವರು ಗೊಹಾನ ಟನೆಯ ಬಗ್ಗೆ ಪತ್ರಿಕಾ ಹೇಳಿಕೆಯನ್ನು ನೀಡಬಹು ಗಿತ್ತು. ಆದರೆ CII, FICCI, ASSOCHAMಗಳು ಹಾನದ ಬಗ್ಗೆ ಹೇಳಲು ಏನೂ ಇರಲಿಲ್ಲ.

ಕ್ಲಬ್ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಜಕೀಯ ಮುಖಂಡರು, ಲಿಬರಲ್‌ಗಳು ಮತ್ತು ಬಲ ಥೀಯರು ಜಡ ಪ್ರೇಕ್ಷಕರಾಗಿದ್ದರು. ಜರ್ಮನಿಯ ತ್ತಿನ ಬಗ್ಗೆಯಾಗಲೀ, ಬಾರ್‌ಹುಡುಗಿಯರ ಮೇಲಿನ ಧ್ಯಯುಗೀನ ನಿಷೇಧದ ಬಗ್ಗೆಯಾಗಲೀ, ಗೊಹಾನದ ್ಲಿಯಾಗಲೀ ಅಥವಾ ಪಂಜಾಬಿನ ರೈತರಿಗೆ ಉಚಿತ ದ್ಯುತ್‌ನ ಲಂಚದ ಬಗ್ಗೆಯಾಗಲೀ ಇವರ್‍ಯಾರಿಗೂ ಚಿತ್ತೂ ಅಭಿಪ್ರಾಯವಿರಲಿಲ್ಲ. ಕಾರ್ಪೋರೇಟ್ ಜಗತ್ತಿ ತೆ ಇಲ್ಲಿನ ರಾಜಕೀಯ ನಾಯಕತ್ವವೂ ಸಹ ಗರಬಡಿ ಕ್ತ ಆರ್ಥಿಕತೆಯನ್ನು ಅದರ ರಾಜಕೀಯಕ್ಕೆ ಮತ್ತು ಸಮಾಜವನ್ನು ಅದರ ಬದಲಾವಣೆಗೂ ಅನ್ವಯಿಸಲು ಅಸಮರ್ಥವಾಗಿದೆ.

ಒಂದು ಸಾಮಾಜಿಕ ಸಂದರ್ಭದಲ್ಲಿ ವ್ಯಾಪಾರ-ಮುಕ್ತ ಮಾರುಕಟ್ಟೆ-ಮುಕ್ತ ಆರ್ಥಿಕತೆಯು ಕ್ರಿಯಾಶೀಲವಾಗಿರುತ್ತದೆ. ಸಾಮಾಜಿಕ ಸನ್ನಿವೇಶವು ಹಿಂದುಳಿದು ಜಡಗೊಂಡರೆ ಮುಕ್ತ ಮಾರುಕಟ್ಟೆ ನೀತಿಯು ಆರಂಭದಲ್ಲಿ ಅಲ್ಲದಿದ್ದರೂ ಅಂತಿಮವಾಗಿ ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳುತ್ತದೆ.

ಎಲ್ಲಾ ಯಶಸ್ವಿ ಸಮಾಜಗಳಲ್ಲೂ ಬೂರ್ಜ್ವಾವರ್ಗವು ತನ್ನ ಸ್ವಂತ ಇರುವಿಕೆಗಾಗಿ, ಮಾರುಕಟ್ಟೆ ಸ್ನೇಹಿ ಸಾಮಾಜಿಕ ಸಂದರ್ಭವನ್ನು ಸೃಷ್ಟಿಸುತ್ತದೆ.

ಯಶಸ್ವಿ ಕಾರು ರೇಸಿಗೆ, ಉತ್ತಮ ಟ್ರ್ಯಾಕ್‌ನ ಅವಶ್ಯಕತೆಯಿದೆ. ಈಸ್ಟ್ ಇಂಡಿಯಾ ಕಂಪೆನಿಯು ಇಂಥ ಕನಿಷ್ಠ ವ್ಯಾಪಾರಿ ಪ್ರಜ್ಞೆಯನ್ನು ಹೊಂದಿತ್ತು ಅದಕ್ಕಾಗಿ ಅದರ ಸ್ವಂತ ಲಾಭದ ದೃಷ್ಟಿಯಿಂದ ಇಂಡಿಯಾದಲ್ಲಿ ನಾಗರಿಕ ಸೌಲಭ್ಯವನ್ನು ಕಲ್ಪಿಸಿದರು.

ವರ್ತಮಾನವನ್ನು ಅಗೌರವದಿಂದ ಕಾಣುವ ವರಿಗೆ ಭವಿಷ್ಯದಲ್ಲಿ ಶಿಕ್ಷೆ ಕಾದಿದೆ. ಭವಿಷ್ಯದಲ್ಲಿ ಶಿಕ್ಷೆ ಅನು ಭವಿಸುವವರನ್ನು ಚರಿತ್ರೆಯು ನಿರಾಕರಿಸುತ್ತದೆ. ಬೂರ್ಜ್ವಾ ಗಳು ಇಂಡಿಯಾದ ವ್ಯಾಪಾರಿ ಚರಿತ್ರೆಯಲ್ಲಿ ಬಲಿಷ್ಠ ಅಭ್ಯರ್ಥಿಗಳಾಗಿದ್ದಾರೆ.

ಭಾರತದ ೧೦ ಮೊದಲ ಔದ್ಯಮಿಕ ವ್ಯಕ್ತಿಗಳು ಒಬ್ಬ ದಲಿತ ಉದ್ಯಮಿಯ ಕೈ ಕುಲುಕಲು ಜೀವನ ಪರ್ಯಂತ ಕಾದರೂ ಆಗುವುದಿಲ್ಲ. ಹಾಗೆಯೇ ಮಹೇಶ್ ಭಟ್‌ನನ್ನು ಒಳಗೊಂಡಂತೆ ೧೦ ಮೊದಲ ಸಿನೇಮಾ ಸ್ಟಾರ್‌ಗಳು, ನಿರ್ಮಾಪಕರು, ನಿರ್ದೇಶಕರು ಒಬ್ಬ ದಲಿತ ಸ್ಟಾರ್, ನಿರ್ಮಾಪಕ, ನಿರ್ದೇಶಕನೊಡನೆ ಭೋಜನ ಸವಿಯಲು ಸಾಧ್ಯವಾಗುವುದಿಲ್ಲ.

ಈ ಬೂರ್ಜ್ವಾಗಳ ಗೊಂದಲವನ್ನು ಅರ್ಥೈಸ ಬಹುದಾದುದೆ, ಅದಕ್ಕೆ ಬದಲಾವಣೆ ಗ್ರಹಿತವಿಲ್ಲ. ಆದ್ದ ರಿಂದ ಅದು ಮಾರುಕಟ್ಟೆಯ ಅರಿವನ್ನು ಸಹ ಹೊಂದಿಲ್ಲ, ಅದರ ಮುಕ್ತ ಮಾರುಕಟ್ಟೆಯ ಅಡ್ವೆಂಚರ್‌ಗಳು ದೀರ್ಘ ಕಾಲದಲ್ಲಿ ಸ್ವನಾಶಕ್ಕೆ ಸಮರ್ಥ ಸಿಡಿಮದ್ದಾಗಿದೆ. ಚೈನಾ ದೊಡನೆ ಭಾರತವನ್ನು ಹೋಲಿಸಿದಲ್ಲಿ ಮೊದಲಿ ನಿಂದಲೂ ಅದು ಭಾರತವನ್ನು ಹಿಂದಕ್ಕಿಕ್ಕುತ್ತಾ ಬಂದಿದೆ. ಚೈನಾದವರು ಇಂಗ್ಲೀಷ್‌ನ್ನು ಬೇಗನೆ ಕಲಿಯುತ್ತಿದ್ದಾರೆ. ಐಟಿ ಗುಳ್ಳೆಯು ಬೇಗನೆ ಒಡೆದು ಹೋಗಲಿದೆ. ಆದ್ದರಿಂದ ಭಾರತವು ಅಮೇರಿಕಾದ ಮೆಕ್ಸಿಕೋವಾಗಿ ಚೈನಾದತ್ತ ಕೈಚಾಚಲಿದೆ. ಕಮ್ಯುನಿಸ್ಟ್ ಆಡಳಿತವಿದ್ದೂ ಚೈನಾವೂ ಬದಲಾಗುತ್ತಿದೆ. ಏಕೆಂದರೆ ಜಾತಿ ವ್ಯವಸ್ಥೆ ಅಲ್ಲಿ ಇಲ್ಲ.

ಈ ಬದಲಾದ ಪರಿಸ್ಥಿತಿಯಲ್ಲಿ ಚೈನಾದ ಮುಕ್ತ ಮಾರುಕಟ್ಟೆಯು ಅಚ್ಚರಿಯ ಫಲಿತಾಂಶಗಳನ್ನು ಪಡೆಯು ತ್ತಿದೆ. ಅದೇ ಭಾರತೀಯ ಬುರ್ಜ್ವಾಗಳು ತಮ್ಮ ಬೌದ್ಧಿಕ ಜನರೊಡನೆ ಚೈನಾದಿಂದ ಪಾಠ ಕಲಿಯಬೇಕಿದೆ. ಅದು ಚಾರಿತ್ರಿಕವಾಗಿ ಸಮಾಜವನ್ನು ತೆರೆಯಲು ದೃಢವಾಗಿ ಹೆಜ್ಜೆ ಇಡಲೇಬೇಕಾಗಿದೆ ಅದು ಸಾಧ್ಯವಾಗಬೇಕಾದರೆ ಚರಿತ್ರೆಯ ಮಣ್ಣಿನಲ್ಲಿ ಹೂತು ಹೋಗಿರುವ ತನ್ನ ಮನಸ್ಸು ಮತ್ತು ಸಂಸ್ಥೆಗಳನ್ನು ಮುಕ್ತಗೊಳಿಸಿಕೊಳ್ಳಬೇಕಷ್ಟೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧

ಎಲ್ಲಿ ಹೋದವೋ....!

ಲೇ: ಗೊಲ್ಲಹಳ್ಳಿ ಶಿವಪ್ರಸಾದ್
ಬೆಲೆ: ರೂ. 40/-

ಗಾಯಕ, ಹೋರಾಟಗಾರ, ಕವಿ-ಈ ಎಲ್ಲವುಗಳ ಸಂಗಮವಾದ ಗೊಲ್ಲಹಳ್ಳಿ ಶಿವಪ್ರಸಾದ್ ಅವರ ಹಾಡುಗಳ ಸಂಗ್ರಹ ಇದು. ಇಲ್ಲಿನ ಪ್ರತಿ ಹಾಡುಗಳಲ್ಲಿ ನೊಂದವರ ದನಿ ಅಡಗಿದೆ. ಮನುಕುಲದ ಅಸ್ತಿತ್ವವನ್ನೇ ಅಲುಗಾಡಿಸುತ್ತಿರುವ ಪರಿಸರ ನಾಶದ ಬಗ್ಗೆ ಕಳ ಕಳಿ ಇದೆ. ಅದಮ್ಯ ಮಾನವ ಪ್ರೀತಿ ಇದೆ. ಜನ ಪರ ಹೋರಾಟಗಾರರ ಬಾಯಲ್ಲಿ 'ಜನಪದ ಹಾಡು'ಗಳಾಗಿ ಹೋಗಿರುವ ಈ ಹಾಡುಗಳನ್ನು ಒಗ್ಗೂಡಿಸಿ ಇಲ್ಲಿ ಪ್ರಕಟಿಸಲಾಗಿದೆ. ತಳ ಸಮುದಾಯದ ಕೊರಳ ದನಿಗಳಾಗಿರುವ ಈ ಹಾಡುಗಳು ಈಚಿನ ಕಾವ್ಯ ಲೋಕ ಕೊಡಲಾಗದ ಅಮೂಲ್ಯ ಸಾಹಿತ್ಯ ಸಂಪತ್ತನ್ನು ಕನ್ನಡಕ್ಕೆ ನೀಡಿವೆ.

ಪ್ರಕಾಶಕರು: ಸತ್ಯ ಸಾರಥಿ ಪ್ರಕಾಶನ
ಕತ್ತರಿಗುಪ್ಪೆ, ಚಿಂತಾಮಣಿ ತಾಲೂಕು,
ಕೋಲಾರ ಜಿಲ್ಲೆ

ಸುಭಾಷ್ ಪಾಳೇಕರರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ

ಲೇ: ಸ್ವಾಮಿ ಆನಂದ್. ಆರ್
ಬೆಲೆ: ರೂ.60/-

ಒಂದು ನಾಟಿ ಹಸುವನ್ನು ಸಾಕಿ, 30 ಎಕರೆ ಭೂಮಿಯಲ್ಲಿ ಕೃಷಿ ಮಾಡುವ ಕಲೆಯನ್ನು ಹೇಳಿಕೊಡುವ ಅದ್ಭುತವೇ ಸುಭಾಷ್ ಪಾಳೇಕರ ಈ ನೈಸರ್ಗಿಕ ಕೃಷಿ. ರೈತರ ಬಾಳಿನ ಆಶಾಕಿರಣವಾಗಿ ಮೂಡಿ ಬಂದಿರುವ ಈ ನೈಸರ್ಗಿಕ ಕೃಷಿ ಪದ್ಧತಿಯನ್ನು ಕೇವಲ ಹಸುವಿನ ಸಗಣಿ-ಗಂಜಲದಿಂದ ಸಾಕ್ಷಾತ್ಕರಿಸಿ ಕೊಟ್ಟ ಹೆಗ್ಗಳಿಗಕೆ ಸುಭಾಷ್ ಪಾಳೇಕರ್ ಅವರದು. ಪಾಳೇಕರರ್ ಈ ಅದ್ಭತ ಪವಾಡ ವನ್ನು ಕನ್ನಡದಲ್ಲಿ ಕಣ್ಣಿಗೆ ಕಟ್ಟುವಂತೆ ರೈತರ ಮನಮುಟ್ಟುವಂತೆ ಸ್ವಾಮಿ ಆನಂದ್ ಕಟ್ಟಿಕೊಟ್ಟಿದ್ದಾರೆ. ಪ್ರತಿ ರೈತನ ಮನೆಯಲ್ಲಿ-ಮನದಲ್ಲಿ ಇರಬೇಕಾದ ಕೃತಿ ಇದು.

ಪ್ರಕಾಶಕರು: ಅಗ್ನಿ ಪ್ರಕಾಶನ
ಇಸ್ರೋ ಲೇಔಟ್, ಬೆಂಗಳೂರು-560078



ಎಲ್ಲಮ್ಮನ ಕಥನ ಕಾವ್ಯ

ಹಾಡಿದವರು: ಬುದ್ರ ಕಥಾ ಈರಮ್ಮ
ಸಂಪಾದಕರು: ಪ್ರೊ॥ ಕೆ.ಎಂ. ಮೇತ್ರಿ
ಬೆಲೆ: ರೂ. 150/-

ಅಲಕ್ಷಿತ ಅಲೆಮಾರಿ ಬುಡ್ಗ ಜಂಗಮ್ ಜನಾಂಗಕ್ಕೆ ಸೇರಿದ ಬುದ್ರಕಥಾ ಈರಮ್ಮ ಜಾನಪದ ಲೋಕದ ಧೃವತಾರೆ, ಕನ್ನಡ ನಾಡಿನ ಅಪ್ರತಿಮ ಪ್ರತಿಭೆ. ತನ್ನ ಇಡೀ ಬದುಕನ್ನು ಜಾನಪದ ಕಥನ ಕಾವ್ಯಗಳ ಗಾಯನಕ್ಕೆ ಮುಡಿಪಾಗಿಟ್ಟರು. ಸುಮಾರು ಎರಡು ಲಕ್ಷ ಸಾಲಗಳಷ್ಟು ಕಾವ್ಯವನ್ನು ನಿರಂತರವಾಗಿ ಈರಮ್ಮ ಹಾಡುತ್ತಾರೆ. ಇಂಥ ಜಾನಪದ ಕೋಗಿಲೆ ಬುರ್ರ ಕಥಾ ಈರಮ್ಮ ಹಾಡಿದ ಎಲ್ಲಮ್ಮನ ಕಥನ ಕಾವ್ಯವೇ ಈ ಕೃತಿ.

ಪ್ರಕಾಶಕರು: ವಿದ್ಯಾನಿಧಿ ಪ್ರಕಾಶನ:
ಸ್ಟೇಷನ್ ರಸ್ತೆ, ಗದಗ.

ಪ್ರಾಚೀನ ಭಾರತದಲ್ಲಿ ಚಿಕಿತ್ಸಾ ವಿಧಾನ

ಲೇ: ದೇವಿಪ್ರಸಾದ ಚಟ್ಟೋಪಾಧ್ಯಾಯ
ಅನು: ಕಮಾರಪ್ಪ. ಜಿ ಬೆಲೆ: ರೂ. 40/-

ಆಧ್ಯಾತ್ಮಿಕ ಸಾಧನೆಯಲ್ಲಿಯೇ ಸಂಪೂರ್ಣ ಮುಳುಗಿ ಹೋಗಿದ್ದ ಪ್ರಾಚೀನ ಭಾರತೀಯರು ವಿಜ್ಞಾನ-ತಂತ್ರಜ್ಞಾನಗಳತ್ತ ಹೆಚ್ಚಾಗಿ ಗಮನಕೊಡಲಿಲ್ಲ. ಆದರೆ ಕೆಲವರಾದರೂ ಅಂಥ ಪ್ರಯತ್ನಗಳನ್ನು ಮಾಡಿರುವ ಉದಾಹರಣೆಗಳು ನಮ್ಮ ಮುಂದಿವೆ. ವೈದ್ಯ ಮತ್ತು ಚಿಕಿತ್ಸಾ ವಿಜ್ಞಾನದಲ್ಲಿ ಕೆಲವರು ಸಾಕಷ್ಟು ಪ್ರಗತಿ ಸಾಧಿಸಿದ್ದದು ಮಾತ್ರ ವಲ್ಲದೆ ಗ್ರಂಥಗಳನ್ನು ರಚಿಸಿದ್ದರು. ಪ್ರಾಚೀನ ಭಾರತದಲ್ಲಿ ಚಿಕತ್ಸಾ ವಿಜ್ಞಾನ ನಡೆದು ಬಂದ ದಾರಿಯನ್ನು, ಅದು ಎದುರಿಸಿದ, ಎದರಿಸಬೇಕಾಗಿ ಬಂದ ಸಮಸ್ಯೆಗಳನ್ನು ಈ ಕೃತಿಯಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ:
ಎಂಬೆಸಿ ಸೆಂಟರ್, ಬೆಂಗಳೂರು-560001



ಕೆಂಪು ಹೆಜ್ಜೆಯ ಸಾಲು

ಲೇ: ಎಂ.ಶಿವನಂಜಯ್ಯ. ಬೆಲೆ: ರೂ. 35/-

ಕನ್ನಡ ರಂಗಭೂಮಿ ನಾಟಕ ಗಳ ಕೊರತೆಯನ್ನು ಎದುರಿಸುತ್ತಿರುವ ದಿನಗಳಲ್ಲಿ 'ಕೆಂಪು ಹೆಜ್ಜೆಯ ಸಾಲು' ನಾಟಕ ಕೃತಿ ಹೊರ ಬಂದಿದೆ. ಗ್ರಾಮೀಣ ಪ್ರದೇಶದ ನೋವು ನಲಿವು-ರಾಜಕೀಯ ಅಸಮಾನತೆಯ ಅಸ್ಫೋಟ ಎಲ್ಲವೂ ನಾಟ ಕದಲ್ಲಿ ರೂಪು ಪಡೆದಿವೆ. ಮೀಸಲಾತಿ ಬಳಸಿಕೊಂಡು ನಾಗರಿಕ ಪ್ರಪಂಚದತ್ತ ಮುಖ ಮಾಡಿರುವ ದಲಿತರು ತಮ್ಮ ಊರು ಕೇರಿಯತ್ತ ಹಿಂತಿರುಗಿ ನೋಡ ಬೇಕಾದ ಅಗತ್ಯವನ್ನು ಈ ಕೃತಿ ಎತ್ತಿ ತೋರುತ್ತದೆ.

ಪ್ರಕಾಶಕರು: ಕನ್ನಡ ಸಾಹಿತ್ಯ ಸಂಸ್ಕೃತಿ ಸಮಿತಿ, ರಾಮನಗರ.



ಹೊಸ ಪುಸ್ತಕ

ಸಕಲರಿಗೂ ಸಮೃದ್ಧಿ

ಲೇ: ಶ್ರೀಪಾದ ಎ ಡಾಬೊಲ್ಕರ್
ಅನು: ಶೈಲಜ. ಆರ್ ಬೆಲೆ: ರೂ. 40/-

ದಿವಂಗತ ಶ್ರೀಪಾದ ಡಾಬೊ ಲ್ಕರ್ ಅವರ 'ಪ್ಲೆಂಟಿ ಫರ್ ಆಲ್' ಕೃತಿ ಯಿಂದ ಆಯ್ದು ಭಾಗಗಳ ಭಾಷಾಂತರ ಕೃತಿ ಇದು. ಎಲ್ಲ ಉತ್ಪನ್ನಗಳ ಮೂಲ ಸೂರ್ಯನೇ ಆಗಿದ್ದು, ಸೂರ್ಯಶಕ್ತಿ ಯನ್ನು ಸಂಪೂರ್ಣವಾಗಿ ಹೇಗೆ ಬಳಸಿ ಕೊಂಡು ವ್ಯವಸಾಯ ಮಾಡಬಹುದೆಂಬ ಪೂರ್ಣ ವಿವರಗಳು ಈ ಕೃತಿಯಲ್ಲಿವೆ. ಕಾಲು ಎಕರೆಯಷ್ಟು ತುಂಡು ಭೂಮಿ ಯಲ್ಲಿ ಯಾವುದೇ ರಾಸಾಯನಿಕ ಗೊಬ್ಬರ ಔಷಧಿ ಬಳಸದೆ ಕೃಷಿ ಮಾಡುವ ಬಗೆಯನ್ನು ಸಾಧಾರ ಪೂರ್ವಕವಾಗಿ ವಿವರಿಸಲಾಗಿದೆ.

ಪ್ರಾಕಶಕರು: ಇಕ್ರಾ, ಮೈಖಲ್ ಪಾಳ್ಯ ನ್ಯೂ
ತಿಪ್ಪಸಂದ್ರ ಅಂಚೆ, ಬೆಂಗಳೂರು-560075



ನಾಡಿನ ಜನತೆಯ ಕಲ್ಯಾಣಕ್ಕಾಗಿ ನೂತನ ಭರವಸೆಯ ಯೋಜನೆಗಳು

ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಸಮ್ಮಿಶ್ರ ಸರ್ಕಾರ ಆಡಳಿತದ ಚುಕ್ಕಾಣಿ ಹಿಡಿದಿದೆ. ಇದು ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿದೆ. ಜನಪರ ಕಾರ್ಯಯೋಜನೆಗಳನ್ನು ರೂಪಿಸಿದೆ. ದೃಢತೆಯಿಂದ ಇವುಗಳನ್ನು ಅನುಷ್ಠಾನಗೊಳಿಸುತ್ತಿದೆ.

❖ <u>ಕೃಷಿ</u>

ಬೆಳೆ ವಿಮೆಗಾಗಿ ರೂ.200 ಕೋಟಿಗಳು, ಬಿತ್ತನೆ ಬೀಜ ವಿತರಣೆಗೆ ರೂ.60 ಕೋಟಿಗಳು, ಆವರ್ತ ನಿಧಿಗೆ ರೂ.200 ಕೋಟಿಗಳು, ಕೃಷಿ ಸಂಶೋಧನೆಗೆ ರೂ.27 ಕೋಟಿಗಳು, ಶೇಕಡ 6ರ ಬಡ್ಡಿ ದರದಲ್ಲಿ ಸಾಲ ನೀಡಲು ರೂ.80 ಕೋಟಿ ಸಹಾಯಧನ ಒದಗಿಸಲಾಗಿದೆ. ಕೃಷಿ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಸಂಬಂಧ ರೂ.950 ಕೋಟಿಗಳನ್ನು ಸಹಕಾರಿ ಸಂಸ್ಥೆಗಳಿಗೆ ಮರುಪಾವತಿಸಲಾಗಿದೆ.

❖ <u>ನೀರಾವರಿ</u>

ನೀರಾವರಿ ಅಭಿವೃದ್ಧಿಗಾಗಿ ರೂ.3942 ಕೋಟಿಗಳ ದಾಖಲೆ ಹಣವನ್ನು ಪ್ರಸಕ್ತ 2005-06 ನೇ ಸಾಲಿನಲ್ಲಿ ಹಂಚಿಕೆ ಮಾಡಲಾಗಿದೆ.

❖ <u>ಆರೋಗ್ಯ</u>

ಸ್ತ್ರೀ ಶಕ್ತಿ ತಂಡಗಳ 2.5 ಲಕ್ಷ ಪರಿಶಿಷ್ಟ ಸದಸ್ಯರಿಗೆ ಸಾರ್ವತ್ರಿಕ ವಿಮಾ ಯೋಜನೆಯೊಂದನ್ನು ಜಾರಿಗೊಳಿಸಲಾಗುವುದು. 27 ಜಿಲ್ಲೆಗಳಿಗೆ ತಲಾ ಒಂದರಂತೆ ಆಂಬುಲೆನ್ಸ್ ಸೌಕರ್ಯ ಹಾಗೂ 39 ಹಿಂದುಳಿದ ತಾಲ್ಲೂಕುಗಳ ವ್ಯಾಪ್ತಿಯ 399 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 24 ಗಂಟೆಗಳ ನಿರಂತರ ಸೇವೆ ಕಲ್ಪಿಸಲಾಗುವುದು.

❖ <u>ಶಿಕ್ಷಣ</u>

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಸಾಕ್ಷರತೆ ಪ್ರಮಾಣದಲ್ಲಿ ಸುಧಾರಣೆ ತರಲು 4.687 ಪ್ರಾಥಮಿಕ ಹಾಗೂ 2,104 ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ, ಚಾಮರಾಜನಗರ ಮತ್ತು ಗುಲ್ಬರ್ಗಾ ಜಿಲ್ಲೆಗಳ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಉಪಗ್ರಹದ ನೆರವಿನೊಂದಿಗೆ ದೂರದರ್ಶನ ಹಾಗೂ ರೇಡಿಯೋ ಮೂಲಕ ಮಕ್ಕಳಿಗೆ ಕಲಿಯುವ ಅವಕಾಶ ಕಲ್ಪಿಸಲಾಗಿದೆ.

❖ <u>ಮೂಲ ಸೌಕರ್ಯ</u>

ಬೆಂಗಳೂರು ಮಹಾನಗರಕ್ಕೆ ರೂ.390 ಕೋಟಿಗಳ ಹೈ-ಟೆಕ್ ಸಿಟಿ ಯೋಜನೆ ಮತ್ತು ರೂ.750 ಕೋಟಿ ವೆಚ್ಚದ ಪೆರಿಫೆರಲ್ ರಿಂಗ್ ರಸ್ತೆ ಯೋಜನೆ ಶೀಘ್ರದಲ್ಲೇ ಅನುಷ್ಠಾನ. ರೂ.3883 ಕೋಟಿಗಳ ವೆಚ್ಚದಲ್ಲಿ ಕಾವೇರಿ 4ನೇ ಹಂತದ 2ನೇ ಘಟಕದ ಯೋಜನೆಗೆ ಚಾಲನೆ.

❖ <u>ವಿದ್ಯುತ್</u>

ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿ ರೂ.1026 ಕೋಟಿ ವೆಚ್ಚದಲ್ಲಿ 19 ಲಕ್ಷ ಗ್ರಾಮೀಣ ಕುಟುಂಬಗಳಿಗೆ ವಿದ್ಯುತ್ ಸೌಕರ್ಯ, ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ಗ್ರಾಮೀಣ ಕುಟುಂಬಗಳಿಗೆ ಉಚಿತ ವಿದ್ಯುತ್ ಸಂಪರ್ಕ ನೀಡಲು ನಿರ್ಧಾರ.

❖ <u>ಕೈಗಾರಿಕೆ</u>

ರೂ.23,000 ಕೋಟಿಗಳ ಬಂಡವಾಳ ಹೂಡಿಕೆಯ ಒಎನ್‌ಜಿಸಿ ಯೋಜನೆಗೆ ಪ್ರಧಾನಿ ಅನುಮೋದನೆ. ಕೈಗಾರಿಕೆ ವಲಯದಲ್ಲಿ ರೂ.45,600 ಕೋಟಿ ಮೌಲ್ಯದ ಬಂಡವಾಳ ಹೂಡಿಕೆಗೆ ರಾಜ್ಯ ಸರ್ಕಾರದ ಅನುಮೋದನೆ.

❖ <u>ಹೈಕೋರ್ಟ್ ಪೀಠ</u>

ಧಾರವಾಡ ಮತ್ತು ಗುಲ್ಬರ್ಗಾ ನಗರಗಳಲ್ಲಿ ಹೈಕೋರ್ಟ್ ಸಂಚಾರಿ ಪೀಠಗಳಿಗಾಗಿ ಬಹುದಿನಗಳಿಂದ ಕಾಣುತ್ತಿದ್ದ ಕನಸು ನನಸಾಗುತ್ತಲಿದೆ.

❖ <u>ಸುವರ್ಣ ಕರ್ನಾಟಕ</u>

"ಸುವರ್ಣ ಕರ್ನಾಟಕ", "ಬೃಹತ್ ಕರ್ನಾಟಕ" ಮತ್ತು "ಕರ್ನಾಟಕ ಗೆಜೆಟಿಯರ್" "ಸುವರ್ಣ ಪಥ" ಎಂಬ ಮೂರು ಸಂಪುಟಗಳನ್ನು ಸುವರ್ಣ ಕರ್ನಾಟಕದ ವರ್ಷಾಚರಣೆಯ ಸಂದರ್ಭದಲ್ಲಿ ಬಿಡುಗಡೆ ಮಾಡಲಾಗುವುದು.

ಕರ್ನಾಟಕ ವಾರ್ತೆ
Karnataka Information

ಪೂರ್ವ ಕರ್ಮವು ದುಷ್ಟ ಸಿದ್ಧಾಂತ

ಬುದ್ಧಾಯಣ

ಜನಕ್ಕೇ ಬೆಳಕಾದ ಬುದ್ಧನ ಕಥೆಗಳು ಅಪಾರ. ಬುದ್ಧ ತನ್ನ ಪ್ರವಾಸದ ಕಾಲದಲ್ಲಿ ಜನರ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಅವರಿಗೆ ಮಾರ್ಗದರ್ಶನ ಮಾಡಲು ಕಥೆಗಳನ್ನು ಹೇಳುತ್ತಿದ್ದ. ಇದು ಜನರನ್ನು ತಿದ್ದಲು ಅತ್ಯಂತ ಸಮರ್ಥ ಮಾರ್ಗವೆಂದೇ ಇಂದಿಗೂ ಜನ ತಿಳಿದಿದ್ದಾರೆ. ಬುದ್ಧ ಹೇಳಿದ ಇಂಥ ನೂರಾರು ಕಥೆಗಳು ಇಂದು ವಿವಿಧ ರೂಪದಲ್ಲಿ ಲಭ್ಯವಿದೆ. ಸಿ.ಎಚ್. ರಾಜಶೇಖರ್ ಅಂಥ ಹಲವು ಕಥೆಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು 'ಸಂವಾದ' ಓದುಗರಿಗಾಗಿ ನೀಡುತ್ತಿದ್ದೇವೆ.

ಂಸಿ.ಎಚ್.ರಾಜಶೇಖರ್

ಪೂರ್ವಕರ್ಮ ಸಿದ್ಧಾಂತದಲ್ಲಿ ಜಿಜ್ಞಾಸೆಯುಳ್ಳ ಒಬ್ಬ ಜೈನ ನಿಗ್ಗಂಥರನ್ನು ಉದ್ದೇಶಿಸಿದ ಬುದ್ಧನು ಹೀಗೆ ಪ್ರಶ್ನಿಸಿದಃ

"ಪೂಜ್ಯನೀಯರೇ, ತಾವು ಈ ಮೊದಲು ಬದುಕಿದ್ದಿರೋ ಅಥವಾ ಬದುಕಿರಲಿಲ್ಲವೋ ಎಂಬ ಬಗ್ಗೆ ತಮಗೆ ಈಗ ಸ್ಪಷ್ಟವಾದ ಅರಿವು ಇದಿಯೆ?"

ಪ್ರಭು ಗೌತಮರೇ, ಹೇಗಿರಲು ಸಾಧ್ಯ? ಖಂಡಿತಾ ಇಲ್ಲ!"

"ಘೂಜ್ಯನೀಯರೇ, ಒಂದು ಪಕ್ಷ ತಮ್ಮ ಹಿಂದಿನ ಜನ್ಮದಲ್ಲಿ ನಿಮ್ಮ ಕೆಟ್ಟ ಕೃತ್ಯಗಳ ಬಗ್ಗೆ ನಿಮಗೆ ಪಾಪ ಪ್ರಜ್ಞೆ ಇತ್ತೇ? ಅಥವಾ ಇರಲಿಲ್ಲವೇ? ಎಂಬ ಬಗ್ಗೆ ನಿಮಗೆ ಅರಿವಿತ್ತೆ?"

"ಪ್ರಭು ಗೌತಮರೇ, ಹೇಗಿರಲು ಸ್ವಾಧ್ಯ? ಖಂಡಿತಾ ಇರಲಿಲ್ಲ!"

"ಪೂಜ್ಯನೀಯರೇ, ಹಾಗಾದರೆ ಆ ಒಂದು ಹಿಂದಿನ ಜನ್ಮದಲ್ಲಿ, "ಈ" ಅಥವಾ "ಆ" ವಿಶಿಷ್ಟ ಕೆಟ್ಟ ಕೃತ್ಯಗಳ ಬಗ್ಗೆ ತಮ್ಮಲ್ಲಿ ಪಾಪ ಪ್ರಜ್ಞೆ ಇತ್ತೋ ಇಲ್ಲವೋ ಎಂಬುದು ತಮಗೆ ಗೊತ್ತೇ?"

"ಪ್ರಭು ಗೌತಮರೇ, ಹೇಗಿರಲು ಸಾಧ್ಯ? ಖಂಡಿತಾ ಇರಲಿಲ್ಲ!"

"ಪೂಜ್ಯನೀಯರೇ, ತಮ್ಮ ಮಿತಿಯಿಂದ ಹೊರಗಿರುವುದನ್ನು, ಪ್ರಜ್ಞೆಯಿಂದ ಹೊರತಾದುದ್ದನ್ನು 'ಶೂನ್ಯದಲ್ಲಿದೆ' ಎಂದು ಕಲ್ಪಿಸಿಕೊಂಡು ಯಜ್ಞ-ಯಾಗಗಳ ಮೂಲಕ ಬಾ..ಬಾ.. ಎಂದು ಕರೆದರೆ ನಮ್ಮೆಡೆ ಬರುವುದೇ?"

"ಪ್ರಭು ಗೌತಮರೇ, ಅದು ಹೇಗೆ ಬರಲು ಸಾಧ್ಯ? ಖಂಡಿತಾ ಸಾಧ್ಯವಿಲ್ಲ!"

"ಪೂಜ್ಯನೀಯರೇ, ಇಲ್ಲದ್ದನ್ನು ಇದೆ ಎಂದು ಸಾರಿಸಾರಿ ಹೇಳುವುದಾದರೆ ನದಿಯ ಆಚೆಯ ದಡವನ್ನು ಈಚೆಗೆ ಬರಲೆಂದು ಉಗ್ರತಪಸ್ಸು ಮಾಡಿದರೆ, ಯಜ್ಞ-ಯಾಗ ಮಾಡಿದರೆ, ದೇವಾನು ದೇವತೆಗಳನ್ನು ಕೂಗಿ ಕರೆದರೆ ಅಥವಾ ಪವಾಡದಿಂದಾದರೂ ಸರಿಯೇ ಆಚೆಯ ದಡ ಈಚೆಗೆ ಬಂದಿತೇ?"

ಪ್ರಭು ಗೌತಮರೇ, ಅದು ಹೇಗೆ ಬರಲು ಸಾಧ್ಯ? ಖಂಡಿತಾ ಸಾಧ್ಯವಿಲ್ಲ!"

"ಪೂಜ್ಯನೀಯರೇ, ಸತ್ಯ ಹೀಗಿರುವಾಗ ಪೂರ್ವಜನ್ಮದ ಕರ್ಮ ಫಲವು ತಾಯಿಯ ಗರ್ಭದ ಮೂಲಕ, ಆತ್ಮದ ಮೂಲಕ, ಹೊರಗಿನಿಂದ ಅಥವಾ ಅನುವಂಶಿಯವಾಗಿ ಬರುತ್ತದೆ ಎನ್ನುವ ವೈದಿಕರು ಪ್ರಾಮಾಣಿಕರಿಸುವಲ್ಲಿ ಸೋಲುತ್ತರಲ್ಲ ಏಕೆ? ಅಸತ್ಯವನ್ನೆ ಸತ್ಯವೆನ್ನಬೇಕೆ? ಅಧರ್ಮವನ್ನೆ ಧರ್ಮವೆನ್ನಬೇಕೆ?!"

"ಪ್ರಭು ಗೌತಮರೇ, ಅದು ಹೇಗೆ ಸಾಧ್ಯ ? ಖಂಡಿತಾ ಅಸಾಧ್ಯ!"

"ಪೂಜ್ಯನೀಯರೇ, ಒಂದು ಪಕ್ಷ ವೈದಿಕರ ಈಶ್ವರ ವಾದವೇ ಸತ್ಯವೆಂದು ಒಪ್ಪಿಕೊಂಡೆವೆಂದು ತಿಳಿಯಿರಿ. ಆ ಪ್ರಕಾರ ಪೂರ್ವಜನ್ಮದಲ್ಲಿ ಪುಣ್ಯ ಮಾಡಿದವನು ಶ್ರೀಮಂತರ ಮಗನಾಗಿಯೂ, ಪಾಪ ಮಾಡಿದವನು ಬಡವರ ಮಗನಾಗಿಯೂ ಹುಟ್ಟಿದ ಎಂದು ತಿಳಿಯಿರಿ. ಆದರೆ ಬ್ರಾಹ್ಮಣ ಕೂಡ ನಾನು ಬ್ರಹ್ಮನ ಬಾಯಿಂದಲೇ ಅಥವಾ ಬ್ರಾಹ್ಮಣ ಕುಲದ ಗರ್ಭದಲ್ಲಿಯೇ ಜನಿಸಬೇಕೆಂದು ಪೂರ್ವನಿರ್ಧರಿತನಾಗಿ ಒಂದು ಪಕ್ಷ ಹುಟ್ಟಿದ್ದೇ ಆದರೆ ಬ್ರಹ್ಮನ ಅಗತ್ಯವೇನು? ಅಥವಾ ಬ್ರಾಹ್ಮಣನ ಅಗತ್ಯ ಬ್ರಹ್ಮನಿಗೆ ಏಕೆ? ಇದು ಕಪೋಲಕಲ್ಪಿತವಲ್ಲದೇ ಮತ್ತೇನು? ಇದು ಸತ್ಯಕ್ಕೆ ಮಾಡಿದ ಅಪಚಾರವಲ್ಲವೆ? ಇದು ಮುಗ್ಧರು ಅವಿದ್ಯಾವಂತರು ಮತ್ತು ದೀನದಲಿತರ ಮೇಲೆ ನೆಡೆಸಿಧ ವ್ಯವಸ್ಥಿತ ಶೌರ್ಯವಲ್ಲವೆ?"

"ಪ್ರಭು ಗೌತಮರೇ, ಖಂಡಿತಾ, ಇದೊಂದು ವ್ಯವಸ್ಥಿತ ಸಂಚೇ ಸರಿ!"

"ಪೂಜ್ಯನೀಯರೇ, ಇಹ ಜೀವನದ ಸುಖ ದುಃಖಗಳು ಪಾಪ-ಪುಣ್ಯಗಳು ಪರಿಸರದ ಪ್ರಭಾವದಿಂದ ಪ್ರಚೋದಿತವಲ್ಲವೆ?"

"ಪ್ರಭು ಗೌತಮರೇ, ಹೌದು, ಖಂಡಿತಾ ಹೌದು!"

"ಪೂಜ್ಯನೀಯ ನಿಗ್ಗಂಥರೇ, ಪ್ರತಿವ್ಯಕ್ತಿಯು ತಾನು ಮಾಡಿದ ಪಾಪ ಕೃತ್ಯವು ತನ್ನನ್ನು ಹಿಂಬಾಲಿಸುತ್ತವೆ ಎಂಬುದನ್ನು ಅರಿಯಬೇಕು. ಹಾಗೆಯೇ ತಾನು ಮಾಡಿದ ಒಳ್ಳೆಯ ಕೃತ್ಯವೂ ತಡವಾದರೂ ಕೂಡ ನಮ್ಮನ್ನು ಹಿಂಬಾಲಿಸುತ್ತವೆ ಎಂಬುದನ್ನು ಅರಿಯಬೇಕು. ಹೊಸದಾಗಿ ಕೆಟ್ಟ ಕೃತ್ಯಗಳನ್ನು ಮಾಡಬಾರದು. ಅವುಗಳಿಂದ ನೀಗಿಕೊಳ್ಳಬೇಕು. ಆಗ ನಮ್ಮ ಮುಂದಿನ ಭವಿಷ್ಯವು ಸ್ವಚ್ಛವಾಗುವುದಿಲ್ಲವೆ? ಭವಿಷ್ಯವು ಸ್ವಚ್ಛವಾಗುವುದರಿಂದ ಭೂತವು ತೊಳೆದು ಹೋಗುವುದಿಲ್ಲವೆ? ಭೂತವು ತೊಳದು ಹೋಗುದರಿಂದ ಇನ್ನು ಮುಂದೆ ದುಃಖ ಇರುವುದಿಲ್ಲ ಅಲ್ಲವೇ? ಇದರಿಂದ ನೆಮ್ಮದಿ, ಸುಖ ನಿದ್ರೆ, ಸಮಾಜದಲ್ಲಿ ಮಾನ್ಯತೆ ದೊರೆಯುತ್ತದೆ ಅಲ್ಲವೆ? ಇದರಿಂದ ಈ ಉಪದೇಶವು ನಮಗೆ ಸರಿಯಾದ ಆದೇಶವನ್ನು ನೀಡುವುದಲ್ಲವೆ? ನಮ್ಮ ವರ್ತಮಾನ ಉಜ್ವಲವಾಗುವುದಕ್ಕಿಂತ ಮತ್ತೇನನ್ನು ನಾವು ನಿರೀಕ್ಷಿಸಬೇಕು?" ಎಂದ. ಆಗ ಆ ಜೈನ ನಿಗ್ಗಂಥರು ಬುದ್ಧನ ನಿಷ್ಕಂಳಕ ಮಾನವೀಯತೆಗೆ ತಲೆದೂಗಿ ತಮ್ಮ ಸ್ನೇಹ ಸಂದೇಶವನ್ನು ಹೀಗೆ ಸಾರಿದರುಃ

"ಪ್ರಭು ಗೌತಮರೇ, ಗುಣಕ್ಕೆ ಮತ್ಸರವಿಲ್ಲ. ಸತ್ಯಕ್ಕಿಂತ ಸಿಹಿ ಇಲ್ಲ ಎಂಬುದನ್ನು ಒಪ್ಪುವುದೇ ಆದರೆ, ತಾವು ನಿಜಕ್ಕೂ ಜ್ಞಾನವನ್ನು ಸಾಧಿಸಿದ ಮಹಾದಾರ್ಶನಿಕರೇ ಸರಿ...!! ಎಂದು ವಂದಿಸಿದರು. □



ತಪ್ಪುಗಳ ತಾ ಅರಿತವನೇ ಗೆಲ್ಲುವ ಮುಂದೆ



ಒಮ್ಮೆ ಬುದ್ಧ ತನ್ನ ಭಿಕ್ಷು ಸಹೋದರರನ್ನು ುದ್ದೇಶಿಸಿ ಹೀಗೆ ಉಪದೇಶ ಪ್ರಾರಂಭಿಸಿದ

"ಎಲ್ಲೈ ಭಿಕ್ಷು ಸಹೋದರರೇ, ಗೆಲುವು ಾರಿಗೂ ಸುಲಭವಾಗಿ ದಕ್ಕುವುದಿಲ್ಲ. ಅದನ್ನು ೋರಾಟದ ಮೂಲಕವೇ ಪಡೆಯಬೇಕು. ಗೆಲುವಿನ ೂಲವೇ ಸೋಲು. ಸೋಲಿಲ್ಲದೆ ಗೆಲುವಿಲ್ಲ. ಇವು ಂದೇ ನಾಣ್ಯದ ಎರಡು ಮುಖವಾದರೂ ಒಮ್ಮೆಗೆ ಲಿಯುವುದಿಲ್ಲ" ಎಂದಾಗ ಒಬ್ಬ ಭಿಕ್ಷುವು ಬುದ್ಧನನ್ನು ುದ್ದೇಶಿಸಿ ಹೀಗೆ ಪ್ರಶ್ನಿಸಿದ;

"ಗುರುದೇವಾ, ಗೆಲುವನ್ನು ಪಡೆಯುವ ಾಧನಗಳಾವುವು?"

"ಎಲ್ಲೈ ಗೆಳೆಯ, ನಿರಂತರ ಹೋರಾಟ, ದ್ಯೆ, ಸಂಸ್ಕರಣೆ ಮತ್ತು ಪರಿಶುದ್ಧತೆಯೇ ಮೂಲ. ಆ ರಿಶುದ್ಧತೆಯಲ್ಲಿ ಮೂರು ವಿಧಗಳಿವೆ"

"ಗುರುದೇವಾ. ಆ ಮೂರು ವಿಧಗಳು ಾವುವು?"

"ಎಲ್ಲೈ ಗೆಳೆಯ, ದೇಹದ ಶುದ್ಧತೆ, ಮತ್ತು ನಶುದ್ಧತೆ"

ಗುರುದೇವಾ, ದೇಹದ ಶುದ್ಧತೆ ಎಂದರೆ ನು?

"ಎಲ್ಲೈ ಗೆಳೆಯಾ, ಕೊಲ್ಲದಿರುವುದು, ಕದಿಯ ರುವುದು, ವ್ಯಭಿಚಾರ ಮಾಡದಿರುವುದು ಮತ್ತು ಪಾಪ ೀವನ ನಡೆಸದೆ ಇರುವುದು"

"ಗುರುದೇವ ನುಡಿಶುದ್ಧತೆ ಎಂದರೆ ಏನು?"

"ಎಲ್ಲೈ ಗೆಳೆಯ, ಸುಳ್ಳು ನುಡಿಯದೆ ರುವುದು, ಚಾಡಿ ಹೇಳದೆ ಇರುವುದು ಕಾಡು ಹರಟೆ ಾಡದೇ ಇರುವುದು"

"ಗುರುದೇವಾ, ಮನೋಶುದ್ಧತೆ ಎಂದರೆ ನು?"

"ಎಲ್ಲೈ ಗೆಳೆಯ, ವೈಯಕ್ತಿಕ ಎಚ್ಚರಿಕೆ ಮತ್ತು ಯಕ್ತಿಕ ಅರಿವು ಇದ್ದವನು ಮಾತ್ರ ಮನಶುದ್ಧ ಯನ್ನು ಸಾಧಿಸಬಲ್ಲ. ಹೇಗೆಂದರೆ, ವಿಷಯಾಸಕ್ತಿಯ ಗ್ಗೆ ಎಚ್ಚರಿಕೆ ಇದ್ದರೆ ನನ್ನಲ್ಲಿ ಇಂದ್ರಿಯ ಲಾಲಸೆ ಇದೆ ದು ತಿಳಿಯುತ್ತಾನೆ. ಇಲ್ಲದಿದ್ದರೆ ಆ ಬಗ್ಗೆ ಜಾಗರು ಾಗಿರುತ್ತಾನೆ. ಇನ್ನೂ ಮೂಡದ ವಿಷಯಾಸಕ್ತಿ ಹೇಗೆ ೂಡುತ್ತದೆ. ಮೂಡಿದಾಗ ಹೇಗೆ ತ್ಯಜಿಸಬೇಕು ಮತ್ತೆ ತ್ತೆ ಅದು ಮೂಡದಂತೆ ಹೇಗೆ ನೋಡಿಕೊಳ್ಳಬೇ ದು ಅವನಿಗೆ ಅರಿವಿರುತ್ತದೆ. ಒಂದು ಪಕ್ಷ ಅವನಲ್ಲಿ ಯುಕ್ತಿಕ ದ್ವೇಷವಿದ್ದರೆ ನನ್ನಲ್ಲಿ ದ್ವೇಷವಿದೆ ಎಂದು ಸ್ತಿಕೊಳ್ಳುತ್ತಾನೆ. ಅದು ಹೇಗೆ ಮೂಡುತ್ತದೆ, ಹೇಗೆ ಜಿಸಬೇಕು, ಮುಂದೆ ಮತ್ತೆ ಮತ್ತೆ ಮೂಡದಂತೆ ಗೃತಿ ವಹಿಸಬೇಕು ಎಂಬ ಅರಿವು ಉಳ್ಳವನಾಗಿರು ನೆ. ಹಾಗೆಯೇ ಆತನಲ್ಲಿ ಸೋಮಾರಿತನ, ಜಡತ್ವ, ದ್ರೇಕ, ಕಳವಳ, ಸಂಶಯ, ಸಂಘರ್ಷ ಇದ್ದರೆ ಅದರ ವು ಇರುತ್ತದೆ. ಅವುಗಳ ಹುಟ್ಟಿಗೆ ಕಾರಣಗಳೇನು? ರ್ಮೂಲನೆಯ ಮಾರ್ಗವೇನು? ಮತ್ತೆ ಮತ್ತೆ ಮರುಕ ುತ್ತದೆ. ಎಂಬುದರ ಸ್ಪಷ್ಟ ಅರಿವು ಅವನಿಗಿರುತ್ತದೆ. ಇದೆ ನಃಶುದ್ಧಿ."

"ಗುರುದೇವಾ, ಈ ಉಪಾದಿಗಳಿಂದ ಪಾಪನಾಶನನಾಗುವುದು ಹೇಗೆ?"

"ಎಲ್ಲೈ ಗೆಳೆಯಾ. ಯಾರು ಕಾಯಾ, ವಾಚ, ಮನಸಾ ಪರಿಶುದ್ಧನಾಗಿರುವನೊ ಮತ್ತು ಯಾವತ ಶುದ್ಧ ತೆಯಿಂದ ಪಾಪರಹಿತನೊ, ಸ್ವಚ್ಚನೊ ಹಾಗೂ ಧನ್ಯನೋ ಅವನೇ ಪಾಪನಾಶಕ."

"ಗುರುದೇವಾ ಈ ಬಗೆಯ ಸೋಲಿನ ಮೂಲವೇನು? ಗೆಲುವಿನ ಮೂಲವೇನು?"

"ಎಲ್ಲೈ ಗೆಳೆಯಾ, ಅವಿದ್ಯೆ, ಮೌಢ್ಯ ಮತ್ತು ಮನೋದೌರ್ಬಲ್ಯವೇ ಸೋಲಿನ ಮೂಲ. ವಿದ್ಯೆ, ಅರಿವು ಮತ್ತು ಮನೋಜಾಗೃತಿಯೇ ಗೆಲುವು!"

"ಗುರುದೇವಾ, ಅವುಗಳ ಸ್ವರೂಪವೇನು?"

"ಎಲ್ಲೈ ಗೆಳೆಯಾ, ಗಮನವಿಟ್ಟು ಕೇಳು; ಮನನ ಮಾಡಿಕೋ, ಆಚರಣೆಗೆತಾ, ಎಲ್ಲಿ ಕಳವು, ಚಾಡಿ, ಕಾಮ, ಪಾಪಾಚರಣೆ, ಸುಳ್ಳು ಹೇಳುವುದು, ಸೋಮಾರಿ ಆಗುವುದು ಮತ್ತು ಮಾದಕ ಪಾನೀಯಗಳನ್ನು ಸೇವಿ ಸುವುದು ಈ ಏಳು ಉಪಾದಿಗಳು ನಿನ್ನ ಸೋಲಿನ ಮೂಲ. ಹಾಗೆಯೇ ಗೆಲುವಿಗೆ ನಾಲ್ಕು ವಿಧಾನಗಳಿವೆ."

"ಗುರುದೇವಾ. ಗೆಲುವಿನ ಆ ನಾಲ್ಕು ಸೂತ್ರಗಳಾವುವು?"

"ಎಲ್ಲೈ ಗೆಳೆಯಾ, ದೇಹವನ್ನು ದೇಹ ವೆಂದು, ವನೆಗಳನ್ನು ಭಾವನೆಗಳೆಂದು, ಮನಸ್ಸನ್ನು ಮನ ಸ್ಸೆಂದು, ಧ್ಯಾನವನ್ನು ಧ್ಯಾನವೆಂದು ಯಾವಾತ ತಿಳಿಯು ತ್ತಾನೋ, ಆಚರಿಸುತ್ತಾನೋ ಅವನು ಆಸೆಗಳನ್ನು, ಅತೃಪ್ತಿ ಗಳನ್ನು ಗೆದ್ದಿರುತ್ತಾನೆ. ಮನೋಜಾ ಗೃತಿಯನ್ನು ಪಡೆದಿ ರುತ್ತಾನೆ. ಅವೇ ನಾಲ್ಕು ಸೂತ್ರಗಳು. ಧರ್ಮವೆಂದರೆ ಪರಿಶುದ್ಧತೆಯೇ ಆಗಿದೆ. ಪರಿಶುದ್ಧತೆಯನ್ನು ಕಾಪಾಡಿ ಕೊಳ್ಳುವುದೇ ನಿಜವಾದ ಧರ್ಮ. ಅಂತಹ ಧರ್ಮದ ಆಚರಣೆಗೆ ಮತ್ತೂ ಮೂರು ಬಗೆಯ ಗೆಲುವಿದೆ. ಅದೆಂದರೆ, ನೈತಿಕ ಗೆಲುವು, ಮಾನಸಿಕ ಗೆಲುವು ಮತ್ತು ಅಭಿಪ್ರಾಯದ ಗೆಲುವು."

"ಗುರುದೇವಾ, ನೈತಿಕ ಗೆಲುವು ಎಂದ ರೇನು? ಅದರ ಸ್ವರೂಪವೇನು?

"ಎಲ್ಲೈ ಗೆಳೆಯಾ, ಯಾವ ವ್ಯಕ್ತಿಯನ್ನಾಗಲಿ ಪ್ರಾಣಿಯನ್ನಾಗಲಿ, ಕೊಲ್ಲದಿರುವುದು ಮತ್ತೊಬ್ಬರ ವಸ್ತುಗ ಳನ್ನು ಕದಿಯದಿರುವುದು, ಅನೈತಿಕ ಸಂಬಂಧವನ್ನು ಹೊಂದದಿರುವುದು, ಪರರ ಶ್ರಮದಲ್ಲಿ ಬದುಕದಿರುವುದು, ಮುಗ್ಧರ ದೌರ್ಬಲ್ಯವನ್ನು ದುರುಪಯೋಗ ಪಡಿಸಿಕೊಳ್ಳದೆ ಇರುವುದು, ನ್ಯಾಯ ನಿಷ್ಠನಾಗಿರುವುದು, ಇವುಗಳ ಆಚರ ಣೆಯೇ ನೈತಿಕ ಗೆಲುವು. ಇದು ಶತ್ರುಗಳನ್ನು ಹೆದರಿಸುವ ಮೊದಲ ಆಯುಧ ಅಥವಾ ರಕ್ಷಾಕವಚ.

"ಗುರುದೇವಾ, ಮಾನಸಿಕ ಗೆಲುವು ಯಾವ ಬಗೆಯದು?

"ಎಲ್ಲೈ ಗೆಳೆಯಾ, ಅಸೆಯನ್ನು, ದುರಾಸೆ ಯನ್ನು, ಸ್ವಾರ್ಥವನ್ನು, ಕಾಮನೆಗಳನ್ನು, ದ್ವೇಷ ಮತ್ತು ಅಸೂಯೆಯನ್ನು ವಿದ್ಯೆ ಮತ್ತು ಜ್ಞಾನದಿಂದ ಅರಿತು ಕಾಯಾ, ವಾಚ, ಮನಸ್ಸಾ ನೀಗಿಕೊಳ್ಳುವುದು, ಬಿಡುಗಡೆ ಪಡೆಯುವುದು, ಸ್ವಾತಂತ್ರ್ಯನಾಗುವುದು ಇದೇ ಮಾನಸಿಕ ಗೆಲುವು."

'ಗುರುದೇವಾ, ಅಭಿಪ್ರಾಯದ ಗೆಲುವು ಎಂದರೆ ಏನು? ಅದರ ಸ್ವರೂಪವೇನು?"

"ಎಲ್ಲೈ ಗೆಳೆಯಾ, ಒಳ್ಳೆಯ ಜ್ಞಾನ, ಒಳ್ಳೆಯ ಅಭಿಪ್ರಾಯ, ಒಳ್ಳೆಯ ನಡತೆ ಇರುವವನು, ಒಳ್ಳೆಯ ಕಾರ್ಯಗಳಿಗೆ ಒಳ್ಳೆಯ ಫಲವೆಂದು ಅರಿತವನು. ಕೆಟ್ಟ ಕಾರ್ಯಕ್ಕೆ ಕೆಟ್ಟ ಫಲವೆಂದು ಅರಿತವನು, ತಂದೆ ತಾಯಿಗೆ ಗೌರವ ತೋರಿಸುವವನು, ಸಹಜವಾಗಿ ಹುಟ್ಟುವ ಮಕ್ಕಳಿಗೆ ಪ್ರೀತಿ ತೋರಿಸುವಂತವನು, ಅರ್ಹನಿಗೆ ದಾನ ನೀಡುವವನು, ಧರ್ಮಾಚರಣೆಯ ರಹಸ್ಯ ಅರಿತವನು, ಸಕಲರಲ್ಲಿ ತನ್ನ ಶ್ರೇಯಸ್ಸನ್ನು ಅರಿತವನು, ಶಿಖರವೇರಿ ವಿದ್ಯೆಯ ಪರಿಪೂರ್ಣತೆ ಪಡೆದು ತಮ್ಮದೇ ಆದ ಅಂತ ರ್ವೀಕ್ಷಣಾ ಶಕ್ತಿಯಿಂದ ಲೋಕದ ದುಃಖ ನಿವಾರಿಸುವ ಗುರುವಿನ ಬಗ್ಗೆ, ಭಿಕ್ಷು ಮತ್ತು ಅರ್ಹಂತರ ಬಗ್ಗೆ ಸಹಜ ಪೂರ್ವಕ ದೃಷ್ಟಿಯನ್ನು ಹೊಂದಿದ್ದರೆ ಅದನ್ನೆ ಅಭಿ ಪ್ರಾಯದ ಗೆಲುವು ಎನ್ನುವುದು. ಈ ಬಗೆಯ ಗೆಲುವನ್ನೆ ಪರಿಶುದ್ಧತೆ ಎಂದದ್ದು. ಇದೇ ನಿಜವಾದ ಧರ್ಮ" ಎಂದ ಆಗ ಆ ಭಿಕ್ಷುವು ಬುದ್ಧನನ್ನು ಉದ್ದೇಶಿಸಿ;

"ಲೋಕ ಕಲ್ಯಾಣದ ಹೊರತು ಸ್ವಾರ್ಥದ ಲವಲೇಶವೂ ಇರದ ನಿನ್ನ ಧರ್ಮವೇ ಅಮೂಲ್ಯ...! ಬದುಕಿನ ಪರಿಶುದ್ಧತೆಯನ್ನೇ ಧರ್ಮವೆಂದ ಮೊದಲಿಗ ನೀನು...! ನಿನ್ನಂತಹ ಗುರುವನ್ನು ಪಡೆದ ನಾವೇ ಧನ್ಯರು...!!!" ಎಂದು ಕೈ ಎತ್ತಿ ಮುಗಿದ. □

ಕರ್ನಾಟಕ: ದುರ್ಬಲ ವರ್ಗಗಳ ಅಭಿವೃದ್ಧಿಗೆ ಹೊಸ ಆಯಾಮ.

ರಾಜ್ಯದ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ದುರ್ಬಲ ವರ್ಗಗಳ ಸರ್ವತೋಮುಖಿ. ಏಳಿಗೆಗಾಗಿ ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ವಿನೂತನ ಕಾರ್ಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಅಭಿವೃದ್ಧಿಯ ಮುಖ್ಯ ವಾಹಿನಿಯಲ್ಲಿ ಎಲ್ಲರೂ ಒಂದಾಗಿ ರಾಜ್ಯ ಮತ್ತು ರಾಷ್ಟ್ರವನ್ನು ಪ್ರಗತಿಯ ಉತ್ತುಂಗಕ್ಕೆ ಕೊಂಡೊಯ್ಯಲು ಶ್ರಮಿಸುತ್ತಿದೆ.

ಅಭಿವೃದ್ಧಿ ಯೋಜನೆಗಳ ಪಕ್ಷಿನೋಟ

ಹಿಂದುಳಿದ ವರ್ಗಗಳ ಇಲಾಖೆ:

❖ರೂ. 168.33 ಕೋಟಿ ಆಯವ್ಯಯದೊಂದಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ.

❖ಹಿಂದುಳಿದ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗಾಗಿ 1796 ವಿದ್ಯಾರ್ಥಿ ನಿಲಯಗಳಲ್ಲಿ ಒಂದು ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿ ಸೌಲಭ್ಯ.

❖ರೂ. 20 ಕೋಟಿ ವೆಚ್ಚದಲ್ಲಿ 60 ವಿದ್ಯಾರ್ಥಿ ನಿಲಯಗಳ ಹೊಸ ಕಟ್ಟಡ ನಿರ್ಮಾಣ.

❖ಹಿಂದುಳಿದ ವರ್ಗಗಳ 3000 ನಿರುದ್ಯೋಗಿ ಮಹಿಳೆಯರಿಗೆ ವಿವಿಧ ವೃತ್ತಿ ತರಬೇತಿ ನೀಡಲು "ಕೌಶಲ್ಯ" ಯೋಜನೆ ಅನುಷ್ಠಾನ.

❖ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕಾಗಿ ಹಿಂದುಳಿದ ವರ್ಗಗಳ 14 ವಿದ್ಯಾರ್ಥಿಗಳಿಗೆ ತಲಾ ರೂ.10 ಲಕ್ಷದಂತೆ ವಿದ್ಯಾರ್ಥಿ ವೇತನ ನೀಡಿಕೆ.

❖ಹುಬ್ಬಳ್ಳಿ, ಬಳ್ಳಾರಿ, ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ವೃತ್ತಿಪರ ಶಿಕ್ಷಣದ ವಿದ್ಯಾರ್ಥಿ ನಿಲಯಗಳ ಪ್ರಾರಂಭ.

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ:

❖ಚೈತನ್ಯ ಯೋಜನೆಯಲ್ಲಿ 7200 ಹಿಂದುಳಿದ ವರ್ಗಗಳ ಜನರಿಗೆ 8.00 ಕೋಟಿ ರೂ.ಗಳಷ್ಟು ಸಾಲ ಮತ್ತು ಸಹಾಯಧನ ನೀಡುವ ಗುರಿ.

❖1700 ಸಣ್ಣ ಮತ್ತು ಅತಿ ಸಣ್ಣ ರೈತರಿಗೆ 10.00 ಕೋಟಿ ರೂ.ಗಳ ವೆಚ್ಚದಲ್ಲಿ ಸುಮಾರು 5600 ಎಕರೆ ಜಮೀನಿಗೆ 1450 ಕೊಳವೆ ಬಾವಿ ಕೊರೆಯಿಸುವ ಮೂಲಕ ಗಂಗಾ ಕಲ್ಯಾಣ ಯೋಜನೆಯಲ್ಲಿ ಉಚಿತ ನೀರಾವರಿ ಸೌಲಭ್ಯದ ಗುರಿ.

❖ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ನೇರ ಸಾಲ ಯೋಜನೆಯಲ್ಲಿ 8063 ಮಂದಿಗೆ 18.00 ಕೋಟಿ ರೂ.ಗಳ ಸಾಲ ಸೌಲಭ್ಯ. ವಿಶೇಷವಾಗಿ ನ್ಯೂ-ಸ್ವರ್ಣಿಮಾ ಯೋಜನೆಯಲ್ಲಿ 6700 ಮಹಿಳೆಯರಿಗೆ 8.00 ಕೋಟಿ ರೂ.ಗಳ ಸಾಲ ನೀಡುವ ಗುರಿ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ:

❖ರಾಜ್ಯದಲ್ಲಿ ಹಿಂದುಳಿದ ವರ್ಗಗಳನ್ನು ಗುರುತಿಸಲು ಸಾಮಾಜಿಕ ಶೈಕ್ಷಣಿಕ ಮತ್ತು ಆರ್ಥಿಕ ಮನೆ ಮನೆ ಸಮೀಕ್ಷೆ ಕಾರ್ಯಕ್ರಮ ಹಾಗೂ ಈ ಸಮೀಕ್ಷೆಯಲ್ಲಿ ರಾಜ್ಯದ ಸುಮಾರು ಒಂದು ಕೋಟಿ ಹನ್ನೆರಡು ಲಕ್ಷ ಕುಟುಂಬಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಕ್ಕೆ ಕ್ರಮ. ರೂ. 15 ಕೋಟಿ ಮೀಸಲು, 70,000 ಸಿಬ್ಬಂದಿಯ ನಿಯೋಜನೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ:

❖ಹಾಲಿ ಹಿಂದುಳಿದ ವರ್ಗಗಳ 22 ನವೋದಯ/ ಮೊರರ್ಜಿ ದೇಸಾಯಿ ವಸತಿ ಶಾಲೆಗಳ ಜೊತೆಗೆ ಸರ್ಕಾರವು 2004-05ನೇ ಸಾಲಿನ 6 ರಿಂದ 10ನೇ ತರಗತಿವರೆಗೆ ಪ್ರತಿಭಾವಂತ ಹಿಂದುಳಿದ ವರ್ಗಗಳ ಗ್ರಾಮೀಣ ಬಡ ಮಕ್ಕಳ ಉಚಿತ ವಿದ್ಯಾಭ್ಯಾಸಕ್ಕಾಗಿ ಗ್ರಾಮೀಣ ಪ್ರದೇಶಗಳಲ್ಲಿ 11 ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಪ್ರಸಕ್ತ ಸಾಲಿನಲ್ಲಿ ಕಾರ್ಯಾರಂಭ.

ಕರ್ನಾಟಕ ವಾರ್ತೆ
Karnataka Information